ಬುಧವಾರ 30.07.2025 ಸಂಪುಟ: 68 ಸಂಚಿಕೆ: 86 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಪ್ರಳಯ ಕ್ಷಿಪಣಿ ಪರೀಕ್ಷೆ ಯಶಸ್ವಿ

ಒಡಿಶಾದ ಕರಾವಳಿಯ ಅಬ್ದುಲ್ ಕಲಾಂ ದ್ವೀಪದಿಂದ :ಪ್ರಳಯ' ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗವನ್ನು ನಡೆಸಲಾಯಿತು ಎಂದು ಡಿಆರ್‌ಡಿಒ ಮಂಗಳವಾರ ತಿಳಿಸಿದೆ. ಪರೀಕ್ಷೆ ಸಂದರ್ಭದಲ್ಲಿ ಕ್ಷಿಪಣಿಗಳು ಉದ್ದೇಶಿತ ಪಥವನ್ನು ನಿಖರವಾಗಿ ಅನುಸರಿಸಿದವು ಮತ್ತು ಗುರಿಯ ಬಗ್ಗೆ ಸ್ಪಷ್ಟತೆ ಹೊಂದಿದ್ದವು. ಕ್ಷಿಪಣಿ ವ್ಯವಸ್ಥೆಯ ದೀರ್ಘ ವ್ಯಾಪ್ತಿ, ಮಧ್ಯಮ ವ್ಯಾಪ್ತಿಯ ಸಾಮರ್ಥ್ಯ ಪರೀಕ್ಷೆಯ ಭಾಗವಾಗಿ ಜುಲೈ 28 ಮತ್ತು 29ರಂದು 'ಪ್ರಳಯ' ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗವನ್ನು ಯಶಸ್ವಿಯಾಗಿ ನಡೆಸಲಾಯಿತು ಎಂದು ತಿಳಿಸಿದೆ.



ಸಿಎಂ ಸಿದ್ದರಾಮಯ್ಯ ಅವರು ಮಂಗಳವಾರ ಜಿಲ್ಲಾವಾರು ಕಾಂಗ್ರೆಸ್ ಶಾಸಕರ ಸಭೆ ನಡೆಸಿದರು.

ಸೊಂಪಾದ ಪುಟಗಳು



ಜೀವಗಳನ್ನು ಉಳಿಸುತ್ತಿರುವ ಪ್ರೇಮಪ್ರಸಂಗದ ಫಲ!

ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ 6

ನಮ್ಮ ವಿವಿಗಳನ್ನು ಮುಚ್ಚುವ ಸ್ಥಿತಿ ಬರಬಹುದೇ ?

ಲೋಕಮತ
ಲೋಕೇಶ್ ಕಾಯರ್ಗ 7

ದಾರಿದೀಪೋಕ್ತಿ



ಯಾವತ್ತೂ ನಿಮ್ಮ ವಾದದಿಂದ ಜನರನ್ನು ಗೆಲ್ಲಬಾರದು. ಆದರೆ ನಿಮ್ಮ ಮೌನದಿಂದ ಸೋಲಿಸಬೇಕು. ಯಾರು ನಿಮ್ಮೊಂದಿಗೆ ವಾದ ಮಾಡಲು ಬಯಸುತ್ತಾರೋ, ನಿಮ್ಮ ಮೌನವನ್ನು ಸಹಿಸಿಕೊಳ್ಳುವುದಿಲ್ಲ.

ವಕ್ರತುಂಡೋಕ್ತಿ

ಡ್ರೈವಿಂಗ್ ಲೈಸನ್ಸ್ ಥರ ಮದುವೆಯ ಸರ್ಟಿಫಿಕೇಟ್ ಕೂಡ ಅವಧಿ ಮೀರಿದ್ದರೆ, ಬಹುತೇಕ ಗಂಡಸರು ಅದನ್ನು ನವೀಕರಿಸುತ್ತಿರಲಿಲ್ಲ.

ಪ್ರಜ್ವಲ್ ಭವಿಷ್ಯ ಇಂದು ನಿರ್ಧಾರ

ಬೆಂಗಳೂರು: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಪ್ರಕರಣಕ್ಕೆ ಸಂಬಂಧಿಸಿದಂತೆ ಬುಧವಾರ ಜನಪ್ರತಿನಿಧಿಗಳ ಕೋರ್ಟ್ ತೀರ್ಪು ಪ್ರಕಟಿಸಲಿದೆ. ಈ ತೀರ್ಪು ಪ್ರಜ್ವಲ್ ರೇವಣ್ಣ ಭವಿಷ್ಯ ನಿರ್ಧರಿಸುವುದರಿಂದ ಭಾರಿ ಮಹತ್ವ ಪಡೆದುಕೊಂಡಿದೆ. ಪ್ರಜ್ವಲ್ ರೇವಣ್ಣ ವಿರುದ್ಧ ಒಟ್ಟು 4 ಪ್ರಕರಣಗಳಿವೆ. ಈ ನಾಲ್ಕು ಪ್ರಕರಣಗಳ ಪೈಕಿ ಈಗ ಮೊದಲ ಪ್ರಕರಣದ ತೀರ್ಪು ಪ್ರಕಟವಾಗಲಿದೆ. ಈ ಪ್ರಕರಣದಲ್ಲಿ ಈಗಾಗಲೇ ವಾದ-ಪ್ರತಿವಾದ ಮುಗಿದಿದ್ದು, ಸಾಕ್ಷ್ಯಗಳ ವಿಚಾರಣೆ ಕೂಡ ಮುಗಿದಿದೆ. ಹೀಗಾಗಿ ಕಾಯ್ದಿರಿಸಿರುವ ಪ್ರಕರಣದ ತೀರ್ಪು ಅನ್ನು ಇಂದು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ನೀಡಲಿದೆ. ಪ್ರಜ್ವಲ್ ಅಪರಾಧಿಯೋ ಅಥವಾ ಅಲ್ಲವೋ ಎಂದು ಕೋರ್ಟ್ ಮೊದಲಿಗೆ ತೀರ್ಪು ನೀಡಲಿದೆ.

ಅಂಗನವಾಡಿ ಕಾರ್ಯಕರ್ತೆಯರಿಗೆ

ಚುನಾವಣೆ ಕೆಲಸಗಳಿಂದ ವಿನಾಯಿತಿ

ಬೆಂಗಳೂರು: ಅಂಗನವಾಡಿ ಕಾರ್ಯಕರ್ತೆಯರಿಗೆ ಚುನಾವಣೆ ಕೆಲಸಗಳಿಂದ ವಿನಾಯಿತಿ ನೀಡಲು ರಾಜ್ಯ ಸರಕಾರ ತೀರ್ಮಾನಿಸಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಫನ್‌ತರಂಗ

- ರಘುಪತಿ ಶೃಂಗೇರಿ -

'ರಾಜ್ಯದಲ್ಲಿ ಗೊಬ್ಬರ ಗದ್ದಲ'



ಪಹಲ್ಗಾಮ್ ನರಮೇಧವನ್ನು ಕಟುವಾದ ಶಬ್ದಗಳಲ್ಲಿ ಟೀಕಿಸಿದ ಪ್ರಧಾನಿ
ಹೆಸರು ಹೇಳದೇ ಅಮೆರಿಕ ಅಧ್ಯಕ್ಷ ಟ್ರಂಪ್‌ಗೆ ತಿರುಗೇಟು ಕೊಟ್ಟ ಮೋದಿ

ಜಗತ್ತಿನ ಯಾವ ನಾಯಕನೂ ಕದನ ವಿರಾಮಕ್ಕೆ ಪ್ರಯತ್ನಿಸಿಲ್ಲ

ದೆಹಲಿ: ಲೋಕಸಭೆಯಲ್ಲಿ ಆಪರೇಷನ್ ಸಿಂದೂರ ಕುರಿತಂತೆ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಸುದೀರ್ಘ ಚರ್ಚೆ ನಡೆಯಿತು. ಈ ವೇಳೆ ಪ್ರಧಾನಿ ಮೋದಿ ಅವರು ಪ್ರತಿಪಕ್ಷಗಳಿಗೆ ವಿವರಣೆ ನೀಡಿದ್ದು, ಉಗ್ರವಾದಿಗಳ ವಿರುದ್ಧ ಕೆಂಡ ಕಾರಿದ್ದಾರೆ.

ಏ.22ರಂದು ಜಮ್ಮು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರನ್ನು ಧರ್ಮ ಕೇಳಿ ಗುಂಡಿಟ್ಟು ಕೊಂದಿರುವುದು ಕ್ರೂರತ್ವದ ಪರಾಕಾಷ್ಠೆಯಾಗಿತ್ತು. ಪಹಲ್ಗಾಮ್ ಘಟನೆಯನ್ನು ಮಾಡಿದ್ದರ ಹಿಂದೆ ಭಾರತದಲ್ಲಿ ಧಾರ್ಮಿಕ ಗಲಭೆಯನ್ನು ತರುವ ಉದ್ದೇಶ ಉಗ್ರವಾದಿಗಳಿಗೆ ಇತ್ತು. ಆದರೆ, ಭಾರತೀಯರು ಈ ಸಂದರ್ಭದಲ್ಲಿ ಒಗ್ಗಟ್ಟಾದರು. ಆಗ ಉಗ್ರರ ಆಟ ನಡೆಯಲಿಲ್ಲ. ಅದಕ್ಕಾಗಿ ನಾನು ಸಮಸ್ತ ಭಾರತೀಯರಿಗೆ ಧನ್ಯವಾದ ಹೇಳ ಬಯಸುತ್ತೇನೆ ಎಂದು ಪ್ರಧಾನಿ ಮೋದಿ ಹೇಳಿದರು.

ಜಗತ್ತಿಗೆ ನಮ್ಮ ತಾಕತ್ತು ಗೊತ್ತಾಗಿದೆ: ಪಹಲ್ಗಾಮ್ ದಾಳಿಗೆ ವಿರುದ್ಧವಾಗಿ ಭಾರತವು ಕೈಗೊಂಡ ಆಪರೇಷನ್ ಸಿಂದೂರ ಕಾರ್ಯಾಚರಣೆಯು ಇಡೀ ಭಾರತವೇ ಹೆಮ್ಮೆ ಪಡುವಂಥ ಕಾರ್ಯಾಚರಣೆಯಾಗಿದೆ. ಇಡೀ ದೇಶವು ಅದನ್ನು ವಿಜಯೋತ್ಸವದ ರೀತಿ ಆಚರಿಸಿದೆ. ತುಂಬಾ ಸವಾಲಿನ ಕಾರ್ಯಾಚರಣೆಯನ್ನು ಅತ್ಯಂತ ನಿಖರವಾಗಿ, ಪರಿಣಾಮಕಾರಿಯಾಗಿ ನೆರವೇರಿಸಿದ ಭಾರತೀಯ ಭದ್ರತಾ ಪಡೆಗಳನ್ನು ನಾನು ಈ ಸಂದರ್ಭದಲ್ಲಿ ಅಭಿನಂದಿಸಲು ಇಚ್ಛಿಸುತ್ತೇನೆ. ಈ ಕಾರ್ಯಾಚರಣೆಯು ಭಾರತವನ್ನು ಕೆಣಕುವವರಿಗೆ ಏನಾಗುತ್ತದೆ ಎಂಬುದನ್ನು ಜಗತ್ತಿಗೆ ಸಾರಿ ಹೇಳಿದೆ ಎಂದು ಹೇಳಿದರು.

22 ನಿಮಿಷಗಳಲ್ಲಿ ಧ್ವಂಸಗೈದಿದ್ದೇವೆ: ಏ.22ರಂದು ಪಹಲ್ಗಾಮ್ ದಾಳಿ ನಡೆದಿತ್ತು. ಭಾರತವನ್ನು ಕೆಣಕಿದ ಉಗ್ರರ ಅಡಗುದಾಣಗಳನ್ನು, ತರಬೇತಿ ಕೇಂದ್ರಗಳ ಮೇಲೆ ನಾವು 22 ನಿಮಿಷಗಳ ಕಾಲ ದಾಳಿ ನಡೆಸಿ ಅವೆಲ್ಲವನ್ನೂ ಧ್ವಂಸಗೈದೆವು. → 4

ಟ್ರಂಪ್‌ಗೆ ತಿರುಗೇಟು

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ತಾವೇ ಭಾರತ ಮತ್ತು ಪಾಕಿಸ್ತಾನದ ನಡುವಿನ ಸಮರವನ್ನು ನಿಲ್ಲಿಸಿದ್ದು ಎಂದು ಪದೇ ಪದೆ ಹೇಳಿಕೊಳ್ಳುತ್ತಿರುವುದಕ್ಕೆ ಮೋದಿ ಅವರು ಟ್ರಂಪ್ ಹೆಸರೆತ್ತದೆ ಸ್ಪಷ್ಟನೆ ನೀಡಿದರು. ಜಗತ್ತಿನ ಯಾವುದೇ ನಾಯಕ ಭಾರತ-ಪಾಕಿಸ್ತಾನ ನಡುವೆ ಕದನ ವಿರಾಮಕ್ಕೆ ಪ್ರಯತ್ನಿಸಿಲ್ಲ ಎಂದು ಹೇಳಿದರು.

ಕಾಂಗ್ರೆಸ್‌ಗೆ ಟಾಂಗ್

ಆಪರೇಷನ್ ಸಿಂದೂರ ಸಂದರ್ಭದಲ್ಲಿ ಜಗತ್ತಿನ 193 ರಾಷ್ಟ್ರಗಳಲ್ಲಿ ಮೂರು ಮಾತ್ರ ಪಾಕಿಸ್ತಾನದ ಪರವಾಗಿ ನಿಂತಿದ್ದವು. ಆದರೆ, ಉಳಿದೆಲ್ಲಾ ದೇಶಗಳು ಭಾರತದ ಪರವಾಗಿದ್ದವು. ಆದರೆ, ನಮ್ಮ ದೇಶದಲ್ಲಿ ಪ್ರಮುಖ ಪ್ರತಿಪಕ್ಷವಾದ ಕಾಂಗ್ರೆಸ್ಸೇ ಈ ಕಾರ್ಯಾಚರಣೆಯ ವಿರುದ್ಧ ಟೀಕೆ ಮಾಡಿತು. ಆನಂತರ, ಅದನ್ನು ಒಪ್ಪಿಕೊಂಡಿತು ಎಂದು ಕಾಂಗ್ರೆಸ್ಸಿಗರಿಗೆ ಮುಟ್ಟಿ ನೋಡಿಕೊಳ್ಳುವಂತೆ ಮೋದಿ ಹೇಳಿದರು.

ಪ್ರಧಾನಿ ಭಾಷಣ ಮುಖ್ಯಾಂಶ

- ಜಗತ್ತಿನ ಯಾವುದೇ ನಾಯಕನೂ ಆಪರೇಷನ್ ಸಿಂದೂರ ನಿಲ್ಲಿಸುವಂತೆ ಕೇಳಿಲ್ಲ. ಬದಲಿಗೆ ಪಾಕಿಸ್ತಾನದ ಡಿಜಿಎಂಒ ನೇರವಾಗಿ ಕರೆ ಮಾಡಿ ದಯವಿಟ್ಟು ನಿಲ್ಲಿಸಿ, ಮತ್ತಷ್ಟು ನಾಶವಾಗಲು ಇಷ್ಟವಿಲ್ಲ ಎಂದು ಮನವಿ ಮಾಡಿದ್ದರಿಂದ ಕದನ ವಿರಾಮ ಪ್ರಕ್ರಿಯೆ ನಡೆದವು.
- ಪಹಲ್ಗಾಮ್ ಉಗ್ರ ಕೃತ್ಯದ ನಂತರ ಮತ್ತೊಮ್ಮೆ ಪಾಕಿಸ್ತಾನವು ದೊಡ್ಡ ದಾಳಿ ನಡೆಸಲಿದೆ ಎಂದು ಕರೆ ಮಾಡಿದ್ದ ಅಮೆರಿಕದ ಉಪಾಧ್ಯಕ್ಷರು ಹೇಳಿದರು. ಇದು ಪಾಕಿಸ್ತಾನದ ಉದ್ದೇಶವಾಗಿದ್ದರೆ, ಅದು ಅವರಿಗೆ ದುಬಾರಿ ಆಗಲಿದೆ ಎಂಬುದು ನನ್ನ ಉತ್ತರವಾಗಿತ್ತು.
- ಮೇ 10ರಂದು ಆಪರೇಷನ್ ಸಿಂದೂರ ಅಡಿಯಲ್ಲಿ ತೆಗೆದುಕೊಳ್ಳಲಾಗುತ್ತಿರುವ ಕ್ರಮವನ್ನು ನಿಲ್ಲಿಸುವುದಾಗಿ ಭಾರತ ಘೋಷಿಸಿದಾಗ, ವಿಪರ್ಯಾಸ ಎಂದರೆ ಇಲ್ಲಿನ ನಾಯಕರು ಆಪರೇಷನ್ ಸಿಂದೂರ ಬಗ್ಗೆ ಪ್ರಶ್ನೆಗಳನ್ನು ಎತ್ತಿದರು. ಪಾಕಿಸ್ತಾನದ ದುರದ್ದೇಶ ಹರಡುವ ಕೆಲಸವನ್ನು ಇಲ್ಲಿ ಮಾಡಿದರು.
- ಭಾರತದ ಪ್ರತಿಯೊಂದು ಪ್ರತಿಕ್ರಿಯೆಯೂ ಮೊದಲಿಗಿಂತ ಬಲವಾಗಿದೆ ಎಂದು ಪಾಕಿಸ್ತಾನ ಇಂದು ಚೆನ್ನಾಗಿ ತಿಳಿದುಕೊಂಡಿದೆ. ಭವಿಷ್ಯದಲ್ಲಿ ಅಗತ್ಯವಿದ್ದಲ್ಲಿ ಭಾರತ ಏನು ಬೇಕಾದರೂ ಮಾಡಬಹುದು ಎಂದು ಅದಕ್ಕೆ ತಿಳಿದಿದೆ.

ಉಗ್ರರ ಮೂಲದ ಬಗ್ಗೆ ಸಾಕ್ಷಿ ಕೊಟ್ಟ ಶಾ

ಪಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ ನೀವು ಪಾಕಿಸ್ತಾನಕ್ಕೆ ಕ್ಲೀನ್ ಚಿಟ್ ನೀಡಿದ್ದೀರಿ. ಇದು ಆ ದೇಶದಲ್ಲಿನ ಭಯೋತ್ಪಾದಕ ನೆಲೆಗಳ ಮೇಲೆ ಭಾರತ ನಡೆಸಿದ ದಾಳಿಯನ್ನು ಪ್ರಶ್ನಿಸಿದಂತಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಲೋಕಸಭೆಯಲ್ಲಿ ಆಪರೇಷನ್ ಸಿಂದೂರ ಕುರಿತ ಚರ್ಚೆಯಲ್ಲಿ ಮಾತನಾಡಿ, ಸೋಮವಾರ ಕಾಶ್ಮೀರದಲ್ಲಿ ಭದ್ರತಾ ಪಡೆಗಳಿಂದ ಹತ್ಯೆಯಾದ ಮೂವರು ಭಯೋತ್ಪಾದಕರು ಪಹಲ್ಗಾಮ್ ದಾಳಿಯಲ್ಲಿ ಭಾಗಿಯಾಗಿದ್ದರು. ಈ ಮೂವರು ಪಾಕಿಸ್ತಾನದವರು ಎಂಬುದಕ್ಕೆ ಪುರಾವೆಗಳಿವೆ. ಅದರಲ್ಲಿ ಇಬ್ಬರ ಮತದಾರರ ಸಂಖ್ಯೆಗಳು ಇವೆ. ಪಾಕಿಸ್ತಾನದಲ್ಲಿ ತಯಾರಿಸಿದ ಚಾಕೊಲೇಟ್‌ಗಳು ಅವರ ಬಳಿ ಪತ್ತೆಯಾಗಿವೆ ಎಂದು ಲೋಕಸಭೆಗೆ ತಿಳಿಸಿದರು.

ಮೊದಲ ದಿನ ಆರು ಜಿಲ್ಲೆಯ ಶಾಸಕರೊಂದಿಗೆ ಸಭೆ
ಕೆಪಿಸಿಸಿ ಅಧ್ಯಕ್ಷರಿಗಿಲ್ಲ ಆಹ್ವಾನ, ಭಾರಿ ಕುತೂಹಲ

ಶಾಸಕರ ಸಮಸ್ಯೆ ಆಲಿಸಿದ ಸಿಎಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಶಾಸಕ, ಸಚಿವರೊಂದಿಗೆ ಪ್ರತ್ಯೇಕ ಸಭೆ ನಡೆಸಿದ ಬಳಿಕ ಮುಖ್ಯ ಮಂತ್ರಿ ಸಿದ್ದ ರಾಮಯ್ಯ ಅವರೂ 'ಪ್ರತ್ಯೇಕ' ಸಭೆಯ ಮ್ಯಾರಥಾನ್ ಆರಂಭಿಸಿದ್ದು, ಶಾಸಕರ ಕಷ್ಟ-ಸುಖವನ್ನು ವಿಚಾರಿಸಿದ್ದಾರೆ.

ಮಂಗಳವಾರ ಇಡೀ ದಿನ ಜಿಲ್ಲಾವಾರು ಕಾಂಗ್ರೆಸ್ ಶಾಸಕರ ಸಭೆ ನಡೆಸಿದ್ದು, ಈ ಸಭೆಯಲ್ಲಿ ಉಸ್ತುವಾರಿ ಸಚಿವರುಗಳೂ ಭಾಗಿಯಾಗಿದ್ದರು. ಉಸ್ತುವಾರಿಗಳಿಗೆ ಆಹ್ವಾನ ನೀಡಿದ್ದರೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಈ ಸಭೆಗಳಿಗೆ ಆಹ್ವಾನಿಸದಿರುವುದು ಕಾಂಗ್ರೆಸ್‌ನಲ್ಲಿ ಭಾರಿ ಕುತೂಹಲಕ್ಕೆ ಕಾರಣವಾಗಿದೆ. ಡಿಸಿಎಂ ಹೊರಗಿಟ್ಟು ಸಭೆ ನಡೆಸುತ್ತಿರುವ ಸಿಎಂ ನಡೆಯನ್ನು ಬಹಿರಂಗವಾಗಿ ಡಿಕೆ ಆಕ್ಷೇಪಿಸಿಲ್ಲವಾದರೂ, ಆಪ್ತರ ಬಳಿ ಈ ವಿಷಯ ಬಗ್ಗೆ ಅಸಮಾಧಾನ ಹೊರ ಹಾಕಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮೊದಲ ದಿನ ತವರು ಜಿಲ್ಲೆ ಮೈಸೂರಿನಿಂದ ಸಭೆ ಆರಂಭಿಸಿರುವ ಮುಖ್ಯಮಂತ್ರಿಗಳು, ಬಳಿಕ ಚಾಮರಾಜನಗರ, ತುಮಕೂರು, ಕೊಡಗು, ಹಾಸನ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರೊಂದಿಗೆ ಸಭೆ ನಡೆಸಿದ್ದಾರೆ. ಈ ವೇಳೆ ಎರಡು ವರ್ಷದ ಅವಧಿಯಲ್ಲಿ ಆಗಿರುವ ಕಾರ್ಯಕ್ರಮಗಳು, ಯಾವೆಲ್ಲ ಯೋಜನೆಗಳು ಬಾಕಿ ಉಳಿದಿವೆ? ಅನುದಾನ ಹಂಚಿಕೆಗೆ ಸಂಬಂಧಿಸಿದಂತೆ ಶಾಸಕರೊಂದಿಗೆ ಚರ್ಚಿಸಿದ್ದಾರೆ. → 4

> ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೇವಾಲ ಅವರು ಶಾಸಕರನ್ನು ಭೇಟಿ ಮಾಡಿದ ಬಳಿಕ ಅನೇಕ ವಿಚಾರಗಳನ್ನು ಸಿಎಂ ಗಮನಕ್ಕೆ ತಂದಿದ್ದು, ಶಾಸಕರ ಅಹವಾಲುಗಳ ವಿಚಾರವಾಗಿ ಸಿಎಂ ಸಭೆ ಮಾಡುತ್ತಿದ್ದಾರೆ. ಇದರಲ್ಲಿ ತಪ್ಪೇನು ಇಲ್ಲ. ಈ ಬಗ್ಗೆ ನನಗೆ ಯಾವುದೇ ಆಕ್ಷೇಪ ಇಲ್ಲ. ಈ ವಿಚಾರದಲ್ಲಿ ನನಗೆ ಏನೂ ಕಷ್ಟವಾಗದಿದ್ದರೂ, ನಿಮಗೆ ಏಕೆ (ಮಾಧ್ಯಮಗಳು) ಕಷ್ಟವಾಗುತ್ತಿದೆ?
>
> **-ಡಿ.ಕೆ.ಶಿವಕುಮಾರ್**, ಉಪಮುಖ್ಯಮಂತ್ರಿ

ಸಿಎಂ ಮತ್ತೆ ದೆಹಲಿಗೆ ಪ್ರಯಾಣ

ಸಿಎಂ ಸಿದ್ದರಾಮಯ್ಯ ಅವರು ಮತ್ತೆ ದೆಹಲಿಗೆ ತೆರಳುತ್ತಿದ್ದು, ಕುತೂಹಲಕ್ಕೆ ಕಾರಣವಾಗಿದೆ. ಆಗಸ್ಟ್ 1ರಂದು ಸಂಜೆ 6 ಗಂಟೆಗೆ ದೆಹಲಿಯ ಐಟಿಸಿ ಮೌರ್ಯ ಹೋಟೆಲ್‌ನಲ್ಲಿ ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ ವತಿಯಿಂದ ಬ್ರಿಡ್ಜ್ ಟು ಬೆಂಗಳೂರು ಕಾರ್ಯಕ್ರಮ ಆಯೋಜಿಸಲಿದ್ದಾರೆ. ವಿವಿಧ ದೇಶಗಳ ರಾಯಭಾರಿಗಳು ಭಾಗವಹಿಸುವ ಈ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಭಾಗವಹಿಸಲಿದ್ದಾರೆ. ಬಳಿಕ ಆ.2ರಂದು ಬೆ.9.30ಕ್ಕೆ ಎಐಸಿಸಿ ಕಾನೂನು, ಮಾಹಿತಿ ಹಕ್ಕು ವಿಭಾಗ ವಿಜ್ಞಾನ ಭವನದಲ್ಲಿ ಆಯೋಜಿಸಿರುವ ವಿಚಾರ ಸಂಕಿರಣದಲ್ಲಿ ಭಾಗವಹಿಸಲಿದ್ದಾರೆ. ಈ ವಿಚಾರ ಸಂಕಿರಣದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಭಾಗವಹಿಸಿದ್ದಾರೆ. ಬಳಿಕ ಪಕ್ಷದ ವರಿಷ್ಠರೊಂದಿಗೆ ಶಾಸಕರೊಂದಿಗಿನ ಸಭೆಯ ಸಾರಾಂಶ ವಿವರಿಸಲಿದ್ದಾರೆ. ಈ ವೇಳೆ ರಾಜ್ಯ ರಾಜಕೀಯದ ಬಗ್ಗೆಯೂ ಚರ್ಚೆಯಾಗುವ ಸಾಧ್ಯತೆಯಿದೆ ಎನ್ನಲಾಗಿದೆ.

ರಾಜ್ಯದ ಐದು ಕಡೆ ಲೋಕಾಯುಕ್ತ ದಾಳಿ

ಬೆಂಗಳೂರು: ಲೋಕಾಯುಕ್ತ ಅಧಿಕಾರಿಗಳು ಮಂಗಳವಾರ ರಾಜ್ಯಾದ್ಯಂತ ಐದು ಸರಕಾರಿ ಅಧಿಕಾರಿಗಳ ಮೇಲೆ ದಾಳಿ ಮಾಡಿದ್ದಾರೆ. ಬಿಡಿಎ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕ ಓಂಪ್ರಕಾಶ್, ಬಿಬಿಎಂಪಿ ಶೆಟ್ಟಿಹಳ್ಳಿ ಉಪ ವಿಭಾಗದ ತೆರಿಗೆ ಮೌಲ್ಯಮಾಪಕ ಎನ್.ವೆಂಕಟೇಶ್, ಹಿರಿಯೂರು ವೈದ್ಯಾಧಿಕಾರಿ ಡಾ.ವೆಂಕಟೇಶ್, ಹಾಸನ ವಿಭಾಗದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಕಾರ್ಯಪಾಲಕ ಅಭಿಯಂತರ ಜಯಣ್ಣ, ಗೌರಿಬಿದನೂರಿನ ಗ್ರಾಮೀಣ ಕುಡಿಯುವ ನೀರು ಮತ್ತು ಒಳ ಚರಂಡಿ ಇಲಾಖೆಯ ಕಿರಿಯ ಅಭಿಯಂತರ ಆಂಜನೇಯ ಮೂರ್ತಿಗೆ ಸೇರಿದ ಸ್ಥಳಗಳಲ್ಲಿ ಶೋಧನಾ ಕಾರ್ಯ ಕೈಗೊಳ್ಳಲಾಗಿದೆ.

ಆ.4ಕ್ಕೆ ಬೆಂಗಳೂರಲ್ಲಿ ರಾಗಾ ಪಾದಯಾತ್ರೆ

ಬೆಂಗಳೂರು: ರಾಷ್ಟ್ರ ರಾಜಕಾರಣದಲ್ಲಿ ಭಾರಿ ವಿವಾದಕ್ಕೆ ಕಾರಣವಾಗಿರುವ 'ಮತಗಳ್ಳತನ' ಆರೋಪವನ್ನು ಮುಂದಿನ ಹಂತಕ್ಕೆ ತೆಗೆದುಕೊಂಡು ಹೋಗಲು ಮುಂದಾಗಿರುವ ಕಾಂಗ್ರೆಸ್, ಇದೀಗ ಅಗಸ್ಟ್ 4ರಂದು ಬೆಂಗಳೂರಿನ ಮಹಾದೇವಪುರ ಕ್ಷೇತ್ರದಿಂದ ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿವರೆಗೂ ರಾಹುಲ್ ಗಾಂಧಿ ಪಾದಯಾತ್ರೆ ನಡೆಸಲಿದ್ದಾರೆ. ಈ ಪ್ರತಿಭಟನೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿದಂತೆ ರಾಜ್ಯ ಕಾಂಗ್ರೆಸ್ ನಾಯಕರು ಸಾಥ್ ನೀಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವೃದ್ಧನ ಕೊಂದ ಬೀದಿ ನಾಯಿಗಳು

ಬೆಂಗಳೂರು: ಬೀದಿನಾಯಿ ದಾಳಿಗೆ ವೃದ್ಧ ಬಲಿಯಾದ ಘಟನೆ ತಡರಾತ್ರಿ ಕೊಡಿಗೆಹಳ್ಳಿ ಠಾಣಾ ವ್ಯಾಪ್ತಿಯ ಟೆಲಿಕಾಮ್ ಲೇಔಟ್‌ನಲ್ಲಿ ನಡೆದಿದೆ. ನಾಯಿಗಳ ದಾಳಿಯಿಂದ ತೀವ್ರವಾಗಿ ಗಾಯಗೊಂಡಿದ್ದ ಸೀತಪ್ಪ (68) ಎಂಬವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ತಡರಾತ್ರಿ ಮನೆಯಿಂದ ಹೊರಬಂದಿದ್ದ ಸೀತಪ್ಪ ಅವರ ಮೇಲೆ 8 ಬೀದಿ ನಾಯಿಗಳು ದಾಳಿ ಮಾಡಿವೆ. ತಪ್ಪಿಸಿಕೊಂಡು ಓಡಲಾಗದೇ ನೆಲಕ್ಕೆ ಬಿದ್ದ ಸೀತಪ್ಪ ಅವರ ಕೈ, ಕಾಲು, ಮುಖಕ್ಕೆ ನಾಯಿಗಳು ಕಚ್ಚಿ ಗಂಭೀರವಾಗಿ ಗಾಯಗೊಳಿಸಿದ್ದವು. ಸ್ಥಳದ ಸಮೀಪದಲ್ಲಿದ್ದ ಬೀಟ್ ಪೊಲೀಸರು ಹರಸಾಹಸಪಟ್ಟು ನಾಯಿಗಳಿಂದ ಸೀತಪ್ಪರನ್ನು ರಕ್ಷಿಸಲು ಯತ್ನಿಸಿದ್ದಾರೆ. ಆದರೆ ಆಸ್ಪತ್ರೆಗಲ್ಲಾಗಲೇ ಅವರು ಮೃತಪಟ್ಟಿದ್ದಾರೆ. ಕೊಡಿಗೆಹಳ್ಳಿ ಪೊಲೀಸ್ ಠಾಣೆಯಲ್ಲಿ ಯುಡಿಆರ್ (ಅಸಹಜ ಸಾವು ಪ್ರಕರಣ) ವರದಿಯಾಗಿದ್ದು, ಮೃತನ ಪುತ್ರ ದೂರು ನೀಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

1 ಲಕ್ಷ ರು. ಪರಿಹಾರ

ಬೀದಿನಾಯಿ ದಾಳಿಯಿಂದ ಮೃತಪಟ್ಟ ವೃದ್ಧ ಸೀನಪ್ಪ ಕುಟುಂಬಸ್ಥರಿಗೆ ಕೇವಲ 1 ಲಕ್ಷ ರು. ಪರಿಹಾರ ಕೊಡುವುದಾಗಿ ಬಿಬಿಎಂಪಿ ಮಾಹಿತಿ ನೀಡಿದೆ. 1 ಲಕ್ಷ ರು. ಪರಿಹಾರ ಕೊಡುತ್ತೇವೆ. ಸಂತ್ರಸ್ತ ವ್ಯಕ್ತಿ ಸೀತಪ್ಪ ಮಾನಸಿಕವಾಗಿ ಸ್ವಲ್ಪ ಅಸ್ಥಿರನಾಗಿದ್ದ. ಅವರು ಬೇರೆ ಸಮಯದಲ್ಲಿ ಹೊರಗೆ ಹೋಗುತ್ತಾರೆ ಎಂದು ಕುಟುಂಬ ತಿಳಿಸಿದೆ. ವರದಿಯ ಆಧಾರದ ಮೇಲೆ, ಬಿಬಿಎಂಪಿ ನಿಯಮಗಳ ಪ್ರಕಾರ ಕುಟುಂಬ ಸದಸ್ಯರಿಗೆ ಪರಿಹಾರ ನೀಡಲಾಗುವುದು ಎಂದು ಬಿಬಿಎಂಪಿ ಯಲಹಂಕ ವಲಯದ ಪಶುಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಮನೋಹರ್ ಅವರು ತಿಳಿಸಿದ್ದಾರೆ.

ನಟಿ ರಮ್ಯಾಗೆ ಅಶ್ಲೀಲ ಸಂದೇಶ ಪ್ರಕರಣ ಸಿಸಿಬಿಗೆ

ಬೆಂಗಳೂರು: ನಟಿ ರಮ್ಯಾಗೆ ಸಾಮಾಜಿಕ ಜಾಲ ತಾಣಗಳಲ್ಲಿ ಅಶ್ಲೀಲ ಕಾಮೆಂಟ್, ಸಂದೇಶ ರವಾನಿಸುತ್ತಿದ್ದ ಪ್ರಕರಣದ ತನಿಖೆ ಸಿಸಿಬಿಗೆ ವಹಿಸಲಾಗಿದೆ ಎಂದು ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ತಿಳಿಸಿದ್ದಾರೆ. ಅಶ್ಲೀಲ ಸಂದೇಶಗಳನ್ನು ಕಳುಹಿಸಿದ್ದ ಇನ್ಸ್ಟಾಗ್ರಾಂ ಖಾತೆಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ನಟಿ ರಮ್ಯಾ ದೂರು ನೀಡಿದ ಬೆನ್ನಲ್ಲೇ 30ಕ್ಕೂ ಅಧಿಕ ಇನ್ಸ್ಟಾಗ್ರಾಂ ಖಾತೆ ಗಳ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾ ಗಿತ್ತು. ದರ್ಶನ್ ಅಭಿಮಾನಿಗಳು ಎಂದು ಹೇಳಿ ಕೊಂಡು ಸಂದೇಶ ರವಾನೆ, ಕಾಮೆಂಟ್ ಮಾಡುತ್ತಿದ್ದವರ ವಿರುದ್ಧ ಜುಲೈ 28ರಂದು ಖುದ್ದು ರಮ್ಯಾ ಅವರೇ ತೆರಳಿ ಬೆಂಗಳೂರು ನಗರ ಪೊಲೀಸ್ ಆಯುಕ್ತರು ಹಾಗೂ ಸೈಬರ್ ಕ್ರೈಮ್ ಠಾಣೆಗೆ ದೂರು ನೀಡಿದ್ದರು.

> ದೂರಿನನ್ವಯ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದ್ದು, ಸಿಸಿಬಿಗೆ ವರ್ಗಾವಣೆ ಮಾಡಲಾಗಿದೆ. ಜಂಟಿ ಆಯುಕ್ತರ ಮೇಲ್ವಿಚಾರಣೆಯಲ್ಲಿ ಓರ್ವ ಎಸಿಪಿ ಮಟ್ಟದ ಅಧಿಕಾರಿಯಿಂದ ಪ್ರಕರಣದ ತನಿಖೆ ನಡೆಯಲಿದೆ.
>
> **-ಸೀಮಂತ್ ಕುಮಾರ್‌ಸಿಂಗ್,** ಬೆಂಗಳೂರು ನಗರ ಪೊಲೀಸ್ ಆಯುಕ್ತ

ಧರ್ಮಸ್ಥಳದ ಸುತ್ತ ನಿಗೂಢ ಸಾವುಗಳ ತನಿಖೆ ಚುರುಕುಗೊಳಿಸಿದ ಎಸ್‌ಐಟಿ
ಅನಾಮಿಕ ವ್ಯಕ್ತಿ ತೋರಿಸಿದ ಜಾಗದಲ್ಲಿ ಅಗೆದರೂ ಯಾವುದೇ ಕುರುಹು ಇಲ್ಲ

15 ಅಡಿ ಅಗೆದರೂ ಒಂದು ಮೂಳೆಯೂ ಸಿಕ್ಕಿಲ್ಲ

ಧರ್ಮಸ್ಥಳ: ಧರ್ಮಸ್ಥಳ ಪರಿಸರದಲ್ಲಿ ನೂರಾರು ಶವ ಹೂತಿರುವುದಾಗಿ ಅನಾಮಿಕ ವ್ಯಕ್ತಿ ನೀಡಿದ ದೂರಿನನನ್ವಯ ವಿಶೇಷ ಪೊಲೀಸ್ ತನಿಖಾ ತಂಡ ಮಂಗಳವಾರ ಮೊದಲನೇ ಸಮಾಧಿ ಆಗೆದರಾದರೂ ಯಾವುದೇ ಕುರುಹು ಪತ್ತೆಯಾಗಿಲ್ಲ. ತಲೆ ಬುರುಡೆ ಇರಲಿ, ಒಂದೇ ಒಂದು ಮೂಳೆಯೂ ಪತ್ತೆ ಯಾಗಿಲ್ಲ.

ಧರ್ಮಸ್ಥಳದ ಸ್ನಾನಘಟ್ಟದ ಸಮೀಪದ ನೇತ್ರಾವತಿ ನದಿ ಪಕ್ಕದ ಕಾಡಿನಲ್ಲಿ ಶವಗಳನ್ನು ಹೂತಿಡಲಾಗಿದೆ ಎಂದು ಅನಾಮಿಕ ವ್ಯಕ್ತಿಯೊಬ್ಬ ದೂರು ನೀಡಿದ್ದರು. ಆತ ಗುರುತಿಸಿದ ಮೊದಲನೇ ಜಾಗವನ್ನು ಬರೋಬ್ಬರಿ 15 ಅಡಿ ಆಳ, 8 ಅಡಿ ಅಗಲ ಅಗೆದರೂ ಯಾವುದೇ ಕಳೇಬರ ಪತ್ತೆಯಾಗಿಲ್ಲ.

ಆರಂಭದಲ್ಲಿ ಕಾರ್ಮಿಕರು 4 ಅಡಿ ಆಳ ಅಗೆದಿದ್ದರು. ಕಳೇಬರ ಪತ್ತೆಯಾಗದ ಹಿನ್ನೆಲೆಯಲ್ಲಿ ಮತ್ತಷ್ಟು ಅಡಿ ಆಳ ಅಗೆಯಲು ದೂರುದಾರ ಸೂಚಿಸಿದ್ದ. ಹೀಗಾಗಿ ಜೆಸಿಬಿ ಮೂಲಕ 15 ಅಡಿ ಆಳ ಸಮಾಧಿ ಅಗೆಯಲಾಗಿದೆ. ಆದರೆ ಕಳೇಬರ ಪತ್ತೆಯಾಗಿಲ್ಲ. ಹೀಗಾಗಿ ಮಧ್ಯಾಹ್ನ 3.30 ರಿಂದ ಆರಂಭವಾದ ಹಿಟಾಚಿ ಕಾರ್ಯಾಚರಣೆ ಸಂಜೆ 6:15ರವರೆಕ್ಕೆ ಅಂತ್ಯ ಮಾಡಲಾಯಿತು. ಇದೀಗ ದೂರುದಾರ ಗುರುತಿಸಿದ 2ನೇ ಸಮಾಧಿ ಸ್ಥಳ ಅಗೆಯುವ ಕಾರ್ಯ ಬುಧವಾರ ಆರಂಭಗೊಳ್ಳಲಿದೆ.

ಶವಗಳನ್ನು ಹೂತಿಟ್ಟ ಸ್ಥಳಗಳನ್ನು ಗುರುತಿಸಲು ಅನಾಮಿಕ ವ್ಯಕ್ತಿಯನ್ನು ಸ್ಥಳಕ್ಕೆ ಕರೆದೊಯ್ಯ ಎಸ್‌ಐಟಿ ಅಧಿಕಾರಿಗಳು.

ಪೊಲೀಸ್ ನಾಯಿ ಬಳಕೆ: ಕಳೇಬರಗಳು ಅಕ್ಕಪಕ್ಕ ಇದ್ದರೆ ಸಿಗಲೇಬೇಕು ಎಂಬ ಛಲದಿಂದ ವಿಶೇಷ ಪೊಲೀಸ್ ತನಿಖಾ ತಂಡ ಕಾರ್ಯಾಚರಣೆಗೆ ಪೊಲೀಸ್ ನಾಯಿ ಬಳಕೆ ಮಾಡಿದೆ. ಸ್ವಲ್ಪ ಸುಳಿವು ಸಿಕ್ಕರೂ ಪ್ರಕರಣದಲ್ಲಿ ಯಶಸ್ಸು ಸಾಧಿಸಬಹುದು ಎಂಬ ನಿಟ್ಟಿನಲ್ಲಿ ಸಣ್ಣ ಅಂಶವನ್ನೂ ತನಿಖಾ ತಂಡವು ಸೂಕ್ಷ್ಮವಾಗಿ ಗಮನಿಸುತ್ತಿದೆ.

ಮುಂದುವರಿದ ಸ್ಥಳ ಮಹಜರು: ಧರ್ಮಸ್ಥಳದಲ್ಲಿ ಶವಗಳನ್ನು ಹೂತಿಟ್ಟಿರುವುದಾಗಿ ದೂರು ನೀಡಿದ್ದ ಅನಾಮಿಕ ವ್ಯಕ್ತಿಯು ಮೊದಲ ದಿನದ ಸ್ಥಳ ಮಹಜರು ವೇಳೆ 13 ಸ್ಥಳಗಳನ್ನು ಗುರುತಿ ಸಿದ್ದ. ಎರಡನೇ ದಿನವಾದ ಮಂಗಳ ವಾರ ಕೂಡ ಸ್ಥಳ ಮಹಜರು ಪ್ರಕ್ರಿಯೆ ಮುಂದುವರಿದಿದೆ.

ಎಸ್‌ಐಟಿ ಅಧಿಕಾರಿ ಗಳ ಒಂದು ತಂಡ ದೂರುದಾರನ ಜತೆ ಸ್ಥಳ ಮಹಜರು ಪ್ರಕ್ರಿಯೆ ಮಾಡಿದೆ. ಮತ್ತಷ್ಟು ಸಮಾಧಿ ಗುರುತಿಸಿರುವ ಮಾಹಿತಿ ಲಭ್ಯವಾಗಿದೆ.

ಕೋರ್ಟ್ ಆದೇಶ ಉಲ್ಲಂಘನೆ ಏಕೆ?

ಬೆಂಗಳೂರು: ನ್ಯಾಯಾಲಯದ ಆದೇಶಗಳನ್ನು ಏಕೆ ಪದೇ ಪದೆ ಉಲ್ಲಂಘನೆ ಮಾಡುತ್ತಿದ್ದೀರಿ' ಎಂದು ಯೂ ಟ್ಯೂಬರ್‌ಗಳನ್ನು ಪ್ರಶ್ನಿಸಿರುವ ಹೈಕೋರ್ಟ್, ಪ್ರತಿಬಂಧಕ ಆದೇಶ ನೀಡಿದ ಮೇಲೂ ಒಂದರ ನಂತರ ಮತ್ತೊಂದು (ಯೂ ಟ್ಯೂಬ್) ಚಾನಲ್ ಆರಂಭಿಸುತ್ತಿರುವುದೇಕೆ? ಎಂದು ಮೌಖಿಕವಾಗಿ ಪ್ರಶ್ನಿಸಿದೆ. ಧರ್ಮಸ್ಥಳ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರ ಸಹೋದರ ಡಿ.ಹರ್ಷೇಂದ್ರ ಕುಮಾರ್ ವಿರುದ್ಧ ಯಾವುದೇ ಮಾನಹಾನಿ ವಿಷಯ ಪ್ರಸಾರ ಅಥವಾ ಪ್ರಕಟ ಮಾಡಬಾರದು ಎಂದು ಮಾಧ್ಯಮಗಳಿಗೆ ನಿರ್ಬಂಧ ವಿಧಿಸಿರುವ ವಿಚಾರಣಾ ನ್ಯಾಯಾಲಯದ ಆದೇಶ ಪ್ರಶ್ನಿಸಿದ ಅರ್ಜಿಯನ್ನು ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು. → 4

14 ಜಲಾಶಯಗಳಲ್ಲಿ ಶೇ.70ಕ್ಕೂ ಹೆಚ್ಚು ನೀರಿನ ಸಂಗ್ರಹ | ಈ ಬಾರಿ ಬೇಸಿಗೆಯಲ್ಲಿ ನೀರಿನ ಸಂಕಷ್ಟ ಇಲ್ಲ

ರಾಜ್ಯದ ಪ್ರಮುಖ ಜಲಾಶಯಗಳು ಭರ್ತಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಈ ವರ್ಷ ಉತ್ತಮ ಮುಂಗಾರು ಮಳೆಯಾಗಿರುವ ಹಿನ್ನೆಲೆ ರಾಜ್ಯದ ಪ್ರಮುಖ 14 ಜಲಾಶಗಳು ಶೇ.70ಕ್ಕೂ ಹೆಚ್ಚು ಭರ್ತಿಯಾಗಿರುವುದರಿಂದ ಈ ಬಾರಿ ಬೇಸಿಗೆಯಲ್ಲಿ ನೀರಿನ ಸಂಕಷ್ಟ ಎದುರಾಗದು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಈ ವರ್ಷದಲ್ಲಿ ಅವಧಿಗೂ ಮುನ್ನ ಮುಂಗಾರು ರಾಜ್ಯಕ್ಕೆ ಪ್ರವೇಶವಾಗಿದ್ದು, ವಾಡಿಕೆಗಿಂತಲೂ ಹೆಚ್ಚು ಮಳೆಯಾಗುತ್ತಿದೆ. ಇದರಿಂದಾಗಿ ನದಿಗಳ ಜಲಾನಯನ ಪ್ರದೇಶಗಳಲ್ಲಿ ಭಾರೀ ಮಳೆಯಾಗುತ್ತಿದ್ದು, ರಾಜ್ಯದ 14 ಜಲಾಶಯಗಳಲ್ಲಿ ನೀರಿನ ಮಟ್ಟವು ಶೇ.70ಕ್ಕೂ ಅಧಿಕವಾಗಿದೆ. ಮುಂಗಾರು ಮಳೆಯ ಅವಧಿ ಇನ್ನೂ ಇರುವುದರಿಂದ ಮತ್ತಷ್ಟು ಮಳೆಯಾಗಲಿದೆ. ಹೀಗಾಗಿ ಮುಂದಿನ ವರ್ಷ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಂಕಷ್ಟ ಎದುರಾಗಲಾರದು ಎಂದು ತಜ್ಞರು ತಿಳಿಸಿದ್ದಾರೆ. ಮೂರು ಜಲ ವಿದ್ಯುತ್ ಸ್ಥಾವರಗಳುಳ್ಳ ಜಲಾಶಯ ಗಳೂ ಸೇರಿದಂತೆ ರಾಜ್ಯದ ಪ್ರಮುಖ ಜಲಾಶಯಗಳಲ್ಲಿ ಜುಲೈ 28ರ ವೇಳೆಗೆ 715.92 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ. ಅವುಗಳ ಒಟ್ಟು ಸಾಮರ್ಥ್ಯ 895.62 ಟಿಎಂಸಿ ಆಗಿದೆ. ಕಳೆದ ವರ್ಷ ಜುಲೈ 28 ರಂದು ರಾಜ್ಯದ ಅಣೆಕಟ್ಟೆಗಳಲ್ಲಿ 687.37 ಟಿಎಂಸಿ ಅಡಿ ನೀರು ಸಂಗ್ರಹ ವಾಗಿತ್ತು. ಈ ಬಾರಿ ಒಟ್ಟಾರೆಯಾಗಿ, ಜಲಾಶಯಗಳು ಅವುಗಳ ಸಾಮರ್ಥ್ಯದ ಶೇ.80ರಷ್ಟು ತುಂಬಿವೆ ಹೀಗಾಗಿ ಮುಂದಿನ ವರ್ಷ ಬೇಸಿಗೆಯಲ್ಲಿ ನೀರಿನ ಸಮಸ್ಯೆ ಕಾಡುವುದಿಲ್ಲ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. → 4



- ಹೇಮಾವತಿ ಮತ್ತು ಕೆಆರ್‌ಎಸ್ ಶೇ.97ರಷ್ಟು ಭರ್ತಿ
- ಹಾರಂಗಿ ಜಲಾಶಯದಲ್ಲಿ ಶೇ.79ರಷ್ಟು ನೀರು ಸಂಗ್ರಹ
- ಮುಂಗಾರು ಮಳೆ ಇನ್ನೂ ಇರುವುದರಿಂದ ಮತ್ತಷ್ಟು ಮಳೆ

ಸಮಾಚಾರ ಸಣ್ಣದಲ್ಲ

ನೇರ ಫೋನ್ ಇನ್ ಕಾರ್ಯಕ್ರಮ 4ರಂದು

ಯಾದಗಿರಿ: ಆಗಸ್ಟ್ 4 ರಂದು ನೇರ ಫೋನ್ ಇನ್ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಯಾದಗಿರಿ ವಿಭಾಗ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ವಿಭಾಗೀಯ ನಿಯಂತ್ರಣಾಧಿಕಾರಿ ಸುನೀಲಕುಮಾರ ಹ.ಚಂದರಗಿ ಅವರು ತಿಳಿಸಿದ್ದಾರೆ. ಜಿಲ್ಲೆಯ ಸಾರ್ವಜನಿಕರಿಗೆ ಹಾಗೂ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಉಂಟಾಗುವ ಸಾರಿಗೆ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಪ್ರತಿ ತಿಂಗಳು ಮೊದಲನೇ ಸೋಮವಾರ ರಂದು ನೇರ ಫೋನ್ ಇನ್ ಕಾರ್ಯಕ್ರಮವನ್ನು ಆಯೋಜಿಸಲು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕಕರಸಾ ನಿಗಮ ಕೇಂದ್ರ ಕೇಂದ್ರ ಕಛೇರಿ ಕಲಬುರಗಿ ಅವರ ಸೂಚಿಸಿದೆ. ಯಾದಗಿರಿ ಜಿಲ್ಲೆಯ ಸಾರ್ವಜನಿಕರಿಗೆ ಮತ್ತು ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಇರುವ ಸಾರಿಗೆ ಸಮಸ್ಯೆಗಳ ಕುರಿತು ಕ.ಕ.ರ.ಸಾ ನಿಗಮ ಯಾದಗಿರಿ ವಿಭಾಗದಿಂದ ಆಗಸ್ಟ್ 4ರ ಸೋಮವಾರ ಮಧ್ಯಾಹ್ನ 3.30 ರಿಂದ ಸಂಜೆ 5.30 ಗಂಟೆಯ ವರೆಗೆ ನಡೆಯಲಿದೆ. ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಯಾದಗಿರಿ ಜಿಲ್ಲೆಯ ಸಾರ್ವಜನಿಕರು ಮತ್ತು ಶಾಲಾ ಕಾಲೇಜು ವಿದ್ಯಾರ್ಥಿಗಳು ದೂರವಾಣಿ ಸಂಖ್ಯೆ 6366423882 ಕರೆ ಮಾಡಿ ತಮ್ಮ ಸಾರಿಗೆ ವ್ಯವಸ್ಥೆ ಕುರಿತು ಇರುವ ಸಮಸ್ಯೆಗಳನ್ನು ತಿಳಿಸಿ ಪರಿಹಾರ ಪಡೆದುಕೊಳ್ಳಬೇಕು, ಅಂದು ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ವಿಭಾಗೀಯ ನಿಯಂತ್ರಣಾಧಿಕಾರಿಗಳು ಕ.ಕ.ರ.ಸಾ ನಿಗಮ ಯಾದಗಿರಿ ವಿಭಾಗದ ಅವರು ಜಿಲ್ಲೆಯ ಸಾರಿಗೆ ಸಮಸ್ಯೆಗಳ ಕುರಿತು ಸಾರ್ವಜನಿಕರೊಂದಿಗೆ ನೇರವಾಗಿ ಮಾತನಾಡಲಿದ್ದಾರೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಬೀದರ: ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಂಡಿರುವ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ), ಸಿದ್ಧಾರ್ಥನಗರ, ಮೈಸೂರು ಸಂಸ್ಥೆಯಲ್ಲಿ ಪ್ರಥಮ ಬಿ.ವಿ.ಎ. ಸ್ನಾತಕ ಪದವಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಂದ ಮಾಸ್ಟರ್ ಆಫ್ ವಿಜ್ಯುಯಲ್ ಆರ್ಟ್ಸ್ (ಎಂ.ವಿ.ಎ) (ಎರಡು ಶೈಕ್ಷಣಿಕ ವರ್ಷದ ನಾಲ್ಕು ಸೆಮಿಸ್ಟರ್ ಸಿ.ಬಿ.ಸಿ.ಎಸ್ ಪದ್ಧತಿ ದೃಶ್ಯ ಕಲೆಯಲ್ಲಿ 2025-26ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಸ್ನಾತಕೋತ್ತರ ಪದವಿ ಪ್ರವೇಶಾತಿಗಾಗಿ ಗಗಅಒಖ ಕಔಖಖಿಂಐ ಮೂಲಕ ಆನ್ ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಮೈಸೂರು ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜಿನ ಡೀನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.ಸ್ನಾತಕೋತ್ತರ ಪದವಿಯಲ್ಲಿ ಚಿತ್ರಕಲೆ ಮತ್ತು ಶಿಲ್ಪಕಲೆ ವಿಭಾಗಳಲ್ಲಿ ವಿಶೇಷ ಅಧ್ಯಯನದ ಸ್ನಾತಕೋತ್ತರ ಪದವಿಯಾಗಿರುತ್ತದೆ. ಪ್ರಥಮ ಮಾಸ್ಟರ್ ಆಫ್ ವಿಜುಯಲ್ ಆರ್ಟ್ (ಎಂ.ವಿ.ಎ), ಪ್ರವೇಶಾತಿಗಾಗಿ ಚಿತ್ರಕಲೆ ಮತ್ತು ಶಿಲ್ಪಕಲೆ ವಿಭಾಗಕ್ಕೆ ಅರ್ಜಿ ಸಲ್ಲಿಸಲು ಅಗಸ್ಟ್ 7 ರಂದು ಅಂತಿಮ ದಿನವಾಗಿದ್ದು. ದಿನಾಂಕ1-08-2025 ರಂದು ಬೆಳಗ್ಗೆ 1-00 ಗಂಟೆಗೆ ಅರ್ಹತಾ ಪರೀಕ್ಷೆ ಹಾಗೂ ಮಧ್ಯಾಹ್ನ 02-00 ಗಂಟೆಗೆ ವ್ಯಯಕ್ತಿಕ ಸಂದರ್ಶನ ಇರುತ್ತದೆ. ಆಸಕ್ತ ಅಭ್ಯರ್ಥಿಗಳು ಕರ್ನಾಟಕ ಸರ್ಕಾರದ ಅಂತರ್ಜಾಲ ವಿಳಾಸ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 0821-2438931 ನ್ನು ಸಂಪರ್ಕಿಸಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

ಸಮಾಜ ಸೇವಾರತ್ನ ರಾಜ್ಯ ಪ್ರಶಸ್ತಿಗೆ ಆಯ್ಕೆ

ಯಾದಗಿರಿ: ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಶೆಟ್ಟಿ ಬಣದ ಯಾದಗಿರಿ ತಾಲೂಕ ಅಧ್ಯಕ್ಷ ಭೀಮರಾಯ ಪೂಜಾರಿ ಬಬಲಾದಿ ಸಮಾಜ ಸೇವಾರತ್ನ ರಾಜ್ಯ ಪ್ರಶಸ್ತಿಗೆ ಆಯ್ಕೆ ಆಗಿದ್ದಾರೆ. ಅವರ ಕನ್ನಡಪರ ಹೋರಾಟ ಸಾಮಾಜಿಕ ಸೇವೆಗಳನ್ನು ಗುರುತಿಸಿ ಬೆಂಗಳೂರಿನ ಕರ್ನಾಟಕ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ ಹಾಗೂ ಕನ್ನಡ ಸಾಹಿತ್ಯ ಪರಿಷತ್, ಉಮಾಶ್ರೀ ಚಾರೀಟೇಲ್ ಟ್ರಸ್ಟ್ ಸಂಯೋಗದಲ್ಲಿ ನಿಡುವ 2025 ನೇ ಸಾಲಿನ ಸಮಾಜ ಸೇವಾರತ್ನ ರಾಜ್ಯ ಪ್ರಶಸ್ತಿಯನ್ನು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಕ್ಕಮಹಾದೇವಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಪ್ರವೀಣ್ ಶೆಟ್ಟಿ ಬಣದ ಕರ್ನಾಟಕ ರಕ್ಷಣಾ ವೇದಿಕೆ ತಾಲೂಕು ಅಧ್ಯಕ್ಷರಾದ ಭೀಮರಾಯ ಪೂಜಾರಿ, ಬಬಲಾದಿ ರವರಿಗೆ ಕರ್ನಾಟಕ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷರಾದ ಡಾ. ಮಂಜುಳಾ ಪಾವಗಡ ರವರು ಪ್ರಶಸ್ತಿ ಪ್ರಧಾನ ಮಾಡಿದರು. ಈ ಸಂದರ್ಭದಲ್ಲಿ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷರಾದ ಡಾ.ಮಂಜುಳಾ ಪಾವಗಡ, ಚಲನಚಿತ್ರ ಗಾಯಕರಾದ ಪವಿತ್ರ ಆರ್.ಪ್ರಭಾಕರ್ ರೆಡ್ಡಿ, ಡಾ.ದೊಡ್ಡಪ್ಪ ಪೂಜಾರಿ ಹುಂಡೆಕಲ್, ಹಾಗೂ ಇನ್ನಿತರರು ಉಪಸ್ಥಿತರಿದ್ದರು

ಸಾರಿಗೆ ಸೌಲಭ್ಯದ ಬಗ್ಗೆ ಫೋನ್-ಇನ್ ಆ.4ಕ್ಕೆ

ಬೀದರ: ಜಿಲ್ಲೆಯ ಸಾರ್ವಜನಿಕ ಪ್ರಯಾಣಿಕರಿಗೆ ಮತ್ತು ಶಾಲಾ/ ಕಾಲೇಜು ವಿದ್ಯಾರ್ಥಿಗಳಿಗೆ ಸಾರಿಗೆ ಸೌಲಭ್ಯದಲ್ಲಾಗುತ್ತಿರುವ ಸಮಸ್ಯೆಗಳನ್ನು ಆಲಿಸುವ ಸಂಬಂಧ ಹಾಗೂ ಸಾರ್ವಜನಿಕ ಪ್ರಯಾಣಿಕರಿಗೆ ಸಮರ್ಪಕ ಸಾರಿಗೆ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಅಗಸ್ಟ್ 4 ರಂದು ಮಧ್ಯಾಹ್ನ 3.30 ರಿಂದ 5.30 ರವರೆಗೆ ಫೋನ್-ಇನ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಬೀದರ ವಿಭಾಗದ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

{ಬಿ.ವೈ.ವಿಜಯೇಂದ್ರ} ಬಿಜೆಪಿ ರಾಜ್ಯಾಧ್ಯಕ್ಷ

ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗಳು ತಮ್ಮ ಕುರ್ಚಿ ಉಳಿಸಿಕೊಳ್ಳಲು ತಿಂಗಳಲ್ಲಿ ನಾಲ್ಕು ಬಾರಿ ದೆಹಲಿಗೆ ಹೋಗಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮನೆಯ ಗೇಟ್ ಕಾಯುತ್ತಾರೆ. ಆದರೆ ದೆಹಲಿಯಲ್ಲಿ ಪ್ರಧಾನ ಮಂತ್ರಿ ಭೇಟಿ ಮಾಡಿ ರಾಜ್ಯದ ರೈತರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದಿಲ್ಲ.

ಮಕ್ಕಳಿಗೆ ಅಗತ್ಯ ಮೂಲ ಸೌಲಭ್ಯ ಒದಗಿಸಿ | ಸದಸ್ಯ ಶಶಿಧರ ಕೋಸಂಬೆ ಸೂಚನೆ

ಮಕ್ಕಳ ಹಕ್ಕುಗಳ ರಕ್ಷಣೆಗೆ ಇಲಾಖೆ ಮುಂದಾಗಬೇಕು

ಶಹಾಪುರ: ಮಕ್ಕಳ ರಕ್ಷಣೆ ಮತ್ತು ಅವರ ಉಜ್ವಲ ಭವಿಷ್ಯಕ್ಕಾಗಿ ಸರಕಾರ ವಿವಿಧ ಇಲಾಖೆಗಳ ಮೂಲಕ ಜಾರಿಗೊಳಿಸಿರುವ ಹಲವು ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಮೂಲಕ ಮಕ್ಕಳ ಹಕ್ಕುಗಳ ರಕ್ಷಣೆಗೆ ಮುಂದಾಗಬೇಕು ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ ಸೂಚಿಸಿದರು. ನಗರದ ಸರಕಾರಿ ಸಾರ್ವಜನಿಕ ಆಸ್ಪತ್ರೆಗೆ, ಪೊಲೀಸ್ ಠಾಣೆ, ಅಲ್ಪಸಂಖ್ಯಾತರ ವಸತಿ ನಿಲಯ, ಬಿಸಿಎಮ್ ವಸತಿ ನಿಲಯಗಳಿಗೆ ದಿಢೀರ್ ಬೇಟಿ ನೀಡಿ ಪರಿಶೀಲಿಸಿ ಮಾತನಾಡಿದ ಅವರು, ಸಾರ್ವಜನಿಕ ಆಸ್ಪತ್ರೆಯಲ್ಲಿ ಎನ್.ಆರ್.ಸಿ ಕೇಂದ್ರ ಪ್ರಾರಂಭಿಸಬೇಕು ಎಂದು ಎಮ್‌ಓಗೆ ಸೂಚಿಸಿದರು.

ಬಳಿಕ ನಗರದ ಪೊಲೀಸ್ ಠಾಣೆಗೆ ಬೇಟಿ ನೀಡಿ ಮಕ್ಕಳ ಸ್ನೇಹಿ ಕೋಣೆ ನಿರ್ಮಾಣಕ್ಕೆ ಸೂಚಿಸಿದರು. ವಸತಿ ನಿಲಯಗಳಲ್ಲಿ ಶುಚಿತ್ವಕ್ಕೆ ಮೊದಲು ಆದ್ಯತೆ ನೀಡಬೇಕು. ಪೌಷ್ಠಿಕಯುಕ್ತ ಗುಣಮಟ್ಟದ ಆಹಾರವನ್ನು ವಿದ್ಯಾರ್ಥಿಗಳಿಗೆ ಒದಗಿಸಬೇಕು ಎಂದು ವಸತಿ ನಿಲಯಗಳ ಮೇಲ್ವಿಚಾರಕರಿಗೆ ಸೂಚಿಸಿದರು. ಹಾಗೂ ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಇರುವ ಕಾಯ್ದೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಸಂಭಂಧಿಸಿದ ಇಲಾಖೆ ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ ನಿರ್ಮಲ ಸುರಪುರ, ಸಿಡಿಪಿಓ ಮಲ್ಲಣ್ಣ ದೇಸಾಯಿ, ರೇಣುಕಾ ಪಾಟೀಲ್, ಬಿಸಿಎಮ್ ಅಧಿಕಾರಿ ಚೆನ್ನಪ್ಪಗೌಡ ಚೌದ್ರಿ, ಸೇರಿದಂತೆ ಇತರರು ಇದ್ದರು.

ಕಾಟಾಚಾರದ ಭೇಟಿ, ಶಖಾಪುರ ಕಿಡಿ ನಾಗರ ಪಂಚಮಿ ಹಬ್ಬದ ಹಿನ್ನೆಲೆ ಮಂಗಳವಾರ ಲೋಕಲ್ ರಜೆಯಿದ್ದಿದ್ದರಿಂದ ವಸತಿ ನಿಲಯ ಸೇರಿ, ಶಾಲಾ ಮಕ್ಕಳು ರಜೆಗೆಂದು ತಮ್ಮಗಳ ಊರಿಗೆ ಹೋಗಿದ್ದರು, ಇದರಿಂದ ಮಕ್ಕಳ ಆಯೋಗದ ಬೇಟಿಯಿಂದ ಯಾವುದೇ ಪ್ರಯೋಜನವಿಲ್ಲಾ. ಅಕ್ರಮ ಕೋಚಿಂಗ್ ಸೆಂಟರ್‌ಗಳು, ಅನಧಿಕೃತ ಶಾಲಾ ವಸತಿ ನಿಲಯಗಳು ನಾಯಿ ಕೊಡೆಗಳಂತೆ ಬೇರೂರಿದ್ದು ಈ ಬಗ್ಗೆ ನಮ್ಮ ಕರ್ನಾಟಕ ಸೇನೆಯ ವತಿಯಿಂದ ಸಾಕಷ್ಟು ಬಾರಿ ಮನವಿ ನೀಡಿದೆ ಮತ್ತು ಇದೇ ಆಯೋಗದ ಸದಸ್ಯರಾದ ಶಶಿಧರ ಕೋಸಂಬೆ ಅವರು ಸಹ ಒಂದೊಮ್ಮೆ ಭೇಟಿ ನೀಡಿ ಪರಿಶೀಲಿಸಿ ಹೋಗಿ ಸುಮಾರು 6 ತಿಂಗಳುಗಳೆ ಕಳೆದರು ಸಹ ಈ ವರೆಗೆ ಯಾವುದೇ ಕ್ರಮವಾಗಿಲ್ಲಾ. ಆದ್ದರಿಂದ ಆಯೋಗದ ತಂಡ ಕೇವಲ ಕಾಟಾಚಾರದ ಬೇಟಿ ನೀಡಿ ಹೋಗಿದೆ.

-ಭೀಮಣ್ಣ ಶಖಾಪುರ, ನಮ್ಮ ಕರ್ನಾಟಕ ಸೇನೆಯ ಪ್ರಧಾನ ಸಂಚಾಲಕ

ಶಿಥಿಲಾವಸ್ಥೆ ಕೊಠಡಿಯಿಂದ ತರಗತಿ ಸ್ಥಳಾಂತರಕ್ಕೆ ಸೂಚನೆ

ಭಾಲ್ಕಿ: ತಾಲೂಕಿನ ಮಳಚಾಪೂರ ಗ್ರಾಮದ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಗೆ ಸೋಮವಾರ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ ಭೇಟಿ ನೀಡಿ ಪರಿಶೀಲಿಸಿದರು. 4 ಮತ್ತು 5ನೆಯ ತರಗತಿ ಕೋಣೆಗೆ ಅವರು ಭೇಟಿ ನೀಡಿದ ಸಂದರ್ಭದಲ್ಲಿ ಶಿಥಿಲಾವಸ್ಥೆಯ ಕೋಣೆಗಳಲ್ಲಿ ವಿದ್ಯಾರ್ಥಿಗಳು ಬೋಧನೆ ಮಾಡುತ್ತಿರುವುದು ಕಂಡು ಬಂದಿತು. ಮಳೆಗಾಲದ ದಿನಗಳಲ್ಲಿ ಶಿಥಿಲಗೊಂಡ ತರಗತಿ ಕೋಣೆಗಳಲ್ಲಿ ವಿದ್ಯಾರ್ಥಿಗಳು ಪಾಠ ಮಾಡಲು ಹೇಗೆ ಸಾಧ್ಯ ಎಂದು ಸ್ಥಳದಲ್ಲಿದ್ದ ಬಿಇಒಗೆ ಪ್ರಶ್ನಿಸಿದರು. ಹೊಸ ತರಗತಿ ಕೋಣೆಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ ಎಂದು ಬಿಇಒ ಸಿ.ಜಿ.ಹಳ್ಳದ ಮಾಹಿತಿ ನೀಡಿದರು. ತರಗತಿ ಕೋಣೆಗಳು ಸಂಪೂರ್ಣ ಶಿಥಿಲಗೊಂಡಿವೆ. ನಿರಂತರ ಮಳೆ ಸುರಿಯುತ್ತಿರುವುದರಿಂದ ಮಕ್ಕಳಿಗೆ ಅಪಾಯ ತಂದೊಡ್ಡುವ ಸಾಧ್ಯತೆ ಇದೆ. ಕಟ್ಟಡ ಕಾಮಗಾರಿ ಪೂರ್ಣಗೊಳ್ಳುವ ವರೆಗೂ ಸುಸ್ಥಿತಿಯಲ್ಲಿರುವ ಮುಖ್ಯಗುರುಗಳ ಕೋಣೆ ಮತ್ತು ಅಂಗನವಾಡಿ ಕೇಂದ್ರದ ಕಟ್ಟಡಕ್ಕೆ ಕೂಡಲೇ ತರಗತಿ ಸ್ಥಳಾಂತರಿಸಿ ಮಕ್ಕಳಿಗೆ ಪಾಠ ಬೋಧನೆ ಮಾಡಬೇಕು ಎಂದು ಸೂಚನೆ ನೀಡಿದರು.

ಮುಖ್ಯಗುರುಗಳು ಕೂಡ ಮೇಲುಸ್ತುವಾರಿ ಸರಿಯಾಗಿ ನೋಡುತ್ತಿಲ್ಲ. ಶಾಲಾ ಪರಿಸರದಲ್ಲಿ ಅನೈರ್ಮಲ್ಯ ತಾಂಡವಾಡುತ್ತಿದೆ. ಶಿಕ್ಷಕರು ಮಕ್ಕಳ ಹಾಜರಾತಿ ಸಮರ್ಪಕವಾಗಿ ನಿರ್ವಹಣೆ ಮಾಡದಿರುವುದು ಕಂಡು ಬಂದಿದೆ. ಮುಖ್ಯಗುರುಗಳಿಗೆ ಮತ್ತು ವರ್ಗ ಶಿಕ್ಷಕರಿಗೆ ನೋಟಿಸ್ ನೀಡಿ ಆಯೋಗಕ್ಕೆ ವರದಿ ನೀಡುವಂತೆ ಆಯೋಗದ ಸದಸ್ಯ ಶಶಿಧರ ಕೋಸಂಬೆ ಅವರು ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು. ಈ ಸಂದರ್ಭದಲ್ಲಿ ಬಿಇಒ ಸಿ.ಜಿ.ಹಳ್ಳದ್, ಶಿಕ್ಷಣ ಸಂಯೋಜಕ ಮಲ್ಲಿಕಾರ್ಜುನ ಕನ್ನಾಳೆ ಸೇರಿದಂತೆ ಹಲವರು ಇದ್ದರು.

ತಾಲೂಕಿನ ಮಳಚಾಪೂರ ಗ್ರಾಮದ ಸರಕಾರಿ ಮಾದರಿ ಪ್ರಾಥಮಿಕ ಶಾಲೆಗೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ ಭೇಟಿ ನೀಡಿ ಪರಿಶೀಲಿಸಿದರು.

ನಾನಾ ಕಡೆ ಶ್ರದ್ಧೆ, ಭಕ್ತಿ ಭಾವದಿಂದ ನಾಗರ ಪಂಚಮಿ ಹಬ್ಬ ಆಚರಣೆ

ನಾಗಲಿಂಗೇಶ್ವರ ದೇವಸ್ಥಾನದಲ್ಲಿ ಪೂಜೆ

ಬಸವಕಲ್ಯಾಣ: ನಾಗರ ಪಂಚಮಿ ಹಿಂದೂ ಧರ್ಮದ ಪ್ರಮುಖ ಹಬ್ಬಗಳಲ್ಲಿ ಒಂದಾಗಿದ್ದು, ಪ್ರತಿವರ್ಷ ಶ್ರಾವಣ ಮಾಸದ ಶುಕ್ಲ ಪಕ್ಷದ ಪಂಚಮಿಯಂದು ಆಚರಿಸಲಾಗುತ್ತದೆ. ಈ ಹಬ್ಬವು ನಾಗ ದೇವರಿಗೆ ಅರ್ಪಿಸಲಾದ ದಿನವಾಗಿದ್ದು, ತಾಲೂಕಿನಲ್ಲಿ ಹಿಂದು ಧರ್ಮದ ಅನುಯಾಯಿಗಳು ಈ ಹಬ್ಬವನ್ನು ನಗರ ಸೇರಿದಂತೆ ಹಳ್ಳಿಗಳಲ್ಲಿಯೂ ಶ್ರದ್ಧೆ ಭಕ್ತಿಯಿಂದ ಹಬ್ಬ ಆಚರಿಸಲಾಯಿತು. ನಗರ ಪ್ರದೇಶದ ನಾಗಣಕಟ್ಟೆ ಸದಾನಂದ ಸ್ವಾಮಿ ಮಠ ಶಿವಪುರದ ಶಿವಾ ದೇವಾಲಯದಲ್ಲಿ ಮಹಿಳೆಯರು ಸಾಲುಗಟ್ಟಿರುವ ದೃಶ್ಯಗಳು ಕಂಡು ಬಂದಿದೆ. ಮಹಾಭಾರತದ ಶಾಸನ ಪರ್ವದಲ್ಲಿ, ಜನಮೇಜಯನು ತನ್ನ ತಂದೆ ಪರಿಕ್ಷಿತನನ್ನು ಸರ್ಪದರ್ಶನಾಗಿಸಿದ ತಕ್ಷಕ ನಾಗನ ತ್ಯಾಜ್ಯದ ಕಾರಣವಾಗಿ, ಎಲ್ಲ ನಾಗಗಳನ್ನು ನಾಶಮಾಡಲು ಸರ್ಪಯಾಗವನ್ನು ಮಾಡಿದನು. ಈ ವೇಳೆ ಅಸ್ತಿಕ ಮುನಿಯ ಪ್ರಾರ್ಥನೆಯಿಂದ ನಾಗ ಸಂಹಾರ ನಿಲ್ಲಿಸಲಾಯಿತು. ಆ ದಿನವನ್ನೇ ನಾಗರ ಪಂಚಮಿಯಾಗಿ ಆಚರಿಸಲಾಗುತ್ತಿದೆ ಎಂಬ ನಂಬಿಕೆಯಿದೆ.

ನಾಗ ದೇವರ ಪೂಜೆ

ಹಾಳೆ ಮೇಲೆ ಅಥವಾ ಗರಿಗೆಯಲ್ಲಿ ನಾಗರಹಾವಿನ ಚಿತ್ರವನ್ನು ಹಾಕಿ ಹಾಲು, ಹೂವು, ಅಕ್ಷತೆ, ಅರಿಶಿಣ, ಕುಂಕುಮದಿಂದ ಪೂಜೆ ಮಾಡಲಾಯಿತು. ಮಹಿಳೆಯರು ಮಕ್ಕಳು ಹೊಸ ಉಡುಪುಗಳನ್ನು ಧರಿಸಿ ದೇವಾಲಯಗಳಿಗೆ ಭೇಟಿ ನೀಡಿ ಪೂಜಾ ಪುನಸ್ಕಾರದಲ್ಲಿ ಪಾಲ್ಗೊಂಡಿದರು.

ಹಾಲಿನ ಅಭಿಷೇಕ

ಹಾಲನ್ನು ನಾಗ ದೇವರಿಗೆ ಅರ್ಪಿಸುವುದು ಸಹಜ. ಇದನ್ನು ಪುಣ್ಯಕಾರ್ಯವೆಂದು ಭಾವಿಸಲಾಗಿದೆ. ನಾಗದೇವನ್ ಹೆಸರಿನಲ್ಲಿ ಉಪವಾಸ ವ್ರತ ಮಹಿಳೆಯರು ಈ ದಿನದಂದು ಇರುವುದು ವಾಡಿಕೆ ಆಗಿದೆ ಎಂದು ಹೇಳಲಾಗಿದೆ.

ಬಸವಕಲ್ಯಾಣ ನಗರದ ನಾಗಣ್ಣ ಕಟ್ಟೆ ಹತ್ತಿರ ನಾಗದರ್ಶನಕ್ಕೆ ಸಾಲುಗಟ್ಟಿ ನಿಂತಿರುವ ಮಹಿಳೆಯರು.

ಪರಿಸರ ಜಾಗೃತಿ,ನಾಗರ ಪಂಚಮಿ ವಿಶೇಷತೆ

ನಾಗರ ಪಂಚಮಿ ಹಬ್ಬವು ಕೇವಲ ಧಾರ್ಮಿಕ ಆಚರಣೆ ಮಾತ್ರವಲ್ಲ; ಇದು ಪ್ರಕೃತಿ ಸಂರಕ್ಷಣೆಯೊಂದು ಭಾಗವಾಗಿದೆ. ಹಾವುಗಳು ಪರಿಸರದ ಸಮತೋಲನಕ್ಕೆ ಅವಶ್ಯಕ ಜೀವಿಗಳು. ಈ ಹಬ್ಬದ ಮೂಲಕ ಅವುಗಳ ಜಾತಿ ಸಂರಕ್ಷಣೆ, ಮಾನವ-ಪ್ರಾಣಿ ಬಾಂಧವ್ಯ, ಮತ್ತು ಪ್ರಕೃತಿಯ ಪ್ರತಿಯೊಂದು ಅಂಶದ ಗೌರವದ ಮಹತ್ವವನ್ನು ಸಾರುತ್ತದೆ. ನಾಗರ ಪಂಚಮಿ ಧರ್ಮ, ಸಂಸ್ಕೃತಿ, ಮತ್ತು ಪರಿಸರದ ಪರಸ್ಪರ ಸಂಬಂಧದ ಪ್ರತೀಕವಾಗಿದೆ. ಇದು ನಮಗೆ ''ಪ್ರಕೃತಿಯ ಎಲ್ಲ ಜೀವಿಗಳು ದೇವತ್ವ ಹೊಂದಿವೆ'' ಎಂಬ ಸಂದೇಶವನ್ನು ನೀಡುತ್ತದೆ. ಹಾವು ಎಂಬ ಪ್ರಾಣಿಗೆ ಪೂಜೆ ಸಲ್ಲಿಸುವ ಮೂಲಕ, ನಮ್ಮ ಸಂಸ್ಕೃತಿ ಪ್ರಾಣಿಗಳ ಪ್ರತಿಯೂ ಸೌಹಾರ್ದಭಾವ ಹೊಂದಿರುವುದನ್ನು ತೋರಿಸುತ್ತದೆ.

ಸಂಭ್ರಮದ ನಾಗರ ಪಂಚಮಿ ಹಬ್ಬ ಆಚರಣೆ

ಯಾದಗಿರಿ: ಜಿಲ್ಲೆಯಾದ್ಯಂತ ಮಂಗಳವಾರ ಶ್ರದ್ಧಾಭಕ್ತಿಯಿಂದ ನಾಗರ ಪಂಚಮಿ ಆಚರಣೆ ಮಾಡಲಾಯಿತು. ಹಾಲು ಬೆಲ್ಲದ ಹಬ್ಬ ಎಂದು ಆಚರಿಸಿ, ವಿವಿಧ ಸಿಹಿ ತಿನಿಸುಗಳನ್ನು ಮಾಡಲಾಗಿತ್ತು. ಮಹಿಳೆಯರು, ಮಕ್ಕಳು ಪೂಜೆಯಲ್ಲಿ ತೊಡಗಿಸಿಕೊಂಡಿದ್ದರೆ ಪುರುಷರು ಸಾಹಸಮಯ ಆಟಗಳನ್ನು ಆಡಿ ಖುಷಿಪಟ್ಟರು.

ನಗರದ ವಿವಿಧೆಡೆ ಬೆಳಿಗ್ಗೆಯಿಂದಲೇ ಮಹಿಳೆಯರು ಗುಂಪು, ಗುಂಪಾಗಿ ನಾಗದೇವತೆಯ ಪೂಜೆಗೆ ತೆರಳಿದರು. ಹೊಸ ಬಟ್ಟೆಗಳನ್ನು ಧರಿಸಿ, ಕೈಯಲ್ಲಿ ಪೂಜಾ ಸಾಮಗ್ರಿ, ನೈವೇದ್ಯವನ್ನು ಹಿಡಿದು ದೇವಾಲಯಗಳತ್ತ ಹೆಜ್ಜೆ ಹಾಕಿದರು. ಉತ್ಸಾಹದಿಂದ ಹಬ್ಬ ಆಚರಣೆ ಮಾಡಿದರು. ನಾಗರ ಪಂಚಮಿಯ ಹಬ್ಬವೆಂದರೆ, ಜೋಕಾಲಿಯ ಆಟದ್ದೇ ಪ್ರಾತಿನಿಧ್ಯ. ಮನೆಯಲ್ಲಿ ತಯಾರಿಸಿದ ಸಿಹಿ ತಿಂಡಿಗಳನ್ನು ಕೈಯಲ್ಲಿ ಹಿಡಿದು, ಜೋಕಾಲಿ ಆಡುವುದೇ ಒಂದು ಸಂಭ್ರಮ.

ಕಂದಕೂರಲ್ಲಿ ಚೇಳುಗಳ ಜಾತ್ರೆ

ಗುರುಮಠಕಲ್ ಸಮೀಪದ ಕಂದಕೂರು ಗ್ರಾಮದಲ್ಲಿ ನಾಗರ ಪಂಚಮಿ ಪ್ರಯುಕ್ತ ಕೊಂಡಮ್ಮ ಬೆಟ್ಟದಲ್ಲಿ ಚೇಳಿನ ಮೂರ್ತಿಗೆ ವಿಶೇಷ ಪೂಜೆ ಜರುಗಿತು. ಅಲ್ಲಿನ ಬೆಟ್ಟದಲ್ಲಿ ಮಕ್ಕಳು ಭಾನುವಾರ ಚೇಳುಗಳನ್ನು ಹಿಡಿದು ಸರಸವಾಡಿ ಸಂಭ್ರಮಿಸಿದರು. ಪಂಚಮಿದಿನ ಸಾಯಂಕಾಲ ಬೆಟ್ಟದಲ್ಲಿ ಜಾತ್ರೆಯ ಸಂಭ್ರಮ ಮನೆಮಾಡಿತ್ತು. ಸುತ್ತಮುತ್ತಲಿನ ಗ್ರಾಮಗಳಿಂದ ತಂಡೋಪ ತಂಡವಾಗಿ ಆಗಮಿಸಿದ ಜನರು ಕೊಂಡಮ್ಮ ದೇವರಿಗೆ ಪೂಜೆ ಸಲ್ಲಿಸಿ ದರ್ಶನ ಪಡೆದರು. ನಂತರ ಬೆಟ್ಟದ ತುಂಬೆಲ್ಲ ಪಸರಿಸಿದ ಜನರು ಕಲ್ಲುಗಳನ್ನು ಕಿತ್ತಿ ಅದರ ಕೆಳಗಡೆ ಇರುವ ಚೇಳುಗಳನ್ನು ನಿರ್ಭಯವಾಗಿ ಹಿಡಿದು ಅವುಗಳೊಂದಿಗೆ ಸರಸವಾಡುದರು. ಮಕ್ಕಳು ಚೇಳುಗಳೊಂದಿಗೆ ಅಟವಾಡುವುದು ನೋಡುಗರ ಗಮನ ಸೆಳೆಯುತ್ತಿತ್ತು. ಕೆಂಪು ಬಣ್ಣದ ಈ ಚೇಳುಗಳು ಪಂಚಮಿ ದಿನದಂದು ಮಾತ್ರ ಕಾಣಿಸಿಕೊಳ್ಳುವುದು ಮತ್ತು ಅವು ಕಚ್ಚದೆ ಇರುವುದು ಇಲ್ಲಿಯ ವಿಶೇಷವಾಗಿದೆ.

ನಾಗರ ಪಂಚಮಿ ಹಬ್ಬದ ಪ್ರಯುಕ್ತ ಗೃಹಿಣಿಯರು ನಾಗರ ಮೂರ್ತಿಗೆ ಹಾಲೆರೆದು ತಮ್ಮ ಭಕ್ತಿ ಸಮರ್ಪಿಸಿದರು.

ಮನೆಗಳ ಆವರಣ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಕಟ್ಟಿದ ಜೋಕಾಲಿಯನ್ನು ಆಡುವ ದೃಶ್ಯಗಳು ನಗರದಲ್ಲಿ ಸಾಮಾನ್ಯವಾಗಿದ್ದವು.

ಇನ್ನೊಂದೆಡೆ ತಾಲ್ಲೂಕಿನ ಕಂದಕೂರಿನಲ್ಲಿ ಚೇಳುಗಳನ್ನು ಹಿಡಿದು, ನಾಗರ ಪಂಚಮಿ ಆಚರಣೆ ಮಾಡಲಾಯಿತು. ತಾಲ್ಲೂಕಿನ ಸೈದಾಪುರದಲ್ಲಿ ಗ್ರಾಮಸ್ಥರು ನಾಗರ ಪಂಚಮಿಯನ್ನು ಸಂಭ್ರಮದೊಂದಿಗೆ ಆಚರಿಸಿದರು. ಮಹಿಳೆಯರು ನಾಗಪ್ಪನಿಗೆ ಹಾಲು ಎರದು ಭಕ್ತಿಯೊಂದಿಗೆ ಪೂಜೆ ಸಲ್ಲಿಸಿದರು. ಗ್ರಾಮೀಣ ಭಾಗದಲ್ಲಿ ಪಂಚಮಿಗೆ ಹೆಚ್ಚಿನ ಮಹತ್ವ ನೀಡಲಾಗುತ್ತದೆ. ಮನೆಯ ಮುಂಭಾಗದಲ್ಲಿ ರಂಗೋಲಿ ಕಂಗೊಳಿಸುತ್ತಿದ್ದವು. ಮಹಿಳೆಯರು ಶೃಂಗಾರಗೊಂಡು ಸಮೀಪದ ದೇವಸ್ಥಾನಗಳಿಗೆ ಭೇಟಿ ನೀಡಿ ಪಂಚಮಿ ಆಚರಿಸಿದರು.

ವಚನ ಸಾಹಿತ್ಯ ರಕ್ಷಣೆಯಲ್ಲಿ ಅಕ್ಕನಾಗಮ್ಮನ ಕೊಡುಗೆ ದೊಡ್ಡದು

ಭಾಲ್ಕಿ: ವಚನ ಸಾಹಿತ್ಯ ರಕ್ಷಣೆಯಲ್ಲಿ ಅಕ್ಕನಾಗಮ್ಮನ ಪಾತ್ರ ಬಹುದೊಡ್ಡದಾಗಿದೆ. ಕಲ್ಯಾಣ ಕ್ರಾಂತಿಯ ನಂತರ ಕಲ್ಯಾಣದಿಂದ ಉಳವಿಯವರೆಗೆ ವಚನಗಳು ಉಳಿಸಿ, ರಕ್ಷಿಸಿದ ವಚನ ಮೂರ್ತಿ ಎಂದರೆ ಅಕ್ಕನಾಗಮ್ಮತಾಯಿ ಎಂದು ಬಸವಕಲ್ಯಾಣ ಅನುಭವ ಮಂಟಪ ಟ್ರಸ್ಟ್‌ನ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಹೇಳಿದರು. ಪಟ್ಟಣದ ಹಿರೇಮಠ ಸಂಸ್ಥಾನದಲ್ಲಿ ಆಯೋಜಿಸಿದ್ದ ಬಸವ ಪಂಚಮಿ ಮತ್ತು ಅಕ್ಕನಾಗಮ್ಮ ಜಯಂತಿ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು. ಬಸವಣ್ಣನವರ ವ್ಯಕ್ತಿತ್ವ ರೂಪಗೊಳ್ಳಲು ಅಕ್ಕನಾಗಮ್ಮ ತಾಯಿಯವರದ್ದು ಬಹುದೊಡ್ಡ ಪಾತ್ರವಿದೆ. ಬಸವಣ್ಣನವರ ಬಾಲ್ಯದಿಂದ ಕೊನೆಯವರೆಗೂ ಅವರ ಜೊತೆಗಿದ್ದು ಅವರ ಹೆಗಲಿಗೆ ಹೆಗಲು ಕೊಟ್ಟು ಚಳುವಳಿ ಮುನ್ನಡೆಸಲು ಅವಿರತವಾಗಿ ಶ್ರಮಿಸಿದರು ಎಂದು ತಿಳಿಸಿದರು.

ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಮಾತನಾಡಿ ಲಿಂಗಾಯತ ಧರ್ಮ ಅತ್ಯಂತ ವೈಚಾರಿಕ ಮತ್ತು ವೈಜ್ಞಾನಿಕ ಧರ್ಮವಾಗಿದೆ. ಇಲ್ಲಿ ಮೌಢ್ಯ, ಅಂಧಶ್ರದ್ಧೆ, ಕಂದಾಚಾರಕ್ಕೆ ಅವಕಾಶವಿಲ್ಲ. ದೇಶದಲ್ಲಿ ಲಕ್ಷಾಂತರ ಮಕ್ಕಳು ಪೌಷ್ಠಿಕ ಆಹಾರ ಸಿಗದೆ ಅಪೌಷ್ಠಿಕತೆಯಿಂದ ನರಳುತ್ತಿದ್ದಾರೆ. ಅದ್ಯಾಗೂ ನಾವು ಮಕ್ಕಳಿಗೆ ಹಾಲು ಕುಡಿಸದೇ ಕಲ್ಲನಾಗರಿಗೆ ಹಾಲನ್ನು ಹಾಕುತ್ತೇವೆ. ಇದು ಅತ್ಯಂತ ನೋವಿನ ಸಂಗತಿಯಾಗಿದೆ. ಇದನ್ನು ಮನಗಂಡು ಶ್ರೀಮಠದ ವತಿಯಿಂದ ಪ್ರತಿವರ್ಷ ಬಡಮಕ್ಕಳಿಗೆ ಹಾಲು ಕುಡಿಸುವ ಮೂಲಕ ಬಸವಪಂಚಮಿಯನ್ನು ಸಡಗರದಿಂದ ಆಚರಣೆ ಮಾಡುತ್ತಿದ್ದೇವೆ. ಇದು ಎಲ್ಲ ಕಡೆ ಆಚರಣೆ ಮಾಡಬೇಕೆಂದು ನುಡಿದರು. ಅರ್ಬನ್ ಬ್ಯಾಂಕ್ ನಿರ್ದೇಶಕಿ ಮನಿಷಾ ಶರಣ ಸಂಗಮೇಶ ವಾಲೆ ಅವರು ಬಡಮಕ್ಕಳಿಗೆ ಹಾಲು ದಾಸೋಹ ನೀಡಿದರು.

ಭಾಲ್ಕಿಯ ಹಿರೇಮಠ ಸಂಸ್ಥಾನದಲ್ಲಿ ನಡೆದ ಬಸವ ಪಂಚಮಿ, ಅಕ್ಕನಾಗಮ್ಮ ಜಯಂತಿ ಕಾರ್ಯಕ್ರಮದಲ್ಲಿ ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರು ಮಾತನಾಡಿದರು. ಗುರುಬಸವ ಪಟ್ಟದ್ದೇವರು, ಮನಿಷಾ ಸಂಗಮೇಶ ವಾಲೆ ಸೇರಿದಂತೆ ಹಲವರು ಇದ್ದರು.

ಮಕ್ಕಳಿಗೆ ಹಾಲು ಕುಡಿಸಿದ ಪೂಜ್ಯರು

ಬಸವ ಪಂಚಮಿ ಅಂಗವಾಗಿ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು, ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಶ್ರೀಮಠದ ಪ್ರಸಾದ ನಿಲಯದ ಮಕ್ಕಳಿಗೆ ಹಾಲು ಕುಡಿಸಿ ಪ್ರತಿಯೊಬ್ಬರು ಮೌಢ್ಯತೆಯಿಂದ ಹೊರ ಬರುವಂತೆ ಕರೆ ನೀಡಿದರು. ಕಲ್ಲು ನಾಗರ ಎಂದಿಗೂ ಹಾಲು ಕುಡಿಯುವುದಿಲ್ಲ. ಕಲ್ಲಿಗೆ ಹಾಲನೇರುವ ಬದಲು ಬಡ ಮಕ್ಕಳಿಗೆ ಹಾಲು ಕುಡಿಸಿದರೆ ನಿಜವಾದ ದೇವರಿಗೆ ಪೂಜೆ ಸಲ್ಲಿಸಿದಂತಾಗುತ್ತದೆ ಎಂದು ಪೂಜ್ಯರು ತಿಳಿಸಿದರು.

ಪಂಚಮಿ ಹಬ್ಬದ ಸಂಭ್ರಮ

ಶಹಾಪುರ: ಶ್ರಾವಣ ಮಾಸದ ಮೊದಲ ಹಬ್ಬ ನಾಗರ ಪಂಚಮಿಯನ್ನು ನಗರ ಸೇರಿ ಗ್ರಾಮೀಣ ಪ್ರದೇಶದಲ್ಲಿ ವಿಶೇಷವಾಗಿ ಮಹಿಳೆಯರು, ನವ ದಂಪತಿಗಳು ಸೇರಿ ಕುಟುಂಬದವರೆಲ್ಲರೂ ನಾಗರಕಲ್ಲು, ಹುತ್ತಗಳಿಗೆ ಹಾಲೆರೆದು ಮೊದಲ ದಿನದ ಪಂಚಮಿಯನ್ನು ಸಂಭ್ರಮದಿಂದ ಆಚರಿಸಿದರು. ನಾಗರ ಪಂಚಮಿಯ ಅಂಗವಾಗಿ ಮನೆಯಲ್ಲಿ ಮತ್ತು ದೇವಸ್ಥಾನ ಆವರಣದಲ್ಲಿನ ನಾಗಪ್ಪನಿಗೆ(ಆದಿಶೇಷ) ಹಾಲೆರೆದು, ವಿಶೇಷ ಪೂಜೆ ಸಲ್ಲಿಸಿದರು. ನಾಗರಪಂಚಮಿಯ ಅಂಗವಾಗಿ ಮನೆಯಲ್ಲಿ, ಶೇಂಗಾ, ಎಳ್ಳು, ಪುಟಾಣಿ ಹಿಟ್ಟು, ರವೆ ಉಚಿಡಿ ಗಾರಿಗೆ ಸೇರಿದಂತೆ ವಿವಿಧ ಸಿಹಿ ಖಾದ್ಯಗಳನ್ನು ಸವಿದರು. ಉಳಿದ ಉಂಡಿ ಮತ್ತು ಗಾರಿಗೆಗಳನ್ನು ಸಂಭಂಧಿಕರು ಮತ್ತು ದೂರದ ಊರಿನ ಆಪ್ತರಿಗೆ ಕಳಿಸುವುದು ವಾಡಿಕೆಯಾಗಿದ್ದು, ಶ್ರದ್ಧಾಭಕ್ತಿಯಿಂದ ನಾಗರ ಪಂಚಮಿಯನ್ನು ಆಚರಿಸಿದರು.

ಜೋಕಾಲಿ ರಂಗು:

ಗ್ರಾಮೀಣ ಭಾಗದಲ್ಲಿ ಮರಗಳಿಗೆ ಜೋಕಾಲಿ ಕಟ್ಟಿ ಜೀಕುವುದರ ಜೊತೆಗೆ ಕೆಲ ಕಸರತ್ತಿನ ಕ್ರೀಡೆಗಳನ್ನು ಆಡುವುದು ಈ ಹಬ್ಬದ ವಿಶೇಷ, ಬಯಲು ಪ್ರದೇಶ ಆಟದ ಮೈದಾನ, ದೇವಸ್ಥಾನ ಎದುರು ಯುವಕರು ನಿಂಬೆ ಹಣ್ಣು ಎಸೆತ, ಗೋಲಿ ಎಸೆತ, ಕಣ್ಣಿಗೆ ಬಟ್ಟೆ ಕಟ್ಟಿ ಮನೆ ಅಥವಾ ಪ್ರದೇಶ ಗುರುತಿಸುವಂತಹ ಮೋಜಿನ ಆಟ ಆಡಿ ಸಂಭ್ರಮಿಸಿದರು.

ಪಶು ಆಸ್ಪತ್ರೆ ಮುಂದೆ ರೈತರ ಪ್ರತಿಭಟನೆ

ಹುಣಸಗಿ: ತಾಲೂಕಿನ ಕೊಡೇಕಲ್ ಗ್ರಾಮದ ಪಶು ಆಸ್ಪತ್ರೆಯಲ್ಲಿ ಜಂತುನಾಶಕ ಔಷಧಿಯ ಕೊರತೆಯಿಂದ ಕುರಿಗಳ ಆರೋಗ್ಯದಲ್ಲಿ ಏರುಪೇರಾಗುತ್ತಿದ್ದು ಕೂಡಲೇ ಸಮರ್ಪಕ ಔಷಧಿಯನ್ನು ಪೂರೈಸುವಂತೆ ಎಂದು ಸೋಮವಾರ ಪಶು ಆಸ್ಪತ್ರೆಯ ಮುಂದೆ ಕೊಡೇಕಲ್ ವಲಯ ವ್ಯಾಪ್ತಿಯ ರೈತಾಪಿವರ್ಗದಿಂದ ಕೆಲಕಾಲ ಪಶುವೈದ್ಯಾಧಿಕಾರಿಗಳ ನಡುವೆ ಮಾತಿನ ಚಕಮಕಿ ನಡೆಯಿತು.

ಈ ವೇಳೆ ರಾಜಾಜಿತೇಂದ್ರನಾಯಕ ಅವರು ಮಾತನಾಡಿ ಕಳೆದ 3 ತಿಂಗಳಿನಿಂದ ಗ್ರಾಮದ ಹಲವಾರು ಕುರಿಗಳಿಗೆ ಸರಿಯಾದ ಪ್ರಮಾಣದಲ್ಲಿ ಜಂತುನಾಶಕ ಔಷಧಿ ಸಿಗದಿರುವುದರಿಂದ ಪಶುಗಳು ರೋಗಭಾದೆಯಿಂದ ನರಳುವಂತಾಗಿದೆ ಆದಕಾರಣ ಬೇಡಿಕೆಗನುಗುಣವಾಗಿ ತುರ್ತಾಗಿ ಔಷಧಿಗಳನ್ನು ತರಿಸಿಕೊಂಡು ಕುರಿಗಳು ಸೇರಿದಂತೆ ಇತರೆ ಪ್ರಾಣಿಗಳಿಗೆ ನೀಡಿದಾಗ ಆರೋಗ್ಯದಿಂದ ಇರಲಿವೆ ಎಂದರು. ತಾಲೂಕು ಪಶುವೈದ್ಯಾಧಿಕಾರಿ ಡಾ.ಮಹಿಬೂಬಸಾಬ ಖಾಜಿ ಮಾತನಾಡಿ ಔಷಧಿಗಳ ಅಭಾವ ಇರುವ ಬಗ್ಗೆ ಮೇಲಾಧಿಕಾರಿಗಳ ಗಮನಕ್ಕೆ ತಂದು ಶೀಘ್ರವೇ ಜಂತುನಾಶಕ ಔಷಧಿ ಸೇರಿದಂತೆ ಇತರೆ ಔಷಧಿಗಳನ್ನು ಸಹ ತರೆಸಿಕೊಂಡು ಅಗತ್ಯವಿರುವ ಜಾನುವಾರುಗಳಿಗೆ ನೀಡಲು ಕ್ರಮವಹಿಸಲಾಗುವುದು ಎಂದರು. ಆಸ್ಪತ್ರೆಯ ಆವರಣವನ್ನು ಇನ್ನೊಂದು ವಾರದಲ್ಲಿ ಶುಚಿತ್ವಗೊಳಿಸದಿದ್ದಲ್ಲಿ ರೈತರೊಟ್ಟಿಗೆ ಕರವೇ ವತಿಯಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಕರವೇ ವಲಯ ಉಪಾಧ್ಯಕ್ಷ ಬಸವರಾಜ ಕೊಂಡಗೂಳಿ ಹೇಳಿದರು. ಈ ಸಮಯದಲ್ಲಿ ದ್ಯಾಮಣ್ಣ ಗೋಪಾಳಿ, ಹಣಮಂತ್ರಾಯ ಬಿರಾದಾರ, ಬಸವರಾಜ ಚಕಾಪುರ, ಶಂಕ್ರಪ್ಪ ಬಿಲ್ಲರ, ದುರ್ಗಪ್ಪ ಬೇವಿನಮಟ್ಟಿ, ಹಲವಪ್ಪ ರಾಯನಪಾಳ, ದೇವಪ್ಪ ಬರದೇವನಾಳ ಸೇರಿದಂತೆ ಇತರರಿದ್ದರು.

ಹುಣಸಗಿ ತಾಲೂಕಿನ ಕೊಡೇಕಲ್ ಗ್ರಾಮದ ಪಶು ಆಸ್ಪತ್ರೆಯ ಮುಂದೆ ಜಂತುನಾಶಕ ಔಷಧಿಗಳ ಕೊರತೆ ಉಂಟಾಗಿದೆ ಎಂದು ರೈತರು, ಪಶು ವೈಧ್ಯಾಧಿಕಾರಿಗಳೊಂದಿಗೆ ವಾಗ್ವಾದ ನಡೆಸಿದರು.

ಆಸ್ಪತ್ರೆ ಸ್ವಚ್ಛಗೊಳಿಸುವಂತೆ ಆಗ್ರಹ

ಔಷಧಿಯ ಕೊರತೆಯಿಂದ ಪಶುಆಸ್ಪತ್ರೆಯ ಮುಂದೆ ರೈತಾಪಿವರ್ಗದವರು ಜಮಾವಣೆಯಾದ್ದರಿಂದ ಸ್ಥಳಕ್ಕೆ ಆಗಮಿಸಿದ ತಾಲೂಕು ಪಶುವೈದ್ಯಾಧಿಕಾರಿ ಡಾ.ಮಹಿಬೂಬಸಾಬ ಖಾಜಿ ಅವರಿಗೆ ಮೊದಲು ಆಸ್ಪತ್ರೆ ಹಾಗೂ ಆಸ್ಪತ್ರೆಯ ಆವರಣವನ್ನು ಶುಚಿತ್ವದಿಂದಡಲು ನಿಮ್ಮ ಸಿಬ್ಬಂದಿಗಳಿಗೆ ತಿಳಿಸಿ ರೈತರು ಎಂದು ಕಿಡಿಕಾರಿದರು.

ಹಾಸ್ಟೆಲ್‌ಗೆ ಮಕ್ಕಳ ಹಕ್ಕುಗಳ ಆಯೋಗ ಭೇಟಿ

ಸುರಪುರ: ತಾಲೂಕಿನ ದೇವಾಪುರ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಡಿಯಲ್ಲಿ ನಡೆಯುತ್ತಿರುವ ಮೆಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯಕ್ಕೆ ರಾಜ್ಯ ಮಕ್ಕಳ ಹಕ್ಕುಗಳ ಆಯೋಗದ ಸದಸ್ಯ ಶಶಿಧರ ಕೋಸಂಬೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕಳೆದ ಎರಡು ವಾರದ ಹಿಂದೆ ಬಾಲಕಿಯರು ಊಟ ಸೇವಿಸಿ ಅಸ್ವಸ್ಥರಾದ ಘಟನೆ ಹಿನ್ನೆಲೆ ಆಸ್ಪತ್ರೆಗೆ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಶಶಿಧರ್ ಕೋಸಂಬೆ ಅವರು ಭೇಟಿ ನೀಡಿ ಮಕ್ಕಳಿಗೆ ನೀಡುವ ಸೌಲಭ್ಯ ಪರಿಶೀಲನೆ ಮಾಡಿದರು. ಮಕ್ಕಳಿಗೆ ಉತ್ತಮ ಆಹಾರ ನೀಡೋದರ ಜೊತೆ ಸ್ನಾನಕ್ಕೆ ಬಿಸಿ ನೀಡಬೇಕು, ಕುಡಿಯಲು ಶುದ್ಧ ಕುಡಿಯುವ ನೀರು ನೀಡಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು. ಮಕ್ಕಳಿಗೆ ಸರಿಯಾಗಿ ಊಟ ಕೊಡುವ ರೀತಿಯಲ್ಲಿ ಕ್ರಮ ವಹಿಸಬೇಕು ಎಂದರು. ಯಾವುದೇ ವಿದ್ಯಾರ್ಥಿಗಳಿಗೆ ನಿಲಯಗಳಲ್ಲಿ ಹಾಗೂ ವಸತಿ ಶಾಲೆಗಳಲ್ಲಿ ಬೆಳಗ್ಗೆಯಿಂದ ಮಾದರಿ ಆಹಾರವನ್ನು ಶ್ಯಾಂಪಲ್ ಇಡಬೇಕು. ಎಂದು ವಾರ್ಡನ್‌ಗೆ ತರಾಟೆ ತೆಗೆದುಕೊಂಡು.

ಮಕ್ಕಳ ಹಾಜರಾತಿ ಬಗ್ಗೆ ಗಮನಿಸುವಾಗ ಹಾಜರಾತಿ ಪುಸ್ತಕ ಇಲ್ಲದ ಕಾರಣಕ್ಕೆ ಬೇಸರ ವ್ಯಕ್ತಪಡಿಸಿದರು. ಮಕ್ಕಳ ಸಹಾಯವಾಣಿ ಫಲಕ ವಿದ್ಯಾರ್ಥಿ ನಿಲಯದ ಹೊರಗಡೆ ಗೋಡೆ ಬರಹದಲ್ಲಿ ಬರೆಸಬೇಕು. ಮಕ್ಕಳ ಹಕ್ಕುಗಳ ನೀತಿ 2016ರ ಅನುಷ್ಠಾನ ಸರಿಯಾಗಿ ಜಾರಿಗೊಳಿಸಬೇಕು, ಸಲಹಾ ಪೆಟ್ಟಿಗೆಗಳು ಅಳವಡಿಸಬೇಕು. ಈ ಸಂದರ್ಭದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ನಿರ್ಮಲಾ ಸುರಪುರ, ಅಆಕಔ ಲಾಲಾ ಸಾಬ್, ಃಇಔ ಯಲ್ಲಪ್ಪ, ಇದ್ದರು.

ಗ್ಯಾರೇಜ್ ಬಾಲ ಕಾರ್ಮಿಕನ ರಕ್ಷಣೆ

ದೇವಾಪುರ ಗ್ರಾಮದಲ್ಲಿ ಗ್ಯಾರೇಜ್ ನಲ್ಲಿ ಕೆಲಸ ಮಾಡುತಿದ್ದ ಬಾಲ ಕಾರ್ಮಿಕನನ್ನು ಕಂಡ ಶಶಿಧರ್ ಕೋಸಂಬೆ ಅವರು, ಮಗುವಿಗೆ ತಕ್ಷಣವೇ ರಕ್ಷಣೆ ಮಾಡಿದರು. ಬಾಲ ಮಂದಿರಕ್ಕೆ ಹಾಜರು ಮಾಡಿ ಮಕ್ಕಳ ಕಲ್ಯಾಣ ಸಮಿತಿ ಮುಂದೆ ಕ್ರಮವಹಿಸಲು ಸೂಚನೆ ನೀಡಿದರು.

ಸಮಾಚಾರ ಸಣ್ಣದಲ್ಲ

ಅಪ್ರಾಪ್ತೆ ಮೇಲೆ ಲೈಂಗಿಕ ದೌರ್ಜನ್ಯ ಪೋಕ್ಸೊ ದಾಖಲು

ಕಲಬುರಗಿ: ಅಪ್ರಾಪ್ತ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಘಟನೆ ನಗರದ ಇಎಸ್‌ಐಸಿ ಆಸ್ಪತ್ರೆಯಲ್ಲಿ ಶನಿವಾರ ನಡೆದಿದ್ದು, ವಿಶ್ವವಿದ್ಯಾಲಯ ಠಾಣೆಯಲ್ಲಿ ಪೋಕ್ಸೊ ಪ್ರಕರಣ ದಾಖಲಾಗಿದೆ. ಇಎಸ್‌ಐಸಿ ಆಸ್ಪತ್ರೆಯಲ್ಲಿ ಹೌಸ್ ಕೀಪಿಂಗ್ ಕೆಲಸ ಮಾಡುವ ಸಂಪತ್ ಕಿವಡೇಕರ್ ಅಪ್ರಾಪ್ತೆ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪಿಯಾಗಿದ್ದಾನೆ. ಯುವಕನ ಪರಿಚಯದ 50 ವರ್ಷದ ವ್ಯಕ್ತಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಾಗಿದ್ದರು. ಇವರ ಜತೆ ಯೋಗಕ್ಷೇಮ ನೋಡಿಕೊಳ್ಳಲು ತನ್ನ 17 ವರ್ಷದ ಪುತ್ರಿಯನ್ನು ಆಸ್ಪತ್ರೆಯಲ್ಲಿ ಉಳಿಸಿಕೊಳ್ಳಲಾಗಿತ್ತು. ಪರಿಚಯ ಇರುವುದರಿಂದ ಊರಿಂದ ಬಟ್ಟೆ, ಊಟ ಸೇರಿ ಇತರ ಸಾಮಾನು ತಂದುಕೊಡುವ ಕೆಲಸ ಮಾಡುತ್ತಿದ್ದ. ಜು.26ರಂದು ಬೆಳಗ್ಗೆ 9ರ ವೇಳೆ ಊರಿಂದ ಬಟ್ಟೆ ತಂದಿದ್ದಾನೆ. ನಂತರ ಬಾಲಕಿಯನ್ನು ಕೆಳಗೆ ಬರುವಂತೆ ಹೇಳಿ, ಆಸ್ಪತ್ರೆಯ ಡೆಂಟಲ್ ಕಾಲೇಜಿನ ವಿಶ್ರಾಂತಿ ಕೋಣೆಯಲ್ಲಿ ಕರೆದೊಯ್ದು ಲೈಂಗಿಕ ದೌರ್ಜನ್ಯ ಎಸಗಿದ್ದಾನೆ ಎಂದು ತಂದೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಗೊಬ್ಬರ ಹೆಚ್ಚಿನ ಬೆಲೆಗೆ ಮಾರುವಂತಿಲ್ಲ

ಕಲಬುರಗಿ: ಜಂಟಿ ಕೃಷಿ ನಿರ್ದೇಶಕರಾದ ಸಮದ್ ಪಟೇಲ್ ಅವರು ಕೃಷಿ ಪರಿಕರ ಮಾರಾಟಗಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಅವರು ಸೋಮವಾರ ಕಲಬುರಗಿ ಜಿಲ್ಲಾ ಪಂಚಾಯತ (ಹಳೆ) ಸಭಾಂಗ 'ಣದಲ್ಲಿ ಕಲಬುರಗಿ ಜಿಲ್ಲೆಯ ಕೃಷಿ ಪರಿಕರ(ಬೀಜ, ರಸಗೊಬ್ಬರ ಮತ್ತು ಕೀಟನಾಶಕ) ವಿತರಕರೊಂದಿಗೆ ಸಭೆ ನಡೆಸಿದರು. ರೈತರಿಗೆ ಅನುಕೂಲವಾಗುವ 'ಂತೆ ಪ್ರತಿ ಬೀಜ, ಗೊಬ್ಬರ, ಕೀಟನಾಶಕಗಳ ದಾಸ್ತಾನು ಹಾಗೂ ದರಪ 'ಟ್ಟಿಯನ್ನು ತಮ್ಮ ತಮ್ಮ ಅಂಗಡಿಗಳಲ್ಲಿ ಕಡ್ಡಾಯವಾಗಿ ಪ್ರದರ್ಶಿಸಬೇಕು. ದಾಸ್ತಾನು ರಜಿಸ್ಟರ್ ಬರೆಯಬೇಕು. ರಜಿಸ್ಟರ್‌ನಲ್ಲಿರುವ ದಾಸ್ತಾನಕ್ಕೂ ಭೌತಿಕ ದಾಸ್ತಾನಕ್ಕೂ ಸರಿಹೊಂದುವಂತಿರಬೇಕು. ಕಡ್ಡಾಯವಾಗಿ ಪಾಯಿಂಟ್ ಆಫ್ ಸೇಲ್ ಮಶೀನ್ (ಪಾಸ್ ಮಶೀನ) ಬಳಕೆಮಾಡಿ ರಸಗೊಬ್ಬರ ಮಾರಾಟ ಮಾಡಬೇಕು. ಅನಾವಶ್ಯಕವಾಗಿ ಸರ್ಕಾರದ ನಿಗದಿತ ದರಕ್ಕಿಂತ ಹೆಚ್ಚಿನ ದರದ 'ಲ್ಲಿಗೊಬ್ಬರ, ಬೀಜ, ಕೀಟನಾಶಕ ಮಾರಾಟ ಮಾಡುವುದು ಕಂಡುಬಂದರೆ ಅಂತಹ ಮಾರಾಟ ಗಾರರ ವಿರುದ್ಧ ಸೂಕ್ತ ಕಾನೂನು ಕ್ರಮತೆಗೆದು ಕೊಳ್ಳಲಾಗುವುದು ಎಂದರು.

ರೈತರಿಗೆ 3 ದಿನ ತರಬೇತಿ ನೋಂದಣಿಗೆ ಸೂಚನೆ

ಕಲಬುರಗಿ: ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ತೊಗರಿ ಬೆಳೆಯ ಬೇಸಾಯ ಕ್ರಮ ಹಾಗೂ ಕೀಟರೋಗ ನಿರ್ವಹಣೆ ಕುರಿತು 2025ರ ಜುಲೈ 31 ರಿಂದ ಆಗಸ್ಟ್ 2 ರವರೆಗೆ ಮೂರು ದಿನಗಳ ಕಾಲ ಕಲಬುರಗಿಯ ಕೋಟನೂರ(ಡಿ) ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಕೋಟನೂರ(ಡಿ) ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಮುಖ್ಯಸ್ಥರು ಹಾಗೂ ಸಹಾಯಕ ಕೃಷಿ ನಿರ್ದೇಶಕರು ತಿಳಿಸಿದ್ದಾರೆ. ಚಿತ್ತಾಪೂರ ತಾಲೂಕಿನ ರೈತ ಸಂಪರ್ಕ ಕೇಂದ್ರಗಳಾದ ಚಿತ್ತಾಪೂರ, ನಾಲವಾರ, ಮಾಡಬೂಳ, ಕಾಳಗಿ ಹಾಗೂ ಶಹಾಬಾದ ರೈತ ಸಂಪರ್ಕ ಕೇಂದ್ರದ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಜಾತಿಯ ಆಸಕ್ತಿಯುಳ್ಳ ರೈತರು ಕೃಷಿ ಅಧಿಕಾರಿಗಳಾದ ಸುಜಾತಾ.ಆರ್. ರಾಜನಾಳಕರ ಇವರ ಮೊಬೈಲ್ ಸಂಖ್ಯೆ 9448651201 ಹಾಗೂ ಯಾಸ್ಮಿನ್-9901604822 ಗೆ ಸಂಪರ್ಕಿಸಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬೇಕು. ಎಫ್.ಐ.ಡಿ. ಹೊಂದಿರುವ ಆಸಕ್ತ ರೈತರು ನೊಂದಾಯಿಸಿಕೊಳ್ಳಬೇಕು. ಎಫ್.ಐ.ಡಿ. ಆಧಾರ ಸಂಖ್ಯೆ ಹಾಗೂ ಮೊಬೈಲ್ ಸಂಖ್ಯೆ ಕಡ್ಡಾಯವಾಗಿ ತರಬೇಕೆಂದು ಅವರು ತಿಳಿಸಿದ್ದಾರೆ.

ಅಗಲಿದ ಜೀವ

ಸುಗಲಾಬಾಯಿ ಪಿ.ಪಾಟೀಲ್

ಆಳಂದ: ತಾಲೂಕಿನ ಸರಸಂಬಾ ಗ್ರಾಮದ ನಿವಾಸಿ ಸುಗಲಾಬಾಯಿ ಪೀರಶಟ್ಟಿ ಪಾಟೀಲ್ (76) ಇವರು ಮಂಗಳವಾರ ನಿಧನರಾದರು. ಸಾಹಿತಿ ಡಾ. ಸೂರ್ಯಕಾಂತ ಪಿ.ಪಾಟೀಲ್ ಸೇರಿದಂತೆ ಮೂರು ಜನ ಪುತ್ರರು, ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಬುಧವಾರ ಸ್ವಂತ ತೋಟದಲ್ಲಿ ಬೆಳಗ್ಗೆ 9 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

{ಅಜಯ್ ಸಿಂಗ್} ಶಾಸಕ

ಎಐಸಿಸಿ ಅಧ್ಯಕ್ಷ ಹಾಗೂ ಕಾಂಗ್ರೆಸ್ ಪಕ್ಷದ ಹಿರಿಯ ಮುತ್ಸದ್ದಿ ಮಲ್ಲಿಕಾರ್ಜುನ ಖರ್ಗೆ ಅವರಿಗೆ 55 ವರ್ಷದ ರಾಜಕೀಯ ಅನುಭವವಿದೆ. ಹೀಗಾಗಿ, ಅವರಿಗೆ ಮುಖ್ಯಮಂತ್ರಿ ಆಗುವ ಎಲ್ಲ ಅರ್ಹತೆಗಳಿವೆ. ಪ್ರಸ್ತುತ ಅವರು ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿದ್ದಾರೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಹೆಚ್ಚುವರಿಯಾಗಿ 20 ಸ್ಥಾನಗಳನ್ನು ಕಾಂಗ್ರೆಸ್ ಗೆದ್ದಿದ್ದರೆ ಖರ್ಗೆಯವರು ಪ್ರಧಾನಿ ಆಗುತ್ತಿದ್ದರು.

ನಿಪುಣ ಕರ್ನಾಟಕ ಯೋಜನೆ | ಉದ್ಯೋಗಾವಕಾಶದ ಅಂತರ ಗುರುತಿಸಲು ಆ.9,10ಕ್ಕೆ ಮೌಲ್ಯಮಾಪನ ಪರೀಕ್ಷೆ

ಉದ್ಯೋಗ-ಸಿದ್ಧತಾ ದಾರಿ ಬಲಪಡಿಸಲು ಕ್ರಮ

ವಿಶ್ವವಾಣಿ ಸುದ್ದಿಮನೆ

ಕಲಬುರಗಿ: ರಾಜ್ಯದ ಟೈಯರ್ 2 ಮತ್ತು ಟೈಯರ್ 3 ನಗರಗಳಲ್ಲಿ ಪದವೀಧರರಲ್ಲಿ ಹೆಚ್ಚುತ್ತಿರುವ ಉದ್ಯೋಗಾವಕಾಶದ ಅಂತರವನ್ನು ಪರಿಹರಿಸಲು ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಇಲಾಖೆ ಮತ್ತು ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ಮೂಲಕ ಪ್ರಮುಖವಾಗಿ ಮರುಕೌಶಲ್ಯ ಮತ್ತು ಕೌಶಲ್ಯಾಭಿವೃದ್ಧಿ ಕಾರ್ಯಕ್ರಮವಾದ ನಿಪುಣ ಕರ್ನಾಟಕ ಅಡಿಯಲ್ಲಿ ಬರುವ ಆಗಸ್ಟ್ 9 ಮತ್ತು 10 ರಂದು ಕಲಬುರಗಿಯಲ್ಲಿ ಆನ್‌ಲೈನ್ ಮೂಲಕ ಸ್ಟೆಮ್ ಅಭ್ಯರ್ಥಿಗಳ ಮೌಲ್ಯಮಾಪನ ಪರೀಕ್ಷೆ ನಡೆಸಲಾಗುತ್ತಿದೆ ಎಂದು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಮಂಗಳವಾರ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಕಲಬುರಗಿ-ಶಹಾಬಾದ ರಸ್ತೆಯಲ್ಲಿರುವ ಶೆಟ್ಟಿ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಾಜಿ ಕಾಲೇಜಿನಲ್ಲಿ ಈ ಮೌಲ್ಯಮಾಪನ ಪರೀಕ್ಷೆ ನಡೆಯಲಿದೆ. ಕಳೆದ ಏಪ್ರಿಲ್ ಮಾಹೆಯಲ್ಲಿ ಕಲಬುರಗಿಯಲ್ಲಿ ನಡೆದ ಬೃಹತ್ ಉದ್ಯೋಗ ಮೇಳದಲ್ಲಿ ಭೌತಿಕವಾಗಿ ಹಾಜರಾದ 10 ಸಾವಿರ ಅಭ್ಯರ್ಥಿಗಳ ಪೈಕಿ ಆಯ್ದ 2,500 ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತ ಪದವೀಧರರನ್ನು ಗುರಿಯಾಗಿಸಿ ಈ ಮೌಲ್ಯಮಾಪನ ನಡೆಸಲಾಗುತ್ತಿದೆ ಎಂದರು.

ಕಲಬುರಗಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸಚಿವರು ಮತ್ತು ಶಾಸಕ ಗಣ್ಯರು ನೋಂದಣಿ ಅಭಿಯಾನದ ಅಂಗವಾಗಿ ಕ್ಯೂರ್ ಕೋಡ್ ಬಿಡುಗಡೆಗೊಳಿಸಿದರು.

> ಕೌಶಲ್ಯಾಭಿವೃದ್ಧಿ ಸಚಿವ ಡಾ. ಶರಣಪ್ರಕಾಶ ಪಾಟೀಲ ಮತ್ತು ಸಂಸದ ರಾಧಾಕೃಷ್ಣ ದೊಡ್ಡಮನಿ ವಿಶೇಷ ಕಾಳಜಿಯಿಂದ ರಾಜ್ಯದಲ್ಲಿಯೇ ಪ್ರಾಯೋಗಿಕವಾಗಿ ಕಲಬುರಗಿ ಜಿಲ್ಲೆಯಲ್ಲಿ ಮೊದಲು ಮೌಲ್ಯಾಮಾಪನ ಪರೀಕ್ಷೆ ಅನುಷ್ಠಾನಕ್ಕೆ ತರಲಾಗುತ್ತಿದೆ. ಇಲ್ಲಿನ ಸಾಧಕ-ಭಾಧಕಗಳನ್ನು ನೋಡಿ ರಾಜ್ಯದ ಇತರೆ ಭಾಗದಲ್ಲಿಯೂ ಜಾರಿಗೆ ತರಲಾಗುವುದು.
> - ಪ್ರಿಯಾಂಕ್ ಖರ್ಗೆ, ಜಿಲ್ಲಾ ಉಸ್ತುವಾರಿ ಸಚಿವ

ಇಲ್ಲಿನ ವಿದ್ಯಾರ್ಥಿಗಳು ಅಂಕ ಗಳಿಕೆಯಲ್ಲಿ ಜಾಣರಿದ್ದಾರೆ. ಆದರೆ, ಕೈಗಾರಿಕೆ, ಕಂಪನಿಗಳಿಗೆ ಬೇಡಿಕೆ ಅನುಗುಣವಾಗಿ ಅವರಲ್ಲಿ ಕೌಶಲ್ಯ ಇಲ್ಲ. ಕಲಬುರಗಿ ಉದ್ಯೋಗ ಮೇಳದ ಸಂದರ್ಭದಲ್ಲಿ ಹಾಜರಾದ ಅಭ್ಯರ್ಥಿಗಳ ಅಧ್ಯಯನ ಮಾಡಿದಾಗ ಶೇ.70 ವಿದ್ಯಾರ್ಥಿಗಳು ಅಪ್ಟಿಟ್ಯೂಡ್ ಟೆಸ್ಟ್ ಪಾಸಾಗಲು ಸಮರ್ಥರಿಲ್ಲ ಎಂಬ ಅಂಶ ಕಂಡುಬಂದಿದೆ. ಶೇ. 63ಕ್ಕಿಂತ ಹೆಚ್ಚಿನ ಅಭ್ಯರ್ಥಿಗಳಿಗೆ ಸಂವಹನ ಕೌಶಲ್ಯದ ಕೊರತೆ ಇದೆ. ಈ ಕೊರತೆಯನ್ನು ನೀಗಿಸಲೆಂದೆ ಈ ಮೌಲ್ಯಮಾಪನ ಮಾಡಲಾಗುತ್ತಿದೆ. ಮೌಲ್ಯಮಾಪನದ ನಂತರ ಅವರ ಕೌಶಲ್ಯ ಕೊರತೆಯನ್ನು ನೀಗಿಸಲು ಅಗತ್ಯ ಕೌಶಲ್ಯ ನೀಡಿ ಅವರನ್ನು ಉದ್ಯೋಗಕ್ಕೆ ಸಿದ್ಧರನ್ನಾಗಿ ಮಾಡುವುದು ನಮ್ಮ ಗುರಿಯಾಗಿದೆ ಎಂದರು

ಎಲ್ಲಕ್ಕಿಂತ ಹೆಚ್ಚಾಗಿ, ಇದು ಸಮಗ್ರ ಪ್ರತಿಭೆ ಹಾಗೂ ಅಭಿವೃದ್ಧಿಯನ್ನು ಬೆಂಬಲಿಸುತ್ತದೆ ಮತ್ತು ಶ್ರೇಣಿ 2 ಮತ್ತು ಶ್ರೇಣಿ 3 ನಗರಗಳಲ್ಲಿ ಉದ್ಯೋಗ-ಸಿದ್ಧತಾ ದಾರಿಗಳನ್ನು ಬಲಪಡಿಸುತ್ತದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು. ಇದೇ ಸಂದರ್ಭದಲ್ಲಿ ಸಚಿವರು ಮತ್ತು ಶಾಸಕ ಗಣ್ಯರು ನೋಂದಣಿ ಅಭಿಯಾನದ ಅಂಗವಾಗಿ ಕ್ಯೂರ್ ಕೋಡ್ ಬಿಡುಗಡೆಗೊಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರಾಜ್ಯದ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಹಾಗೂ ಜೀವನೋಪಾಯ ಖಾತೆ ಸಚಿವ ಡಾ.ಶರಣಪ್ರಕಾಶ ಪಾಟೀಲ, ಶಾಸಕರಾದ ಅಲ್ಲಮಪ್ರಭು ಪಾಟೀಲ ಮತ್ತು ಎಂ.ವೈ.ಪಾಟೀಲ, ವಿಧಾನ ಪರಿಷತ್ ಶಾಸಕ ಜಗದೇವ ಗುತ್ತೇದಾರ, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್, ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್, ನಗರ ಪೊಲೀಸ್ ಆಯುಕ್ತ ಡಾ.ಎಸ್.ಡಿ. ಶರಣಪ್ಪ, ಎಸ್.ಪಿ. ಅಡ್ಡೂರು ಶ್ರೀನಿವಾಸಲು, ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಜಿಲ್ಲಾ ಕೈಗಾರಿಕೆ ಕೇಂದ್ರದ ಜಂಟಿ ನಿರ್ದೇಶಕ ಅಬ್ದುಲ್ ಅಜೀಮ್, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ನಾಗುಬಾಯಿ ಇದ್ದರು.

ಆಗಸ್ಟ್ 7 ರೊಳಗೆ ಅರ್ಜಿ ಸಲ್ಲಿಸಲು ಅವಕಾಶ

ಮೌಲ್ಯಾಮಾಪನ ಪರೀಕ್ಷೆಯಲ್ಲಿ ಭಾಗವಹಿಸಲು ನೋಂದಣಿ ಪ್ರಕ್ರಿಯೇ ಇಂದಿನಿಂದಲೆ ಆರಂಭವಾಗಿದ್ದು, ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಅಥವಾ https://unstop.com/o/xvCVUWP/?ref=KalaburgiAssessment ಅಂತರ್ಜಾಲದ ಮೂಲಕ ಆಗಸ್ಟ್ 7ರ ರಾತ್ರಿ 11.59 ಗಂಟೆ ವರೆಗೂ ನೋಂದಣಿ ಮಾಡಿಕೊಳ್ಳಬಹುದಾಗಿದೆ. ಆಗಸ್ಟ್ 7 ಮತ್ತು 8 ರಂದು ಪ್ರವೇಶ ಪತ್ರವನ್ನು ಎಸ್.ಎಂ.ಎಸ್. ಅಥವಾ ಇಮೇಲ್ ಮೂಲಕ ಕಳುಹಿಸಲಾಗುತ್ತದೆ. ಆಗಸ್ಟ್ 9 ಮತ್ತು 10 ರಂದು ಕಲಬುರಗಿಯ ಶೆಟ್ಟಿ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯಲ್ಲಿ ಬೆಳಿಗ್ಗೆ 10 ರಿಂದ 11.30, ಮಧ್ಯಾಹ್ನ 12 ರಿಂದ 1.30, ಮಧ್ಯಾಹ್ನ 2.30 ರಿಂದ 4 ಹಾಗೂ ಸಂಜೆ 4.30 ರಿಂದ 6 ಗಂಟೆ ವರೆಗೆ ಪ್ರತಿ ಬ್ಯಾಚಿನಲ್ಲಿ 500 ರಂತೆ ತಲಾ 90 ನಿಮಿಷಗಳ ಅವಧಿಯ ಆನ್ ಲೈನ್ ಟೆಸ್ಟ್ ನಡೆಯಲಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಮಾಹಿತಿ ನೀಡಿದರು.

ಒಳಮೀಸಲು ಜಾರಿಗಾಗಿ ಅರೆಬೆತ್ತಲೆ ಪ್ರತಿಭಟನೆ

ಚಿಂಚೋಳಿ: ಕಳೆದ 30 ವರ್ಷಗಳಿಂದ ಮಾದಿಗರ ಒಳಮೀಸಲಾತಿ ಜಾರಿಗಾಗಿ ನಿರಂತರ ಹೋರಾಟ ಮಾಡುತ್ತಾ ಬರಲಾಗುತ್ತಿದೆ. ಮಾದಿಗ ಸಮುದಾಯಕ್ಕೆ ಸಾಮಾಜಿಕ ನ್ಯಾಯ ದೊರಕದೇ ಇರುವುದು ತುಂಬ ದುಃಖದ ಸಂಗತಿಯಾಗಿದೆ ಎಂದು ಕರ್ನಾಟಕ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಜಾರಿ ಹೋರಾಟ ಸಮಿತಿಯ ರಾಜ್ಯ ಸಂಚಾಲಕ ಗೋಪಾಲರಾವ ಕಟ್ಟಿಮನಿ ಬೇಸರ ವ್ಯಕ್ತ ಪಡಿಸಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಸುಪ್ರೀಂ ಕೋರ್ಟ್ ರಾಜ್ಯ ಸರಕಾರಕ್ಕೆ ಒಳಮೀಸಲಾತಿ ಜಾರಿ ಮಾಡಲು ಅಧಿಕಾರ ನೀಡಿದೆ. ಆದರೆ, ಸಿದ್ದರಾಮಯ್ಯ ಸರಕಾರದ ಸಚಿವ ಸಂಪುಟ ಜಾರಿ ಮಾಡಲು ಕಾಲಹರಣ ಮಾಡುತ್ತಿದೆ. ದೇಶದ ಸರ್ವೋಚ್ಚ ನ್ಯಾಯಾಲಯವು ಒಳ ಮೀಸಲಾತಿ ಜಾರಿಗೊಳಿಸಲು ರಾಜ್ಯ ಸರಕಾರಕ್ಕೆ ಸಂಪೂರ್ಣ ಅಧಿಕಾರ ನೀಡಿದೆ. ಆದರೆ, ಸರಕಾರ ಸಚಿವ ಸಂಪುಟ ಜಾರಿ ಮಾಡಲು ಹಿಂದೇಟು ಹಾಕುತ್ತಿದೆ ಎಂದು ಆರೋಪಿಸಿದರು.

ಒಳಮೀಸಲಾತಿಗಾಗಿ ನಾಗಮೋಹನದಾಸ ಸಮಿತಿ ರಚಿಸಲಾಗಿದರೂ ಜಾರಿಗೆ ಕ್ರಮವಹಿಸುತ್ತಿಲ್ಲ. ಹಾಗಾಗಿ ಮೀಸಲಾತಿಗೆ ದಶಕಗಳ ನಿರಂತರ ಹೋರಾಟ ಮಾಡುತ್ತಿದ್ದು, ಸುಪ್ರೀಂ ಕೋರ್ಟ್ ನೀಡಿದ ತೀರ್ಪಿಗೆ ತಲೆಬಾಗಿ ಸರಕಾರ ಆಗಷ್ಟ 10ರೊಳಗಾಗಿ ಒಳ ಮೀಸಲಾತಿ ಜಾರಿಗೊಳಿಸದೇ ಇದ್ದಲ್ಲಿ ಸಮುದಾಯದ ನಾಯಕ ಎ.ನಾರಾಯಣಸ್ವಾಮಿ ಅವರು ತೀರ್ಮಾನಿಸಿ, ರಾಜ್ಯದ್ಯಾಂತ ಪ್ರವಾಸವನ್ನು ಕೈಗೊಂಡು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಆಗಷ್ಟ 1ರಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಅರೆಬೆತ್ತಲೆ ಪ್ರತಿಭಟನೆ ನಡೆಸಲು ನಿರ್ಧರಿಸಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಾಲೂಕ ಅಧ್ಯಕ್ಷ ಮಲ್ಲು ಕೊಡಂಬಲ್, ವಿಜಯಕುಮಾರ ಕೊರಡಂಪಳ್ಳಿ, ಅಂಬರೀಶ ಭಕ್ತಂಪಳ್ಳಿ, ಮೋಹನ್ ದಂಡಿನ್, ಜನಾರ್ಧನ ಕರ್ಚಖೇಡ, ವಿರೇಶ ಮೇತ್ರಿ, ರವಿ ಗಡಿಲಿಂಗದಳ್ಳಿ, ಸುಭಾಶ ರುಸ್ತಂಪೂರ, ವಿಶಾಲ ಸುಗಂದಿ, ಜಾನ್ಸನ್ ದಂಡಿನ, ಕೆ.ನಾಗೇಶ್ವರಾವ ಅವರು ಇದ್ದರು.

ಅಪ್ಪಾಜಿ ಆರೋಗ್ಯ ವಿಚಾರಿಸಿದ ಸಚಿವರು

ಕಲಬುರಗಿ: ನಗರದ ಖಾಸಗಿ ಆಸ್ಪತ್ರೆಯಲ್ಲಿ ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದ ಶರಣಬಸವೇಶ್ವರ ಸಂಸ್ಥಾನದ 8ನೇ ಮಹಾದಾಸೋಹ ಪೀಠಾಧಿಪತಿ ಪೂಜ್ಯ ಡಾ. ಶರಣಬಸವಪ್ಪ ಅಪ್ಪಾಜಿ ಅವರನ್ನು ಮಂಗಳವಾರ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಅವರು ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು. ವೈದ್ಯರು ಮತ್ತು ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಚೇರ್‌ಪರ್ಸನ್ ಮಾತೋ ಶ್ರೀ ಪೂಜ್ಯ ಡಾ. ದಾಕ್ಷಾಯಿಣಿ ಅವ್ವಾಜಿ ಮತ್ತು ಸಂಘದ ಕಾರ್ಯದರ್ಶಿ ಬಸವರಾಜ ದೇಶಮುಖ ಅವರೊಂದಿಗೆ ಅಪ್ಪಾಜಿ ಅವರ ಆರೋಗ್ಯ ಸ್ಥಿತಿಯ ಬಗ್ಗೆ ವಿಚಾರಿಸಿದರು.

ಸಚಿವರಿಬ್ಬರು ಡಾ. ಅಪ್ಪಾಜಿ ಮತ್ತು ಮಾತೋ ಶ್ರೀ ಡಾ. ಅವ್ವಾಜಿ ಅವರೊಂದಿಗೆ 10 ನಿಮಿಷಗಳಿಗೂ ಹೆಚ್ಚು ಸಮಯ ನೀಡಿ ಮಾತುಕತೆ ನಡೆಸಿದರು. ಇದೆ ವೇಳೆ ಎಐಸಿಸಿ ಅಧ್ಯಕ್ಷ ಡಾ. ಮಲ್ಲಿಕಾರ್ಜುನ ಖರ್ಗೆ ಅವರು ದೂರವಾಣಿಯ ಮೂಲಕ ಸಚಿವ ಪ್ರಿಯಾಂಕ್ ಖರ್ಗೆ ಅವರೊಂದಿಗೆ ಮಾತನಾಡಿ ಪೂಜ್ಯ ಡಾ. ಅಪ್ಪಾಜಿ ಅವರ ಆರೋಗ್ಯದ ಬಗ್ಗೆ ವಿಚಾರಿಸಿ, ಅವರ ಚೇತರಿಕೆಯ ಬಗ್ಗೆ ತಿಳಿದು ಹರ್ಷ ವ್ಯಕ್ತಪಡಿಸಿದರು. ಶಾಸಕ ಅಲ್ಲಮಪ್ರಭು ಪಾಟೀಲ್, ಎಂಎಲ್‌ಸಿ ತಿಪ್ಪಣ್ಣ ಕಮಕನೂರ್, ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್. ಡಿ. ಅವರು ಸಹ ಆಸ್ಪತ್ರೆಗೆ ಭೇಟಿ ನೀಡಿ ಪೂಜ್ಯ ಡಾ. ಅಪ್ಪಾಜಿ ಅವರನ್ನು ಭೇಟಿ ಮಾಡಿ ಆರೋಗ್ಯ ಸ್ಥಿತಿಯ ಬಗ್ಗೆ ವಿಚಾರಿಸಿದರು. ಪೂಜ್ಯ ಡಾ. ಅಪ್ಪಾಜಿ ಅವರನ್ನು ಉಸಿರಾಟದ ಸೋಂಕಿನ ದೂರುಗಳೊಂದಿಗೆ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಈಗ ಚಿಕಿತ್ಸೆಗೆ ಉತ್ತಮವಾಗಿ ಪ್ರತಿಕ್ರಿಯಿಸುತ್ತಿದ್ದಾರೆ. ಅವರ ಆರೋಗ್ಯ ಸ್ಥಿತಿ 24 ಗಂಟೆಗಳ ಒಳಗೆ ಸಾಮಾನ್ಯ ಸ್ಥಿತಿಗೆ ಮರಳಿದೆ. ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಇರಿಸಲಾಗಿದ್ದು ಬುಧವಾರ ಆಸ್ಪತ್ರೆಯಿಂದ ಬಿಡುಗಡೆ ಮಾಡುವ ಸಾಧ್ಯತೆ ಬಗ್ಗೆ ವೈದ್ಯರು ತಿಳಿಸಿದ್ದಾರೆ.



ಶರಣಬಸವಪ್ಪ ಅಪ್ಪಾಜಿ ಅವರನ್ನು ಸಚಿವ ಪ್ರಿಯಾಂಕ್ ಖರ್ಗೆ, ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಭೇಟಿ ನೀಡಿ ಆರೋಗ್ಯ ವಿಚಾರಿಸಿದರು.

ಕ್ಷೇತ್ರದ ಅಭಿವೃದ್ಧಿಗೆ ಆದ್ಯತೆ: ಮತ್ತಿಮಡು

ಕಲಬುರಗಿ: ರಾಜ್ಯದಲ್ಲಿ ಕಳೆದ ಬಾರಿಯ ಬಿಜೆಪಿ ಆಡಳಿತದ ಅವಧಿಯಲ್ಲಿ ಇಡೀ ಗ್ರಾಮೀಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ 1600 ಕೋಟಿಗೂ ಅಧಿಕ ಅಭಿವೃದ್ಧಿ ಕಾರ್ಯಗಳು ಮಾಡಲಾಗಿದೆ ಎಂದು ಶಾಸಕ ಬಸವರಾಜ ಮತ್ತಿಮಡು ತಿಳಿಸಿದರು. ಕಲಬುರಗಿ ಗ್ರಾಮೀಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಾಷ್ಟ್ರೀಯ ಹೆದ್ದಾರಿ (ಎನ್.ಎಚ್-50)ರಿಂದ ದಸ್ತಾಪುರವರೆಗಿನ 5 ಕೋಟಿ ರೂಪಾಯಿ ವೆಚ್ಚದ ರಸ್ತೆ ಕಾಮಗಾರಿಯ ಅಡಿಗಲ್ಲಿಗೆ ಚಾಲನೆ ನೀಡಿ, ಬಳಿಕ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕ್ಷೇತ್ರದಲ್ಲಿ ಅದೆಷ್ಟೇ ಅಭಿವೃದ್ಧಿ ಕಾರ್ಯ ಮಾಡಿದರು ನನಗೆ ಕಡಿಮೆಯಿದೆ. ನಿಮ್ಮೆಲ್ಲರ ಆಶೀರ್ವಾದದಿಂದಲೇ ಎರಡು ಬಾರಿ ಶಾಸಕನಾಗಿ ನಿಮ್ಮ ಸೇವೆ ಮಾಡುವ ಅವಕಾಶ ದೊರೆತಿದೆ ಎಂದು ಹೇಳಿದರು.

ಇದೀಗ ನಾನು 2 ಕೋಟಿ ಬ್ರಿಡ್ಜ್ ಸಲುವಾಗಿ ಹಾಗೂ 3 ಕೋಟಿ ರಸ್ತೆಗಾಗಿ ನೀಡಿದ್ದೇನೆ. ಮಳೆಗಾಲದಲ್ಲಿ ಸಾಕಷ್ಟು ತೊಂದರೆ ಅನುಭವಿಸುವುದು ಸಾಕಷ್ಟು ಗಮನಕ್ಕೆ ಬಂದಿದೆ. ಮುಂಬರುವ ದಿನಗಳಲ್ಲಿ ಇನ್ನಷ್ಟು ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಬೇಕಿದೆ. ಸಾಧ್ಯವಾದಷ್ಟು ಹೊಸ ಅಭಿವೃದ್ಧಿ ಕಾರ್ಯಗಳಿಗೆ ಕಾಯಕಲ್ಪ ನೀಡಿ ಕ್ಷೇತ್ರದ ಹಾಗೂ ನಿಮ್ಮ ಸೇವೆ ಮಾಡುವ ಕೆಲಸ ಮಾಡುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಹೊಳಕುಂದಾ ಗ್ರಾಮ ಪಂಚಾಯತ್ ಅಧ್ಯಕ್ಷ ಮಸ್ತಾನ್ ಚೆನ್ನ, ಶಿವಪ್ರಭು ಪಾಟೀಲ್, ತಹಶೀಲ್ದಾರ್ ಮಹಮದ್ ಮೋಸಿನ್, ರುದ್ರ ಶೆಟ್ಟಿ ಹುಡುಗಿ, ದಶರಥ್ ದಂಡಿನ, ಮಸ್ತಾನ್ ದಂಡಿನ್, ಪರಮೇಶ್ವರ ಕೊಟ್ಟರಗಿ, ಹಣಮಂತರಾವ್ ಪಸಾರ್, ಗುರುನಾಥ್ ಪೂಜಾರಿ, ಮಲ್ಲಿಕಾರ್ಜುನ ಮರತೂರಕರ್, ಖೇಮರಾವ್ ಹುಡುಗಿ, ಮಲ್ಲಿಕಾರ್ಜುನ ಪಾಟೀಲ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

ತಂಬಾಕು ನಿಷೇಧ:ಹಲವೆಡೆ ದಾಳಿ

ಆಳಂದ: ಪಟ್ಟಣದಲ್ಲಿ ತಂಬಾಕು ಉತ್ಪನ್ನಗಳ ಮಾರಾಟದ ವಿರುದ್ಧ ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಿರುವ ಪುರಸಭೆ, ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ, ಮತ್ತು ಪೊಲೀಸ್ ಇಲಾಖೆಗಳ ಸಂಯುಕ್ತ ತಂಡವು ತಂಬಾಕು ನಿಷೇಧ ಕಾಯ್ದೆ ಅಡಿಯಲ್ಲಿ ತಂಬಾಕು ಪದಾರ್ಥಗಳನ್ನು ಮಾರಾಟ ಮಾಡುವ ಅಂಗಡಿಗಳ ಮೇಲೆ ದಿಢೀರ್ ದಾಳಿ ನಡೆಸಿದೆ. ಈ ಕಾರ್ಯಾಚರಣೆಯಲ್ಲಿ ಪುರಸಭೆ ಅಧ್ಯಕ್ಷ ಫೀರುದೋಸ್ ಅನ್ಸಾರಿ, ತಾಲೂಕ ಆರೋಗ್ಯ ಅಧಿಕಾರಿ ಸುಶೀಲ್ ಕುಮಾರ್ ಅಂಬೋರೆ, ಪುರಸಭೆ ಪರಿಸರ ಅಭಿಯಂತರ ರವಿಕಾಂತ್ ಮಿಸ್ಕಿನ್ ಮತ್ತು ಆರೋಗ್ಯ ಅಧಿಕಾರಿ ವಿಜಯಲಕ್ಷ್ಮಿ ನಂದಿಕೋಲ್ಮಠ ಅವರ ನೇತೃತ್ವದ ಅಧಿಕಾರಿಗಳ ತಂಡವು ಪಟ್ಟಣದ ವಿವಿಧ ವಾಣಿಜ್ಯ ಪ್ರದೇಶಗಳು, ಶಾಲಾ-ಕಾಲೇಜುಗಳ ಸಮೀಪದ ಅಂಗಡಿಗಳು, ಮತ್ತು ಜನನಿಬಿಡ ಪ್ರದೇಶಗಳಲ್ಲಿ ದಾಳಿ ನಡೆಸಿದ್ದಾರೆ. ತಂಬಾಕು ಉತ್ಪನ್ನಗಳಾದ ಸಿಗರೇಟ್, ಬೀಡಿ, ಗುಟ್ಕಾ, ಖೈನಿ ಮತ್ತು ಇತರ ತಂಬಾಕು ಆಧಾರಿತ ಉತ್ಪನ್ನಗಳ ಮಾರಾಟವನ್ನು ಕಟ್ಟುನಿಟ್ಟಾಗಿ ತಡೆಗಟ್ಟುವ ಉದ್ದೇಶದಿಂದ ಈ ಕಾರ್ಯಾಚರಣೆ ಆಯೋಜಿಸಲಾಗಿತ್ತು.

ಶಿಕ್ಷಣ ಸಂಸ್ಥೆಗಳ ಸುತ್ತಮುತ್ತ 100 ಮೀಟರ್ ವ್ಯಾಪ್ತಿಯಲ್ಲಿ ತಂಬಾಕು ಉತ್ಪನ್ನಗಳ ಮಾರಾಟವನ್ನು ನಿಷೇಧಿಸುವ ಕಾಯ್ದೆಯ ನಿಯಮಗಳನ್ನು ಉಲ್ಲಂಘಿಸಿರುವ ಅಂಗಡಿಗಳ ಮೇಲೆ ವಿಶೇಷ ಗಮನಹರಿಸಲಾಯಿತು. ಕೆಲವು ಅಂಗಡಿಗಳಲ್ಲಿ ನಿಷೇಧಿತ ತಂಬಾಕು ಉತ್ಪನ್ನಗಳನ್ನು ಜಪ್ತಿ ಮಾಡಲಾಗಿದ್ದು, ಗುಟ್ಕಾ, ಸಿಗರೇಟ್, ಮತ್ತು ಇತರ ತಂಬಾಕು ಉತ್ಪನ್ನಗಳನ್ನು ವಶಪಡಿಸಿಕೊಳ್ಳಲಾಗಿದೆ. ಇದರ ಜೊತೆಗೆ, ಕಾಯ್ದೆಯ ನಿಯಮಗಳನ್ನು ಉಲ್ಲಂಘಿಸಿದ ಅಂಗಡಿಯವರಿಗೆ ದಂಡ ವಿಧಿಸುವ ಎಚ್ಚರಿಕೆ ನೀಡಿದರು.

ಪುರಸಭೆ ಅಧ್ಯಕ್ಷ ಫೀರುದೋಸ್ ಅನ್ಸಾರಿ ಮಾತನಾಡಿ, ತಂಬಾಕು ಉತ್ಪನ್ನಗಳು ಯುವ ಜನಾಂಗದ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತವೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಅಬ್ದುಲ್ ರಾವೂಫ್, ಶಿಕ್ಷಣ ಇಲಾಖೆಯ ಅಧಿಕಾರಿ ಶ್ರೀಮಂತ ಪಾಟೀಲ ಸೇರಿ ಪೊಲೀಸ್ ಇಲಾಖೆ ಇತರ ಇಲಾಖೆಯ ಸಿಬ್ಬಂದಿ ಇದ್ದರು.

ತ್ವರಿತ ಸೇವೆ ನೀಡುವಲ್ಲಿ ಕಲಬುರಗಿ 3ನೇ ಸ್ಥಾನ

ಕಲಬುರಗಿ: ಅಟಲ್‌ಜೀ ಜನಸ್ನೇಹಿ ಕೇಂದ್ರದ ಮೂಲಕ ಜೂನ್-2025ರ ಮಾಹೆಯಲ್ಲಿ ಸ್ವೀಕರಿಸಲಾಗಿರುವ 49,581 ಅರ್ಜಿಗಳನ್ನು ನಿಗದಿತ ಅವಧಿಗಿಂತ ಮೊದಲೇ ಶೇ. 99.95 ರಷ್ಟು ವಿಲೇವಾರಿ ಮಾಡಿ ರಾಜ್ಯದಲ್ಲಿಯೇ ಮೂರನೇ ಸ್ಥಾನ ಪಡೆದಿದ್ದಕ್ಕೆ ಕಲಬುರಗಿ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಮತ್ತು ಅವರ ತಂಡಕ್ಕೆ ಕಂದಾಯ ಆಯುಕ್ತ ಪೊಮ್ಮಲ ಸುನೀಲಕುಮಾರ್ ಅವರು ಪ್ರಶಂಶನೆ ವ್ಯಕ್ತಪಡಿಸಿದ್ದಾರೆ.

ಜೂನ್-2025ರ ಮಾಹೆಯಲ್ಲಿ ಸ್ವೀಕರಿಸಲಾಗಿರುವ 49,581 ಅರ್ಜಿಗಳನ್ನು ನಿಗದಿತ ಅವಧಿಗಿಂತ ಮೊದಲೇ ಶೇ. 99.95 ರಷ್ಟು ವಿಲೇವಾರಿ ಮಾಡಿ 6.58 ಸಿಗ್ಮಾ ಮೌಲ್ಯವನ್ನು ಪಡೆಯಲಾಗಿದೆ. 8.42 ವಿಲೇವಾರಿ ಸೂಚ್ಯಂಕದ ಪ್ರಕಾರ ಕಲಬುರಗಿ ಜಿಲ್ಲೆಯಲ್ಲಿ 9.42 ಪಟ್ಟು ನಿಗದಿತ ಅವಧಿಗಿಂತ ಅರ್ಜಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಿರುವುದು ಶ್ಲಾಘನೀಯ ಎಂದು ಪ್ರಸಂಶನಾ ಪತ್ರದಲ್ಲಿ ತಿಳಿಸಿದ್ದಾರೆ.

ಜಿಲ್ಲೆಯಲ್ಲಿನ ಈ ಕಾರ್ಯ ಸಾಧನೆಗೆ ನಾಡ ಕಛೇರಿ/ ಆಟಲ್‌ಜೀ ಜನಸ್ನೇಹಿ ಕೇಂದ್ರದ ಸಿಬ್ಬಂದಿಗಳ ಸಹಕಾರ, ಕಾರ್ಯತತ್ಪರತೆ ಕಾರಣವಾಗಿರುತ್ತದೆ. ಇದಕ್ಕಾಗಿ ಅಟಲ್ ಜನಸ್ನೇಹಿ ನಿರ್ದೇಶನಾಲಯದ ಪರವಾಗಿ ನಿಮ್ಮ ತಂಡಕ್ಕೆ ನನ್ನ ಅಭಿನಂದನೆಯನ್ನು ಎಂದಿರುವ ಸುನೀಲ್ ಕುಮಾರ ಅವರು, ಮುಂದಿನ ದಿನಗಳಲ್ಲಿಯೂ ಸಹಾ ನಿಮ್ಮಿಂದ ಇದೇ ರೀತಿಯ ಸಹಕಾರ ನಿರೀಕ್ಷಿಸಲಾಗಿದೆ ಎಂದು ಡಿ.ಸಿ ಬಿ.ಫೌಜಿಯಾ ತರನ್ನುಮ್ ಅವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ತಾತ್ಕಾಲಿಕ ಪಟ್ಟಿ ಪ್ರಕಟ: ಆಕ್ಷೇಪಣೆಗೆ ಆಹ್ವಾನ

ಚಿಂಚೋಳಿ: 2022-23ನೇ ಸಾಲಿನ ಚಿಂಚೋಳಿ ಶಿಶು ಅಭಿವೃದ್ಧಿ ಯೋಜನೆಯಲ್ಲಿ ಖಾಲಿಯಿರುವ 29 ಅಂಗನವಾಡಿ ಕಾರ್ಯಕರ್ತೆಯರ ಹಾಗೂ 47 ಸ 'ಹಾಯಕಿಯರ ಹುದ್ದೆಗ 'ಳಿಗೆ ಆಫ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿತ್ತು. ದಿನಾಂಕ: 19-07-2025 ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ಸಭೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರ 1 ಹುದ್ದೆ ಹಾಗೂ ಸಹಾಯಕಿಯರ 4 ಹುದ್ದೆಗಳಿಗೆ ತಾತ್ಕಾಲಿಕವಾಗಿ ಆಯ್ಕೆ ಮಾಡಿದ್ದು, ಅದೇ ರೀತಿ 2017-18ನೇ ಸಾಲಿನ ಲಿಂಗಾನಗರ ತಾಂಡ' ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಮರು ಪ್ರಕಟಣೆ ಮಾಡಲು ತಿಳಿಸಿದ್ದಾರೆ. ಈ ಮೇಲ್ಕಂಡ ತಾತ್ಕಾಲಿಕವಾಗಿ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ಚಿಂಚೋಳಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದ್ದು, ಈ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆಗಳಿದ್ದಲ್ಲಿ ಸಂಬಂಧಪಟ್ಟ ಸೂಕ್ತ ದಾಖಲಾತಿಗಳೊಂದಿಗೆ ಖುದ್ದಾಗಿ 2025ರ ಆಗಸ್ಟ್ 3 ರೊಳಗಾಗಿ ಚಿಂಚೋಳಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯಲ್ಲಿ ಆಕ್ಷೇಪಣೆ ಸಲ್ಲಿಸಬೇಕು. ಅವಧಿ ಮುಗಿದ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಪಟೇಲ್ ಕಾಲೋನಿ ಚಂದಾಪೂರ ಇಲ್ಲಿಗೆ ಸಂಪರ್ಕಿಸಲು ಕೋರಲಾಗಿದೆ. ಬೀಜ, ರಸಗೊಬ್ಬರ ಹಾಗೂ ಕೀಟನಾಶಕಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಬಾರದೆಂದು ಕಟ್ಟುನಿಟ್ಟಿನ ಸೂಚನೆ.

ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಬದ್ಧ: ಡಾ.ಅಜಯ್

ವಿಶ್ವವಾಣಿ ಸುದ್ದಿಮನೆ

ಕಲಬುರಗಿ: ಕಲ್ಯಾಣ ಕರ್ನಾಟಕ ಭಾಗದ ಎಲ್ಲ ಜಿಲ್ಲೆಗಳಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ಒಳಗೊಂಡಂತೆ ಸಮಗ್ರ ಅಭಿವೃದ್ಧಿಗೆ ಪೂರಕವಾಗಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಅಧ್ಯಯನ ಕೈಗೊಳ್ಳುವುದರ ಭಾಗವಾಗಿ ನಂಜುಂಡಪ್ಪ ವರದಿ ಅಧ್ಯಯನ ಸಮಿತಿ ಅಧ್ಯಕ್ಷ ಪ್ರೊ.ಗೋವಿಂದರಾವ್ ನೇತೃತ್ವದ ಉನ್ನತ ಸಮಿತಿ ಆಗಸ್ಟ್ 7 ಹಾಗೂ 8ರಂದು ಕಲಬುರಗಿ ಜಿಲ್ಲೆಗೆ ಭೇಟಿ ನೀಡಲಿದೆ ಎಂದು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (ಕೆ.ಕೆ.ಆರ್.ಡಿ.ಬಿ) ಅಧ್ಯಕ್ಷ ಡಾ.ಅಜಯ ಧರ್ಮಸಿಂಗ್ ಹೇಳಿದರು. ಕೆ.ಕೆ.ಆರ್.ಡಿ.ಬಿ ಸಭಾಂಗಣದಲ್ಲಿ ಕರೆದಿದ್ದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಸಮಿತಿಯು ಈಗಾಗಲೇ ಜಿಲ್ಲಾವಾರು ಭೇಟಿ ಆರಂಭಿಸಿದೆ. ಕಲ್ಯಾಣ ಕರ್ನಾಟಕ ಭಾಗದ ಎಲ್ಲಾ ಜಿಲ್ಲೆಗಳಿಗೂ ಭೇಟಿ ನೀಡಿ, ಈ ವರ್ಷ ವರದಿ ಸಲ್ಲಿಸಲಿದೆ. ಈ ವರದಿ ಬಂದ ಬಳಿಕ ಅಗತ್ಯ ತೀರ್ಮಾನಗಳನ್ನು ಕೈಗೊಳ್ಳಲಾಗುವುದು ಎಂದರು. ರಾಜ್ಯಪಾಲರ ಅನುಮೋದನೆ: 2025-26ನೇ ಆರ್ಥಿಕ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಭಾಗದ ಎಲ್ಲ ಏಳು ಜಿಲ್ಲೆಗಳಲ್ಲಿ ಅಗತ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು 5000 ಕೋಟಿ ರು. ಖರ್ಚು ಮಾಡಲು ಈಗಾಗಲೇ, ರಾಜ್ಯಪಾಲ ಥಾವರ್‌ಚಂದ ಗೆಹಲೋಟ್ ಅನುಮೋದನೆ ನೀಡಿದ್ದಾರೆ ಎಂದು ಸಹ ಅಜಯಸಿಂಗ್ ಮಾಹಿತಿ ನೀಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ಮಾಡಿದ ಅನುದಾನಕ್ಕೆ ಕ್ರಿಯಾ ಯೋಜನೆ ಸಿದ್ದಪಡಿಸಿ ಕಳೆದ ತಿಂಗಳು ರಾಜ್ಯಪಾಲರಿಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಅತ್ಯಂತ ಕ್ಷಿಪ್ರಗತಿಯಲ್ಲಿ ರಾಜ್ಯಪಾಲರು ಅನುಮೋದನೆ ನೀಡಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು. ಇದೇವೇಳೆ, ಮಂಡಳಿಯ ಲೆಕ್ಕಪತ್ರದ ಕುರಿತು ಮಾಹಿತಿ ನೀಡಿದ ಡಾ. ಅಜಯ್ ಸಿಂಗ್, ಕಳೆದ 24 ತಿಂಗಳಲ್ಲಿ ಒಟ್ಟು 5167 ಕೋಟಿ ರು.ಗಳ ಅನುದಾನವನ್ನು ಖರ್ಚು ಮಾಡಲಾಗಿದೆ. ಬರುವ ಮಾರ್ಚ್ 31ರೊಳಗೆ 4000ದಿಂದ 4500 ಕೋಟಿ ರು. ಖರ್ಚು ಮಾಡುವ ಗುರಿ ಹೊಂದಲಾಗಿದೆ ಎಂದರು.

ಇಂಡಸ್ಟ್ರಿಯಲ್ ಹಬ್: ಈಗಾಗಲೇ, ಕಲ್ಯಾಣ ಕರ್ನಾಟಕದಲ್ಲಿ ಹಸಿರೀಕರಣಕ್ಕೆ ಅರಣ್ಯ ಇಲಾಖೆಯೊಂದಿಗೆ ಕಾರ್ಯನಿರ್ವಹಿಸಲು ರೂ. 100 ಕೋಟಿ ಮೀಸಲಿಡಲಾಗಿದೆ. ಕಲ್ಯಾಣ ಕರ್ನಾಟದಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಪೂರಕವಾಗಿ ಇಂಡಸ್ಟ್ರಿಯಲ್ ಹಬ್ ಸ್ಥಾಪನೆಗೆ ಪ್ರಯತ್ನಗಳು ನಡೆದಿದ್ದು, ಇದಕ್ಕಾಗಿ ಸರಕಾರದ 100 ಕೋಟಿ ರು. ಕೆ.ಕೆ.ಆರ್.ಡಿ.ಬಿ ಸಹ 100 ಕೋಟಿ ರು. ನೀಡಲಿದೆ ಎಂದರು. ಕೆ.ಕೆ.ಆರ್.ಡಿ.ಬಿಯ ಮಹತ್ವಾಕಾಂಕ್ಷಿ ಯೋಜನೆಗಳ ಪೈಕಿ ಒಂದಾಗಿರುವ ಹಾರ್ಟ್ ಲೈನ್ ಆಂಬ್ಯುಲೆನ್ಸ್ ಸೆಪ್ಟೆಂಬರ್ ತಿಂಗಳಲ್ಲಿ ಲೋಕಾರ್ಪಣೆ ಮಾಡಲಾಗುತ್ತಿದೆ. ಜೊತೆಗೆ, ಅಕ್ಷರ ಆವಿಷ್ಕಾರ ಯೋಜನೆಯಡಿ 200 ಕರ್ನಾಟಕ ಪಬ್ಲಿಕ್ ಸ್ಕೂಲ್ (ಕೆಪಿಎಸ್) ನಿರ್ಮಾಣಕ್ಕೆ ಚಿಂತನೆ ನಡೆದಿದೆ. ಪ್ರತಿ ಗ್ರಾಮ ಪಂಚಾಯತಿಗೆ ಒಂದು ಕೆಪಿಎಸ್ ಶಾಲೆ ನೀಡಬೇಕು ಎಂಬ ಚಿಂತನೆ ನಡೆದಿದೆ ಎಂದರು.

ಕೃತಕ ಅಭಾವ: ಕ್ರಮಕ್ಕೆ ಸೂಚನೆ

ಜೇವರ್ಗಿ: ಬಿತ್ತನೆ ಮಾಡಬಾರದು, ರಸಗೊಬ್ಬರ ಕೊರತೆ ಉಂಟಾಗಿದೆ. ಕೃತಕ ಅಭಾವ ಸೃಷ್ಟಿಸುವವರನ್ನು ಗುರುತಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಶಾಸಕ ಡಾ.ಅಜಯ್ ಸಿಂಗ್ ಅಧಿಕಾರಿಗಳಿಗೆ ಸೂಚನೆ ನೀಡಿದರು. ಪಟ್ಟಣದಲ್ಲಿ ನಡೆದ ತಾಲೂಕು ಕೆಡಿಪಿ ಸಭೆಯಲ್ಲಿ ಅವರು ಮಾತನಾಡಿದರು, ಪಟ್ಟಣದ ವಾರ್ಡ್‌ಗಳು, ಬಸ್‌ನಿಲ್ದಾಣ, ಮುಖ್ಯರಸ್ತೆ, ಮಹಾಲಕ್ಷ್ಮೀ ಮಂದಿರದ ಸುತ್ತಲಿನ ಸ್ಥಳಗಳಲ್ಲಿ ಸ್ವಚ್ಛತಾ ಕಾರ್ಯವನ್ನು ಕೈಗೊಳ್ಳಬೇಕು. ಕಾರ್ಮಿಕರನ್ನು ಸರಿಯಾಗಿ ಸಂಬಳ ಪಡೆದು ಕೆಲಸ ಮಾಡುವಂತೆ ಪುರಸಭೆ ಮುಖ್ಯಾಧಿಕಾರಿ ಹಾಗೂ ತಹಶೀಲ್ದಾರ್‌ಗೆ ಸೂಚಿಸಿದರು. ರಸ್ತೆ ಡಿವೈಡರ್‌ಗಳ ಮೇಲೆ ಹೊಲಸು, ಹಾಕುವವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದರು

ರಸಗೊಬ್ಬರ, ಕೃತಕ ಬೀಜ ಅಭಾವ ವಿರುದ್ಧ ಕ್ರಮ: ಯಡ್ರಾಮಿ ಹಾಗೂ ಜೇವರ್ಗಿ ತಾಲೂಕಿನಲ್ಲಿ ಉತ್ತಮ ಮಳೆ ಬೆಳೆ, ರೈತರು ಬಿತ್ತನೆ ಮುಂದಾಗಿದ್ದಾರೆ. ರೈತರಿಗೆ ರಸಗೊಬ್ಬರ, ಬಿತ್ತನೆ ಬೀಜದ ಕೊರತೆಯಾಗದಂತೆ ನೋಡಿಕೊಳ್ಳಬೇಕು. ಕೃತಕ ಅಭಾವ ಸೃಷ್ಟಿಸುತ್ತಿರುವವರ ವಿರುದ್ಧ ದೂರುಗಳಿದ್ದರೆ ತಕ್ಷಣ ಕ್ರಮಕ್ಕೆ ಮುಂದಾಗಬೇಕು ಎಂದರು. ಸಭೆಯಲ್ಲಿ ತಹಶೀಲ್ದಾರ್ ಮಲ್ಲಣ್ಣ ಯಲಗೋಡ್, ತಹಶೀಲ್ದಾರ್ ಯಲ್ಲಪ್ಪ ಸುಬೇದಾರ, ಶಂಭುಲಿಂಗ ದೇಸಾಯಿ ಸೇರಿದಂತೆ ಅನೇಕರಿದ್ದರು.

ಕೋರ್ಟ್ ಆದೇಶ..

← ಮೊದಲಪುಟದಿಂದ

ಮಂಗಳೂರಿನ ಕೋಡಿಬೈಲ್ ವಿಳಾಸ ಹೊಂದಿರುವ ಯೂ ಟ್ಯೂಬ್ ಚಾನಲ್ 'ಕುಡ್ಲ ರ‍್ಯಾಂಪೇಜ್' ಸಂಪಾದಕ ಅಜಯ್ ಬಿನ್ ರಾಮಕೃಷ್ಣ ಪೂಜಾರಿ ಸಲ್ಲಿಸಿದ್ದ ರಿಟ್ ಅರ್ಜಿಯ ವಿಚಾರಣೆ ನಡೆಸಿದ ನ್ಯಾ. ಎಂ.ನಾಗಪ್ರಸನ್ನ ಅವರಿದ್ದ ನ್ಯಾಯ ಪೀಠ, ನ್ಯಾಯಾಲಯದ ಆದೇಶಗಳನ್ನು ಉಲ್ಲಂಘಿಸಿರುವ ವ್ಯಕ್ತಿಯ ಅರ್ಜಿಯನ್ನು ಪರಿಗಣಿಸಬೇಕು ಎಂದು ನೀವು ಹೇಗೆ ನಿರೀಕ್ಷಿಸುತ್ತೀರಿ? ಎಂದು ಅರ್ಜಿದಾರರನ್ನು ಪ್ರಶ್ನಿಸಿತು.

ನಮೂನೆ ಸಂ. ಐಎನ್‌ಸಿ–26

[ನಿಯಮ 30ರ ಕಂಪನಿಗಳ (ಸಂಯೋಜನೆ) ನಿಯಮಗಳು, 2014 ಕ್ಕೆ ಸಂಬಂಧಪಟ್ಟಂತೆ]
ಕಂಪನಿಯ ನೋಂದಾಯಿತ ಕಚೇರಿಯನ್ನು ಒಂದು ರಾಜ್ಯದಿಂಥ ಮತ್ತೊಂದು ರಾಜ್ಯಕ್ಕೆ ವರ್ಗಾಯಿಸುವುದರ ಬಗ್ಗೆ ಪತ್ರಿಕೆಯಲ್ಲಿ ಜಾಹೀರಾತು ಪ್ರಕಟಣೆ

ಸೂಚನೆ

ಕೇಂದ್ರ ಸರ್ಕಾರದ ಮುಂದೆ, ಪ್ರಾದೇಶಿಕ ನಿರ್ದೇಶಕರು, ಆಗ್ನೇಯ ವಲಯ
ಕಂಪನಿಗಳ ಕಾಯ್ದೆ, 2013, ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 13(4) ಮತ್ತು ಕಂಪನಿಗಳ (ಸಂಯೋಜನೆ) ನಿಯಮಗಳು, 2014 ರ ನಿಯಮ 30(6) (ಎ) ರ ವಿಷಯದಲ್ಲಿ ಮತ್ತು
ಕೆನ್‌ಮೋರ್ ಶೂಸ್ ಪ್ರೈವೇಟ್ ಲಿಮಿಟೆಡ್
ನೋಂದಾಯಿತ ಕಚೇರಿ: ಗೋವಿಂದಪುರಂ ಮುಖ್ಯ ರಸ್ತೆ, ನಾಗವಾರ, ಬೆಂಗಳೂರು–560072, ಕರ್ನಾಟಕ, ಭಾರತ ....ಅರ್ಜಿದಾರ

ಸಾರ್ವಜನಿಕರಿಗೆ ಈ ಸೂಚನೆಯ ಮೂಲಕ ತಿಳಿಯಪಡಿಸುವುದೇನೆಂದರೆ, ಸೆಕ್ಷನ್ 13(4)ರ ಕಂಪನಿ ಕಾಯಿದೆ, 2013ನ್ನು ಓದಿಕೊಂಡಂತೆ ನಿಯಮ 30(5) (ಎ) ನ್ನು ಓದಿಕೊಂಡಂತೆ ಕಂಪನಿಗಳ (ಸಂಯೋಜನೆ) ನಿಯಮಗಳು, 2014 ರಂತೆ ಕೇಂದ್ರ ಸರ್ಕಾರದ ಎದುರು ಕಂಪನಿಯ ನೋಂದಾಯಿತ ಕಚೇರಿ: ಯನ್ನು **"ಕರ್ನಾಟಕ ರಾಜ್ಯ"** ದಿಂದ **"ತಮಿಳುನಾಡು ರಾಜ್ಯ"** ಕ್ಕೆ ವರ್ಗಾಯಿಸಲು ಅರ್ಜಿ ಸಲ್ಲಿಸಲು ಉದ್ದೇಶಿಸಲಾಗುವುದು ಎಂದು 21ನೇ ಜುಲೈ 2025 ರಂದು ನಡೆದ ಕಂಪನಿಯ ವಿಶೇಷ ಸಾಮಾನ್ಯ ಸಭೆಯಲ್ಲಿ ವಿಶೇಷ ನಿರ್ಣಯವನ್ನು ಅಂಗೀಕರಿಸಲಾಯಿತು.

ಯಾವುದೇ ವ್ಯಕ್ತಿಗೆ ಈ ಕಂಪನಿಯ ನೋಂದಾಯಿತ ಕಛೇರಿಯನ್ನು **"ಕರ್ನಾಟಕ ರಾಜ್ಯ"** ದಿಂದ **"ತಮಿಳುನಾಡು ರಾಜ್ಯ"** ಕ್ಕೆ ವರ್ಗಾಯಿಸುವುದರ ಬಗ್ಗೆ ತೊಂದರೆಯಾಗುತ್ತಿದೆ ಎಂದಾದರೆ, ಹೂಡಿಕೆದಾರರ ಕಂಪ್ಲೈಂಟ್ ಫಾರ್ಮ್ ನ್ನು, ಎಂಸಿಎ–21 ಪೋರ್ಟಲ್ (www.mca.gov.in) ಮೂಲಕ ಸಲ್ಲಿಸಿ, ತಮ್ಮ ಯಾವ ಹಿತಾಸಕ್ತಿಗೆ ಇದರಿಂದ ಧಕ್ಕೆಯುಂಟಾಗುತ್ತಿದೆ ಎಂಬುದನ್ನು ಅಫಿಡವಿಟ್ ಮೂಲಕ ಪ್ರಾದೇಶಿಕ ನಿರ್ದೇಶಕರು, ಆಗ್ನೇಯ ವಲಯ, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ, 3ನೇ ಮಹಡಿ, ಕಾರ್ಪೊರೇಟ್ ಭವನ, ಬಂದಲಗೂಡ, ನಾಗೋಲೆ, ತಟ್ಟಿಯನ್‌ನರಮ್ ಗ್ರಾಮ, ಹಯಾತ್ ನಗರ ಮಂಡಲ, ರಂಗ ರೆಡ್ಡಿ ಜಿಲ್ಲೆ, ಹೈದರಾಬಾದ್ – 500 068, ಇಲ್ಲಿಗೆ ಈ ನೋಟೀಸ್ ಪ್ರಕಟವಾದ ಹದಿನಾಲ್ಕು ದಿನಗಳ ಒಳಗಾಗಿ ರಿಜಿಸ್ಟರ್ಡ್ ಅಂಚೆ ಮೂಲಕ ಹಾಗೂ ಒಂದು ಪ್ರತಿಯನ್ನು ಕಂಪನಿಯ ಈ ಮೇಲಿನ ನೋಂದಾಯಿತ ಕಛೇರಿಯ ವಿಳಾಸಕ್ಕೆ ಕಳುಹಿಸಬಹುದಾಗಿದೆ.

ಮಂಡಳಿಯ ಆದೇಶದ ಮೇರೆಗೆ
ಕೆನ್‌ಮೋರ್ ಶೂಸ್ ಪ್ರೈವೇಟ್ ಲಿಮಿಟೆಡ್ ಪರವಾಗಿ
ಸಹಿ/–
ಮೆಕ್ಕಾ ಇರ್ಷದ್ ಅಹ್ಮದ್
ನಿರ್ದೇಶಕ
ಡಿಐಎನ್: 00013774
ದಿನಾಂಕ : 30.07.2025
ಸ್ಥಳ : ಬೆಂಗಳೂರು

ಆರು ಜಿಲ್ಲೆಯ ಶಾಸಕರೊಂದಿಗೆ ಸಭೆ ನಡೆಸಿದ ಸಿಎಂ | ಕ್ಷೇತ್ರದ ಅಭಿವೃದ್ಧಿ, ಸಂಘಟನೆಗೆ ಸಂಬಂಧಿಸಿದಂತೆ ಚರ್ಚೆ

ಶಾಸಕರೊಂದಿಗೆ ಪ್ರತ್ಯೇಕ ಸಭೆ, ಸಮನ್ವಯತೆ ಸಾಧಿಸಲು ಸೂಚನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರದಿಂದ ಆರಂಭಿಸಿರುವ ಶಾಸಕರ ಮ್ಯಾರಥಾನ್ ಸಭೆಯಲ್ಲಿ, ಪಕ್ಷ ಸಂಘಟನೆ, ವಿವಿಧ ನೇಮಕ, ಅನುದಾನ ಹಂಚಿಕೆ, ಅಭಿವೃದ್ಧಿ ಕಾಮಗಾರಿ, ಪಕ್ಷ ಮತ್ತು ಸರಕಾರದ ನಡುವಿನ ಸಮನ್ವಯತೆಯ ಬಗ್ಗೆ ಚರ್ಚೆ ನಡೆಸಿದ್ದಾರೆ.

ಮಂಗಳವಾರ ಮೈಸೂರು, ಚಾಮರಾಜನಗರ, ತುಮಕೂರು, ಕೊಡಗು, ಹಾಸನ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಶಾಸಕರೊಂದಿಗೆ ವಿಧಾನಸೌಧದ ಮುಖ್ಯಮಂತ್ರಿಗಳ ಕಚೇರಿಯಲ್ಲಿ ಚರ್ಚೆ ನಡೆಸಿದ್ದಾರೆ. ಬುಧವಾರ, ಗುರುವಾರ ಹಾಗೂ ಆ.7ರಂದು ಕಾಂಗ್ರೆಸ್‌ನ 138 ಶಾಸಕರೊಂದಿಗೆ ಪ್ರತ್ಯೇಕವಾಗಿ ತಲಾ 10 ನಿಮಿಷದಂತೆ ಚರ್ಚೆ ನಡೆಸಲಿದ್ದಾರೆ. ಈಗಾಗಲೇ ಘೋಷಣೆಯಾಗಿರುವಂತೆ ಪ್ರತಿಯೊಬ್ಬ ಕಾಂಗ್ರೆಸ್ ಶಾಸಕರಿಗೂ ತಲಾ 50 ಕೋಟಿ ರು.ಗಳ ಅನುದಾನವನ್ನು ಒದಗಿಸಲಾಗುತ್ತದೆ. ಅದರಲ್ಲಿ ನಗರ ಹಾಗೂ ಗ್ರಾಮೀಣ ಪ್ರದೇಶದ ರಸ್ತೆಗಳ ಅಭಿವೃದ್ಧಿಗೆ 37.5 ಕೋಟಿ ರು.ಗಳನ್ನು ಬಳಕೆ ಮಾಡಬೇಕು. ಉಳಿದ 12.5 ಕೋಟಿ ರು.ಗಳನ್ನು ಶಾಸಕರ ವಿವೇಚನೆ ಆಧರಿಸಿ ಸಮುದಾಯ ಭವನ, ದೇವಸ್ಥಾನ, ಶಾಲಾ–ಕಾಲೇಜುಗಳ ಕಟ್ಟಡ ಹಾಗೂ ತಡೆಗೋಡೆಗಳ ನಿರ್ಮಾಣ ಸೇರಿದಂತೆ ಇತರ ಕಾಮಗಾರಿಗಳನ್ನು ಕೈಗೊಳ್ಳಬಹುದಾಗಿದೆ. ಈ ವಿಚಾರವಾಗಿ ಪ್ರಸ್ತಾವನೆ ಸಲ್ಲಿಸಲು ಶಾಸಕರಿಗೆ ಈಗಾಗಲೇ ನಿಗದಿತ ನಮೂನೆಗಳನ್ನು ಒದಗಿಸಲಾಗಿದೆ. ಅದರಲ್ಲಿ ಸೂಚಿತ ಕಾಮಗಾರಿಗಳನ್ನು ಪ್ರಸ್ತಾವನೆ ರೂಪದಲ್ಲಿ ಸಲ್ಲಿಸಲು ಸೂಚಿಸಲಾಗಿದೆ.

ಮಂಗಳವಾರ ಆರು ಜಿಲ್ಲೆಯ ಶಾಸಕರೊಂದಿಗೆ ಸಿಎಂ ಸಿದ್ದರಾಮಯ್ಯ ಚರ್ಚೆ ನಡೆಸಿದರು.

ಮುಂದಿನ ದಿನಗಳಲ್ಲಿ ಕಾಮಗಾರಿಗಳ ಗುಣಮಟ್ಟ ಕಾಯ್ದುಕೊಳ್ಳುವುದು, ಭ್ರಷ್ಟಾಚಾರಕ್ಕೆ ಅವಕಾಶವಿಲ್ಲದಂತೆ ಎಚ್ಚರಿಕೆ ವಹಿಸಲು ಮುಖ್ಯಮಂತ್ರಿಗಳು ಶಾಸಕರಿಗೆ ಹಿತವಚನ ನೀಡಲಿದ್ದಾರೆ. ಇದೇ ವೇಳೆ ವಿವಿಧ ನಿಗಮ ಮಂಡಳಿಗಳ ನೇಮಕಾತಿ, ಅಧಿಕಾರಿಗಳ ವರ್ಗಾವಣೆ ಹಾಗೂ ಪಕ್ಷದ ಸಂಘಟನೆ ಕುರಿತಂತೆ ಚರ್ಚೆ ನಡೆಸಲಿದ್ದಾರೆ. ಬಹಳಷ್ಟು ಕಡೆ ಪಕ್ಷದ ಪ್ರಮುಖ ನಾಯಕರು ಹಾಗೂ ಶಾಸಕರ ನಡುವೆ ಹೊಂದಾಣಿಕೆಯ ಕೊರತೆ ಕಂಡುಬರುತ್ತಿದೆ. ಮುಂದಿನ ಈ ಸಮನ್ವಯ ಕೊರತೆಯನ್ನು ಸರಿತೂಗಿಸುವಂತೆ ಸೂಚನೆ ನೀಡಿದ್ದಾರೆ ಎನ್ನಲಾಗಿದೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಇತ್ತೀಚೆಗೆ ಪ್ರತ್ಯೇಕವಾಗಿ ಸಭೆ ನಡೆಸಿ, ಚರ್ಚಿಸಿದ್ದರು. ಅಹವಾಲುಗಳನ್ನು ಸಚಿವರು, ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಯವರಿಗೆ ತಲುಪಿಸಲಾಯಿತು. ಅದರ ಮುಂದುವರೆದ ಭಾಗವಾಗಿ ಸಿದ್ದರಾಮಯ್ಯ ಶಾಸಕರೊಂದಿಗೆ ಸಭೆ ನಡೆಸಿದ್ದಾರೆ. ಪಂಚಖಾತ್ರಿಗಳಿಂದಾಗಿ ಹಣದ ಕೊರತೆಯಾಗಿದೆ. ಅಭಿವೃದ್ಧಿ ಕೆಲಸಗಳಿಗೆ ಹಣವಿಲ್ಲ ಎಂದು ಹಲವಾರು ಶಾಸಕರು ಆರೋಪಿಸಿದ್ದರು. ಆದರೆ ಈ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ನಡೆಸಿದ ಬಜೆಟ್‌ನಲ್ಲಿ 83 ಸಾವಿರ ಕೋಟಿ ರು.ಗಳ ಯೋಜನಾ ವೆಚ್ಚಕ್ಕೆ ಅನುಮೋದನೆ ನೀಡಲಾಗಿದೆ. ಹೆಚ್ಚುವರಿಯಾಗಿ 8 ಸಾವಿರ ಕೋಟಿ ರು.ಗಳನ್ನು ಅಭಿವೃದ್ಧಿ ಕಾಮಗಾರಿಗಳಿಗಾಗಿಯೇ ಹಂಚಿಕೆ ಮಾಡಲಾಗುತ್ತಿದೆ. ಬೆಂಗಳೂರು ನಗರ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಶಾಸಕರಿಗೂ 50 ಕೋಟಿಗಳಿಗಿಂತಲೂ ಹೆಚ್ಚಿನ ಅನುದಾನದ ಲಭ್ಯತೆ ಇದೆ. ಹೀಗಾಗಿ ಅಭಿವೃದ್ಧಿ ಕಾಮಗಾರಿಗಳಿಗೆ ಹಣಕಾಸಿನ ಕೊರತೆ ಇದೆ ಎಂಬ ಆರೋಪಗಳು ಅಪ್ರಸ್ತುತ ಎಂದು ಮುಖ್ಯಮಂತ್ರಿ ಶಾಸಕರಿಗೆ ಮನವರಿಕೆ ಮಾಡಿಕೊಡುತ್ತಿದ್ದು, ಪ್ರತಿಪಕ್ಷಗಳು ಟೀಕೆ ಮಾಡಿದಾಗ ತಕ್ಕ ಪ್ರತ್ಯುತ್ತರ ನೀಡುವಂತೆ ಸಲಹೆ ನೀಡಿದ್ದಾರೆ ಎಂದು ತಿಳಿದುಬಂದಿದೆ.

ಸಭೆಯಲ್ಲಿ ಚರ್ಚಿಸಲಾದ ಪ್ರಮುಖಾಂಶ

- ಜಿಲ್ಲೆಯಲ್ಲಿ ಪ್ರಮುಖವಾಗಿ ನಡೆಯುತ್ತಿರುವ ಅಭಿವೃದ್ಧಿ ಕೆಲಸಗಳ ಸ್ಥಿತಿ–ಗತಿ.
- ಬಿಡುಗಡೆಯಾಗಿರುವ ಅನುದಾನದಲ್ಲಿ ಖರ್ಚಾಗಿರುವ ಹಣದ ಪ್ರಮಾಣ, ಕಾಮಗಾರಿ ಪೂರ್ಣಗೊಳಿಸಲು ಕಾಲಮಿತಿ ನಿಗದಿಪಡಿಸುವ ಬಗ್ಗೆ ಚರ್ಚೆ
- ಕ್ಷೇತ್ರವಾರು ಬಿಡುಗಡೆಯಾಗಿರುವ ಅನುದಾನ, ಇಲಾಖಾವಾರು ಅನುದಾನಗಳ ಬಗ್ಗೆ ಚರ್ಚೆ.
- ಬಜೆಟ್‌ನಲ್ಲಿ ಘೋಷಿಸಿರುವ ಯೋಜನೆಗಳ ಜಾರಿಯ ಸ್ಥಿತಿ ಗತಿ.
- ಗ್ಯಾರಂಟಿಗಳ ಯಶಸ್ವಿ ಜಾರಿಯಿಂದ ಜಿಲ್ಲೆಯ ಆರ್ಥಿಕತೆ ಮೇಲೆ ಆಗಿರುವ ಸಕಾರಾತ್ಮಕ ಪರಿಣಾಮಗಳ ಬಗ್ಗೆ ಶಾಸಕರುಗಳ ಗಮನ ಸೆಳೆದರು.
- ಎಲ್ಲಾ ಕೆಡಿಪಿ ಸಭೆಗಳಲ್ಲೂ ಶಾಸಕರು, ಸಚಿವರು ಅರ್ಥಪೂರ್ಣವಾಗಿ ಪಾಲ್ಗೊಳ್ಳಬೇಕು.
- ಕಾಮಗಾರಿಗಿರುವ ತಾಂತ್ರಿಕ ತೊಂದರೆಗಳ ಬಗ್ಗೆ, ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ನಿಧಾನ ಧೋರಣೆ ಬಗ್ಗೆ ಕೆಡಿಪಿ ಸಭೆಗಳಲ್ಲಿ ಚರ್ಚಿಸಲು ಸೂಚನೆ.

ಭ್ರಷ್ಟ ಐವರು ಸರಕಾರಿ ಅಧಿಕಾರಿಗಳಿಗೆ ಲೋಕಾ ಶಾಕ್

ಬೆಂಗಳೂರು: ಲೋಕಾಯುಕ್ತ ಅಧಿಕಾರಿಗಳು ಮಂಗಳವಾರ ರಾಜ್ಯಾದ್ಯಂತ ಐದು ಸರಕಾರಿ ಅಧಿಕಾರಿಗಳಿಗೆ ಸೇರಿದ ಮನೆ, ಕಚೇರಿ ಹಾಗೂ ಇತರ ಆಸ್ತಿಗಳ ಮೇಲೆ ದಾಳಿ ಮಾಡಿ, ಪರಿಶೀಲನೆ ನಡೆಸಿದರು.

ಬೆಂಗಳೂರು ನಗರ, ಚಿತ್ರದುರ್ಗ, ಚಿಕ್ಕಬಳ್ಳಾಪುರ ಮತ್ತು ಹಾಸನ ಜಿಲ್ಲಾ ಲೋಕಾಯುಕ್ತ ಪೊಲೀಸ್ ಠಾಣೆಗಳಲ್ಲಿ ಒಟ್ಟು 5 ಸರಕಾರಿ ಅಧಿಕಾರಿಗಳು ತಮ್ಮ ಬಲ್ಲ ಆದಾಯದ ಮೂಲಗಳಿಗಿಂತ ಹೆಚ್ಚು ಅಸಮತೋಲನ ಆಸ್ತಿಯನ್ನು ಹೊಂದಿದ್ದ ಬಗ್ಗೆ ಪ್ರಕರಣಗಳು ದಾಖಲಾಗಿದೆ.

ಚಿತ್ರದುರ್ಗದ ಹಿರಿಯೂರಿನ ತಾಲೂಕು ವೈದ್ಯಾಧಿಕಾರಿ ಡಾ.ವೆಂಕಟೇಶ್‌ಗೆ ಸೇರಿದ ಒಟ್ಟು 3 ಸ್ಥಳಗಳಲ್ಲಿ ಶೋಧನಾ ಕಾರ್ಯ ಕೈಗೊಳ್ಳಲಾಗಿದ್ದು ಅಪಾರ ಆಸ್ತಿ ಇರುವುದು ಪತ್ತೆಯಾಗಿದೆ. 2.87 ಸ್ಥಿರಾಸ್ತಿ, 67.49 ಲಕ್ಷ ರು. ಚರಾಸ್ತಿ ಸೇರಿದಂತೆ 3.54 ಕೋಟಿ ರು. ಆಸ್ತಿ ಇರುವುದು ಬೆಳಕಿಗೆ ಬಂದಿದೆ. ಹಾಸನದ ವಿಭಾಗದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಕಾರ್ಯಪಾಲಕ ಅಭಿಯಂತರ ಜಯಣ್ಣಗೆ ಸೇರಿದ 5 ಸ್ಥಳಗಳಲ್ಲಿ ಶೋಧನಾ ಕಾರ್ಯ ಕೈಗೊಳ್ಳಲಾಗಿದೆ. 5.59 ಕೋಟಿ ರು. ಸ್ಥಿರಾಸ್ತಿ, 69.35 ಲಕ್ಷ ರು. ಚರಾಸ್ತಿ ಸೇರಿದಂತೆ ಒಟ್ಟು 6.28 ಕೋಟಿ ರು. ಆಸ್ತಿ ಪತ್ತೆಯಾಗಿದೆ. ಹಾಗೆಯೇ ಗೌರಿಬಿದನೂರಿನ ಗ್ರಾಮೀಣ ಕುಡಿಯುವ ನೀರು ಮತ್ತು ಒಳಚರಂಡಿ ಇಲಾಖೆಯ ಕಿರಿಯ ಅಭಿಯಂತರ ಆಂಜನೇಯ ಮೂರ್ತಿಗೆ ಸೇರಿದ ಒಟ್ಟು 8 ಸ್ಥಳಗಳಲ್ಲಿ ಶೋಧನಾ ಕಾರ್ಯ ಕೈಗೊಳ್ಳಲಾಗಿದ್ದು, 4.83 ಕೋಟಿ ರು. ಸ್ಥಿರಾಸ್ತಿ, 93.65 ಲಕ್ಷ ರು. ಸ್ಥಿರಾಸ್ತಿ ಸೇರಿದಂತೆ ಒಟ್ಟು 5.77 ಕೋಟಿ ರು. ಆಸ್ತಿ ಇರುವುದು ತಿಳಿದುಬಂದಿದೆ.

ಬಿಬಿಎಂಪಿಯ ತೆರಿಗೆ ಮೌಲ್ಯಮಾಪಕ ಎನ್.ವೆಂಕಟೇಶ್ ಅವರ ಬಂಗಲೆ.

ಒಟ್ಟು ಐದು ಸ್ಥಳಗಳಲ್ಲಿ ದಾಳಿ

ಬಿಡಿಎ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕ ಓಂಪ್ರಕಾಶ್ ಆರೋಪಿತ ಸರಕಾರಿ ನೌಕರರಿಗೆ ಸೇರಿದ ಒಟ್ಟು 5 ಸ್ಥಳಗಳಲ್ಲಿ ಶೋಧನಾ ಕಾರ್ಯ ಕೈಗೊಳ್ಳಲಾಗಿದೆ. 4.78 ಕೋಟಿ ರು. ಸ್ಥಿರಾಸ್ತಿ, 1.47 ಕೋಟಿ ರು. ಚರಾಸ್ತಿ ಸೇರಿದಂತೆ ಒಟ್ಟು 6.26 ಕೋಟಿ ರು. ಆಸ್ತಿ ಪತ್ತೆಯಾಗಿದೆ. ಬಿಬಿಎಂಪಿ ಶೆಟ್ಟಿಹಳ್ಳಿ ಉಪ ವಿಭಾಗದ ತೆರಿಗೆ ಮೌಲ್ಯಮಾಪಕ ಎನ್.ವೆಂಕಟೇಶ್‌ಗೆ ಸೇರಿದ 4 ಸ್ಥಳಗಳಲ್ಲಿ ಶೋಧನಾ ಕಾರ್ಯ ಕೈಗೊಳ್ಳಲಾಗಿದ್ದು, 2.25 ಕೋಟಿ ರು. ಸ್ಥಿರಾಸ್ತಿ, 32.50 ಲಕ್ಷ ರು. ಚರಾಸ್ತಿ ಸೇರಿದಂತೆ ಒಟ್ಟು 2.57 ಕೋಟಿ ರು. ಮೌಲ್ಯದ ಆಸ್ತಿ ಪತ್ತೆಯಾಗಿದೆ.

ಬಿಜೆಪಿ ಯುವ ಮೋರ್ಚಾದಿಂದ ಮೈಸೂರಿನಲ್ಲಿ ಇಂದು ಪ್ರತಿಭಟನೆ

ಬೆಂಗಳೂರು: ಮುಖ್ಯಮಂತ್ರಿಗಳ ತವರು ಜಿಲ್ಲೆ ಮೈಸೂರಿನಲ್ಲಿ ಮುಂಬೈ ಪೊಲೀಸರು ಮಾದಕ ವಸ್ತು ತಯಾರಿಕೆ ಪ್ರಕರಣ ಪತ್ತೆ ಮಾಡಿದ್ದು, ಈ ಸಂಬಂಧ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ ಮತ್ತು ಗೃಹ ಸಚಿವರು ರಾಜೀನಾಮೆ ಕೊಡಬೇಕು ಎಂದು ಬಿಜೆಪಿ ಯುವ ಮೋರ್ಚಾ ಆಗ್ರಹಿಸಿದೆ.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಶಾಸಕ ಧೀರಜ್ ಮುನಿರಾಜು ಮಾತನಾಡಿ, ಕಾಂಗ್ರೆಸ್ ಸರಕಾರ ಡ್ರಗ್ಸ್ ವಿರುದ್ಧ ತೀವ್ರ ಕ್ರಮ ಕೈಗೊಳ್ಳಬೇಕು. ಘಟನೆಯ ವಿರುದ್ಧ ಬಿಜೆಪಿ ಯುವ ಮೋರ್ಚಾ ಮೈಸೂರಿ ನಲ್ಲಿ ಜುಲೈ 30 ಪ್ರತಿಭಟನೆ ನಡೆಸಲಿದೆ. ಜಿಲ್ಲಾಡ ಳಿತ, ಜಿಲ್ಲಾ ಪೊಲೀಸ್ ವರಿಷ್ಠಾಧಿ ಕಾರಿಗಳ ವಿರುದ್ಧ ಪ್ರತಿಭಟನೆ ಹಮ್ಮಿಕೊಳ್ಳುತ್ತೇವೆ ಎಂದರು.

ಸರಕಾರ, ಮುಖ್ಯಮಂತ್ರಿ ಮತ್ತು ಗೃಹ ಸಚಿವರು ಘಟನೆ ಕುರಿತು ಕಠಿಣ ಕ್ರಮ ಕೈಗೊಳ್ಳಬೇಕಿದೆ. ಇಂಥ ಕೃತ್ಯಗಳಲ್ಲಿ ಬೇರೆ ಯಾರೂ ಭಾಗವಹಿಸದಂತೆ ನೋಡಿಕೊಳ್ಳ ಬೇಕಿದೆ. ಕೈ ಜೋಡಿಸಿದ ಅಧಿಕಾರಿ, ಕುಮ್ಮಕ್ಕು ಕೊಡುವ ರಾಜಕಾರಣಿ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು. ಬೆಂಗಳೂರಿನಲ್ಲೂ ಮುಂದಿನ ದಿನಗಳಲ್ಲಿ ಡ್ರಗ್ಸ್ ವಿರುದ್ಧ ಹೋರಾಟ ಮುಂದುವರೆಸಲಿದೆ. ಮುಂದೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಪ್ರತಿಭಟಿಸಲಿದ್ದೇವೆ ಎಂದರು. ಸರಕಾರವು ಪೊಲೀಸ್ ವ್ಯವಸ್ಥೆ ದುರುಪಯೋಗ ಪಡಿಸಿಕೊಂಡು, ಅಕ್ರಮ ಮಾದಕದ್ರವ್ಯ ಪೆಡ್ಲಿಂಗ್ ದುಡ್ಡಿನಿಂದ ಆಡಳಿತ ನಡೆಸುತ್ತಿದೆಯೇ ಎಂದು ಪ್ರಶ್ನಿಸಿದರಲ್ಲದೆ, ಎಐಸಿಸಿ ಅಧ್ಯಕ್ಷರ ತವರು ಜಿಲ್ಲೆಯಲ್ಲಿ ಮಾದಕವಸ್ತು ಸರಬರಾಜುದಾರ ಇದ್ದರೆ, ಉತ್ಪಾದಕನು ಮುಖ್ಯಮಂತ್ರಿಗಳ ತವರು ಜಿಲ್ಲೆಯಲ್ಲಿ ಇರುವುದಾದರೆ, ಏನು ಪ್ರಶ್ನೆ ಕೇಳಬೇಕೆಂದು ಗೊಂದಲ ಉಂಟಾಗಿದೆ. ಇದು ಒಳ್ಳೆಯ ಸಂದೇಶವಲ್ಲ ಎಂದರು.

ಜಿಲ್ಲಾ ಪಂಚಾಯತ ಬಾಗಲಕೋಟೆ
ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಬಾಗಲಕೋಟೆ
ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ 126, ನವನಗರ, ಬಾಗಲಕೋಟೆ
ದೂರವಾಣಿ : 08354–235042, ಇ–ಮೇಲ್: bgkeezpe@yahoo.com

ಸಂಖ್ಯೆ : ಕಾ.ನಿ.ಇಂ./ಪಂ.ರಾ.ಇಂ.ವಿ./ಬಿಜಿಕೆ/ಪಿಬಿ–1/ಟೆಂಡರ್/2025–26/1665
ದಿನಾಂಕ : 28–07–2025

ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಮರು ಟೆಂಡರ್ ಪ್ರಕಟಣೆ
(ಏಕ-ಲಕೋಟೆ) ಕೆ.ಡಬ್ಲ್ಯೂ. 2 ಬಿಡ್ ಡಾಕ್ಯೂಮೆಂಟ್

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ ವಿವಿಧ **ಲೆಕ್ಕ ಶೀರ್ಷಿಕೆಯಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿನ ಈ ಕೆಳಕಂಡ ಕಾಮಗಾರಿಗಳಿಗೆ** ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ.– 1 & 2 ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999 – 2000 ರ ಪ್ರಕಾರ ಆ್ಯಕ್ಟ್ 2000 ರ ನಿಯಮದಂತೆ ಏಕ–ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಬಾಗಲಕೋಟೆ ಜಿಲ್ಲೆ ರಾಜ್ಯ ವಿಪತ್ತು ಉಪಶಮನ ನಿಧಿಯ (ಎಸ್.ಡಿ.ಎಮ್.ಎಫ್) ಮಾರ್ಗಸೂಚಿನ್ವಯ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ರೂ. 43.20 ಲಕ್ಷ ಮೊತ್ತದ ಯೋಜನೆಯಡಿ ಅನುದಾನದ ಯೋಜನೆಯಡಿ ಬಾಗಲಕೋಟೆ ಜಿಲ್ಲೆ ಮುಧೋಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕಾಮಗಾರಿಗಳ ಅನುದಾನ ಅಡಿಯಲ್ಲಿ ಕಾಮಗಾರಿಗಳ ಮಂಜೂರಾಗಿರುತ್ತವೆ.

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಕಾಮಗಾರಿಗಳ ತಾಲೂಕಿನ ವ್ಯಾಪ್ತಿಯಲ್ಲಿ ಸಾಮಾನ್ಯ ವರ್ಗಕ್ಕೆ ಮೀಸಲಾದ ಕಾಮಗಾರಿಗಳ ಇಂಡೆಂಟ್ ನಂ. : RDPR/2025-26/OW/WORK_INDENT15418/Call-2, ಇದ್ದು, ಟೆಂಡರ್ ಕಾಮಗಾರಿ ವಿವರ, ಗುತ್ತಿಗೆದಾರರ ಅರ್ಹತೆ ವಿವರ, ಟೆಂಡರ್‌ಗಿಟ್ಟ ಮೊತ್ತ ರೂ. 43.20 ಲಕ್ಷಗಳ ಮಿತಿಗೊಳಪಟ್ಟು) ಟೆಂಡರ್ ಅರ್ಜಿಯ ಬೆಲೆ, ಮತ್ತು ಇ.ಎಂ.ಡಿ. ಮೊತ್ತ ಎಲ್ಲ ವಿವರಗಳು ಇ–ಪೋರ್ಟಲ್‌ನಲ್ಲಿ ಇದ್ದಂತೆ.

1) ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್–ಬಿ ಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : 04–08–2025 ರ ಸಂಜೆ 5.30 ಗಂಟೆವರೆಗೆ.
2) ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ & ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ : 06–08–2025 ರ ಬೆಳಿಗ್ಗೆ 11.00 ಗಂಟೆಯ ನಂತರ.

ಸೂಚನೆ : ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ **ವೆಬ್‌ಸೈಟ್** : https://kppp.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ ರಾಜ್ (ಇಂ) ವಿಭಾಗ,
ಬಾಗಲಕೋಟೆ.

ಡಿಐಪಿಆರ್/ಬಾಗಲಕೋಟ/188/ಮಣಿಪಾಲ್/2025–26

ಮುಂದುವರಿದ ಕಾರ್ಯಾಚರಣೆ | ಸೋಮವಾರ ರಾತ್ರಿ 5.7 ಕೆ.ಜಿ ಗಾಂಜಾ ಜಪ್ತಿ

ಮೈಸೂರಿನಲ್ಲಿ 192 ಕೆ.ಜಿ.ಡ್ರಗ್ಸ್ ವಶ

ಮೈಸೂರು: ಮೈಸೂರಿನಲ್ಲಿ ಮಾದಕ ವಸ್ತು ತಯಾರಿಕಾ ಘಟಕದಿಂದ ವಶಪಡಿಸಿಕೊಳ್ಳಲಾದ ಮೆಫೆಡ್ರೋನ್ ಎಂಬ ಡ್ರಗ್ಸ್ ಮೌಲ್ಯ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ 381.94 ಕೋಟಿ ರು. ಎನ್ನಲಾಗಿದೆ.

ಈ ಕುರಿತು ಮುಂಬೈ ಪೊಲೀಸರು ಮಾಹಿತಿ ನೀಡಿದ್ದಾರೆ ಎಂದು ಹೇಳಲಾಗಿದ್ದು, ಮೈಸೂರು ದಾಳಿಗೂ ಮುಂಚೆ 8 ಕೋಟಿ ರು. ಮೌಲ್ಯದ 5 ಕೆ.ಜಿ.ಮೆಫೆಡ್ರೋನ್ ಡ್ರಗ್ಸ್ ಸಿಕ್ಕಿತ್ತು. ಮೈಸೂರು ದಾಳಿ ನಂತರ 187.97 ಕೆ.ಜಿ.ಮೆಫೆಡ್ರೋನ್ ಡ್ರಗ್ಸ್ ಸಿಕ್ಕಿದ್ದು, ಅದರ ಮೌಲ್ಯ 382 ಕೋಟಿ ರು. ಆಗಿದೆ. ಒಟ್ಟಾರೆ 390 ಕೋಟಿ ರು. ಮೌಲ್ಯದ 192 ಕೆ.ಜಿ. ಡ್ರಗ್ಸ್ ಇಡೀ ಪ್ರಕರಣದಲ್ಲಿ ಈವರೆಗೆ ಸಿಕ್ಕಿದೆ ಎಂದು ಮಾಹಿತಿ ನೀಡಿದ್ದಾರೆ ಎಂದು ಗೊತ್ತಾಗಿದೆ.

ಮುಂಬೈ ಪೊಲೀಸರು ಮೈಸೂರು ನಗರ ಪೊಲೀಸರ ಸಹಕಾರದೊಂದಿಗೆ ನರಸಿಂಹರಾಜ ಠಾಣಾ ವ್ಯಾಪ್ತಿಯ ರಿಂಗ್ ರಸ್ತೆಗೆ ಹೊಂದಿಕೊಂಡಂತೆ ಇರುವ ಗ್ಯಾರೇಜ್ ಮೇಲೆ ದಾಳಿ ನಡೆಸಿದ್ದರು. ಈ ವೇಳೆ ಹಳದಿ ಬಣ್ಣ ಹೊಂದಿರುವ ಬಿಳಿಪುಡಿ, ಹರಳುಗಳು, ಕ್ಯಾಪ್ಸುಲ್‌ಗಳು, ಮಾತ್ರೆಗಳ ರೂಪದಲ್ಲಿರುವ ಮೆಫ್, ಮಿಯಾವ್, ಎಂ–ಕ್ಯಾಟ್, ವೆಜ್, ಡ್ರೋನ್, ಬಬಲ್ಸ್, ಕಿಟ್ಟಿ ಕ್ಯಾಟ್ ಎಂದು ಕರೆಯಲಾಗುವ ಪದಾರ್ಥಗಳು ದೊರೆತಿದೆ ಎಂದು ಹೇಳಲಾಗಿದೆ.

ಮುಂದುವರಿದ ಕಾರ್ಯಾಚರಣೆ: ಮೈಸೂರು ನಗರ ಪೊಲೀಸರು ಗಾಂಜಾ ಅಡ್ಡೆಗಳ ಮೇಲೆ ಎರಡನೇ ದಿನವೂ ಕಾರ್ಯಾಚರಣೆ ಮುಂದುವರಿಸಿದ್ದು, ಸೋಮವಾರ ರಾತ್ರಿ 5.7 ಕೆ.ಜಿ ಗಾಂಜಾ ವಶಪಡಿಸಿಕೊಂಡಿದ್ದಾರೆ. ಮಂಡಿ ಮೊಹಲ್ಲಾ, ಉದಯಗಿರಿ, ಎನ್‌ಆರ್ ಮೊ ಹಲ್ಲಾ, ನಜರ್ ಬಾದ್, ಕೆ.ಆರ್.ಮೊಹಲ್ಲಾದಲ್ಲಿ ನಗರ ಪೊಲೀಸ್ ಆಯುಕ್ತರ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿ 26 ಜನ ಗಾಂಜಾ ಸೇವಿಸಿದವರನ್ನು ಹಾಗೂ 6 ಪೆಡ್ಲರ್‌ಗಳನ್ನು ವಶಕ್ಕೆ ಪಡೆದಿದ್ದಾರೆ. 12 ಆರೋಪಿಗಳ ವಿಚಾರಣೆ ನಡೆಸಿದ್ದಾರೆ.

ಮೈಸೂರು ನಗರ ಪೊಲೀಸರು ಗಾಂಜಾ ಅಡ್ಡೆಗಳ ಮೇಲೆ ಎರಡನೇ ದಿನವೂ ಕಾರ್ಯಾಚರಣೆ

ಕಾರ್ಯಾಚರಣೆಗೆ ಡಿಸಿಪಿ ಹಾಗೂ ಎಸಿಪಿ ನೇತೃತ್ವದ ಏಳು ಹಾಗೂ ಎಸ್‌ಐಗಳ ನೇತೃತ್ವದಲ್ಲಿ ಏಳು ತಂಡ ರಚಿಸಲಾಗಿದೆ. ಈ ಪ್ರಕ್ರಿಯೆ ನಿರಂತರವಾಗಿ ನಡೆಯಲಿದೆ.
-**ಸೀಮಾ ಲಾಟ್ಕರ್,** ನಗರ ಪೊಲೀಸ್ ಆಯುಕ್ತೆ

ಅಮಾನತು ವಾಪಾಸ್

ದೇಶದ ಗಮನ ಸೆಳೆದ ಡ್ರಗ್ ಪ್ರಕರಣದಲ್ಲಿ ಕರ್ತವ್ಯಲೋಪದ ಆರೋಪದಲ್ಲಿ ಅಮಾನತುಗೊಂಡಿದ್ದ ನರಸಿಂಹರಾಜ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಲಕ್ಷ್ಮಿಕಾಂತ ಕೆ.ತಳವಾರ್ ಅವರ ಅಮಾನತು ಆದೇಶವನ್ನು ತಡೆ ಹಿಡಿಯಲಾಗಿದ್ದು, ಕರ್ತವ್ಯಕ್ಕೆ ಹಾಜರಾಗಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ, ಸಿಎಂ, ಡಿಸಿಎಂ ಸೇರಿದಂತೆ ಕಾಂಗ್ರೆಸ್ ನಾಯಕರು ಸಾಥ್

ಆ.4ಕ್ಕೆ ಬೆಂಗಳೂರಲ್ಲಿ ರಾಗಾ ಪಾದಯಾತ್ರೆ

ಬೆಂಗಳೂರು: ರಾಷ್ಟ್ರ ರಾಜಕಾರಣದಲ್ಲಿ ಭಾರಿ ವಿವಾದಕ್ಕೆ ಕಾರಣವಾಗಿರುವ 'ಮತಗಳ್ಳತನ' ಆರೋಪವನ್ನು ಮುಂದಿನ ಹಂತಕ್ಕೆ ತೆಗೆದುಕೊಂಡು ಹೋ ಗಲು ಮುಂದಾಗಿರುವ ಕಾಂಗ್ರೆಸ್, ಇದೀಗ ಆಗಸ್ಟ್ 4ರಂದು ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಲು ತೀರ್ಮಾನಿಸಿದೆ. ಈ ಪ್ರತಿಭಟನೆಯಲ್ಲಿ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಭಾಗವಹಿಸಲಿದ್ದಾರೆ.

ಲೋಕಸಭಾ ಮತ್ತು ವಿಧಾನಸಭೆ ಚುನಾವಣೆಗಳಲ್ಲಿ ಮತಗಳ್ಳತನ ನಡೆಯುತ್ತಿದೆ ಎಂದು ಆರೋಪಿಸಿದ್ದ ರಾಹುಲ್ ಗಾಂಧಿ ಚುನಾವಣಾ ಆಯೋಗದ ವಿರುದ್ಧ ಹೋರಾಟ ನಡೆಸಲು ತೀರ್ಮಾನಿಸಿದ್ದು, ಆ.4ರಂದು ಬೆಂಗಳೂರಿನ ಮಹಾದೇವಪುರ ಕ್ಷೇತ್ರದಿಂದ ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿವರೆಗೂ ರಾಹುಲ್ ಗಾಂಧಿ ಪಾದಯಾತ್ರೆ ನಡೆಸಲಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಸೇರಿದಂತೆ ರಾಜ್ಯ ಕಾಂಗ್ರೆಸ್ ನಾಯಕರು ಸಾಥ್ ನೀಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಇತ್ತೀಚೆಗೆ ಬಿಹಾರದಲ್ಲಿ ಚುನಾವಣಾ ಆಯೋಗ ನಡೆಸುತ್ತಿರುವ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ವಿರೋಧಿಸಿ ಬಿಹಾರದಲ್ಲೂ ಆಯೋಗದ ವಿರುದ್ಧ ಪ್ರತಿಭಟನೆ ನಡೆಸಿ ಆರೋಪಿಸಿದ್ದರು. ಜತೆಗೆ ಈ ಬಗ್ಗೆ ದೆಹಲಿಯಲ್ಲಿ ಮಾತನಾಡಿದ್ದ ರಾಹುಲ್ ಗಾಂಧಿ ತಮ್ಮ ಆರೋಪವನ್ನು ಪುನರುಚ್ಚರಿಸಿದ್ದರು. ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲೂ ಅಕ್ರಮ ನಡೆದಿದ್ದು ಮತಗಳ್ಳತನ ನಡೆದಿದೆ. ನಾವು ಒಂದು ಲೋಕಸಭಾ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಿದ್ದು ಚುನಾವಣಾ ಆಯೋಗದ ಮೋಸದಾಟ ಬಯಲಾಗಿದೆ. ಈ ಬಗ್ಗೆ, ನಾನು ಬ್ಲಾಕ್ ಅಂಡ್ ವೈಟ್‌ನಲ್ಲಿ ಬರೆದು ಕೊಡುವೆ ಎಂದು ಸವಾಲು ಹಾಕಿದ್ದರು.

ಮಹದೇವಪುರದಿಂದ ಪಾದಯಾತ್ರೆ

ಬೆಂಗಳೂರು ಕೇಂದ್ರದಲ್ಲಿ ಈ ಮತಗಳ್ಳತನ ನಡೆದಿದೆ ಎನ್ನುವ ಮಾತುಗಳು ಕೇಳಿಬಂದಿದ್ದು, ಈ ಹಿನ್ನೆಲೆಯಲ್ಲಿ ಮಹದೇವಪುರದಿಂದ ಪಾದಯಾತ್ರೆ ನಡೆಸಲು ತೀರ್ಮಾನಿಸಲಾಗಿದೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಮನ್ಸೂರ್ ಅಲಿ ಖಾನ್ 83,381 ಮತಗಳ ಲೀಡ್ ಪಡೆದಿದ್ದರು. ಉತ್ತಮ ಲೀಡ್ ಹಿನ್ನೆಲೆಯಲ್ಲಿ ಗೆಲುವು ನಿಶ್ಚಿತ ಎಂದು ಭಾವಿಸಿದ ಕಾಂಗ್ರೆಸ್ ಬೆಂಬಲಿಗರು ಮತ ಎಣಿಕೆ ಕೇಂದ್ರದ ಎದುರು ಸಂಭ್ರಮಾಚರಣೆ ಆರಂಭಿಸಿದ್ದರು. ಆದರೆ ಕೊನೆ ಸುತ್ತಿನಲ್ಲಿ ಸಿವಿ ರಾಮನ್ ನಗರ ಗಾಂಧಿನಗರ ಮತ್ತು ಮಹದೇವಪುರದಲ್ಲಿ 35,000–40,000 ಮತಗಳ ಅಂತರದಿಂದ ರೋಚಕ ತಿರುವು ಪಡೆದು ಗೆಲುವು ಸಾಧಿಸಿದ್ದರು. ಆದ್ದರಿಂದ ಮಹಾದೇವಪುರ ಕ್ಷೇತ್ರದಲ್ಲಿಯೇ ಮತಗಳ್ಳನ ನಡೆದಿದೆ ಎಂದು ಅಂದಾಜಿಸಿ, ರಾಹುಲ್ ಗಾಂಧಿ ಹೋರಾಟ ಪ್ರಾರಂಭಿಸಲಿದ್ದು, ಪಾದಯಾತ್ರೆ ಮಾಡುತ್ತಿದ್ದಾರೆ ಎಂದು ತಿಳಿದುಬಂದಿದೆ.

ಚಿನ್ನದಂಗಡಿ ದರೋಡೆ: ಮತ್ತಿಬ್ಬರ ಬಂಧನ

ಕಲಬುರಗಿ: ಕಳೆದ ಜುಲೈ 11 ರಂದು ನಗರದ ಸರಾಫ್ ಬಜಾರ್‌ನಲ್ಲಿ ಹಾಡಹಗಲೇ ನಡೆದ ಚಿನ್ನಂದಗಡಿ ದರೋಡೆ ಪ್ರಕರಣದಲ್ಲಿ ಮತ್ತಿಬ್ಬರನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಚಿನ್ನದಂಗಡಿ ದರೋಡೆ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ಮಹಾರಾಷ್ಟ್ರ ಮೂಲದ ಅರಬಾಜ್ (22) ಹಾಗೂ ಸಾಜೀದ್ (25) ಬಂಧಿತ ಆರೋಪಿಗಳಾಗಿದ್ದಾರೆ. ಬಂಧಿತರಿಂದ ಕೃತ್ಯಕ್ಕೆ ಬಳಸಿದ ಮಾರಕಾಸ್ತ್ರ ಹಾಗೂ ನಕಲಿ ಲೈಟರ್ ಗನ್ ವಶಕ್ಕೆ ಪಡೆಯಲಾಗಿದೆ. ಪ್ರಕರಣ ಸಂಬಂಧ ಈಗಾಗಲೇ 3 ಜನರನ್ನ ಬಂಧಿಸಿ 2,865 ಗ್ರಾಂ ಚಿನ್ನವನ್ನು ಪೊಲೀಸರು ವಶಪಡಿಸಿಕೊಂಡಿದ್ದು, ಇದೀಗ ಬಂಗಾರದಂಗಡಿ ದರೋಡೆ ಪ್ರಕರಣದಲ್ಲಿ ಇನ್ನಿಬರನ್ನು ಬಂಧಿಸುವ ಮೂಲಕ ಒಟ್ಟು ಐವರ ಬಂಧನವಾಗಿದೆ. ಈ ಕುರಿತು ಬ್ರಹ್ಮಪೂರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೃಷಿ ವಿಶ್ವವಿದ್ಯಾನಿಲಯ
ಆಸ್ತಿ ಅಧಿಕಾರಿಗಳ ಕಛೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು–65

ಸಂಖ್ಯೆ.ಆಅ/ಟಿ.ಎನ್/5/2025–26, ದಿನಾಂಕ : 22–07–2025

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವಿವಿಧ ಆವರಣಗಳಲ್ಲಿ ಸಿವಿಲ್ ಮತ್ತು ವಿದ್ಯುತ್ ಕಾಮಗಾರಿ ಕೆಲಸಗಳಿಗೆ **ಮೂರನೇ ವ್ಯಕ್ತಿಯ ಪರಿಶೀಲನೆಗಾಗಿ ಹೆಸರಾಂತ ಗುಣಮಟ್ಟ ತಪಾಸಣಾ** ಸಂಸ್ಥೆಗಳಿಂದ ದ್ವಿಲಕೋಟೆ ಪದ್ಧತಿಯಲ್ಲಿ 2 ವರ್ಷಗಳ ಅವಧಿಗೆ ಟೆಂಡರನ್ನು ಕರೆಯಲಾಗಿದೆ. ಟೆಂಡರ್ ಪ್ರಕಟಣೆಯ ವಿವರ, ಟೆಂಡರ್ ದಾಖಲಾತಿ ವಿವರಗಳು ವೆಬ್‌ಸೈಟ್: www.kppp.karnataka.gov.in ರಲ್ಲಿ ದೊರೆಯುತ್ತದೆ. ಟೆಂಡರ್ ಡಾಕ್ಯುಮೆಂಟ್‌ನ ಶುಲ್ಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಮತ್ತು ಇ.ಎಂ.ಡಿ. ಮೊತ್ತ ರೂ.50,000/–ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮಾದರಿಯಂತೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು.

ಖಾಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು www.kppp.karnataka.gov.in ಇಂದ ಪಡೆಯಬಹುದು ಮತ್ತು ಟೆಂಡರ್ ಸಲ್ಲಿಸುವ ಕೊನೆ ದಿನಾಂಕ : **20–8–2025ರಂದು ಅಪರಾಹ್ನ 4 ಗಂಟೆಯವರೆಗೆ** ಆಗಿರುತ್ತದೆ. ತಾಂತ್ರಿಕ ಬಿಡ್ಡನ್ನು ದಿನಾಂಕ : **22–8–2025ರಂದು ಬೆಳಗ್ಗೆ 10.30ಕ್ಕೆ** ತೆರೆಯಲಾಗುವುದು. ಹಣಕಾಸಿನಬಿಡ್ಡನ್ನು ದಿನಾಂಕ: **29–8–2025ರಂದು ಬೆಳಗ್ಗೆ 10.30ಕ್ಕೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿಯ ವೇಳೆಯಲ್ಲಿ ದೂರವಾಣಿ ಸಂಖ್ಯೆ.080–23332765ರಲ್ಲಿ ಸಂಪರ್ಕಿಸುವುದು. ಇ–ಪ್ರೊಕ್ಯೂರ್‌ಮೆಂಟ್‌ನ ಸಹಾಯವಾಣಿ – support@ eprochelpdesk.com ಮತ್ತು 080–23010900 / 01 ಮತ್ತು 080–38013000.

ಸಹಿ/–
ಆಸ್ತಿ ಅಧಿಕಾರಿ

ವಾ.ಸಾ.ಸಂ.ಇ/ವಾಪ್ರ/2079/ಆಕಾರ್/2025–26

ರಾಜ್ಯದ ಪ್ರಮುಖ ಜಲಾಶಯಗಳು ಭರ್ತಿ

← ಮೊದಲಪುಟದಿಂದ

ಕಾವೇರಿ ಜಲಾನಯನ ಪ್ರದೇಶದಲ್ಲಿರುವ ಜಲಾಶಯ ಗಳಲ್ಲಿ ಅವುಗಳ ಸಾಮರ್ಥ್ಯದ ಸುಮಾರು ಶೇ.95ರಷ್ಟು ನೀರು ಈಗಾಗಲೇ ಸಂಗ್ರಹವಾಗಿದೆ. ಹೇಮಾವತಿ ಮತ್ತು ಕೆಆರ್‌ಎಸ್ ಶೇ.97ರಷ್ಟು ಭರ್ತಿಯಾಗಿವೆ. ಹಳೆಯ ಮೈಸೂರು ಪ್ರದೇಶದ ಜೀವನಾಡಿ ಎಂದು ಪರಿಗಣಿಸ ಲಾದ ಕೆಆರ್‌ಎಸ್, 1958 ರ ನಂತರ ಮೊದಲ ಬಾರಿಗೆ ಜೂನ್‌ನಲ್ಲಿ ಗರಿಷ್ಠ ಸಾಮರ್ಥ್ಯವನ್ನು ತಲುಪಿತ್ತು. ಒಟ್ಟು ಸಾಮರ್ಥ್ಯ 49.45 ಟಿಎಂಸಿ ಅಡಿಗಳಾಗಿದ್ದು, 47.79 ಟಿಎಂಸಿ ಅಡಿ ನೀರನ್ನು ಸಂಗ್ರಹಿಸಿದೆ. ಕಾವೇರಿ ಜಲಾನಯನ ಪ್ರದೇಶದಲ್ಲಿ ಹಾರಂಗಿ ಜಲಾಶಯದಲ್ಲಿ ತುಸು ಕಡಿಮೆ ನೀರು ಸಂಗ್ರಹ ವಾಗಿದ್ದು, ಒಟ್ಟು 8.5 ಟಿಎಂಸಿ ಅಡಿಗಳಲ್ಲಿ ಶೇ.79 ರಷ್ಟು ಭರ್ತಿಯಾಗಿದೆ. ಜಲಾಶಯದ ಒಳಹರಿ ವಿಗಿಂತ ಹೊರಹರಿವು ಹೆಚ್ಚಿರುವುದರಿಂದ ಸಂಗ್ರಹ ಕಡಿಮೆ ಇದೆ. ಆದರೆ, ಬೇಸಿಗೆಯ ತಿಂಗಳುಗಳಲ್ಲಿ ನೀರಾವರಿ ಮತ್ತು ಕುಡಿಯಲು ಸಾಕಷ್ಟು ನೀರನ್ನು ಸಂಗ್ರಹಿಸಿಟ್ಟುಕೊಳ್ಳುವ ಭರವಸೆ ಇದೆ ಎಂದು ಜಲಾಶಯದ ನಿರ್ವಹಣೆ ಅಧಿಕಾರಿಗಳು ಹೇಳಿದ್ದಾರೆ.

ಶಾಸಕರ ಸಮಸ್ಯೆ ಆಲಿಸಿದ ಸಿಎಂ

← ಮೊದಲಪುಟದಿಂದ

ಸಭೆಯಲ್ಲಿ ಬಜೆಟ್‌ನಲ್ಲಿ ಘೋಷಿಸಿದ್ದ ವಿಶೇಷ ಅನುದಾನಕ್ಕೆ ಸಂಬಂಧಿಸಿದಂತೆ ಚರ್ಚಿಸಲಾಗಿದೆ. ಈಗಾಗಲೇ 50 ಕೋಟಿ ರು. ಅನು ದಾನ ನೀಡುವುದಾಗಿ ಸಿಎಂ ಘೋಷಿಸಿದ್ದು, ಈ ಅನುದಾನದಲ್ಲಿ ಯಾವೆಲ್ಲ ಯೋಜನೆ ಕೈಗೆತ್ತಿಕೊಳ್ಳಲು ತೀರ್ಮಾನಿಸಲಾಗಿದೆ? ಶಾಸಕರ ವಿವೇಚನಾ ಅನುದಾನವನ್ನು ಯಾವ ಕಾರ್ಯಕ್ಕೆ ಬಳಸಿಕೊಳ್ಳಲಾಗುತ್ತಿದೆ ಎನ್ನುವ ಬಗ್ಗೆ ಶಾಸಕರಿಂದ ಮಾಹಿತಿ ಪಡೆದಿದ್ದಾರೆ. ಇದರೊಂದಿಗೆ ಕೆಲ ಜಿಲ್ಲೆಗಳ ಉಸ್ತುವಾರಿ ಸಚಿವರುಗಳ ಬಗ್ಗೆಯಿರುವ ಅಸಮಾಧಾನದ ಬಗ್ಗೆಯೂ ಚರ್ಚಿಸಲಾಗಿದ್ದು, ಮುಂದೆ ಎಲ್ಲರೂ ಒಂದಾಗಿ ಸಂಘಟಿಸುವಂತೆ ಸೂಚನೆ ನೀಡಿದ್ದಾರೆ.

ಡಿಸಿಎಂ ಅಧಿಕಾರಿಗಳೊಂದಿಗೆ ಪ್ರತ್ಯೇಕ ಸಭೆ: ಈ ಸಭೆ ಶಾಸಕರ ಅನುದಾನ ಹಂಚಿಕೆ, ಅಸಮಾಧಾನಕ್ಕೆ ಸಂಬಂಧಿಸಿದ ಸಭೆ ಎನಿಸಿದ್ದರೂ ಪಕ್ಷದ ಸಂಘಟನೆ ಆಂತರಿಕ ಕಿತ್ತಾಟಗಳ ಬಗ್ಗೆಯೂ ಚರ್ಚೆ ನಡೆದಿದೆ. ಆದ್ದರಿಂದ ಈ ಸಭೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ಆಹ್ವಾನಿಸಲಾಗುತ್ತದೆ ಎಂದು ಹೇಳಲಾಗಿತ್ತು. ಆದರೆ ಸಂಬಂಧಿಸಿದ ಉಸ್ತುವಾರಿ ಸಚಿವರಿಗೆ ಮಾತ್ರ ಆಹ್ವಾನ ನೀಡಿರುವುದು ಪಕ್ಷದಲ್ಲಿ ಎಲ್ಲವೂ ಸರಿಯಿಲ್ಲ ಎನ್ನುವ ಅನುಮಾನಕ್ಕೆ ಪುಷ್ಟಿ ನೀಡಿದೆ.

ಸಭೆಗೆ ಆಹ್ವಾನ ನೀಡದಿರುವ ಬಗ್ಗೆ ಡಿಸಿಎಂ ಡಿಕೆಶಿ 'ಅತ್ಯಾಪ್ತ'ರ ಬಳಿ ಬೇಸರ ವ್ಯಕ್ತಪಡಿಸಿದ್ದರೂ, ಈ ಬಗ್ಗೆ ಬಹಿರಂಗವಾಗಿ ಯಾವುದೇ ಹೇಳಿಕೆ ನೀಡದಿರಲು ತೀರ್ಮಾನಿಸಿದ್ದಾರೆ. ಇನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡಿಕೆಶಿ ಅವರಿಗೆ ಆಹ್ವಾನ ನೀಡದಿದ್ದರೂ, ಡಿ.ಕೆ.ಶಿವಕುಮಾರ್ ಅವರು ವಿಧಾನಸೌಧದಲ್ಲಿ ಬೆಂಗಳೂರು ಅಭಿವೃದ್ಧಿಗೆ ಸಂಬಂಧಿಸಿದಂತೆ ಇಡೀ ದಿನ ಪ್ರತ್ಯೇಕ ಸಭೆ ನಡೆಸಿದ್ದು ತೀವ್ರ ಚರ್ಚೆಗೆ ಗ್ರಾಸವಾಗಿದೆ. ಶಾಸಕರೊಂದಿಗಿನ ಸಭೆಗೆ ಸಿಎಂ ಆಹ್ವಾನಿಸದಿರುವುದಕ್ಕೆ ಯಾವುದೇ ಆಕ್ಷೇಪವಿಲ್ಲವೆಂದರೂ, ಬೆಂಗಳೂರು ಅಭಿವೃದ್ಧಿಯ 'ಅಜೆಂಡಾ'ದ ಹಿನ್ನೆಲೆಯಲ್ಲಿ ತಾವು ಪ್ರತ್ಯೇಕ ಸಭೆ ನಡೆಸಿರುವುದಾಗಿ ಹೇಳಿದ್ದಾರೆ. ಆರಂಭದಲ್ಲಿ ಇದು ಕೇವಲ ಅಧಿಕಾರಿಗಳ ಸಭೆ ಎನ್ನಲಾಗಿತ್ತು. ಆದರೆ ಬಳಿಕ ಬಿಡಿಎ ಅಧ್ಯಕ್ಷ, ಶಾಸಕ ಎನ್.ಎ.ಹ್ಯಾರೀಸ್, ಶಿವಾಜಿನಗರ ಶಾಸಕ ರಿಜ್ವಾನ್ ಅರ್ಷದ್ ಭಾಗವಹಿಸಿದ್ದರು.

ಜಗತ್ತಿನ ಯಾವ ನಾಯಕನೂ ಕದನ ವಿರಾಮಕ್ಕೆ ಪ್ರಯತ್ನಿಸಿಲ್ಲ

← ಮೊದಲಪುಟದಿಂದ

ಆ ಸಂದರ್ಭದಲ್ಲಿ ನಾವು ಸೇನೆಗೆ ಮುಕ್ತ ಸ್ವಾತಂತ್ರ್ಯ ಕೊಟ್ಟಿದ್ದೆವು. ಕಾರ್ಯಾಚರಣೆಗೂ ಮುಂಚೆ ನಡೆದ ಭದ್ರತಾ ಪಡೆಗಳ ಮುಖ್ಯಸ್ಥರ ಸಭೆಯಲ್ಲಿ ಕಾರ್ಯಾಚರಣೆಯ ವೇಳೆ, ಯಾವಾಗ ಏನು ನಿರ್ಧಾರಗಳನ್ನು ಕೈಗೊಳ್ಳಬೇಕು ಎಂಬುದನ್ನು ಸೇನಾ ಪಡೆಗಳೇ ನಿರ್ಧರಿಸಲಿ ಎಂದು ಅವರಿಗೇ ಜವಾಬ್ದಾರಿಯನ್ನು ನೀಡಲಾಗಿತ್ತು ಎಂದು ಪ್ರಧಾನಿ ತಿಳಿಸಿದರು.

ಆತ್ಮನಿರ್ಭರ ಭಾರತದ ಸಂಕೇತ 'ಆಪರೇಷನ್ ಸಿಂದೂರ': ಆಪರೇಷನ್ ಸಿಂದೂರ ಕೇವಲ ಒಂದು ಕಾರ್ಯಾ ಚರಣೆಯಾಗಿರಲಿಲ್ಲ. ಬದಲಿಗೆ, ಅದು ನಮ್ಮ ಸ್ವಾಭಿಮಾನದ ಸಂಕೇತವಾಗಿತ್ತು. ಆತ್ಮನಿ ರ್ಭರ ಭಾರತದ ತಾಕತ್ತನ್ನು ಇದೇ ಮೊದಲ ಬಾರಿಗೆ ಇಡೀ ಜಗತ್ತಿಗೆ ಸಾರಿ ಹೇಳಿತ್ತು. ನಮ್ಮ ಶತ್ರುಗಳನ್ನು ಸದೆಬಡಿಯುವಲ್ಲಿ ನಾವು ಯಾರನ್ನೂ ಕೇಳಬೇಕಿಲ್ಲ. ನಾವೇನು ಮಾಡಬೇಕೋ ಅದನ್ನು ಕಂಡಿತ ಮಾಡಿಯೇ ತೀರುತ್ತೇವೆ ಎಂಬ ಸಂದೇಶವನ್ನು ಜಗತ್ತಿನ ಎಲ್ಲ ರಾಷ್ಟ್ರಗಳಿಗೆ ಮುಟ್ಟಿಸಿತು ಭಾರತ. ಆಪರೇಷನ್ ಸಿಂದೂರ ವೇಳೆ ಉಡಾಯಿಸಲಾದ ನಮ್ಮ ಡ್ರೋನ್‌ಗಳು ಹಾಗೂ ಕ್ಷಿಪಣಿಗಳು ಕೇವಲ ಭಾರತದ ಶಸ್ತ್ರಾಸ್ತ್ರಗಳ ತಾಕತ್ತೇನು ಎಂಬುದನ್ನು ತೋರಿ ಸಲಿಲ್ಲ, ಬದಲಿಗೆ, ಪಾಕಿಸ್ತಾನದ ಶಸ್ತ್ರಾಸ್ತ್ರಗಳು ಎಂಥಾ ಕಳಪೆ ಮಟ್ಟದ್ದು ಎಂಬುದನ್ನೂ ಸಹ ಜಗಜ್ಜಾಹೀರು ಮಾಡಿತು ಎಂದು ಮೋದಿ ತಿಳಿಸಿದರು.

ಪಾಕ್‌ನ ಅನೇಕ ವಾಯುನೆಲೆಗಳಿನ್ನೂ ಐಸಿಯುನಲ್ಲಿವೆ: ಆಪರೇಷನ್ ಸಿಂದೂರ ಕಾರ್ಯಾಚರಣೆ ವೇಳೆ ಧ್ವಂಸಗೊಂಡಿರುವ ಪಾಕಿಸ್ತಾನದ ವಾಯು ನೆಲೆಗಳು ಇನ್ನೂ ಐಸಿಯುನಲ್ಲಿವೆ. ಇವು ಇನ್ನೂ ಪುನರುತ್ಥಾನವಾಗಿಲ್ಲ. ಅಷ್ಟು ಭೀಕರವಾಗಿ ದಾಳಿ ಮಾಡಿದ್ದೇವೆ. ನಮ್ಮ ದಾಳಿಗೆ ಬೆಂಡಾದ ಪಾಕಿಸ್ತಾನ, ಅಯ್ಯಾ ಸಾಕು ಮಾಡಯ್ಯಾ ಹೊಡೆಯೋದನ್ನ ಎಂಬಂಥ ದೈನೇಸಿ ಸ್ಥಿತಿಗೆ ಬಂದಿತ್ತು ಎಂದು ಮೋದಿ ಹೇಳಿದರು.

ಕೃಷ್ಣಾ ನದಿ ಪಾತ್ರದಲ್ಲಿ ಪ್ರವಾಹ ಪರಿಸ್ಥಿತಿ | 10ಕ್ಕೂ ಅಧಿಕ ಕೆಳಹಂತದ ಸೇತುವೆಗಳು ಜಲಾವೃತ

ಮಳೆಗೆ ಉಕ್ಕಿ ಹರಿಯುತ್ತಿರುವ ನದಿಗಳು



ಕೃಷ್ಣಾ ನದಿ ನೀರಿನ ಮಟ್ಟ ಏರಿಕೆಯಾದ ಹಿನ್ನಲೆಯಲ್ಲಿ ರಾಯಬಾಗ ತಾಲೂಕಿನ ಕುಡಚಿ – ಉಗಾರ ಸೇತುವೆ ಜಲಾವೃತವಾಗಿರುವುದು.

ಕಂಪ್ಲಿ ತುಂಗಭದ್ರಾ ನದಿಗೆ ಜಲಾಶಯದಿಂದ ಅಧಿಕ ನೀರು ಹರಿದು ಬರುತ್ತಿದ್ದು, ಸಂಪರ್ಕ ಸೇತುವೆ ಮುಳುಗಡೆ ಯಾಗಿರುವ ದೃಶ್ಯ

ಬೆಂಗಳೂರು: ರಾಜ್ಯದಲ್ಲಿ ಮಳೆ ಆರ್ಭಟ ಮುಂದುವರಿದಿದೆ. ಮಹಾರಾಷ್ಟ್ರದ ಪಶ್ಚಿಮಘಟ್ಟ ಪ್ರದೇಶದಲ್ಲಿ ಮಳೆ ಆರ್ಭಟ ಮುಂದುವರಿದ ಪರಿಣಾಮ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಉಪವಿಭಾಗದ ಕೃಷ್ಣಾ ನದಿ ಪಾತ್ರದಲ್ಲಿ ಪ್ರವಾಹ ಪರಿಸ್ಥಿತಿ ಎದುರಾಗಿದೆ. ತುಂಗಭದ್ರಾದಿಂದ ನೀರು ಬಿಡುಗಡೆ ಮಾಡಿರುವುದರಿಂದ ಜನ ಜೀವನ ಅಸ್ತವ್ಯಸ್ತವಾಗಿದೆ.

10ಕ್ಕೂ ಅಧಿಕ ಕೆಳಹಂತದ ಸೇತುವೆಗಳು ಜಲಾವೃತ: ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಉಪವಿಭಾಗದ ಕೃಷ್ಣಾ ನದಿ ಪಾತ್ರದಲ್ಲಿ ಮಂಗಳವಾರ ದಿಢೀರ್ ನೀರಿನ ಮಟ್ಟ ಏರಿಕೆಯಾದ ಪರಿಣಾಮ 10 ಕ್ಕೂ ಅಧಿಕ ಕೆಳಹಂತದ ಸೇತುವೆಗಳು ಜಲಾವೃತಗೊಂಡಿವೆ. ಮಹಾರಾಷ್ಟ್ರದಿಂದ ಕೃಷ್ಣಾ ನದಿಗೆ 1 ಲಕ್ಷ 35 ಸಾವಿರ ಕ್ಯೂಸೆಕ್ ನೀರಿನ ಒಳಹರಿವು ಇದ್ದು ರಾಯಬಾಗ ತಾಲೂಕಿನ ಕುಡಚಿ ಸೇತುವೆ ಜಲಾವೃತಗೊಂಡಿದೆ. ಇದರಿಂದ ಬಾಗಲ ಕೋಟೆ ಯಿಂದ ಕುಡಚಿ ಮಾರ್ಗವಾಗಿ ಮಹಾರಾಷ್ಟ್ರಕ್ಕೆ ಸಾಗುವ ರಸ್ತೆ ಮುಳುಗಡೆಯಾಗಿದ್ದು ವಾಹನ ಸವಾರರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಮಹಾರಾಷ್ಟ್ರದ ಪಂಚಗಂಗಾ ನದಿ ನೀರಿನ ಮಟ್ಟ ಏರಿಕೆಯಾಗಿರುವ ಹಿನ್ನಲೆಯಲ್ಲಿ ಪಂಚಗಂಗಾ ಹಾಗೂ ಕೃಷ್ಣಾ ನದಿ ಸಂಗಮವಾದ ನರಸಿಂಹವಾಡಿ ದತ್ತ ಮಂದಿರ ಜಲಾವೃತ ಗೊಂಡಿದೆ. ಇದರಿಂದ ನೀರಿ ನಡುವೆ ಭಕ್ತರು ದೇವರ ದರ್ಶನ ಪಡೆಯುವಂತಾಗಿದೆ.

ಮುಂದುವರಿದ ತುಂಗಭದ್ರಾ ನದಿ ಪ್ರವಾಹ: ತುಂಗಭದ್ರಾ ನದಿಗೆ ಜಲಾಶಯದಿಂದ ಸುಮಾರು 1,05,000 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ವಿವಿಧೆಡೆ ಜಲಾವೃತ, ಜನಜೀವನ ಅಸ್ತವ್ಯಸ್ತ, ಕಂಪ್ಲಿ–ಗಂಗಾವತಿ ಸಂಪರ್ಕ ಕಡಿತ ಮುಂದುವರಿದಿದೆ. ನದಿ ಭರ್ತಿಯಾಗಿ ಹರಿಯುತ್ತಿರುವುದರಿಂದ ನದಿ ಪಾತ್ರದ ತಗ್ಗು ಪ್ರದೇಶದ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಬೆಳೆದಿರುವ ಬಾಳೆ, ಕಬ್ಬಿನ ಗದ್ದೆಗಳಿಗೆ ನೀರು ನುಗ್ಗಿದೆ. ಕೋಟೆ ಬನವಾಸಿ ರಸ್ತೆಗೆ ನದಿ ನೀರು ನುಗ್ಗಿರುವುದರಿಂದ ಹೊಲ, ಗದ್ದೆಗಳಿಗೆ ನೀರಿನಲ್ಲಿಯೇ ನಡೆದುಕೊಂಡು ಹೋಗುವಂಥ ಪರಿಸ್ಥಿತಿ ರೈತರಿಗೆ ಎದುರಾಗಿದೆ. ಕೋಟೆ ಗಂಗಮ್ಮನ ಕಟ್ಟೆ, ನದಿ ದಂಡೆ ಪಕ್ಕದ ರುದ್ರಭೂಮಿಗೆ ತೆರಳುವ ರಸ್ತೆಯಲ್ಲಿ ಪ್ರವಾಹದ ನೀರು ಸಂಗ್ರಹವಾಗಿದೆ. ಕೋಟೆ ಮಾಧವ ತೀರ್ಥರ ವೃಂದಾವನ ಜಲಾವೃತವಾಗಿದೆ.

ಪಶ್ಚಿಮ ಘಟ್ಟದಲ್ಲಿ ಮಳೆಯಬ್ಬರ: ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ಸಖರಾಯಪಟ್ಟಣ ಸಮೀಪದ 2800 ಎಕರೆಗೂ ಹೆಚ್ಚು ವಿಸ್ತೀರ್ಣದ ಐತಿಹಾಸಿಕ ಅಯ್ಯನಕೆರೆ ಹಾಗೂ ಮದಗದ ಕೆರೆ ತುಂಬಿ ಕೋಡಿ ಬಿದ್ದಿವೆ. ಏಳು ಗುಡ್ಡಗಳ ಮಧ್ಯೆ ಇರುವ ಬೃಹತ್ ಕೆರೆಗಳು ತುಂಬಿ ಕೋಡಿ ಬಿದ್ದಿವುದರಿಂದ ರೈತರ ಮೊಗದಲ್ಲಿ ಮಂದಹಾಸ ಮೂಡಿದೆ.

10 ಕುಟುಂಬಗಳು ಕಾಳಜಿ ಕೇಂದ್ರಕ್ಕೆ ಶಿಫ್ಟ್

ಮಡಿಕೇರಿಯ ಸೋಮವಾರಪೇಟೆ ತಾಲೂಕಿನ ಗರ್ವಾಲೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಕಿರುದಾಲೆ ಗ್ರಾಮದಲ್ಲಿ ನದಿ ನೀರು ಅಪಾಯದ ಮಟ್ಟ ಮೀರಿ ಹರಿಯುತ್ತಿರುವುದರಿಂದ ಹೊಳೆ ಅಂಚಿನಲ್ಲಿ ವಾಸ ಮಾಡುತ್ತಿರುವ ಸುಮಾರು 10 ಕುಟುಂಬಗಳನ್ನು ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ. ಕೊಡಗು ಜಿಲ್ಲೆಯಲ್ಲಿ ಕಳೆದ 4-5 ದಿನಗಳಿಂದ ಮಳೆಯ ಆರ್ಭಟ ಹೆಚ್ಚಾಗಿದೆ. ಕಿರುದಾಲೆ ಗ್ರಾಮದಲ್ಲಿ ನದಿನೀರಿನ ಮಟ್ಟ ಅಪಾಯದ ಮಟ್ಟ ಮೀರಿ ಹರಿಯುತ್ತಿದೆ. ಹೀಗಾಗಿ ಆತಂಕದಲ್ಲೇ ದಿನ ದೂಡುತ್ತಿದ್ದ ಸುಮಾರು 10 ಕುಟುಂಬಗಳನ್ನು ಕಾಳಜಿ ಕೇಂದ್ರಗಳಿಗೆ ಸ್ಥಳಾಂತರ ಮಾಡಲಾಗಿದೆ.

ರಾಯರು ತಪಸ್ಸು ಮಾಡಿದ್ದ ಜಪದ ಕಟ್ಟೆ ಜಲಾವೃತ

ತುಂಗಭದ್ರಾ ಜಲಾಶಯದಿಂದ ಭಾರೀ ಪ್ರಮಾಣದ ನೀರು ಬಿಡುಗಡೆ ಮಾಡಿರುವ ಹಿನ್ನೆಲೆ ಗುರುರಾಘವೇಂದ್ರ ಸ್ವಾಮಿಗಳು ತಪಸ್ಸು ಮಾಡಿದ್ದ ಜಪದ ಕಟ್ಟೆ ಸಂಪೂರ್ಣವಾಗಿ ಜಲಾವೃತಗೊಂಡಿದೆ. ಜಲಾಶಯದಿಂದ ನದಿಗೆ ಭಾರೀ ಪ್ರಮಾಣದ ನೀರು ಹರಿದು ಬರುತ್ತಿರುವ ಹಿನ್ನೆಲೆ ತುಂಗಭದ್ರಾ ನದಿತೀರದಲ್ಲಿರುವ ರಾಯರ ಪರಮ ಭಕ್ತ ಅಪ್ಪಣ್ಣಾಚಾರ್ ನಿರ್ಮಿಸಿ ಪೂಜಿಸುತ್ತಿದ್ದ ಗುರುರಾಘವೇಂದ್ರ ಸ್ವಾಮಿ ಏಕಶಿಲಾ ವೃಂದಾವನ ಜಲಾವೃತಗೊಂಡಿದೆ. ಬಿಚ್ಚಾಲಮ್ಮ ದೇವಿ ದೇವಾಲಯ ಬಳಿ ನೀರು ನುಗಿದ್ದು, ಏಕಶಿಲಾ ವೃಂದಾವನ ದರ್ಶನ ಪಡೆಯಲು ಭಕ್ತರು ಪರದಾಡುತ್ತಿದ್ದಾರೆ.

ಕುಮಾರಸ್ವಾಮಿ ಪಾದಗಟ್ಟೆಯ ಗುಡ್ಡ ಕುಸಿತ

ಸಂಡೂರು ತಾಲೂಕಿನ ಕುಮಾರಸ್ವಾಮಿ ದೇವಸ್ಥಾನದ ಬಳಿಯ ಕುಮಾರಸ್ವಾಮಿ ಪಾದಗಟ್ಟೆ ಗುಡಿಯ ಮುಂದಿನ ಗುಡ್ಡವು ಈಚೆಗೆ ಕುಸಿದಿದ್ದರಿಂದ ಜನರು ಹೆಚ್ಚಿನ ಆತಂಕಕ್ಕೆ ಒಳಗಾಗಿದ್ದಾರೆ. ಸ್ವಾಮಿಯ ಪಾದಗಟ್ಟೆಯ ಗುಡಿಯ ಸ್ಥಳವು ಗಣಿಗಾರಿಕೆಯ ಸ್ಥಳದಿಂದ 400 ಮೀಟರ್ ಅಂತರದ, ಕೂಗಳತೆ ದೂರದಲ್ಲಿರುವುದರಿಂದ ಗಣಿಗಾರಿಕೆಯ ಬ್ಲಾಸ್ಟ್‌ನಿಂದ ನಡುಗಿ ಕುಸಿದಿರಬಹುದು ಅಥವಾ ಈಚೆಗೆ ಸುರಿದ ನಿರಂತರ ಮಳೆಗೆ ಕುಸಿದಿರಬಹುದು ಎಂದು ಜನರು ಶಂಕಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಕೆಲಸದಿಂದ ವಜಾ ಯುವಕ ಆತ್ಮಹತ್ಯೆ

ಬೆಳಗಾವಿ: ಕೆಲಸದಿಂದ ವಜಾ ಮಾಡಿದ್ದಕ್ಕೆ ಯುವಕ ನೋರ್ವ ಮನನೊಂದು ನೇಣಿಗೆ ಶರಣಾಗಿರುವ ಘಟನೆ ಬೆಳಗಾವಿ ತಾಲೂಕಿನ ಮೊದಗಾ ಗ್ರಾಮದಲ್ಲಿ ನಡೆದಿದೆ. ಮೊದಗಾ ಗ್ರಾಮದ ನಿವಾಸಿ ರವಿ ವೀರನಗೌಡ ಹಟ್ಟಿಹೊಳಿ (24) ಆತ್ಮಹತ್ಯೆಗೆ ಶರಣಾದ ಯುವಕ. ಎಂಸಿಎ ಪದವೀಧರನಾಗಿದ್ದ ರವಿ ಹಟ್ಟಿಹೊಳಿ, ಕಳೆದೊಂದು ವರ್ಷದಿಂದ ಪುಣೆಯ ಗ್ಲೋಬಲ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. 15 ದಿನಗಳ ಹಿಂದೆ ರವಿಯನ್ನು ಕೆಲಸದಿಂದ ತೆಗೆದು ಹಾಕಿದ್ದರು. ಇದರಿಂದ ಮನನೊಂದ ರವಿ, ಸ್ವಗ್ರಾಮಕ್ಕೆ ಮರಳಿ ಮನೆಯಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಘಟನಾ ಸ್ಥಳಕ್ಕೆ ಮಾರಿಹಾಳ ಠಾಣೆಯ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ಮಾರಿಹಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಲುಷಿತ ನೀರು ಕುಡಿದು ಅಸ್ವಸ್ಥ

ವಿಜಯಪುರ: ಕಲುಷಿತ ನೀರು ಸೇವಿಸಿ 30ಕ್ಕೂ ಅಧಿಕ ಜನ ಅಸ್ವಸ್ಥಗೊಂಡಿರುವ ಘಟನೆ ಜಿಲ್ಲೆಯ ನಿಡಗುಂದಿ ತಾಲೂಕಿನ ಬ್ಯಾಲಿಹಾಳ ಗ್ರಾಮದಲ್ಲಿ ನಡೆದಿದೆ. ಗ್ರಾಮ ಪಂಚಾಯತಿಯಿಂದ ಪೂರೈಕೆಯಾಗುವ ನೀರು ಕುಡಿದು ಕಳೆದ ಮೂರು ದಿನಗಳಿಂದ 30ಕ್ಕೂ ಅಧಿಕ ಜನ ಅಸ್ವಸ್ಥಗೊಂಡು ಪರದಾಡುತ್ತಿದ್ದಾರೆ. ಈ ಹಿನ್ನೆಲೆ ವೈದರ ತಂಡವೊಂದು ಗ್ರಾಮದಲ್ಲಿಯೇ ಬೀಡುಬಿಟ್ಟಿದ್ದು, ಎರಡು ಆಂಬ್ಯುಲೆನ್ಸ್ ಕೂಡ ಅಲ್ಲಿಯೇ ಇವೆ. ಅಲ್ಲದೇ ಕೆಲವರು ಚಿಕಿತ್ಸೆಗಾಗಿ ವಿಜಯಪುರ, ಬಸವನ ಬಾಗೇವಾಡಿ, ಬಾಗಲಕೋಟೆ ಆಸ್ಪತ್ರೆಗಳಲ್ಲಿ ದಾಖಲಾಗಿದ್ದಾರೆ. ಜೊತೆಗೆ ತೀವ್ರವಾಗಿ ಅಸ್ವಸ್ಥಗೊಂಡಿದ್ದ ಓರ್ವನನ್ನು ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿಗೆ ರವಾನೆ ಮಾಡಲಾಗಿದೆ. ಊರಿನ ಬಹುತೇಕ ಜನರು ಆಸ್ಪತ್ರೆಗಳಲ್ಲಿ ಠಿಕಾಣಿ ಹೂಡಿದ್ದು, ದಿನೇ ದಿನೇ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದೆ.

ಆಟೋ ಡಿಕ್ಕಿ ಮಗು ಸಾವು

ಬಳ್ಳಾರಿ: ಕಸ ಸಂಗ್ರಹಣೆ ಮಾಡುವ ಆಟೋ ಡಿಕ್ಕಿ ಹೊಡೆದ ಪರಿಣಾಮ ಎರಡು ವರ್ಷದ ಮಗು ಸ್ಥಳದಲ್ಲಿಯೇ ಸಾವನ್ನಪ್ಪಿದ ಘಟನೆ ಬಳ್ಳಾರಿಯ ಬಾಪೂಜಿ ನಗರದಲ್ಲಿ ನಡೆದಿದೆ. ವಿಕ್ಕಿ ಮೃತಪಟ್ಟ ಎರಡು ವರ್ಷದ ಮಗು. ಸಮರ ಮತ್ತು ಶೈಲಜಾ ದಂಪತಿಯ ಪುತ್ರ ವಿಕ್ಕಿ ಮನೆಯ ಮುಂದೆ ಆಟವಾಡುತ್ತಿದ್ದಾಗ ಕಸ ಸಂಗ್ರಹಣೆಯ ಆಟೋ ಡಿಕ್ಕಿ ಹೊಡೆದಿದೆ.

ಕಾರು, ಬೈಕ್ ನಡುವೆ ಡಿಕ್ಕಿ: ಇಬ್ಬರು ಸಾವು

ಚಿತ್ರದುರ್ಗ: ಚಳ್ಳಕೆರೆ ಬಳಿ ಕಾರು ಹಾಗೂ ಬೈಕ್ ನಡುವೆ ಸಂಭವಿಸಿದ ಭೀಕರ ಅಪಘಾತದಲ್ಲಿ ಬೈಕ್‌ನಲ್ಲಿದ್ದ ಅಣ್ಣ-ತಂಗಿ ಸಾವನ್ನಪ್ಪಿ ದ್ದಾರೆ. ಮೃತರನ್ನು ತಳಕು ಗ್ರಾಮದ ಅಭಿ (28), ತಂಗಿ ಮಂಜುಳಾ (25) ಎಂದು ಗುರುತಿಸಲಾಗಿದೆ. ಅಪಘಾತದಲ್ಲಿ ರಾಯಚೂರು ಮೂಲದ ಕಾರು ಚಾಲಕ ನಾಗಿರೆಡ್ಡಿ ಗಾಯಗೊಂಡಿದ್ದು, ಆತನನ್ನು ಚಳ್ಳಕೆರೆ ತಾಲೂಕು ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಸಂಬಂಧ ಚಳ್ಳಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ರಾಯಚೂರು**

ಸಮಸ್ಯೆಯೇನು..?

- ಲಿಂಗಸುಗೂರು ಪುರಸಭೆ ವ್ಯಾಪ್ತಿಯಲ್ಲಿ ರಸ್ತೆ ದುರಸ್ತಿಯ ಬಗ್ಗೆ.
- **ಪರಿಹಾರ:** ಲಿಂಗಸುಗೂರು ಪುರಸಭೆ ವ್ಯಾಪ್ತಿಯಲ್ಲಿ ಮದರ ಥರೆಸಾ ಶಾಲೆ ಹತ್ತಿರ, ಸಂತೆ ಬಜಾರ ರಸ್ತೆಯಲ್ಲಿ ನೂರಾರು ಶಾಲಾ ಮಕ್ಕಳು ಹಾಗೂ ಸಾರ್ವಜನಿಕರ ವಾರದ ಸಂತೆಗೆ ಹೋಗಿ ಬರಲು ತೊಂದರೆಯಾಗುತ್ತಿದ್ದು, ಸಾರ್ವಜನಿಕರಿಗೆ ಮತ್ತು ಶಾಲಾ ವಾಹನಗಳು ಹಾಗೂ ದ್ವಿಚಕ್ರದ ವಾಹನಗಳು ಸರಾಗವಾಗಿ ತಿರುಗಾಡಲು ತಾತ್ಕಾಲಿಕವಾಗಿ ಮರಂ ಹಾಕಿಸಲು ಕ್ರಮ ಕೈಗೊಂಡಿರುತ್ತದೆ.

ವಿಶ್ವವಾಣಿ ಕ್ಲಬ್ ಹೌಸ್
30.07.2025
ಬುಧವಾರದ ಅತಿಥಿ

ಶ್ರೀಮತಿ ನಾಗರತ್ನ ಸಾಲಗಾಮೆ
ವಿಷಯ
ಗೌರಮ್ಮನ ವಚನಗಳು
vishwavani.news

ನಮ್ಮ ಬಗ್ಗೆ ಮಾತನಾಡುವ ಬಿಜೆಪಿಗೆ ನೈತಿಕತೆ ಇಲ್ಲ: ಶಿವರಾಜ ತಂಗಡಗಿ

ಬಿವೈ ವಿಜಯೇಂದ್ರ ಮೋದಿ ಮನೆ ಮುಂದೆ ಪ್ರತಿಭಟಿಸಲಿ

ಕೊಪ್ಪಳ: ಯೂರಿಯಾಗಾಗಿ ತುಮಕೂರಿನಲ್ಲಿ ಪ್ರತಿಭಟನೆ ನಡೆಸುವ ಬಿಜೆಪಿ ವಿಜಯೇಂದ್ರ ಪ್ರಧಾನಿ ಮೋದಿ ಮನೆ ಮುಂದೆ ಪ್ರತಿಭಟನೆ ನಡೆಸಲಿ ಎಂದು ಹಿಂದುಳಿದ ವರ್ಗಗಳ ಖಾತೆ ಸಚಿವ ಶಿವರಾಜ ತಂಗಡಗಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಬಿಜೆಪಿಯ ವರಿಗೆ ಪ್ರತಿಭಟನೆ ಮಾಡಲು ಯಾವ ನೈತಿಕತೆ ಇದೆ. ಅವರು ತುಮಕೂರಲ್ಲಿ ಪ್ರತಿಭಟನೆ ಮಾಡುವ ಬದಲು, ವಿಮಾನದಲ್ಲಿ ದೆಹಲಿಗೆ ಹೋಗಿ ಪ್ರಧಾನಿ ಅವರ ಬಳಿ ಕೂತ್ಕೊಂಡು ಕೇಳಲಿ. ನಮ್ಮ ಬಗ್ಗೆ ಮಾತ ನಾಡುವ ಬಿಜೆಪಿ ಅವರಿಗೆ ನಾಚಿಕೆ ಮಾನ ಮರ್ಯಾದೆ ಇದೆಯಾ? ಯಾವ ಮುಖ ಇಟ್ಕೊಂಡು ಅವರು ನಮ್ಮ ಬಗ್ಗೆ ಮಾತನಾಡುತ್ತಾರೆ. ಬಿಜೆಪಿಗೆ ಸರಕಾರದ ಸಿಸ್ಟಂ ಗೊತ್ತಿಲ್ಲ, ವ್ಯವಸ್ಥೆಯೂ ಗೊತ್ತಿಲ್ಲ. ಯೂರಿಯಾ ಪೂರೈಕೆ ಮಾಡೋದು ಯಾರೂ? ರಾಜ್ಯ ಸರಕಾರನಾ? ಕೇಂದ್ರ ಸರಕಾರನಾ? ಕರ್ನಾಟ ಕದಲ್ಲಿ ಯೂರಿಯಾ ಉತ್ಪಾದನೆ ಇದೆಯಾ? ಈ ವರ್ಷ ರಾಜ್ಯದಲ್ಲಿ ಒಂದುವರೆ ತಿಂಗಳೂ ಬಿತ್ತನೆ ಬೇಗಯಾಗಿದೆ. ಆಗಸ್ಟ್ ನಲ್ಲಿ ಬರಬೇಕಾದ ಕೋಟಾ ಇನ್ನೂ ಇದೆ ಎಂದರು.

ಬಿಜೆಪಿ ರಾಜ್ಯದ ಜನರನ್ನು ದಿಕ್ಕು ತಪ್ಪಿಸುವ, ಹಾದಿ ಕೆಲಸ ಮಾಡುತ್ತಿದ್ದಾರೆ. ಬಿಜೆಪಿ ಅವರು ಹೇಳಿದ್ದು ನಂಬಬೇಡಿ, ಸುಳ್ಳು ಹೇಳಿ ಮತ ಕದ್ದು ಅಧಿಕಾರಕ್ಕೆ ಬಂದಿದ್ದಾರೆ ಎಂದರು.

ರೈತರ ವಿಚಾರದಲ್ಲಿ ರಾಜಕೀಯ ಮಾಡಬೇಡಿ

ಮಳೆ ಬೇಗಯಾಗಿದೆ, ಯೂರಿಯಾ ಬೇಕು ಎಂದು ವರದಿ ಕೊಟ್ಟರೂ ಪೂರೈಕೆ ಮಾಡಿಲ್ಲ. ರೈತರ ವಿಚಾರದಲ್ಲಿ ರಾಜಕಿಯ ಮಾಡುವುದು ಬಿಡಬೇಕು. ನಾವು ರೈತರನ್ನು ಪ್ರೀತಿ ವಿಶ್ವಾಸದಿಂದ ಕಾಣುತ್ತೇವೆ. ರೈತರಲ್ಲಿ ಮನವಿ ಮಾಡುವೆವು. ಒಂದು ದಿನ ಲೇಟ್ ಆದರೂ ರೈತರಿಗೆ ಗೊಬ್ಬರ ಕೊಡುವೆವು. ಜಿಲ್ಲೆಯ ಗೊಬ್ಬರ ಬೇಡಿಕೆ ಬಗ್ಗೆ ಅಧಿಕಾರಿಗಳ ಸಭೆ ನಡೆಸಿ ಮಾಹಿತಿ ಪಡೆಯುವೆ. ಎಲ್ಲ ರೈತರಿಗೂ ಗೊಬ್ಬರ ಕೊಡುವ ಕೆಲಸ ಮಾಡುವೆವು. ರೈತರು ಆತಂಕ ಪಡುವುದು ಬೇಡ ಎಂದರು

ಒಂದು ನಿಮಿಷದ ವಿಡಿಯೊ ನೋಡಿ ಗೊಂದಲ ಸೃಷ್ಟಿ: ಪ್ರಿಯಾಂಕ್ ಖರ್ಗೆ

ಮುಖ್ಯಮಂತ್ರಿ ವಿಚಾರದಲ್ಲಿ ಅನಗತ್ಯ ಗೊಂದಲ ಸೃಷ್ಟಿ

ಕಲಬುರಗಿ: ಪಾರ್ಲಿಮೆಂಟ್ ಎಲೆಕ್ಷನ್ ನಡೆದಾಗ ಮಲ್ಲಿಕಾರ್ಜುನ್ ಖರ್ಗೆ ಅವರನ್ನ ಪಿಎಂ ಮಾಡುತ್ತೀರಿ, ರಾಜ್ಯದಲ್ಲಿ ಏನಾದರು ಆದರೆ, ಮುಖ್ಯಮಂತ್ರಿ ಮಾಡುತ್ತೀರಿ ಏಕೆ? ಜನರಲ್ಲಿ ಗೊಂದಲ ಸೃಷ್ಟಿಸುತ್ತೀರಿ ಎಂದು ರಾಜ್ಯದಲ್ಲಿ ದಲಿತ ಸಿಎಂ ಕೂಗು ವಿಚಾರವಾಗಿ ಕಲಬುರಗಿಯಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಖಾರವಾಗಿ ಪ್ರತಿಕ್ರಿಯೆ ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಎಂ ಆಗುವ ಅಂತಹದ್ದು ಯಾವುದು ಇಲ್ಲ ಎಂದು ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರೇ ಹೇಳಿದ್ದಾರೆ. ಅವರ ಮಾತಿನ ಮೊದಲ ಹಾಗೂ ಕೊನೆಯ ಮಾತು ಕೇಳದೇ ಬರೆ ಒಂದು ನಿಮಿಷದ ವಿಡಿಯೊ ನೋಡಿ ಗೊಂದಲ ಸೃಷ್ಟಿಸುತ್ತಿದ್ದಾರೆ. ಖರ್ಗೆ ಅವರ ಮಾತನ್ನು ಒಮ್ಮೆ ಪೂರ್ತಿ ಕೇಳಿ ಎಂದು ಹೇಳಿದರು.

ಖರ್ಗೆ ಅವರು ಅಸಾಹಯಕತೆಯಿಂದ ಹೇಳಿಕೆ ನೀಡಿದ್ದಾರೆ ಎನ್ನುವ ವಿಜಯೇಂದ್ರ, ಹೇಳಿಕೆ ತಿರುಗೇಟು ನೀಡಿ, ಖರ್ಗೆ ಅವರು ಯಾವತ್ತು ರಾಜಕೀಯ ಹುದ್ದೆಗಾಗಿ ಕಣ್ಣೀರು ಹಾಕಿಲ್ಲ, ಹಾಕೋದಿಲ್ಲ. ವಿಜಯೇಂದ್ರ, ಅವರು ಇತಿಹಾಸ ನೋಡಲಿ ಪೂಜ್ಯ ಅಪ್ಪಾಜಿ ಸಿಎಂ ಆದಾಗೆಲ್ಲಾ ಕಣ್ಣೀರು ಹಾಕಿದರು ಕುಮಾರಸ್ವಾಮಿ ಅವರು ಅನ್ಯಾಯ ಮಾಡಿದಾಗಲು ಕಣ್ಣೀರು ಹಾಕಿದರು. ಬೊಮ್ಮಾಯಿ ಅವರನ್ನು ಸಿಎಂ ಮಾಡಬೇಕಾದಾಗ ಬ್ಯಾಂಕ್ವೆಟ್ ಹಾಲ್ ನಲ್ಲಿ ಕಣ್ಣಿರು ಹಾಕಿ ಇಳಿಸಿದೀರಲ್ಲ. ವಿಜಯೇಂದ್ರ ಅವರ ಪೂಜ್ಯ ಅಪ್ಪಾಜಿಯನ್ನ ಕಣ್ಣೀರಿಟ್ಟು ಕೇಳಗಿಳಿಸಿದ್ರಲ್ಲ ಅದರ ಬಗ್ಗೆ ಮಾತಾಡಲಿ ಎಂದು ವಾಗ್ದಾಳಿ ನಡೆಸಿದರು.

ಮುಖ್ಯಮಂತ್ರಿಗಳು ಶಾಸಕರನ್ನ ಕರೆದು ಸಭೆ ನಡೆಸಿ ಮಾತಾಡಿದರೇ ಏನಾಯಿತು. ಅದಕ್ಕೆ ಡಿಸಿಎಂ ಅವರಿಗೆ ಆಹ್ವಾನ ಇಲ್ಲ ಎನ್ನುವುದಲ್ಲ. ಡಿಸಿಎಂ ಅವರಿಗೆ ಎಲ್ಲಾ ವಿಚಾರದಲ್ಲೂ ಆಹ್ವಾನ ಇರುತ್ತೆ. ಅವರು ಎಲ್ಲ ಸಭೆಯಲ್ಲೂ ಹಾಜರು ಇರುತ್ತಾರೆ. ಬಿಜೆಪಿಯವರಿಗೆ ಕೇಶವ ಕೃಪಾದಲ್ಲಿ ಮೀಟಿಂಗ್ ಮಾಡಬೇಕಾ.

–**ಪ್ರಿಯಾಂಕ್ ಖರ್ಗೆ**, ಸಚಿವ

ಎಷ್ಟೇ ಪ್ರಭಾವಿಗಳಿದ್ದರೂ ಕ್ರಮ

ಧರ್ಮಸ್ಥಳದಲ್ಲಿ ನಿಗೂಢ ಶವಗಳ ಹೂತಿಟ್ಟಿರುವ ಸಂಬಂಧ ಎಸ್‌ಐಟಿ ತನಿಖೆ ವಿಚಾರವಾಗಿ ಮಾತನಾಡಿ, ಎಸ್‌ಐಟಿ ತಂಡಕ್ಕೆ ಸೋಮವಾರ ಹದಿಮೂರು ಸ್ಥಳ ಮಾರ್ಕ್ ಮಾಡಿ ತೋರಿಸಿದ್ದಾರೆ. ಸರಕಾರ ಈ ವಿಚಾರದಲ್ಲಿ ಬಹಳ ಸ್ಪಷ್ಟವಾಗಿದೆ. ಯಾರೆ ಎಷ್ಟೇ ಪ್ರಭಾವಿಗಳಿದ್ದರೂ ಕ್ರಮ ಕೈಗೊಳ್ಳುತ್ತೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಮಂತ್ರಾಲಯದಲ್ಲಿ ಹುಂಡಿ ಎಣಿಕೆ

ರಾಯಚೂರು: ಭಕ್ತರ ಪಾಲಿನ ಕಾಮಧೇನು ಮಂತ್ರಾಲಯದ ರಾಘವೇಂದ್ರ ಸ್ವಾಮಿ ಮಠದಲ್ಲಿ ಭಕ್ತರು ನೀಡಿದ ಹುಂಡಿಯ ಹಣ ದಾಖಲೆ ಪ್ರಮಾಣದಲ್ಲಿ ಸಂಗ್ರಹವಾಗಿದೆ. ಎಣಿಕೆ ಕಾರ್ಯ ಮುಕ್ತಾಯವಾಗಿದ್ದು, ಐದು ಕೋಟಿಗೂ ಅಧಿಕ ಮತ್ತು ಚಿನ್ನ ಬೆಳ್ಳಿ ದೇಣಿಗೆ ಸಂಗ್ರಹಿಸಲಾಗಿದೆ ಎಂದು ಶ್ರೀಮಠ ವ್ಯವಸ್ಥಾಪಕ ಎಸ್.ಕೆ ಶ್ರೀನಿವಾಸ ರಾವ್ ಪ್ರಕಟಣೆಯ ಮೂಲಕ ತಿಳಿಸಿದ್ದಾರೆ.

ಶ್ರೀಮಠದ ಸಿಬ್ಬಂದಿಯಿಂದ ಬೆಳಗ್ಗೆಯಿಂದ ಎಣಿಕೆ ಕಾರ್ಯ ಆರಂಭವಾಗಿತ್ತು. ಸಂಜೆ ಆರು ಗಂಟೆ ಸುಮಾರಿಗೆ ಎಣಿಕೆ ಕಾರ್ಯ ಮುಕ್ತಾಯವಾಗಿದ್ದು, 5 ಕೋಟಿ 30 ಲಕ್ಷದ 97 ಸಾವಿರದ 555ರು. ಕರೆನ್ಸಿ, 15 ಲಕ್ಷದ 14 ಸಾವಿರ ನಾಣ್ಯಗಳು ಸೇರಿ ಒಟ್ಟು 5 ಕೋಟಿ 46 ಲಕ್ಷದ 6 ಸಾವಿರದ 555 ರೂಪಾಯಿಗಳು ಮತ್ತು 127 ಗ್ರಾಂ ಚಿನ್ನ ಹಾಗೂ 1820 ಗ್ರಾಂ ಬೆಳ್ಳಿಯನ್ನ ಭಕ್ತರು ತಮ್ಮ ಆರಾಧ್ಯ ದೈವ ರಾಘವೇಂದ್ರ ಸ್ವಾಮಿ ಹುಂಡಿಗೆ ಸಮರ್ಪಿಸಿ ಧನ್ಯತೆಯನ್ನ ಮೆರೆದಿದ್ದಾರೆ ಎಂದು ಅವರು ಹೇಳಿದ್ದಾರೆ.

ಬೋನಿಗೆ ಬಿದ್ದ ಚಿರತೆ

ರಾಯಚೂರು: ತಾಲೂಕಿನ ಐತಿಹಾಸಿಕ ಮಲಿಯಾಬಾದ್ ಕೋಟೆ ಪರಿಸರದಲ್ಲಿ ನಾಯಿ ಹಾಗೂ ಕೋಳಿ ಸೇರಿಕೊಂಡು ಐದೂವರೆ ವರ್ಷದ ಬಲಿಷ್ಠ ಚಿರತೆಯೊಂದನ್ನು ಸೋಮವಾರ ಬೋನಿಗೆ ಕೆಡವಿವೆ. ರಾಯಚೂರು ತಾಲೂಕಿನ ಡಿ.ರಾಮಪುರ ಗ್ರಾಮದ ಪರಮೇಶ್ವರ ಬೆಟ್ಟದಲ್ಲಿ ಗಂಡು ಚಿರತೆಯನ್ನು ಬೋನಿಗೆ ಕೆಡವಿದ್ದ ನಾಯಿ ಹಾಗೂ ಕೋಳಿ ಜೋಡಿ, ಕೇವಲ ಎರಡು ವಾರಗಳ ಅಂತರದಲ್ಲೇ ಇನ್ನೊಂದು ಗಂಡು ಚಿರತೆಯನ್ನು ಬೋನಿಗೆ ಬೀಳಿಸಿವೆ. ನಾಯಿ, ಕೋಳಿ ಎರಡೂ ಸುರಕ್ಷಿತವಾಗಿವೆ. ಎರಡು ತಿಂಗಳಿಂದ ರಾಯಚೂರು ತಾಲ್ಲೂಕಿನಲ್ಲಿ ಎರಡು ಚಿರತೆಗಳು ಓಡಾಡುತ್ತಲೇ ಇದ್ದವು. ಗ್ರಾಮದ ಪರಿಸರದಲ್ಲಿನ ನಾಯಿ, ನವಿಲು ಹಾಗೂ ಕುರಿಗಳನ್ನು ತಿಂದು ಗ್ರಾಮಸ್ಥರಲ್ಲಿ ಆತಂಕ ಸೃಷ್ಟಿಸಿದ್ದವು.

ಬಿಜೆಪಿ ರೈತ ಮೋರ್ಚಾ ನೇತೃತ್ವದಿಂದ ಪ್ರತಿಭಟನೆ | ಕಾಂಗ್ರೆಸ್ ವಿರುದ್ಧ ವಿಜಯೇಂದ್ರ ಕಿಡಿ

ಕೇಂದ್ರ ಕೊಟ್ಟ ಗೊಬ್ಬರ ಕಾಳಸಂತೆಯಲ್ಲಿ ಮಾರಾಟ

ತುಮಕೂರು: ಕೇಂದ್ರ ಸರಕಾರ ರಾಜ್ಯಕ್ಕೆ ನೀಡಿರುವ ರಸಗೊಬ್ಬರ ರೈತರಿಗೆ ಹಂಚಿಕೆ ಮಾಡದೆ ದಳ್ಳಾಳಿಗಳ ಮೂಲಕ ಕಾಳಸಂತೆಯಲ್ಲಿ ಮಾರಾಟ ಮಾಡಲಾಗಿದೆ. ಗೊಬ್ಬರಕ್ಕಾಗಿ ದಿನಬೆಳಗ್ಗೆ ಸಾಲುಗಟ್ಟಿ ನಿಲ್ಲುವಂತೆ ರೈತರನ್ನು ಬೀದಿಪಾಲು ಮಾಡಿದೆ. ರೈತರ ಕಣ್ಣಲ್ಲಿ ನೀರು ತರಿಸುವ ಯಾವುದೇ ಸರಕಾರಕ್ಕೆ ಒಳ್ಳೆಯದಾಗುವುದಿಲ್ಲ ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವಾಗ್ದಾಳಿ ನಡೆಸಿದರು.

ಜಿಲ್ಲಾಧಿಕಾರಿ ಕಚೇರಿ ಬಳಿ ಮಾತನಾಡಿದ ವಿಜಯೇಂದ್ರ, ಈ ಬಾರಿ ಮುಂಗಾರು ಉತ್ತಮವಾಗಿದೆ ಎಂದು ಹವಾಮಾನ ಇಲಾಖೆ ಮೂರು ತಿಂಗಳ ಮೊದಲೇ ಮುನ್ಸೂಚನೆ ನೀಡಿದ್ದು, ರೈತರಿಗೆ ಗೊಬ್ಬರದ ಬೇಡಿಕೆ ಹೆಚ್ಚಾಗುತ್ತದೆ ಎಂದು ಪೂರಕ ಪೂರ್ವ ಸಿದ್ಧತೆ ಮಾಡಿಕೊಂಡು ಗೊಬ್ಬರ ದಾಸ್ತಾನು ಮಾಡದೆ ರಾಜ್ಯ ಸರಕಾರ ರೈತರಿಗೆ ಅನ್ಯಾಯ ಮಾಡಿದೆ ಎಂದರು.

ಪ್ರಧಾನಿ ನರೇಂದ್ರ ಮೋದಿಯವರು ಕೊಡುತ್ತಿದ್ದ ಕಿಸಾನ್ ಸಮ್ಮಾನ್ ಯೋಜನೆಯ 6 ಸಾವಿರ ರು. ಜತೆಗೆ ಯಡಿಯೂರಪ್ಪನವರು ಮುಖ್ಯಮಂತ್ರಿ ಯಾಗಿದ್ದಾಗ ರಾಜ್ಯ ಸರಕಾರ 4 ಸಾವಿರ ರು. ನೀಡುತ್ತಿದ್ದರು. ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದಾಗ ರೈತರ ಮಕ್ಕಳ ಶಿಕ್ಷಣಕ್ಕೆ ವಿದ್ಯಾನಿಧಿ ಯೋಜನೆ ಜಾರಿಗೆ ತಂದಿದ್ದರು. ಈ ಸರಕಾರ ಈ ಎರಡೂ ಯೋಜನೆ ಗಳನ್ನು ನಿಲ್ಲಿಸಿ ರೈತರಿಗೆ ಅನ್ಯಾಯ ಮಾಡಿದೆ ಎಂದು ಹೇಳಿದರು. ನಂತರ ವಿಜಯೇಂದ್ರ, ಅವರು ಜಿಲ್ಲಾಧಿ ಕಾರಿಗಳ ಮೂಲಕ ಸರಕಾರಕ್ಕೆ ಮನವಿ ಪತ್ರ ಸಲ್ಲಿಸಿದರು.

ತುಮಕೂರಲ್ಲಿ ಕೇಂದ್ರ ಸರಕಾರ ರಾಜ್ಯಕ್ಕೆ ನೀಡಿರುವ ರಸಗೊಬ್ಬರ ರೈತರಿಗೆ ಹಂಚಿಕೆ ಮಾಡದಿರುವುದನ್ನು ಖಂಡಿಸಿ ಬಿಜೆಪಿ ರೈತ ಮೋರ್ಚಾ ನೇತೃತ್ವದಿಂದ ಪ್ರತಿಭಟನೆ ನಡೆಸಲಾಯಿತು.

ರಾಜ್ಯದಲ್ಲಿ ಆಡಳಿತ ವ್ಯವಸ್ಥೆ ಹಾಳಾಗಿದೆ

ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗಳು ತಮ್ಮ ಕುರ್ಚಿ ಉಳಿಸಿಕೊಳ್ಳಲು ತಿಂಗಳಲ್ಲಿ ನಾಲ್ಕು ಬಾರಿ ದೆಹಲಿಗೆ ಹೋಗಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮನೆಯ ಗೇಟ್ ಕಾಯುತ್ತಾರೆ. ಆದರೆ ದೆಹಲಿಯಲ್ಲಿ ಪ್ರಧಾನ ಮಂತ್ರಿ, ಕೇಂದ್ರದ ಮಂತ್ರಿಗಳನ್ನು ಭೇಟಿ ಮಾಡಿ ರಾಜ್ಯದ ರೈತರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದಿಲ್ಲ. ನಾಲ್ಕು ಬಾರಿ ಇವರು ದೆಹಲಿಗೆ ಹೋಗುತ್ತಾರೆ, ಮೂರು ಬಾರು ಸುಜೇವಾಲ ಬೆಂಗಳೂರಿಗೆ ಬಂದು ಸಭೆ ಮಾಡುತ್ತಾರೆ. ಹೀಗಾಗಿ ರಾಜ್ಯದಲ್ಲಿ ಆಡಳಿತ ವ್ಯವಸ್ಥೆ ಹಾಳಾಗಿದೆ ಎಂದು ವಿಜಯೇಂದ್ರ ಆರೋಪಿಸಿದರು.

ರಾಜ್ಯಕ್ಕೆ ಯೂರಿಯಾ ಗೊಬ್ಬರವು 6.30 ಲಕ್ಷಟನ್ ಅವಶ್ಯಕತೆ ಇದ್ದು, ಕೇಂದ್ರ ಸರಕಾರ 8.73 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರವನ್ನು ಅವಶ್ಯಕತೆಗಿಂತ ಹೆಚ್ಚಾಗಿ ಕರ್ನಾಟಕಕ್ಕೆ ನೀಡಿದೆ. ಈ ಗೊಬ್ಬರವನ್ನು ರೈತರಿಗೆ ನೀಡದೆ ದಳ್ಳಾಳಿಗಳಿಂದ ಕಾಳಸಂತೆಯಲ್ಲಿ ಮಾರಾಟ ಮಾಡಲಾಗಿದೆ.

ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಪ್ರವಾಸಿ ಪ್ರಪಂಚ ಅಂದ್ರೆ ಬರೀ ಪತ್ರಿಕೆ ಅಷ್ಟೇ ಅಲ್ಲ! ಕ್ಷಣ ಕ್ಷಣಕ್ಕೂ ಮಾಹಿತಿ ನೀಡುವ ಸಮಗ್ರ ವೆಬ್‌ಸೈಟ್
ವಿಸಿಟ್ ಮಾಡಿ
www.pravasiprapancha.com

ವಿಶ್ವವಾಣಿ

ಸಂಪಾದಕೀಯ

ಅಭಿವ್ಯಕ್ತಿಯಲ್ಲಿ ಅಶ್ಲೀಲತೆ ಸಲ್ಲ

ಯಾವುದಾದರೊಂದು ಚರ್ಚಾವಿಷಯದ ಕುರಿತಾಗಿ 'ಪರ' ಮತ್ತು 'ವಿರೋಧ' ಎಂಬ ಬಣಗಳು ರೂಪುಗೊಳ್ಳುವುದು, ಅವು ತಮ್ಮದೇ ನೆಲೆಯಲ್ಲಿ ವಾದ-ಪ್ರತಿವಾದಗಳನ್ನು ಮಂಡಿಸುವುದು ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಹೊಸ ಪರಿಪಾಠವೇನಲ್ಲ. 'ಅಭಿಪ್ರಾಯ' ಎಂಬುದು ಇದ್ದಲ್ಲಿ 'ಭಿನ್ನ-ಅಭಿಪ್ರಾಯ'ವೂ ನಿರೀಕ್ಷಿತವೇ, ಸಹಜವೇ. ಆದರೆ ಅದು ಹೇಗೆ ವ್ಯಕ್ತವಾಗುತ್ತದೆ, ಅದರ ಧಾಟಿ-ಧೋರಣೆ ಹೇಗಿರುತ್ತದೆ, ದನಿಯು ಸೌಮ್ಯವಾಗಿದೆಯೋ ಕರ್ಕಶವಾಗಿದೆಯೋ ಎಂಬುದು ಕೂಡ ಇಲ್ಲಿ ಪರಿಗಣನೆಗೆ ಬರುತ್ತದೆ. ಇದು ಸಾರ್ವಜನಿಕ ವೇದಿಕೆ ಅಥವಾ ಸಾಮಾಜಿಕ ಜಾಲತಾಣಗಳೆಂಬ ಡಿಜಿಟಲ್ ವೇದಿಕೆಗಳಲ್ಲಿ ತೊಡಗಿಸಿಕೊಳ್ಳುವವರಿಗೂ ಅನ್ವಯವಾಗುವ ಮಾತು. ಆದರೆ ಇತ್ತೀಚೆಗೆ ಸಾಮಾಜಿಕ ಜಾಲತಾಣಗಳು 'ಅಸಹಿಷ್ಣುತೆಯ ಆಡುಂಬೊಲ' ಆಗುತ್ತಿರುವುದರ ಜತೆಗೆ, 'ಅಶ್ಲೀಲತೆಯ ತಿಪ್ಪೆಗುಂಡಿ'ಯೂ ಆಗುತ್ತಿರುವುದು ವಿಷಾದನೀಯ ಸಂಗತಿ. ಯಾರಾದರೊಬ್ಬರು ಗಣ್ಯರೋ, ಸಿನಿಮಾ ಸೆಲೆಬ್ರಿಟಿಯೋ ಆಡಿದ ಮಾತಿಗೆ, ನೀಡಿದ ಹೇಳಿಕೆಗೆ ಟೀಕೆ-ಟಿಪ್ಪಣಿ ವ್ಯಕ್ತಪಡಿಸುವ ಭರದಲ್ಲಿ ಅಂಥ ಪ್ರತಿಕ್ರಿಯೆಗೆ ಅಸಹಿಷ್ಣುತೆ ಮತ್ತು ಅಶ್ಲೀಲತೆಯ ಲೇಪವಾಗುತ್ತಿರುವುದು ನೋವಿನ ಸಂಗತಿ. ಅದರಲ್ಲೂ ನಿರ್ದಿಷ್ಟವಾಗಿ, 'ವಸ್ತುನಿಷ್ಠ'ವಾಗಿ ಚರ್ಚಿಸುವ ಬದಲು, ಅಂಥ ಹೇಳಿಕೆ ನೀಡಿದ ವ್ಯಕ್ತಿಯನ್ನು ಗುರಿಯಾಗಿಸಿಕೊಂಡು ಅವರ ವೈಯಕ್ತಿಕ ಚಾರಿತ್ರ್ಯವಧೆಗೆ ಮುಂದಾಗುವುದು ಕೆಲವರ ದೈನಂದಿನ ಚಾಳಿಯಾಗಿಬಿಟ್ಟಿದೆ. ಹೀಗೆ ಕೂರಂಬುಗಳನ್ನು ಬಿಡುವಾಗ ನಮ್ಮ ಭೌತಿಕ ಅಸ್ತಿತ್ವ ಮಿಕ್ಕವರ ಕಣ್ಣಿಗೆ ಬೀಳುವುದಿಲ್ಲ ಎಂಬ ಭಂಡಧೈರ್ಯವೇ ಇದಕ್ಕೆ ಕಾರಣವಿದ್ದಿರಬಹುದು; ಆದರೆ ಹೀಗೆ ಅಶ್ಲೀಲವಾಗಿ ಟೀಕಿಸಿದವರು ಒಂದೊಮ್ಮೆ ಸಿಕ್ಕಿಬಿದ್ದರೆ, 'ಸೈಬರ್ ಅಪರಾಧ' ಹಾಗೂ ಇತರ ಹಣೆಪಟ್ಟಿಗಳ ಅಡಿಯಲ್ಲಿ ಏನೆಲ್ಲಾ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ ಎಂಬುದರ ಅರಿವು ಪ್ರಾಯಶಃ ಅವರಿಗೆ ಇರುವುದಿಲ್ಲ. ಅಭಿವ್ಯಕ್ತಿ ಸ್ವಾತಂತ್ರ್ಯ ಇದ್ದ ಕಡೆ ಅಭಿಪ್ರಾಯಭೇದವೂ ಇರುವುದು ಸಹಜವೇ. ಆದರೆ ಅದನ್ನು ವ್ಯಕ್ತಪಡಿಸುವಾಗ ಸ್ವ-ನಿಯಂತ್ರಣವನ್ನೂ ಹಾಕಿಕೊಳ್ಳಬೇಕಾಗುತ್ತದೆ, ಅಲ್ಲವೇ?

ಸೊಂಪಾದಕೀಯ

ಹುಂಜಕ್ಕೆ ಮಾಂಜ

ಮೈನೆ ಪ್ಯಾರ್ ಕಿಯಾ' ಚಿತ್ರದ ಹಿಟ್ ಹಾಡು 'ಕಬೂತರ್ ಜಾ ಜಾ..' ಸಿನಿರಸಿಕರಿಗೆ ಇಷ್ಟ ಆಗಿದ್ರೆ, ಇಲ್ಲೊಬ್ಬ ವೃದ್ಧರು ಪಾರಿವಾಳದ ಬದಲು 'ಹುಂಜ ಜಾ..ಜಾ' ಎನ್ನುತ್ತಿದ್ದಾರೆ. ಬೆಳಗ್ಗೆದ್ದು ಕೂಗೋದು, ಜನರನ್ನು ಎಚ್ಚರಿಸೋದು ಹುಂಜದ ಕೆಲಸ. ಆದರೆ ಅದನ್ನು ನಿಯತ್ತಾಗಿ ಮಾಡಿದ್ದಕ್ಕೆ ಈಗ ವಿಷಯ ಹುಂಜದ ಕುತ್ತಿಗೆಗೆ ಬಂದಿದೆ. ಲೋಕದಾ ಡೊಂಕ ನೀವೇಕೆ ತಿದ್ದುವಿರಿ ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ ಎನ್ನುವಂತೆ, ಎಲ್ಲರನ್ನೂ ಎಚ್ಚರಿಸೋದು ಬ್ಯಾಡ, ನಿನ್ ಕೆಲಸ ನೀನು ನೋಡ್ಕೋ ಅಂತ ಹುಂಜದ ಮೇಲೆ ಗರಂ ಆಗಿದ್ದಾರೆ ಈ ವೃದ್ಧರು. ಪಾಪ, ಈ ಪಾಪದ ಹುಂಜದ ಮೇಲೆ ನಿದ್ದೆಗೆಡಿಸುತ್ತಿರುವ ಆಪಾದನೆ ಹಾಕಿದ್ದಾರೆ. ಆದರೆ ಈ ಹುಂಜದ್ದೂ ಸ್ವಲ್ಪ ತಪ್ಪಿದೆ. ತೀರಾ 3 ಗಂಟೆಯ ನಸುಕಿನಲ್ಲೇ ಕೂಗಿದರೆ ಡಿಸ್ಟರ್ಬ್ ಆಗದೇ ಇರುತ್ತದೆಯೇ? ಇದು ಅಷ್ಟು ಬೆಳಗ್ಗೆ ಕೂಗೋದ್ರಿಂದ ನನಗೆ ನಿದ್ದೆ ಬರುತ್ತಿಲ್ಲ, ಅದರ ವಿರುದ್ಧ ಕ್ರಮ ಕೈಗೊಳ್ಳಿ ಅಂತ ಕೇರಳದ ಪತ್ತನಂತಿಟ್ಟ ಜಿಲ್ಲೆಯ ಪಳ್ಳಿಕಲ್ ಗ್ರಾಮದ ವೃದ್ಧರು ದೂರು ದಾಖಲಿಸಿದ್ದಾರೆ. ಈ ಹುಂಜ 3 ಗಂಟೆಗೆ ಒಂದೇ ಸಮನೆ ಕೂಗಲು ಆರಂಭಿಸುತ್ತದೆ. ಇದರಿಂದ ನೆಮ್ಮದಿಯ ನಿದ್ದೆ ಅನ್ನೋದು ದುಸ್ತರವಾಗಿದೆ ಎಂದು 'ಹುಂಜ-ಕಿರಿಕಿರಿ ಸಂತ್ರಸ್ತ' ರಾಧಾಕೃಷ್ಣ ಕುರುಪ್ ಅವರು ಅಡೂರು ಕಂದಾಯ ವಿಭಾಗೀಯ ಕಚೇರಿಯಲ್ಲಿ ದೂರು ದಾಖಲಿಸಿ ಕ್ರಮ ತೆಗೆದುಕೊಳ್ಳಲು ಆಗ್ರಹಿಸಿದ್ದಾರೆ. ನೆರೆಮನೆಯ ನಿವಾಸಿ ಅನಿಲ್ ಕುಮಾರ್ ಅವರಿಗೆ ಈಗ ಅಧಿಕಾರಿಗಳು ಹುಂಜವನ್ನು ಹದ್ದುಬಸ್ತಿನಲ್ಲಿಡಲು ಆದೇಶಿಸಿದ್ದಾರೆ. ಆಗದಿದ್ದರೆ ಅವರ ಪೌಲ್ಟ್ರಿ ಫಾರ್ಮ್ ಅನ್ನು ಬೇರೆಡೆ ಸ್ಥಳಾಂತರಿಸಲು ಹೇಳಿದ್ದಾರೆ. ಒಟ್ಟಿನಲ್ಲಿ ಲೋಕದ ಜನರನ್ನು ಎಚ್ಚರಿಸುವ ಕೆಲಸ ಮಾಡಿದರೆ ನಿಮಗೆ ಕುತ್ತು ಬಂದು ಅದು ನಿಮ್ಮ ಕುತ್ತಿಗೆಗೇ ಬರುತ್ತದೆ ಅನ್ನೋ ಮಾತು ಮತ್ತೆ ಪ್ರೂವ್ ಆಗಿದೆ.

ಸಂಪಾದಕರ ಸದ್ಯಶೋಧನೆ

ವಿಮಾನದ ಎತ್ತರಮಾಪಕ

ವಿಮಾನವು ನೆಲದಿಂದ ಅಥವಾ ಸಮುದ್ರ ಮಟ್ಟದಿಂದ ಎಷ್ಟು ಎತ್ತರದಲ್ಲಿ ಹಾರುತ್ತಿದೆ ಎಂಬುದು ಪೈಲಟ್‌ಗಳಿಗೆ ನಿಖರವಾಗಿ ಹೇಗೆ ತಿಳಿಯುತ್ತದೆ? ಸುರಕ್ಷಿತ ಹಾರಾಟಕ್ಕೆ ವಿಮಾನ ಎಷ್ಟು ಎತ್ತರದಲ್ಲಿ ಹಾರುತ್ತಿದೆ ಎಂಬ ಸಂಗತಿ ಗೊತ್ತಿರುವುದು ಅವಶ್ಯ. ಇದಕ್ಕೆ ಆಲ್ಟಿಮೀಟರ್ ಹೇಗೆ ಕಾರ್ಯ ನಿರ್ವಹಿಸುತ್ತದೆ ಎಂಬುದು ಗೊತ್ತಿರಬೇಕು. ವಿಮಾನದ ಆಲ್ಟಿಮೀಟರ್ (ಎತ್ತರಮಾಪಕ) ವಿಮಾನದ ಎತ್ತರವನ್ನು ಅಳೆಯುವ ಸಾಧನ. ಆದರೆ, ಇದರಲ್ಲಿ ಒಂದು ವಿಶೇಷ ಇದೆ- ಇದು ನೇರವಾಗಿ ಎತ್ತರವನ್ನು ಅಳೆಯುವುದಿಲ್ಲ. ಬದಲಾಗಿ, ಇದು ವಾಯು ಒತ್ತಡವನ್ನು (air pressure) ಅಳೆದು, ಆ ಮಾಹಿತಿಯನ್ನು ಎತ್ತರವಾಗಿ ಪರಿವರ್ತಿಸುತ್ತದೆ. ಇದರರ್ಥ, ನಿಖರವಾದ ಎತ್ತರವನ್ನು ತೋರಿಸಲು, ಆಲ್ಟಿಮೀಟರ್‌ಗೆ ಸಮುದ್ರ ಮಟ್ಟದಲ್ಲಿನ ಪ್ರಸ್ತುತ ವಾತಾವರಣದ ಒತ್ತಡ ಎಷ್ಟು ಎಂಬುದನ್ನು ತಿಳಿಸಬೇಕಾಗುತ್ತದೆ. ಇದು ಹೇಗೆ ಕೆಲಸ ಮಾಡುತ್ತದೆ? ಟೇಕಾಫ್‌ಗೂ ಮೊದಲು, ಪೈಲಟ್‌ಗಳು ವಿಮಾನ ನಿಲ್ದಾಣದ ಮಾಹಿತಿ ಸೇವೆಗಳಿಂದ (ATC) ಪ್ರಸ್ತುತ ಒತ್ತಡದ ಸೆಟ್ಟಿಂಗ್ ಅನ್ನು ಪಡೆಯುತ್ತಾರೆ. ಈ ಮೌಲ್ಯವನ್ನು QNH ಎಂದು ಕರೆಯಲಾಗುತ್ತದೆ. ಇದನ್ನು ಆಲ್ಟಿಮೀಟರ್‌ನಲ್ಲಿ ಸೆಟ್ ಮಾಡಿದಾಗ, ಅದು ಸಮುದ್ರ ಮಟ್ಟದಿಂದ ವಿಮಾನದ ಎತ್ತರವನ್ನು ತೋರಿಸುತ್ತದೆ. ಹಾರಾಟದ ಸಮಯದಲ್ಲಿ, ವಿಶೇಷವಾಗಿ ಒಂದು ನಿಯಂತ್ರಣ ವಲಯದಿಂದ ಇನ್ನೊಂದಕ್ಕೆ ಹೋಗುವಾಗ ಅಥವಾ ಟ್ರಾನ್ಸಿಶನ್ ಆಲ್ಟಿಟ್ಯೂಡ್ ದಾಟಿದ ನಂತರ, ಪೈಲಟ್‌ಗಳು ಸ್ಟ್ಯಾಂಡರ್ಡ್ ಒತ್ತಡ (1013.25 hPa ಅಥವಾ 29.92 inHg) ಕ್ಕೆ ಬದಲಾಯಿಸುತ್ತಾರೆ. ಹೆಚ್ಚು ಎತ್ತರದಲ್ಲಿ ಹಾರುವ ಎಲ್ಲ ವಿಮಾನಗಳು ಇದೇ ಸೆಟ್ಟಿಂಗ್ ಅನ್ನು ಬಳಸುವುದರಿಂದ, ಅವುಗಳ ನಡುವೆ ಸುರಕ್ಷಿತ ಅಂತರವನ್ನು ಕಾಯ್ದುಕೊಳ್ಳಲು ಸಾಧ್ಯವಾಗುತ್ತದೆ. QNH (Altitude above Mean Sea Level) ಎಂಬುದು ಆಲ್ಟಿಮೀಟರ್ ಸೆಟ್ ಮಾಡಿದಾಗ, ಸ್ಥಳೀಯ ವಾಯು ಒತ್ತಡವನ್ನು ಸಮುದ್ರ ಮಟ್ಟಕ್ಕೆ ಸರಿಹೊಂದಿಸಿದ ಪ್ರಮಾಣವನ್ನು ತೋರಿಸುತ್ತದೆ. ಸಮುದ್ರ ಮಟ್ಟದಿಂದ ನಿಮ್ಮ ವಿಮಾನದ ಎತ್ತರವನ್ನು (altitude) ತೋರಿಸುತ್ತದೆ. ಟೇಕಾಫ್, ಲ್ಯಾಂಡಿಂಗ್ ಮತ್ತು ಕಡಿಮೆ ಎತ್ತರದಲ್ಲಿ ಹಾರಾಟ ಮಾಡುವಾಗ ಇದನ್ನು ಬಳಸಲಾಗುತ್ತದೆ. ಇನ್ನೊಂದು ಸೆಟ್ಟಿಂಗ್ ಇದೆ ಅದನ್ನು QFE (Height above Airfield) ಅಂತಾರೆ. ಇದು ನಿರ್ದಿಷ್ಟ ವಿಮಾನ ನಿಲ್ದಾಣದ ಮೇಲ್ಮೈಯಲ್ಲಿನ ನಿಜವಾದ ವಾಯು ಒತ್ತಡ. ಇದನ್ನು ಸೆಟ್ ಮಾಡಿದಾಗ, ಆಲ್ಟಿಮೀಟರ್ ಆ ವಿಮಾನ ನಿಲ್ದಾಣದ ನೆಲದಿಂದ ನಿಮ್ಮ ವಿಮಾನದ ಎತ್ತರವನ್ನು ತೋರಿಸುತ್ತದೆ. ಆ ನಿಲ್ದಾಣದ ರನ್‌ವೇ ಮೇಲೆ ನಿಂತಾಗ, ಇದು '0' ಅಡಿಗಳನ್ನು ತೋರಿಸುತ್ತದೆ. ಇದನ್ನು ಹೆಚ್ಚಾಗಿ ಏರ್‌ಫೀಲ್ಡ್ ಸುತ್ತಮುತ್ತ ತರಬೇತಿ ಹಾರಾಟಕ್ಕಾಗಿ ಬಳಸಲಾಗುತ್ತದೆ. ಟ್ರಾನ್ಸಿಶನ್ ಆಲ್ಟಿಟ್ಯೂಡ್ ದಾಟಿ ಮೇಲೆ ಹಾರುವಾಗ ಎಲ್ಲ ವಿಮಾನಗಳು ಒಂದೇ ಮಾನದಂಡವನ್ನು ಬಳಸುವುದರಿಂದ, ಅವುಗಳ ನಡುವೆ ಸುರಕ್ಷಿತವಾದ ಲಂಬ ಅಂತರ (vertical separation) ಇರುತ್ತದೆ. ಈ ಎತ್ತರವನ್ನು 'ಫ್ಲೈಟ್ ಲೆವೆಲ್' (Flight Level- FL) ಎಂದು ಕರೆಯುತ್ತಾರೆ. ಉದಾಹರಣೆಗೆ, FL 350 ಎಂದರೆ 35,000 ಅಡಿ. ವಿಮಾನ ಟ್ರಾನ್ಸಿಶನ್ ಆಲ್ಟಿಟ್ಯೂಡ್ ದಾಟಿದಾಗ ಏನು ಮಾಡಬೇಕು? ವಿಮಾನವು ಮೇಲೇರುವಾಗ ಟ್ರಾನ್ಸಿಶನ್ ಆಲ್ಟಿಟ್ಯೂಡ್ ಅನ್ನು ದಾಟಿದ ತಕ್ಷಣ, ಪೈಲಟ್ ಸ್ಥಳೀಯ QNH ಸೆಟ್ಟಿಂಗ್‌ನಿಂದ ಸ್ಟ್ಯಾಂಡರ್ಡ್ ಸೆಟ್ಟಿಂಗ್‌ಗೆ ಬದಲಾಯಿಸಬೇಕು. ಅದೇ ರೀತಿ, ಕೆಳಗೆ ಇಳಿಯುವಾಗ ಟ್ರಾನ್ಸಿಶನ್ ಲೆವೆಲ್ ದಾಟಿದಾಗ, ಸ್ಟ್ಯಾಂಡರ್ಡ್ ಸೆಟ್ಟಿಂಗ್‌ನಿಂದ ಸ್ಥಳೀಯ QNHಗೆ ಮರಳಿ ಬದಲಾಯಿಸಬೇಕು. ಇಂಥ ಸಂದರ್ಭದಲ್ಲಿ ಒಂದು ಸಣ್ಣ ತಪ್ಪು ದೊಡ್ಡ ಅನಾಹುತಕ್ಕೆ ಕಾರಣವಾಗಬಹುದು. ಆಲ್ಟಿಮೀಟರ್ ಸೆಟ್ಟಿಂಗ್‌ನಲ್ಲಿ ಒಂದು ಹೆಕ್ಟೋಪಾಸ್ಕಲ್ (hPa) ವ್ಯತ್ಯಾಸವಾದರೆ, ಎತ್ತರದಲ್ಲಿ ಸುಮಾರು 30 ಅಡಿಗಳಷ್ಟು ದೋಷ ಉಂಟಾಗುತ್ತದೆ. ಉದಾಹರಣೆಗೆ, ನಿಜವಾದ QNH 1005 hPa ಇರುವಾಗ, ಪೈಲಟ್ ತಪ್ಪಾಗಿ 1010 hPa ಎಂದು ಸೆಟ್ ಮಾಡಿದರೆ (5 hP ಹೆಚ್ಚು), ಆಲ್ಟಿಮೀಟರ್ ನಿಜವಾದ ಎತ್ತರಕ್ಕಿಂತ ಸುಮಾರು 150 ಅಡಿ (5 x 30) ಹೆಚ್ಚು ತೋರಿಸುತ್ತದೆ. ಕೆಟ್ಟ ಹವಾಮಾನದಲ್ಲಿ ಇಳಿಯುವಾಗ ಇದು ಅತ್ಯಂತ ಅಪಾಯಕಾರಿ. ಅಮೆರಿಕದಲ್ಲಿ ಪೈಲಟ್‌ಗಳು 18,000 ಅಡಿ ಎತ್ತರದಲ್ಲಿ ಸ್ಟ್ಯಾಂಡರ್ಡ್ ಒತ್ತಡಕ್ಕೆ ಬದಲಾಯಿಸುತ್ತಾರೆ. ಆದರೆ ಭಾರತ ಸೇರಿದಂತೆ ಅನೇಕ ದೇಶಗಳಲ್ಲಿ ಈ ಟ್ರಾನ್ಸಿಶನ್ ಆಲ್ಟಿಟ್ಯೂಡ್ 3,000 ಅಥವಾ 5,000 ಅಡಿಗಳಷ್ಟು ಕಡಿಮೆ ಇರುತ್ತದೆ. ಇದಕ್ಕೆ ಜಾಗತಿಕವಾಗಿ ಯಾವುದೇ ಏಕರೂಪ ನಿಯಮವಿಲ್ಲ. ವಾಯುಪ್ರದೇಶಗಳಲ್ಲಿ, ಪ್ರತಿಯೊಬ್ಬ ಪೈಲಟ್ ಸರಿಯಾದ ಸೆಟ್ಟಿಂಗ್ ಹೊಂದಿರುವುದು ಅತ್ಯಗತ್ಯ. ಒಬ್ಬ ಪೈಲಟ್ ತಪ್ಪು ಸೆಟ್ಟಿಂಗ್ ಹೊಂದಿದ್ದರೆ, ವಿಮಾನಗಳ ನಡುವಿನ ಸುರಕ್ಷಿತ ಅಂತರದಲ್ಲಿ ನೂರಾರು ಅಡಿಗಳ ವ್ಯತ್ಯಾಸ ಉಂಟಾಗಿ, ವೇಗವಾಗಿ ಚಲಿಸುವ ವಿಮಾನಗಳಿಗೆ ಅಪಾಯವಾಗಬಹುದು.

ಜೀವಗಳನ್ನು ಉಳಿಸುತ್ತಿರುವ ಪ್ರೇಮಪ್ರಸಂಗದ ಫಲ!

ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ
naasomeswara@gmail.com

ಒಬ್ಬ ಪ್ರಿಯಕರನು ತನ್ನ ಪ್ರೇಯಸಿಗಾಗಿ ಏನೆಲ್ಲ ಮಾಡಬಹುದು ಎನ್ನುವುದಕ್ಕೆ ಉತ್ತಮ ಉದಾಹರಣೆ, ಷಹಜಹಾನನು ಮುಮ್ತಾಜ್ ಮಹಲಳಿಗಾಗಿ ಕಟ್ಟಿಸಿದ ತಾಜಮಹಲ್. ಪಿಯರಿ ಕ್ಯೂರಿ ತನ್ನ ಸ್ವಂತ ಸಂಶೋಧನೆಯನ್ನು ಬಿಟ್ಟು, ಮೇಡಂ ಕ್ಯೂರಿಯೊಡನೆ ಆಕೆಯ ಸಂಶೋಧನೆಯಲ್ಲಿ ತೊಡಗಿ ಇಬ್ಬರೂ ನೊಬೆಲ್ ಪಾರಿತೋಷಕವನ್ನು ಪಡೆದರು. ಬ್ರಿಟನ್ನಿನ ಎಂಟನೆಯ ಕಿಂಗ್ ಎಡ್ವರ್ಡ್, ತನ್ನ ಪ್ರೇಯಸಿ ವ್ಯಾಲಿಸ್ ಸಿಂಪ್ಸನ್‌ಳನ್ನು ಮದುವೆಯಾಗಲು ಸಿಂಹಾಸನವನ್ನೇ ತೊರೆದ. ಲಡ್ವಿಗ್ ವಾನ್ ಬಿಥೋವನ್, ವಿಶ್ವ ವಿಖ್ಯಾತ ಪಿಯಾನೊ ವಾದಕ ಹಾಗೂ ಸಂಯೋಜಕ. ಇವನು ಆಂಟೋನಿಯೊ ಬ್ರೆಂಟಾನೊ ಎಂಬ ಪ್ರೇಯಸಿಗಾಗಿ ಬರೆದ ಪತ್ರವು ಎಷ್ಟು ಭವ್ಯವಾಗಿದೆ ಎಂದರೆ, ಈ ಪತ್ರವನ್ನು ಆಧರಿಸಿ ಕಾದಂಬರಿಗಳು ರಚನೆಯಾಗಿವೆ ಹಾಗೂ ಚಲನಚಿತ್ರಗಳು ನಿರ್ಮಾಣವಾಗಿವೆ. ಹೀಗೆ ಅಸಂಖ್ಯ ಪ್ರೇಮಕಥನಗಳಲ್ಲಿ ಬಹಳ ಗಮನೀಯವಾದ ಪ್ರೇಮಕಥನವೆಂದರೆ ಡಾ.ವಿಲಿಯಮ್ ಸ್ಟೀವರ್ಡ್ ಹಾಲ್‌ಸ್ಟೆಡ್ ಹಾಗೂ ಕೆರೋಲಿನ ಹ್ಯಾಂಪ್ಟನ್ ಅವರ ಪ್ರೇಮಪ್ರಸಂಗ. ಹಾಲ್‌ಸ್ಟೆಡ್ ತನ್ನ ಪ್ರೇಯಸಿ ಹಾಗೂ ಮಡದಿಗಾಗಿ ಮಾಡಿದ ಒಂದು ಆವಿಷ್ಕಾರ, ಇಂದಿಗೂ ಕೋಟ್ಯಂತರ ಜೀವವನ್ನು ಉಳಿಸುತ್ತಿದೆ. ಅವರ ಪ್ರೇಮಕಥನವನ್ನು ಸ್ಥೂಲವಾಗಿ ತಿಳಿಯೋಣ.

ಒಂದು ಶಸ್ತ್ರಚಿಕಿತ್ಸೆಯು ಯಶಸ್ವಿಯಾಗಬೇಕಾದರೆ, ಶಸ್ತ್ರವೈದ್ಯನಿಗೆ ತಾನು ಮಾಡಲಿರುವ ಶಸ್ತ್ರಚಿಕಿತ್ಸೆಯ ಕುರಿತು ಸಮಗ್ರ ಅರಿವು ಇರಬೇಕು ಹಾಗೂ ಸಾಕಷ್ಟು ಅನುಭವವೂ ಇರಬೇಕು. ಶಸ್ತ್ರಚಿಕಿತ್ಸೆಯನ್ನು ಸರಾಗವಾಗಿ ನಡೆಸಲು ಅನುಕೂಲಕರವಾದ ಶಸ್ತ್ರಚಿಕಿತ್ಸಾ ಕೊಠಡಿ, ಉಪಕರಣಗಳು ಹಾಗೂ ಸಹಾಯಕರು ಇರಬೇಕು. ಶಸ್ತ್ರವೈದ್ಯರು ತಮ್ಮ ಕೈಗಳನ್ನು, ಉಪಕರಣಗಳನ್ನು ಹಾಗೂ ಶಸ್ತ್ರಚಿಕಿತ್ಸಾ ಅವಧಿಯಲ್ಲಿ ನೂರಕ್ಕೆ ನೂರರಷ್ಟು ಕ್ರಿಮಿರಾಹಿತ್ಯ ಪರಿಸರ (ಏಸೆಪ್ಟಿಕ್ ಕಂಡೀಷನ್) ವನ್ನು ಪರಿಪಾಲಿಸಬೇಕು. ಅಕಸ್ಮಾತ್ ಎಲ್ಲಾದರೂ ದೋಷವುಂಟಾಗಿ ಸೋಂಕು ತಲೆದೋರಿದರೆ, ಆ ಸೋಂಕನ್ನು ಸಕಾಲದಲ್ಲಿ ಪರಿಣಾಮಕಾರಿಯಾಗಿ ನಿಗ್ರಹಿಸಲು ಸೂಕ್ತ ಪ್ರಬಲ ಪ್ರತಿಜೈವಿಕ ಔಷಧಿಗಳು ಇರಬೇಕು. ಇವೆಲ್ಲಕ್ಕಿಂತಲೂ ಮುಖ್ಯವಾದದ್ದೆಂದರೆ, ಶಸ್ತ್ರಚಿಕಿತ್ಸೆಯನ್ನು ಪರಿಣಾಮಕಾರಿಯಾಗಿ ನಡೆಸಬೇಕಾದರೆ, ರೋಗಿಯು ಎಚ್ಚರದಪ್ಪಿರಬೇಕು. ಉತ್ತಮ ಅರಿವಳಿಕೆಯು ಶಸ್ತ್ರಚಿಕಿತ್ಸೆಯು ಪೂರ್ಣ ಮುಗಿಯುವವರೆಗೂ ತನ್ನ ಪ್ರಭಾವವನ್ನು ಬೀರುತ್ತಿರಬೇಕು. ಆಗ ಮಾತ್ರ ಶಸ್ತ್ರಚಿಕಿತ್ಸೆಯು ಯಶಸ್ವಿಯಾಗಲು ಸಾಧ್ಯ.

19ನೆಯ ಶತಮಾನದಲ್ಲಿ, 'ನಮ್ಮ ಬರಿಗಣ್ಣಿಗೆ ಕಾಣದ ಸೂಕ್ಷ್ಮಜೀವಿಗಳು ಇರುತ್ತವೆ; ಒಂದೊಂದು ಸೂಕ್ಷ್ಮಜೀವಿಯು ಒಂದೊಂದು ಕಾಯಿಲೆಯನ್ನು ತರುತ್ತವೆ' ಎಂಬ ತಿಳಿವಿತ್ತು. ಲ್ಯೂವೆನ್ ಹಾಕ್, ಪ್ಯಾಶ್ಚರ್ ಮತ್ತು ಕಾಚ್ ಮುಂತಾದ ವಿಜ್ಞಾನಿಗಳು ಈ ಕ್ಷೇತ್ರದಲ್ಲಿ ಅದ್ಭುತವಾದ ಕೆಲಸವನ್ನು ಮಾಡಿದ್ದರು. ಜೋಸೆಫ್ ಲಿಸ್ಟರ್, ಈ ಸೂಕ್ಷ್ಮಜೀವಿಗಳನ್ನು ನಿಗ್ರಹಿಸಲು 'ಕಾರ್ಬಾಲಿಕ್ ಆಸಿಡ್' ಎಂಬ ರಾಸಾಯನಿಕವನ್ನು ಪರಿಣಾಮಕಾರಿಯಾಗಿ ಪ್ರಯೋಗಿಸಿದ್ದ. ಹಾಗಾಗಿ ಅಂದಿನಿಂದ ವೈದ್ಯರು, ನಾನಾ ರೀತಿಯ ರಾಸಾಯನಿಕಗಳ ಕ್ರಿಮಿನಾಶಕ ಗುಣಗಳನ್ನು ತಿಳಿಯಲು ಹಲವು ಪ್ರಯೋಗಗಳನ್ನು ನಡೆಸಿದ್ದರು. ಆದರೂ ಅವರಿಗೆ ಮಾದರಿ ಎನ್ನಬಹುದಾದ ಪೂತಿನಾಶಕ ದ್ರಾವಣ (ಆಂಟಿ-ಸೆಪ್ಟಿಕ್ ಲೋಶನ್) ದೊರೆತಿರಲಿಲ್ಲ.

1889. ಅಮೆರಿಕದ ಬಾಲ್ಟಿಮೋರ್ ಪ್ರದೇಶದಲ್ಲಿ ಜಾನ್ ಹಾಪ್ಕಿನ್ಸ್ ಸಂಸ್ಥೆಯು ತನ್ನ ಆಸ್ಪತ್ರೆಯನ್ನು ತೆರೆಯಿತು. ಈ ಆಸ್ಪತ್ರೆಯನ್ನು ಸೇರಿದ ಪ್ರಮುಖ ವೈದ್ಯರಲ್ಲಿ ವಿಲಿಯಮ್ ಸ್ಟೀವರ್ಟ್ ಹಾಲ್‌ಸ್ಟೆಡ್ ಪ್ರಮುಖನಾಗಿದ್ದ (1852-1922). ಇವನು ಶಸ್ತ್ರವೈದ್ಯನಾಗಿದ್ದ. ಹಾಗಾಗಿ ಇವನು ತನ್ನ ಶಸ್ತ್ರಚಿಕಿತ್ಸಾ ಸಹಾಯಕರನ್ನು ಆಯ್ಕೆ ಮಾಡಿಕೊಳ್ಳುವುದರ ಜತೆಯಲ್ಲಿ ನರ್ಸ್‌ಗಳನ್ನೂ ಆಯ್ಕೆ ಮಾಡಿದ. ಹಾಗೆ ಆಯ್ಕೆ ಮಾಡಿದ ನರ್ಸ್‌ಗಳಲ್ಲಿ ಕೆರೋಲಿನ್ ಹ್ಯಾಂಪ್ಟನ್ (1861-1939) ಸಹ ಒಬ್ಬಳು. ಕೆರೋಲಿನ್ ಅಸಾಮಾನ್ಯ ನರ್ಸ್ ಆಗಿದ್ದಳು. ಅನುಪಮ ಸುಂದರಿಯಾಗಿರುವುದರ ಜತೆಯಲ್ಲಿ, ಅಪಾರ ವಿಷಯ ಪ್ರಭುತ್ವವನ್ನು ಸಾಧಿಸಿದ್ದಳು. ಅತ್ಯಲ್ಪ ಕಾಲದಲ್ಲಿ ಕೆರೋಲಿನ್ ತನ್ನ ದಕ್ಷತೆಯಿಂದ ನರ್ಸ್‌ಗಳ ಪ್ರಮುಖಳಾಗಿ ಆಯ್ಕೆಯಾದಳು. ಶಸ್ತ್ರವೈದ್ಯರು, ಆಪರೇಷನ್ ಥಿಯೇಟರಿನಲ್ಲಿ ಕೆರೋಲಿನ್ ಇದ್ದಾಳೆ ಎಂದರೆ ನೆಮ್ಮದಿಯಿಂದ ಶಸ್ತ್ರಚಿಕಿತ್ಸೆಯನ್ನು ನಡೆಸುತ್ತಿದ್ದರು. ಏಕೆಂದರೆ ಶಸ್ತ್ರವೈದ್ಯರ ಎಲ್ಲ ಅಗತ್ಯಗಳನ್ನು ಅವಳು ಅರಿತಿದ್ದಳು. ಅಗತ್ಯ ವಸ್ತುಗಳನ್ನು ಕ್ಲುಪ್ತವಾಗಿ ಒದಗಿಸುತ್ತಿದ್ದಳು. ಹೀಗಿರುವಾಗ ಒಂದು ಸಮಸ್ಯೆಯು ತಲೆದೋರಿತು. ಮಾದರಿ ಕ್ರಿಮಿನಾಶಕವು ದೊರೆಯದ ಕಾರಣ, ವೈದ್ಯರು ಪೊಟಾಷಿಯಂ ಪರಮ್ಯಾಂಗನೇಟ್, ಆಕ್ಸಾಲಿಕ್ ಆಸಿಡ್ ಮತ್ತು ಮರ್ಕ್ಯುರಿಕ್ ಕ್ಲೋರೈಡ್ ಮುಂತಾದವನ್ನು ಬಳಸುತ್ತಿದ್ದರು. ಶಸ್ತ್ರಚಿಕಿತ್ಸೆಯಲ್ಲಿ ಭಾಗಿಯಾಗುವ ಶಸ್ತ್ರವೈದ್ಯರು ಹಾಗೂ ನರ್ಸುಗಳು ತಮ್ಮ ಕೈಗಳನ್ನು ಮರ್ಕ್ಯುರಿಕ್ ಕ್ಲೋರೈಡ್ ದ್ರಾವಣದಲ್ಲಿ ತೊಳೆದುಕೊಂಡು ಶಸ್ತ್ರಚಿಕಿತ್ಸೆಯನ್ನು ನೀಡುತ್ತಿದ್ದರು. ಶಸ್ತ್ರವೈದ್ಯರು ಎಷ್ಟೇ ಎಚ್ಚರಿಕೆಯನ್ನು ತೆಗೆದುಕೊಂಡರೂ, ಹಲವು ಪ್ರಕರಣಗಳಲ್ಲಿ ರೋಗಿಯ ಒಡಲಿನಲ್ಲಿ ಸೋಂಕು ತಲೆದೋರಿ ಸಾವು ನೋವಿಗೆ ಕಾರಣವಾಗಿತ್ತು. ಹಾಗಾಗಿ ಶಸ್ತ್ರವೈದ್ಯರು ಹತಾಶರಾಗಿದ್ದರು. ಆದರೆ ಬೇರೆ ದಾರಿಯಿರಲಿಲ್ಲ.

ರಾಸಾಯನಿಕ ಸುಟ್ಟಗಾಯ: ಕೆರೋಲಿನ್ ಸಹ ತನ್ನ ಕೈಗಳನ್ನು ಮರ್ಕ್ಯುರಿಕ್ ಕ್ಲೋರೈಡ್ ದ್ರಾವಣದಲ್ಲಿ ಅದ್ದಿ ಶಸ್ತ್ರಚಿಕಿತ್ಸೆಗಳಲ್ಲಿ ಪಾಲ್ಗೊಳ್ಳುತ್ತಿದ್ದಳು. ಅವಳಿಗೆ ಕ್ರಮೇಣ ಅಲರ್ಜಿಯುಂಟಾಗಲು ಆರಂಭವಾಯಿತು. ಚರ್ಮ ಕೆಂಪಾಗಿ, ನವೆಯಾಗಿ, ಗುಳ್ಳೆಗಳು ಬಂದು, ಗುಳ್ಳೆಗಳು ಒಡೆದು ಹುಣ್ಣಾಗಿ, ಹುಣ್ಣು ಕೈಗಳನ್ನೆಲ್ಲ ವ್ಯಾಪಿಸಿ ಶಸ್ತ್ರಚಿಕಿತ್ಸೆಯಲ್ಲಿ ಪಾಲ್ಗೊಳ್ಳಲಾಗದಂಥ ಸ್ಥಿತಿಯು ತಲೆದೋರಿತು. ಸುಟ್ಟಗಾಯವನ್ನು ಹೋಲುತ್ತಿದ್ದ ಆಕೆಯ ಅಲರ್ಜಿಯ ಸಮಸ್ಯೆಯನ್ನು ನಿವಾರಿಸಲು ವೈದ್ಯರು ಇನ್ನಿಲ್ಲದ ಪ್ರಯತ್ನಪಟ್ಟರು. ಆದರೆ ಏನೂ ಉಪಯೋಗವಾಗಲಿಲ್ಲ. ಹಾಲ್‌ಸ್ಟೆಡ್ 'ಕೊಲೋಡಿಯನ್' ಎಂಬ ವಿಶೇಷ ದ್ರಾವಣವನ್ನು ಅವಳಿಗಾಗಿ ತಯಾರಿಸಿ ಲೇಪಿಸಿದ. ಆದರೆ ಏನೂ ಪ್ರಯೋಜನವಾಗಲಿಲ್ಲ. ಕೊನೆಗೆ ಕೆರೋಲಿನ್, ತಾನು ನರ್ಸ್ ವೃತ್ತಿಯನ್ನೇ ತ್ಯಜಿಸುವುದಾಗಿ ಹೇಳಿದಳು. ಕೆರೋಲಿನ್ ಅನುಭವಿಸುತ್ತಿದ್ದ ಸಮಸ್ಯೆಯನ್ನು ಹಾಲ್‌ಸ್ಟೆಡ್ ಗಮನಿಸುತ್ತಿದ್ದ. ಅವಳ ಮೇಲೆ ಅವನಿಗೆ ಅಪಾರ ಪ್ರೀತಿ ಹಾಗೂ ಕರುಣೆಯುಂಟಾಯಿತು. ಅವನಿಗೆ ಕೆರೋಲಿನ್ ಕೆಲಸ ಬಿಡುವುದು ಬೇಕಿರಲಿಲ್ಲ, ಕೆಲಸದಲ್ಲಿ ಆಕೆ ತೋರುತ್ತಿದ್ದ ದಕ್ಷತೆಯು ಅವನ ಮನಸ್ಸನ್ನು ಸೆಳೆದಿತ್ತು. ಅವಳನ್ನು ಒಳಗೊಳಗೇ ಆರಾಧಿಸುತ್ತಿದ್ದನು. ಹಾಗಾಗಿ ಆಕೆಯನ್ನು ಹೇಗಾದರೂ ಉಳಿಸಿಕೊಳ್ಳಬೇಕು ಎಂದು ನಿರ್ಧರಿಸಿದ. ಸೂಕ್ತ ಮಾರ್ಗವನ್ನು ಹುಡುಕಲು ಚಡಪಡಿಸುತ್ತಿದ್ದ.

ಕೈಗವಸು: ಚಾರ್ಲ್ಸ್ ಗುಡ್‌ಇಯರ್, 1839ರಲ್ಲಿ ವಲ್ಕನೀಕರಣ (ವಲ್ಕನೈಜೇಶನ್) ಎಂಬ ಪ್ರಕ್ರಿಯೆಯ ಮೂಲಕ ರಬ್ಬರ್ ತಯಾರಿಕೆಯನ್ನು ಪ್ರಮಾಣಬದ್ಧಗೊಳಿಸಿದ್ದ. ಹಾಗಾಗಿ ನಾನಾ ರೀತಿಯ ರಬ್ಬರ್ ವಸ್ತುಗಳನ್ನು ಆತ ನಿರ್ಮಿಸಿದ್ದ. ಗುಡ್‌ಇಯರ್ 1860ರಲ್ಲಿ ಮರಣಿಸಿದ. ಆದರೆ ಆತನ ಹೆಸರನ್ನೇ ಅವನ ಸಂಸ್ಥೆಗೂ ಇಟ್ಟಿದ್ದರು. ಹಾಗಾಗಿ ಹಾಲ್‌ಸ್ಟೆಡ್ ನ್ಯೂಯಾರ್ಕಿನಲ್ಲಿದ್ದ 'ಗುಡ್‌ಇಯರ್' ಸಂಸ್ಥೆಗೆ ಪತ್ರವನ್ನು ಬರೆದ. ಕೆರೋಲಿನ್ನಳ ಕೈಗಳ ಅಳತೆಯನ್ನು ನೀಡಿದ. ಅಂಗೈ ಮತ್ತು ಬೆರಳುಗಳ ಜತೆಯಲ್ಲಿ ಮಣಿಕಟ್ಟನ್ನೂ ಆವರಿಸುವಂಥ, ಅತ್ಯಂತ ತೆಳುವಾದ ಒಂದು ರಬ್ಬರ್ ಕೈಗವಸನ್ನು ತಯಾರಿಸಿಕೊಡುವಂತೆ ಹೇಳಿದ. ಅವರು ಎಂದಿಗೂ ರಬ್ಬರ್ ಕೈಗವಸುಗಳನ್ನು ತಯಾರಿಸಿರಲಿಲ್ಲ, ಅವರಿಗೂ ಇದು ಒಂದು ಸವಾಲಿನ ಕೆಲಸವಾಗಿತ್ತು. ಹಾಗಾಗಿ ವಿಶೇಷ ಮುತುವರ್ಜಿಯನ್ನು ವಹಿಸಿ ಅತ್ಯಂತ ತೆಳುವಾದ ರಬ್ಬರ್ ಕೈಗವಸನ್ನು ಅವರು ತಯಾರಿಸಿಕೊಟ್ಟರು. ಕೆರೋಲಿನ್ ಆ ರಬ್ಬರ್ ಕೈಗವಸನ್ನು ಧರಿಸಿದಳು. ಆಪರೇಶನ್ ಥಿಯೇಟರಿನಲ್ಲಿ ಎಲ್ಲರೂ ಬೆರಗಾಗಿ ಕೆರೋಲಿನ್ನಳ ಹೊಸ ಅವತಾರವನ್ನು ನೋಡಿದರು. ಕೆರೋಲಿನ್ ಮರ್ಕ್ಯುರಿಕ್ ಕ್ಲೋರೈಡಿನಲ್ಲಿ ತನ್ನ ಕೈಗಳನ್ನು ತೊಳೆದುಕೊಂಡಳು. ಶಸ್ತ್ರಚಿಕಿತ್ಸೆಯಲ್ಲಿ ಪಾಲ್ಗೊಂಡಳು. ಅವಳಿಗೆ ಏನೂ ತೊಂದರೆಯಾಗಲಿಲ್ಲ, ಹಾಗಾಗಿ ರಬ್ಬರ್ ಗವಸು ಧರಿಸಿ ತನ್ನ ಕೆಲಸವನ್ನು ಮುಂದುವರಿಸಿದಳು. ಹಾಲ್‌ಸ್ಟೆಡ್ ಸಂತುಷ್ಟನಾಗಿದ್ದ. ತನ್ನವಳ ನೋವನ್ನು ನಿವಾರಿಸಿದ ಹೆಮ್ಮೆ ಹಾಗೂ ತೃಪ್ತಿಯಿತ್ತು. ಅವಳನ್ನು ಮತ್ತಷ್ಟು ಆಳವಾಗಿ ಪ್ರೀತಿಸಲು ಆರಂಭಿಸಿದ. ಕೆರೋಲಿನ್ ಸಹ ಹಾಲ್‌ಸ್ಟೆಡ್‌ನನ್ನು ಹೊಸ ದೃಷ್ಟಿಯಿಂದ ನೋಡಲಾರಂಭಿಸಿದಳು. ಅವಳಿಗೂ ಪ್ರೇಮ ಅಂಕುರವೊಡೆಯಿತೆನ್ನಬಹುದು. ಇಬ್ಬರ ಪ್ರೇಮಕಾವ್ಯವು ತ್ವರಿತವಾಗಿ ಅರಳಲಾರಂಭಿಸಿತು.

ಮಹಾನ್ ಕೊಡುಗೆ: ಹಾಲ್‌ಸ್ಟೆಡ್ ತನ್ನ ಪ್ರೇಯಸಿಗೆ ನೀಡಿದ ಕೈಗವಸಿನ ಕೊಡುಗೆ, ಶಸ್ತ್ರವೈದ್ಯಕೀಯ ಜಗತ್ತನ್ನೇ ಬದಲಾಯಿಸುತ್ತದೆ ಎಂದು ಸ್ವತಃ ಹಾಲ್‌ಸ್ಟೆಡ್ ಆಗಲಿ ಅಥವಾ ಕೆರೋಲಿನ್ ಆಗಲಿ ಕನಸು ಮನಸಿನಲ್ಲಿ ಎಣಿಸಿರಲಿಲ್ಲ. ಕೆರೋಲಿನ್ ರಬ್ಬರ್ ಕೈಗವಸನ್ನು ಧರಿಸುವುದನ್ನು ನೋಡಿ, ಶಸ್ತ್ರವೈದ್ಯಕೀಯ ತಂಡದಲ್ಲಿದ್ದ ವೈದ್ಯರು ಹಾಗೂ ನರ್ಸುಗಳು ತಮಗೂ ಕೈಗವಸುಗಳು ಬೇಕು ಎಂದು ಆಗ್ರಹಿಸಿದರು. ಹಾಲ್‌ಸ್ಟೆಡ್ ಎಲ್ಲರಿಗೂ ಅವರವರ ಕೈ ಅಳತೆಯ ಕೈಗವಸುಗಳನ್ನು ತರಿಸಿದ. ಕೈಗವಸುಗಳ ಮೂಲ ಉದ್ದೇಶ ರಾಸಾಯನಿಕ ಸುಡುಗಾಯ (ಕೆಮಿಕಲ್ ಬರ್ನ್ಸ್) ವನ್ನು ತಡೆಗಟ್ಟುವುದಾಗಿತ್ತು. ಇದರ ಜತೆಯಲ್ಲಿ ಈಗ, ಶಸ್ತ್ರವೈದ್ಯರು ಹಾಗೂ ನರ್ಸುಗಳ ಕೈಚರ್ಮವು ಶಸ್ತ್ರಚಿಕಿತ್ಸೆಯ ಪ್ರದೇಶದೊಡನೆ ನೇರವಾಗಿ ಸಂಪರ್ಕಕ್ಕೆ ಬರುತ್ತಿರಲಿಲ್ಲ. ಒಂದು ತಡೆಗೋಡೆ ಏರ್ಪಟ್ಟಿತು. ಹಾಗಾಗಿ, ಯಾರದಾದರೂ ಕೈಗಳ ಮೇಲಿದ್ದ ರೋಗಕ್ರಿಮಿಗಳು, ಮರ್ಕ್ಯುರಿಕ್ ಕ್ಲೋರೈಡಿನ ಆಮ್ಲೀಯ ತೀವ್ರತೆಯನ್ನು ಬದುಕುಳಿದಿದ್ದ ರೋಗಜನಕಗಳು ಈಗ ಶಸ್ತ್ರಕ್ರಿಯಾ ಪ್ರದೇಶವನ್ನು ತಲುಪುವುದು ಅಸಾಧ್ಯವಾಯಿತು. ಹಾಗಾಗಿ ಯಾರೂ ನಿರೀಕ್ಷಿಸದ ಒಂದು ಹೊಸ ಲಕ್ಷಣವು ಪ್ರಕಟವಾಯಿತು. ಈಗ ಅವರು ನಡೆಸುತ್ತಿದ್ದ ಬಹುಪಾಲು ಶಸ್ತ್ರಚಿಕಿತ್ಸೆಗಳು ಯಶಸ್ವಿಯಾಗುತ್ತಿದ್ದವು. ಸೋಂಕು ಪ್ರಮಾಣವು ಹಠಾತ್ತನೇ ಕಡಿಮೆಯಾಗಿತ್ತು. ಸೂಕ್ಷ್ಮಗ್ರಾಹಿಯಾಗಿದ್ದ ಡಾ.ಜೋಸೆಫ್ ಬ್ಲಡ್‌ಗುಡ್ ಎಂಬ ವೈದ್ಯನು ಈ ಬಗ್ಗೆ ಒಂದು ಅಧ್ಯಯನವನ್ನೇ ನಡೆಸಿದ. ಕೈಗವಸುಗಳ ಬಳಕೆಯು ಶಸ್ತ್ರಕ್ರಿಯಾ ಸೋಂಕನ್ನು ನಿಲ್ಲಿಸಿದ್ದೇ ಅಲ್ಲದೆ, ಸಾವಿನ ಪ್ರಮಾಣವನ್ನು ಗಣನೀಯವಾಗಿ ಇಳಿಸಿತು (ಶೇ.17ರಿಂದ ಶೇ. 2ಕ್ಕೆ). ಈತನು ತನ್ನ ಫಲಿತಾಂಶವನ್ನು ಪ್ರಕಟಿಸುತ್ತಿದ್ದಂತೆಯೇ ಶಸ್ತ್ರವೈದ್ಯಕೀಯ ಜಗತ್ತು ಬೆರಗಾಯಿತು. ಒಂದು ದಶಕದ ಒಳಗೆ ಜಗತ್ತಿನ ಎಲ್ಲ ವೈದ್ಯರು ಕೈಗವಸುಗಳನ್ನು ಬಳಸಲಾರಂಭಿಸಿದರು. ಕೈಗವಸುಗಳು ಆಪರೇಷನ್ ಥಿಯೇಟರಿನ ಹೊರಗೂ, ಎಲ್ಲೆಲ್ಲಿ ಕ್ರಿಮಿರಾಹಿತ್ಯವನ್ನು ಕಾದಿಟ್ಟುಕೊಳ್ಳಬೇಕಾಗಿತ್ತೋ, ಅಲ್ಲೆಲ್ಲಾ ಬಳಕೆಗೆ ಬಂದಿತು. ಗುಡ್‌ಇಯರ್ ಸಂಸ್ಥೆಯು ತನ್ನ ಕೈಗವಸುಗಳ ನಿರ್ಮಾಣದಲ್ಲಿ ಸಾಕಷ್ಟು ಸುಧಾರಣೆಗಳನ್ನು ತಂದಿತು. ವಿವಿಧ ಗಾತ್ರದ ಕೈಗವಸುಗಳನ್ನು ತಯಾರಿಸಿ ಮುಕ್ತ ಮಾರುಕಟ್ಟೆಗೆ ಬಿಟ್ಟಿತು.

ಧ್ರುವಗಳ ವಿವಾಹ: ಹಾಲ್‌ಸ್ಟೆಡ್ ಹಾಗೂ ಕೆರೋಲಿನ್, ಜೂನ್ 4, 1890ರಂದು ದಕ್ಷಿಣ ಕೆರೋಲಿನದ ಕೊಲಂಬಿಯದಲ್ಲಿರುವ ಟ್ರಿನಿಟಿ ಎಪಿಸ್ಕೋಪಲ್ ಚರ್ಚಿನಲ್ಲಿ ಮದುವೆಯಾದರು. ಹಾಲ್‌ಸ್ಟೆಡ್ ಶ್ರೀಮಂತ ವ್ಯಾಪಾರಿಗಳ ಕುಟುಂಬದಿಂದ ಬಂದಿದ್ದ. ಕೆರೋಲಿನ್ ಸಿವಿಲ್ ವಾರ್ ಜನರಲ್ ಹಾಗೂ ದಕ್ಷಿಣ ಕೆರೋಲಿನದ ರಾಜ್ಯಪಾಲನಾಗಿದ್ದ ಮುಮ್ಮಡಿ ವೇಡ್ ಹ್ಯಾಂಪ್ಟನ್ ಕುಟುಂಬಕ್ಕೆ ಸೇರಿದವಳಾಗಿದ್ದಳು. ಈ ನೂತನ ದಂಪತಿಗಳ ಗುಣಲಕ್ಷಣಗಳು ಮಾತ್ರ ಉತ್ತರ ಮತ್ತು ದಕ್ಷಿಣ ಧ್ರುವಗಳಾಗಿದ್ದವು. ಹಾಲ್‌ಸ್ಟೆಡ್, ಸದಾ ಅಚ್ಚುಕಟ್ಟನ್ನು ನಿರೀಕ್ಷಿಸುತ್ತಿದ್ದ. ಅವನು ಸದಾ ಯುರೋಪಿಯನ್ ಸೂಟನ್ನು ಹಾಗೂ ಫ್ರೆಂಚರು ಮಡಿಗೊಳಿಸಿದ್ದ ಷರ್ಟುಗಳನ್ನು ಧರಿಸುತ್ತಿದ್ದ. ಕೆರೋಲಿನ್, ತನ್ನ ಅಗತ್ಯಕ್ಕೆ ಸೂಕ್ತವಾದ ಅತ್ಯಂತ ಸರಳವಾದ ಉಡುಪನ್ನು ಧರಿಸುತ್ತಿದ್ದಳು. ಕೆರೋಲಿನ್ ಕುದುರೆಯ ಸವಾರಿಯನ್ನು ಅತ್ಯುತ್ತಮವಾಗಿ ನಿರ್ವಹಿಸುತ್ತಿದ್ದಳು. ತೋಟಗಾರಿಕೆ ಎಂದರೆ ಪಂಚಪ್ರಾಣ. ಹಾಲ್‌ಸ್ಟೆಡ್, ಅಸಾಧಾರಣ ಬುದ್ಧಿವಂತನಾಗಿದ್ದ. ಸದಾ ಏಕಾಂತದಲ್ಲಿರಲು ಬಯಸುತ್ತಿದ್ದ. ತನ್ನ ಎಲ್ಲ ಕೆಲಸ ಕಾರ್ಯಗಳನ್ನು ಚಾಚೂ ತಪ್ಪದಂತೆ ಕರಾರುವಾಕ್ಕಾಗಿ ನಿರ್ವಹಿಸುತ್ತಿದ್ದ. ಹೀಗೆ ಇವರಿಬ್ಬರ ದೈನಂದಿನ ಬದುಕು ಸಂಪೂರ್ಣ ಭಿನ್ನವಾಗಿದ್ದರೂ, ಅವರ ನಡುವೆ ಗಾಢಪ್ರೇಮವು ಹೆಮ್ಮರ ಸ್ವರೂಪದಲ್ಲಿ ಬೆಳೆದಿತ್ತು.

ಬ್ಲೂ ರಿಡ್ಜ್ ಪರ್ವತ ಸಾಲಿನಲ್ಲಿ ತಮ್ಮ ಮಧುಚಂದ್ರವನ್ನು ಪೂರ್ಣಗೊಳಿಸಿದ ಹಾಲ್‌ಸ್ಟೆಡ್ ದಂಪತಿಗಳು, ಉತ್ತರ ಕೆರೋಲಿನದಲ್ಲಿ 2000 ಎಕರೆಗಳ ಎಸ್ಟೇಟನ್ನು ಕೊಂಡುಕೊಂಡರು. ತಮ್ಮ ನಗರದ ಜಂಜಡಗಳಿಂದ ಮುಕ್ತಿಯನ್ನು ಪಡೆಯಲು ಈ ಹಸಿರನ್ನು ಅರಸಿಕೊಂಡು ಬರುತ್ತಿದ್ದರು. ಕೆರೋಲಿನ್ ತನ್ನ ತೋಟಗಾರಿಕಾ ಕೌಶಲವನ್ನು ಕಾರ್ಯರೂಪಕ್ಕೆ ತಂದಳು. ಹಾಲ್‌ಸ್ಟೆಡ್, ಜಗತ್ತಿನ ಅಪರೂಪದ ಮರಗಳನ್ನು ತನ್ನ ಎಸ್ಟೇಟಿನಲ್ಲಿ ಬೆಳೆಸುವ ಹೊಸ ಹವ್ಯಾಸವನ್ನು ರೂಢಿಸಿಕೊಂಡ. ಇಲ್ಲಿಯೂ ಇವರ ವೈಯಕ್ತಿಕ ಜೀವನ ಶೈಲಿಯು ವಿಚಿತ್ರವಾಗಿಯೇ ಮುಂದುವರಿಯಿತು. ಹಾಲ್‌ಸ್ಟೆಡ್, ಎರಡನೆಯ ಮಹಡಿಯಲ್ಲಿ ವಾಸಿಸಿದರೆ, ಕೆರೋಲಿನ್ ಮೂರನೆಯ ಮಹಡಿಯಲ್ಲಿ ಇರುತ್ತಿದ್ದಳು. ರಾತ್ರಿಯ ಊಟದ ವೇಳೆ ಮಾತ್ರ ಇವರು ಸಂಧಿಸುತ್ತಿದ್ದರು. ಗಂಟೆಗಟ್ಟಲೇ ಬೌದ್ಧಿಕ ಸಂಭಾಷಣೆಯಲ್ಲಿ ನಿರತರಾಗುತ್ತಿದ್ದರು. ಇಬ್ಬರೂ ಪರಸ್ಪರರನ್ನು ಗೌರವಿಸುತ್ತಿದ್ದರು, ಪರಸ್ಪರರಲ್ಲಿದ್ದ ವಿಶಿಷ್ಟ ಪ್ರತಿಭೆಯನ್ನು ಗುರುತಿಸಿಕೊಂಡಿದ್ದರು. ಹಾಲ್‌ಸ್ಟೆಡ್, ಹಲವು ತಿಂಗಳುಗಳ ಕಾಲ ಶಸ್ತ್ರಚಿಕಿತ್ಸಾ ಲೋಕದಲ್ಲಿ ಮುಳುಗಿರುತ್ತಿದ್ದ. ಜಾನ್ ಹಾಪ್ಕಿನ್ಸ್‌ನಲ್ಲಿ ಭವಿಷ್ಯದ ವೈದ್ಯರಿಗೆ ತರಬೇತಿಯನ್ನು ನೀಡುವುದರಲ್ಲಿ ಎಲ್ಲವನ್ನೂ ಮರೆಯುತ್ತಿದ್ದ. ಆಗ ಕೆರೋಲಿನ್ ಒಬ್ಬಳೇ, ಇಡೀ ಎಸ್ಟೇಟನ್ನು ನಿಭಾಯಿಸುತ್ತಿದ್ದಳು. ಪರಸ್ಪರ ಪ್ರೇಮ ಪತ್ರವನ್ನು ಬರೆಯುತ್ತಿದ್ದರು. ನಿಪ್ ಮತ್ತು ಟಕ್ ಎಂಬ ಡ್ಯಾಶುಂಡ್ ನಾಯಿಗಳನ್ನು ಅಪಾರವಾಗಿ ಪ್ರೀತಿಸುತ್ತಿದ್ದರು. ಆದರೆ ಅವರಿಗೆ ಮಕ್ಕಳಾಗಲಿಲ್ಲ.

ಚಟ: ಅಂದಿನ ದಿನಗಳಲ್ಲಿ ವೈದ್ಯರು ಸ್ವಯಂ ವೈದ್ಯಕೀಯ ಪ್ರಯೋಗಗಳಿಗೆ ಈಡುಮಾಡಿಕೊಳ್ಳುವುದು ಸಹಜವಾಗಿತ್ತು. ಪರಿಣಾಮಕಾರಿಯಾದ ನೋವುನಿವಾರಕಗಳನ್ನು ಕಂಡುಹಿಡಿಯುವ ಹಿನ್ನೆಲೆಯಲ್ಲಿ ಹಾಲ್‌ಸ್ಟೆಡ್ ಕೊಕೇನ್ ಮೇಲೆ ಪ್ರಯೋಗಗಳನ್ನು ನಡೆಸುತ್ತಿದ್ದ. ಕೊನೆಗೆ ಕೊಕೇನಿಗೆ ದಾಸನಾದ. ಕೆರೋಲಿನ್, ಮೈಗ್ರೇನ್ ತಲೆನೋವಿನಿಂದ ನರಳುತ್ತಿದ್ದಳು. ಒಂಟಿಯಾಗಿ ಇರಲು ಬಯಸುತ್ತಿದ್ದಳು. ಅರೆತಲೆನೋವಿನಿಂದ ಉಪಶಮನವನ್ನು ಪಡೆಯಲು ಮಾರ್ಫಿನ್ ಮೊರೆಹೊಕ್ಕಳು. ಹೀಗೇ ಇಬ್ಬರೂ ರಾಸಾಯನಿಕ ಚಟಗಳಿಗೆ ತುತ್ತಾದರೂ, ಅವರ ನಡುವಿನ ಪ್ರೇಮ ಮಾತ್ರ ಇನಿತೂ ಕಡಿಮೆಯಾಗಲಿಲ್ಲ, ಅವರು ಪರಸ್ಪರ ಬರೆಯುತ್ತಿದ್ದ ಪ್ರೇಮಪತ್ರಗಳಲ್ಲಿ ಇದು ವ್ಯಕ್ತವಾಗಿದೆ. ಹಾಲ್‌ಸ್ಟೆಡ್ ತನ್ನ 70ನೆಯ ಪರಿಪಕ್ವ ವಯಸ್ಸಿನಲ್ಲಿ ಮರಣಿಸಿದ (1922). ಒಂಟಿಯಾದ ಕೆರೋಲಿನ್, ತನ್ನ ಎಸ್ಟೇಟಿನಲ್ಲಿಯೇ ಉಳಿದಳು. ಸಾರ್ವಜನಿಕ ಬದುಕಿನಿಂದ ದೂರ ಉಳಿದ ಕೆರೋಲಿನ್, 16 ವರ್ಷಗಳ ನಂತರ 1939ರಲ್ಲಿ ತೀರಿಕೊಂಡಳು.

ಒಂದು ಪ್ರೇಮಕಥೆಯು, ಶಸ್ತ್ರವೈದ್ಯಕೀಯ ಕೈಗವಸುಗಳಿಗೆ ಜನ್ಮನೀಡಿ, ಇಂದಿಗೂ ಕೋಟ್ಯಂತರ ಜನರ ಜೀವವನ್ನು ಉಳಿಸುತ್ತಿರುವ ಕಥನಕ್ಕಿಂತಲೂ ಮಿಗಿಲಾದ ಮತ್ತೊಂದು ಕಥನವಿಲ್ಲ ಎಂದರೆ ಅದು ಅತಿಶಯೋಕ್ತಿಯಾಗಲಾರದು.

ಗೋಕರ್ಣದ ಗುಹೆಯೊಳಗಿದ್ದದ್ದು ನೀನಾ?

ಜ್ಞಾನಜಿಜ್ಞಾಸೆ

ಜನಮೇಜಯ ಉಮರ್ಜಿ
vveditoped@gmail.com

ರಷ್ಯಾದ ಮಹಿಳೆ 'ನೀನಾ ಕುಟ್ನಿಯಾ' ಬಾಹ್ಯ ಪ್ರಪಂಚದ ಕೊಂಡಿ ಕಳಚಿಗೊಂಡು, ಪ್ರಶಾಂತವಾಗಿದ್ದ ಗೋಕರ್ಣದ ಗುಹೆಯಲ್ಲಿ ತಮ್ಮ ಎರಡು ಮಕ್ಕಳೊಂದಿಗೆ ಇದ್ದದ್ದು ಇತ್ತೀಚೆಗೆ ಜಗಜ್ಜಾಹೀರಾಯಿತು. ಪತ್ರಿಕೆ, ಟಿ.ವಿ.ಗಳಲ್ಲಿ ಇದು ಸುದ್ದಿಯಾಗಿ ನಾಡಿನವರ ಕುತೂಹಲವನ್ನು ಕೆರಳಿಸಿತು. ಆಕೆ ಅಲ್ಲಿಗೆ ಹೇಗೆ ಹೋದರು? ವೀಸಾ ಅವಧಿ ಮುಗಿದ ಮೇಲೂ ಆಕೆ ಏಕೆ ಇದ್ದರು? ಇವೆಲ್ಲ ಕಾನೂನಿನ ವಿಷಯಗಳು. ಈ ದೇಶದ ಸಾರ್ವಭೌಮ ಕಾನೂನು ತನ್ನ ಕೆಲಸವನ್ನು ಮಾಡಲಿದೆ ಮತ್ತು ಮಾಡಬೇಕು. ಆಕೆಯ ಕೌಟುಂಬಿಕ ಮತ್ತು ವೈಯಕ್ತಿಕ ಹಿನ್ನೆಲೆ ಏನು? ಈ ವಿಷಯಕ್ಕೆ ಸಂಬಂಧಿಸಿದ ಆಕೆಯ ಹೇಳಿಕೆಗಳು ಎಷ್ಟು ಪ್ರಾಮಾಣಿಕ? ಎಂಬುದೆಲ್ಲ ತನಿಖೆಯಿಂದ ಹೊರಬರಬೇಕು. ಕಾನೂನಿನ ಪ್ರಕಾರ ಅದು ನಡೆಯುತ್ತದೆ. ವಿಷಯ ಅದಲ್ಲ, ಪತ್ರಿಕೆಗಳಲ್ಲಿ ವರದಿಯಾದ ಆಕೆಯ ಕೆಲ ಹೇಳಿಕೆಗಳು ಗಮನ ಸೆಳೆದವು. ಅವುಗಳಲ್ಲಿ ಒಂದಿಷ್ಟು ಅಧ್ಯಾತ್ಮವಿದೆ ಎನಿಸಿತು. ಆಕೆಯ ನುಡಿ ಮತ್ತು ನಡೆ ಎರಡೂ ಒಂದೆಯಾ? ಅದೂ ಗೊತ್ತಿಲ್ಲ, ಹೀಗಾಗಿ, ವ್ಯಕ್ತಿಯನ್ನು ಬದಿಗೊತ್ತಿ ಆಕೆಯ ಹೇಳಿಕೆಗಳ ಕುರಿತು ಮಾಡಲಾದ ಒಂದಿಷ್ಟು ವಿಶ್ಲೇಷಣೆ ಇಲ್ಲಿದೆ:

ಮೊದಲನೆಯದು, ''ನಾನು ಮೌನ ಮತ್ತು ಸಮರ್ಪಣೆಯಲ್ಲಿ ಜೀವನದ ಅರ್ಥವನ್ನು ಕಂಡುಕೊಂಡೆ'' ಎಂಬ ಹೇಳಿಕೆ. ಇದು ನಿರಾಶೆಯ ಮಾತಲ್ಲ, ಒಡೆದು ನೋಡಿದರೆ ಇದರಲ್ಲಿ ಆಳವಾದ ಆಧ್ಯಾತ್ಮಿಕ ಅರಿವಿದೆ. ಮೌನವು ಕೇವಲ ಶಬ್ದದ ಅನುಪಸ್ಥಿತಿಯಲ್ಲ, ಸಾಧಕರಲ್ಲಿ ಅದು ಅರಿವಿನ ಉಪಸ್ಥಿತಿ ಕೂಡ. ಮೌನದ ನಿಶ್ಚಲತೆಯಲ್ಲಿ, ಮನಸ್ಸಿನ ಚಡಪಡಿಕೆ ಕಡಿಮೆಯಾಗುತ್ತದೆ. ಆಳವಾದ ವಿಚಾರಗಳು ಹೊರಹೊಮ್ಮಲು ಅದು ಅನುವುಮಾಡಿಕೊಡುತ್ತದೆ. ಮತ್ತೊಂದೆಡೆ, ಸಮರ್ಪಣೆಯು ದೌರ್ಬಲ್ಯವಲ್ಲ, ಇದು ಅಹಮ್ಮಿನ ದಮನ, ಸ್ವಯಂ ನಿಯಂತ್ರಣ ಮತ್ತು ಆಸೆಗಳ ನಿರಸನ ಮಾಡುವ ಧೈರ್ಯಶಾಲಿ ಸಾಧನ. ಒಟ್ಟಿನಲ್ಲಿ ಧ್ಯಾನ ಮತ್ತು ಸಮರ್ಪಣೆ ಎಂಬುದು ಆತ್ಮತೃಪ್ತಿಯ ಹೆಬ್ಬಾಗಿಲು. 'ವಿಹಾಯ ಕಾಮಾನ್ ಯಃ ಸರ್ವಾಂ ಪುಮಾಂಶ್ಚರತಿ ನಿಃಸ್ಪೃಹಃ, ನಿರ್ಮಮೋ ನಿರಹಂಕಾರಃ ಸ ಶಾಂತಿಮಾದಧಿಗಚ್ಛತಿ (2.71)', 'ತ್ಯಕ್ತ್ವಾ ಕರ್ಮ-ಫಲಾಸಂಗಂ ನಿತ್ಯ-ತೃಪ್ತೋ ನಿರಾಶ್ರಯಃ' (4.20) ಎಂಬ ಭಗವದ್ಗೀತೆಯ ಶ್ಲೋಕಗಳು ಇದನ್ನೇ ಹೇಳುತ್ತವೆ.

ಎರಡನೆಯದು, ''ನನಗೆ ಜಗತ್ತಿನಿಂದ ಇನ್ನು ಏನೂ ಬೇಕಾಗಿಲ್ಲ, ನನಗೆ ಸತ್ಯ ಮಾತ್ರ ಬೇಕು'' ಎಂಬುದು. ಇದು ಆಳವಾದ ಆಧ್ಯಾತ್ಮಿಕ ಪ್ರಬುದ್ಧತೆಯ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ. ತಿರಸ್ಕಾರದಿಂದಲ್ಲ, ಆದರೆ ಆಳವಾದ ಒಳನೋಟದಿಂದ ಪ್ರಾಪಂಚಿಕ ಸುಖಗಳು, ಸಾಧನೆಗಳು ಮತ್ತು ಗುರುತುಗಳು ತಮ್ಮ ಹೊಳಪನ್ನು ಕಳೆದುಕೊಳ್ಳುವ ಸ್ಥಿತಿ ಇದು. ಜಿನ, ಬುದ್ಧ, ಅಲ್ಲಮ, ಬಸವಣ್ಣ, ಕನಕ-ಪುರಂದರದಾಸ ಎಲ್ಲರೂ ಈ ಬೆಳಕು ಹಿಡಿದು ಹೊರಟವರೇ! ಎಲ್ಲಾ ಬಾಹ್ಯ ಅನ್ವೇಷಣೆಗಳು ಕ್ಷಣಿಕವಾದವುಗಳು ಮತ್ತು ಶಾಶ್ವತ ಸತ್ಯ ಮಾತ್ರ ಹಾತೊರೆಯಲು ಯೋಗ್ಯವಾದದ್ದು ಎಂದು ಆತ್ಮವು ಇಲ್ಲಿ ಗುರುತಿಸುತ್ತದೆ. ಇದು ''ಸತ್ಯಂ ಜ್ಞಾನಂ ಅನಂತಂ ಬ್ರಹ್ಮ''- ಅಂದರೆ ಸತ್ಯ, ಜ್ಞಾನ ಮತ್ತು ಅನಂತತೆಯು ಬ್ರಹ್ಮನ ಸ್ವರೂಪ ಎಂಬ ಉಪನಿಷತ್ತಿನ ಆದರ್ಶವನ್ನು ಪ್ರತಿಧ್ವನಿಸುತ್ತದೆ. ಹೃದಯವು ಸತ್ಯದ ಕಡೆಗೆ ಒಳಮುಖವಾಗಿ ತಿರುಗಿದಾಗ, ನಿಜವಾದ ಬಿಡುಗಡೆ ಪ್ರಾರಂಭವಾಗುತ್ತದೆ.

ಮೂರನೆಯದು ''ಈ ಗುಹೆಯು ನನ್ನ ಗರ್ಭ, ನಾನು ಇಲ್ಲಿ ಪುನರ್ಜನ್ಮ ಪಡೆಯುತ್ತಿದ್ದೇನೆ'' ಎಂಬುದು. ಈ ಹೇಳಿಕೆ ಒಂದು ಪ್ರಬಲ ಯೋಗ ಸಾಕ್ಷಾತ್ಕಾರವನ್ನು ಪ್ರತಿಫಲಿಸುತ್ತದೆ. ಯೋಗ ತತ್ವಶಾಸ್ತ್ರದಲ್ಲಿ, ಏಕಾಂತ ಮತ್ತು ಮೌನವನ್ನು ಅಂತರ್ಮುಖಿ ಪ್ರಜ್ಞೆಯ ಪ್ರೇರಕಗಳಾಗಿ ನೋಡಲಾಗುತ್ತದೆ. ಗುಹೆಯು ಹೃದಯದ ಸಂಕೇತವಾಗಿ, ಅಹಂ ಕರಗುವ ಮತ್ತು ಆತ್ಮ ಜಾಗೃತವಾಗುವ ಪವಿತ್ರ ಸ್ಥಳವಾಗುತ್ತದೆ. ಇಲ್ಲಿನ ಮರುಹುಟ್ಟು ಭೌತಿಕವಲ್ಲ, ಅದು ಮಿಥ್ಯಾ ಗುರುತಿನ ಪೊರೆಯ ಕಳಚಿ 'ಸ್ವತ್ವ'ದ ಮರುಶೋಧನೆಯಾಗುವ ಪ್ರಕ್ರಿಯೆ. ಮುಂಡಕ ಉಪನಿಷತ್ತಿನ (2.2.7) ಒಂದು ಪದ್ಯವು ಇದನ್ನೇ ಹೇಳುತ್ತದೆ- ''ಯಸ್ಮಿನ್ ವಿಜ್ಞಾತೇ ಸರ್ವಂ ಏವಂ ವಿಜ್ಞಾತಂ ಭವತಿ''- ಅಂದರೆ, ಏನಿದೆಯೋ

ಅದನ್ನು ತಿಳಿದಾಗ, ಎಲ್ಲವೂ ತಿಳಿದಂತಾಗುತ್ತದೆ. ಇದು ಆಳವಾದ ಆಂತರಿಕ ಬದಲಾವಣೆಯನ್ನು ಪ್ರತಿಬಿಂಬಿಸುತ್ತದೆ. ಇದು ಕತ್ತಲೆಯಿಂದ ಹೊರಬಂದು ಸತ್ಯದ ಬೆಳಕಿನೆಡೆಗಿನ ಸಂಕ್ರಮಣ.

ಇನ್ನು ನಾಲ್ಕನೆಯದು, ''ನನಗೆ ಯಾರ ಸಹಾಯವೂ ಬೇಡ. ನನ್ನೊಳಗೆ ಎಲ್ಲವೂ ಇದೆ'' ಎಂಬುದು. ಇದು ಅಹಂಕಾರವಲ್ಲ, ಬದಲಿಗೆ ಇದು ವೇದಾಂತ ಮತ್ತು ಯೋಗ ಜ್ಞಾನದಲ್ಲಿ ಬೇರೂರಿರುವ ಅರಿವು. ಇದು ಗೀತೆಯ ಬೋಧನೆಯನ್ನು ಪ್ರತಿಧ್ವನಿಸುತ್ತದೆ- ''ಉದ್ಧರೇತ್ ಆತ್ಮನಾತ್ಮಾನಾಂ ನಾತ್ಮಾನಾಂ ಅವಸಾದಯೇತ್''(ಗೀತಾ 6.5)- ಅಂದರೆ, ಆತ್ಮವು ಸ್ವತಂತ್ರ ಮತ್ತು ಸ್ವಾವಲಂಬಿ. ಆತ್ಮವೇ ತನ್ನನ್ನು ಉದ್ಧಾರಮಾಡಿಕೊಳ್ಳಬೇಕು, ಇಲ್ಲವೇ ಆತ್ಮವೇ ತನ್ನನ್ನು ಹಳ್ಳಕ್ಕೆ ತಳ್ಳಿಕೊಳ್ಳಬೇಕು. ಈ ವಾಕ್ಯವು ನಮ್ಮ ಆತ್ಮವೇ ನಮಗೆ ಮಾರ್ಗದರ್ಶಕ ಮತ್ತು ಆಶ್ರಯ ಎರಡೂ ಆಗಿದೆ ಎಂದು ಹೇಳುತ್ತದೆ. ಅಂತೆಯೇ, ಛಾಂದೋಗ್ಯ ಉಪನಿಷತ್ತು ''ತತ್ ತ್ವಂ ಅಸಿ''- ಅಂದರೆ, ಅದು ನೀನೆ ಆಗಿರುವೆ ಎಂದು ಘೋಷಿಸುತ್ತದೆ. ಒಬ್ಬನು ಬಯಸುವ ಎಲ್ಲವೂ ಅವನ ಒಳಗೇ ನೆಲೆಗೊಂಡಿದೆ. ಒಮ್ಮೆ ಇದು ಅರಿವಿಗೆ ಬಂದರೆ, ಅವಲಂಬನೆ ಇಲ್ಲವಾಗುತ್ತದೆ ಮತ್ತು ಒಳಗಣ್ಣು ತೆರೆದುಕೊಳ್ಳುತ್ತದೆ. ಇದು ''ನಾನೇಕೆ ಹೊರಗೆ ಹುಡುಕಬೇಕು? ನನ್ನೊಳಗಿರುವನಯ್ಯಾ ಚೆನ್ನಮಲ್ಲಿಕಾರ್ಜುನ'', ''ಒಳಗಡೆ ನೋಡದವರಿಗಿಂತೆನು ಬಲ?'' ಎಂಬ ದಾಸ-ಶರಣರ ಮಾತುಗಳನ್ನು ನೆನಪಿಸುತ್ತದೆ. ಇದು ಅನನ್ಯ ಅನ್ವಯ. 'ನನಗೆ ಬೇಕಾದ ಸತ್ಯ ನನ್ನ ಒಳಗೇ ಇದೆ' ಎಂಬುದಿಲ್ಲಿ ಧ್ವನಿತ.

ಐದನೆಯದು ನಿಸರ್ಗದೊಂದಿಗಿನ ಬದುಕು. ಇಲೆಕ್ಟ್ರಾನಿಕ್ ವಸ್ತುಗಳು, ಭೋಗ ಜೀವನ, ನಿರಂತರ ಗದ್ದಲ, ಕ್ಷಣ ಕ್ಷಣಕ್ಕೆ ಬದಲಾಗುವ ಆಸೆ, ಮಹತ್ವಾಕಾಂಕ್ಷೆಗಳ ವ್ಯಸನವನ್ನು ಆಕೆ ಪ್ರಶ್ನಿಸುವಂತಿದೆ. ಪ್ರಕೃತಿಯ ವಿರುದ್ಧ ಬದುಕುವುದನ್ನೇ ಈಗ ಪ್ರಗತಿ ಎಂದುಕೊಂಡಿರುವವರನ್ನು ತಳ್ಳಿ ಹಾಕುವಂತಿದೆ. ಪೂರ್ವವ ಮರೆತ ಭಾರತೀಯರು ಮೌಲ್ಯಮಾಪನಕ್ಕಾಗಿ ಪಶ್ಚಿಮಕ್ಕೆ ಓಡುತ್ತಿರುವ ಈ ಯುಗದಲ್ಲಿ, ಗರ್ವಪೂರ್ವಕವಾಗಿ ಪಾಶ್ಚಾತ್ಯ ಮಹಿಳೆಯೊಬ್ಬಳು ಭಾರತೀಯ ಧ್ಯಾನ ಸಂಸ್ಕೃತಿಗೆ ತಲೆಬಾಗಿದ್ದಾಳೆ.

ಗೋಕರ್ಣ ಗುಹೆಯಲ್ಲಿ ನೀನಾ ಕುಟ್ನಿಯಾರ ಕೆಲ ದಿನಗಳ ಇರವನ್ನು ಕೇವಲ ಮಾಧ್ಯಮದ ಕುತೂಹಲವಾಗಿ ನೋಡಬಾರದು. ನಮ್ಮನ್ನು ನಾವೇ ಒಂದು ಸಲ ಪ್ರತಿಬಿಂಬಿಸಿಕೊಂಡು ನೋಡಬೇಕು. ಭಾರತವು ಕೇವಲ ಒಂದು ಭೂಮಿಯ ತುಂಡು ಅಲ್ಲ, ಅದು ಮೋಕ್ಷಕ್ಕಾಗಿ ಹಾತೊರೆಯುವವರ, 'ಸ್ವತ್ವ'ವನ್ನು ಕಂಡುಕೊಳ್ಳದರ ಹೊರತು ಏನನ್ನೂ ಬಯಸದವರ ಚೈತನ್ಯ ಸ್ಥಳವಾಗಿದೆ. ಕಾನೂನು ತನ್ನ ಕೆಲಸ ಮಾಡುವುದು ನಿಸ್ಸಂದೇಹ, ಆದರೆ ಆಕೆಯ ಹೇಳಿಕೆಗಳಲ್ಲಿನ ತತ್ವಮೂಲ್ಯ, ಧ್ಯಾನಪರ ವ್ಯಕ್ತಿತ್ವವನ್ನು ಮಾನವೀಯ ಮತ್ತು ಸಂಸ್ಕೃತಿ ದೃಷ್ಟಿಯಿಂದ ನೋಡುವ ಸಂವೇದನೆಯು ನಮ್ಮಲ್ಲಿ ಇರಬೇಕು. ಸಮಾಜವು ಆಂತರಿಕ ಅನ್ವೇಷಣೆಯ ಅಪರೂಪದ ಮಾರ್ಗವನ್ನು ಗೇಲಿ ಮಾಡಬಾರದು ಅಥವಾ ತಿರಸ್ಕರಿಸಬಾರದು. ಆ ಮಾರ್ಗದಲ್ಲಿ ನಡೆಯುವ ಅಪರೂಪದ ವ್ಯಕ್ತಿಗಳನ್ನು ಗೌರವಿಸಬೇಕು.

ಗುಹೆಯಲ್ಲಿ ಹೋಗಿ ಕುಳಿತು ಸಾಕ್ಷಾತ್ಕಾರ ಮಾಡಿಕೊಳ್ಳುವ ಮಾರ್ಗ ಭಾರತಕ್ಕೆ ಅಪರಿಚಿತವೇನಲ್ಲ. ಈ ತರಹದ ವ್ಯಕ್ತಿತ್ವ ನಮ್ಮ ಪ್ರಾಚೀನ ಉಪನಿಷತ್ ದ್ರಷ್ಟಾರರ ಛಾಯೆ ಹೊಂದುತ್ತದೆ. ಅವರು ಕೂಡ ''ಕಿಂ ಬ್ರಹ್ಮ? ಕಿಂ ಶ್ರೇಯಃ?'' ಎಂಬ ಪ್ರಶ್ನೆಗಳನ್ನೇ ಚಿಂತಿಸಿದ್ದಾರೆ. ಸಾರ್ವಕಾಲಿಕ ಜ್ಞಾನವನ್ನು ಹುಡುಕುತ್ತಾ ಸಾಮಾಜಿಕ ರೂಢಿಗಳಿಂದ ದೂರ ಸರಿಯುತ್ತಾ ನಡೆಯುವ ಹಲವು ಮಹಾತ್ಮರು ನಮ್ಮಲ್ಲಿದ್ದಾರೆ. ರಮಣ ಮಹರ್ಷಿ, ಸಿದ್ಧಾರೂಢರು, ಶ್ರೀಧರ ಸ್ವಾಮಿಗಳಂಥಾ ಅನೇಕ ಆರೂಢ-ಅವಧೂತರು, ಅಕ್ಕ-ಅಲ್ಲಮನಂಥ ಶಿವಶರಣರು ಹೀಗೆಯೇ ಕಾಡು, ಗುಹೆಗಳೆಡೆಗೆ ಅಲೆದಿದ್ದಾರೆ, ಸಾಧನೆ ಮಾಡಿದ್ದಾರೆ. ನೀನಾ ಕುಟ್ನಿಯಾ ಎಂಬ ಈಕೆ ಶಂಕರ-ರಾಮಾನುಜ-ಮಧ್ವ-ಬಸವಣ್ಣನವರನ್ನು ಓದಿದ್ದಾರಾ? ಅಥವಾ ಇಂಥ ಮಹಾಪುರುಷರ ಬಗ್ಗೆ ತಿಳಿದಿದ್ದಾರಾ? ಅವರೇ ಹೇಳಿಕೊಂಡಂತೆ ಅಧ್ಯಾತ್ಮ ಸಾಧನೆಯೇ ಆಕೆಯ ಗುರಿಯಾ ಗೊತ್ತಿಲ್ಲ? ಆದರೆ ಅವರ ಹೇಳಿಕೆಗಳನ್ನು ಅಧ್ಯಾತ್ಮ ದೃಷ್ಟಿಕೋನದಿಂದ ನೋಡಿದರೆ ಹಲವು ಸತ್ಯಗಳು ತೆರೆದುಕೊಳ್ಳುವುದಂತೂ ಸುಳ್ಳಲ್ಲ.

(ಲೇಖಕರು ಚಿಂತಕರು)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಅಯ್ಯೋ ಅಮೃತಾಂಜನಾ..!!

ಘಮಘಮಿಸುವ ಅಮೃತಾಂಜನದ ಬಗೆಗಿನ ವಿನಾಯಕ ಭಟ್ ಅಂಬ್ಲಿಹೊಂಡ ಅವರ ಅಂಕಣಬರಹವನ್ನು (ಜು.27) ಓದಿದೆ... ಅಲ್ಲಲ್ಲ ಅದೇ ಓದಿಸಿಕೊಂಡಿತು. ಹಾಗಾಗಿ ಅಮೃತಾಂಜನವನ್ನು ಹಚ್ಚಿಕೊಳ್ಳುವ ಸಂದರ್ಭ ಬರಲಿಲ್ಲ. ಇಂದಿಗೂ ಮನೆಮನೆಯಲ್ಲಿನ ಔಷಧಿಗಳ ಪೆಟ್ಟಿಗೆಯಲ್ಲಿ ಅಮೃತಾಂಜನವೂ ಲಭ್ಯ, ಅಷ್ಟಿದೆ ಕುಂದದ ಅದರ ಮಹತ್ವ. ಅಮೃತಾಂಜನ ನನ್ನ ಮನೆಯಲ್ಲೂ ಇದೆ ಎನ್ನಿ. ತೀರಾ ಬೋರು ಹೊಡೆಯುವ ಭಾಷಣ, ಸಂಗೀತ ಕಾರ್ಯಕ್ರಮದ ನಂತರ ಜನರು ತಮಾಷೆಯಾಗಿ 'ಅಮೃತಾಂಜನ ಹಚ್ಚಿಕೊಂಡೆ ಮಾರಾಯ' ಎನ್ನುವುದು ಇಂದಿಗೂ ರೂಢಿಯಲ್ಲಿದೆ. ಕಾಲೇಜು ದಿನಗಳಲ್ಲಿ ನಾವೂ ನಮ್ಮ ಫ್ರೆಂಡ್ ಸರ್ಕಲ್‌ನಲ್ಲಿ, ಕೆಲ ಲೆಕ್ಚರರ್‌ಗಳ ಕ್ಲಾಸಿನಲ್ಲಿ, 'ಅಮೃತಾಂಜನ ಹಚ್ಚಿಕೊಳ್ಳಬೇಕ್ರೋ...' ಎಂದು ತಮಾಷೆ ಮಾಡ್ತಿದ್ದೆವು. ಅದರ ಉತ್ಪಾದಕರಾದ ನಾಗೇಶ್ವರರಾವ್ ಅವರು ಮುಂಬೈಯಲ್ಲಿ ನಡೆಯುವ ಸಂಗೀತ ಕಾರ್ಯಕ್ರಮಗಳಲ್ಲಿ ಪ್ರಚಾರಕ್ಕೋಸ್ಕರ ಇದನ್ನು ಉಚಿತವಾಗಿ ಹಂಚುತ್ತಿದ್ದರು ಎಂಬುದನ್ನು ಅಂಕಣಕಾರರು ಬರೆದಿದ್ದು ಓದಿ ಇದೆಲ್ಲಾ ನೆನಪಾಯ್ತು ನೋಡಿ! ಅಂದಹಾಗೆ, ನಾನೀಗ ಹೇಳಬೇಕೆಂದಿರುವುದು ಬೇರೆಯದೇ ವಿಚಾರ. ಅದೇನೆಂದರೆ, ನಾನಾಗ ಚಿಕ್ಕವನಿದ್ದೆ. ನನ್ನ ಅಕ್ಕನ ಮದುವೆಯಾಗಿ, ಅಕ್ಕ-ಭಾವ ಮನೆಗೆ ಬಂದಾಗಲೆಲ್ಲಾ ಭಾವ, ''ಥೋ, ಎಂಥಾ ತಲೆನೋವು ಮಾರಾಯಾ, ನಾ ಕೋಣೆಗೆ ಹೋಗಿ ಮಲಗ್ತಿ. ನಿನ್ನ ಅಕ್ಕನತ್ರ ಅಮೃತಾಂಜನ ತಗಂಡು ರೂಮಿಗೆ ಬಪ್ಲೆ ಹೇಳು ಅಕ...'' ಎಂದು ನನ್ನ ರಮಿಸಿ ಅಕ್ಕನತ್ರ ಕಳಿಸ್ತಿದ್ದ. ಅಕ್ಕ ಎಲ್ಲಿದ್ದು ಅಂತ ಹುಡಕ್ಯಂಡು ಹೋಗಿ, ''ಅಕಾ, ಭಾವಂಗೆ ತಲೆನೋವಡ, ರೂಮ್ನಲ್ಲಿ ಮಲಗಿದ್ದ. ನೀ ಅಮೃತಾಂಜನ ತಗಂಡ ಬರವಡಾ'' ಎಂದು ಹೇಳಿದಾಗ ಅಲ್ಲಿದ್ದವರೆಲ್ಲ ಮುಸಿಮುಸಿ ನಗ್ತಾ, ''ಪಾಪ, ಹೋಗೆ ಕೂಸೆ. ನಿನ್ನ ಗಂಡಂಗೆ ಅಮೃತಾಂಜನ ಹಚ್ಗೊಡೆ'' ಎಂದು ಹೇಳ್ತಿದ್ರು. ಅವರೇಕೆ ಹಾಗೆ ನಗ್ತಿದ್ರೋ ಗೊತ್ತಿಲ್ಲ, ಅಕ್ಕ ಮಾತ್ರ ನಾಚಿಕೆಯಿಂದ ಮುದ್ದೆಯಾಗಿ ರೂಮಿಗೆ ಓಡ್ತಿದ್ಲು. ''ಅಕ್ಕಾ.. ಅಮೃತಾಂಜನ..'' ಎಂದು ನಾನು ಕೂಗಿದರೆ, ''ಏ, ನೀ ಸುಮ್ನಿರ... ನಿನ್ನ ಬಾವನ ಅಮೃತಾಂಜನ ಬ್ಯಾರೇನೇ ಇದ್ದು'' ಅಂತ ಹೇಳ್ತಿದ್ರು. ನಾನು ಇದ್ದಿಕ್ಕು ಹೇಳಿ ಸುಮ್ನಾಗ್ತಿದ್ದಿ. ಆ ಮೇಲೆ ದೊಡ್ಡಾದಂಗೆ 'ಅಮೃತಾಂಜನದ ಗುಟ್ಟು' ಗೊತ್ತಾತು..!!

ಒಂದು ಕಾಲದಲ್ಲಿ, ಹೊಸದಾಗಿ ಮದುವೆಯಾದ ದಂಪತಿಗಳನ್ನು ಛೇಡಿಸುವ ವಿಷಯವಾಗಿ 'ತಲೆನೋವು', 'ಅಮೃತಾಂಜನ' ಎಂಬ ಪದಗಳು ಜನರ ಬಳಕೆಯಲ್ಲಿ ಸಾಮಾನ್ಯವಾಗಿದ್ದವು. ನನಗೆ ಹರಟೆಗೆ ಒಂದೊಳ್ಳೆ ವಿಷಯ ಒದಗಿಸಿಕೊಟ್ಟಿದ್ದಕ್ಕೆ ಅಂಕಣಕಾರರಿಗೂ ಪತ್ರಿಕೆಗೂ ಧನ್ಯವಾದಗಳು.

- ಡಿ.ಎಸ್. ಭಟ್, ಶಿರಸಿ

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ಸಾಧನಾ, ಡಾಲರ್ಸ್ ಕಾಲೋನಿ**
ಭಟ್ರೇ, ನನ್ನ ಮನೇಲಿ ಆಗಬಾರದ್ದು ಆಗಿ ರಸ್ತೆ ಜನ ಮನೆ ಮುಂದೆ ಸೇರಿದರೂ ಊರ ಜನ ಯಾಕೆ ತಲೆಕೆಡಿಸಿಕೊಳ್ಳಲ್ಲ?
– **‘ಸಾಧನಾ ಸಮಾವೇಶ’ ಅಂತ ಸುಮ್ಮನಾಗುತ್ತಾರೆ!**

- **ಚಂದ್ರಶೇಖರ ನಾಗೂರು, (ಇಮೇಲ್ ಮೂಲಕ)**
ಭಟ್ರೇ, ಅವಿವಾಹಿತರಿಗೆ ಮೀಸಲಾತಿ ಸಿಗೋದು ಯಾವಾಗ?
– **ಅವರು ‘ಒಳ’ ಮೀಸಲಾತಿ ಕೇಳುತ್ತಿರಬಹುದು!**

- **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ನೂರು ಪುಸ್ತಕ ಬರೆದು ಸೆಂಚುರಿ ಹೊಡೆದಿರಿ... ಡಬಲ್ ಸೆಂಚುರಿ ಯಾವಾಗ?
– **ಓದುಗರ ಮೇಲೆ ಆಕ್ರಮಣ ಮಾಡುವುದು ಸಲ್ಲ!**

- **ರಾಜಾರಾಮ ಹೆಗಡೆ, ಶಿರಸಿ**
ಭಟ್ರೇ, ನಮ್ಮ ಫೋನ್ ಹಾರುವಂತಾದರೆ?
– **ಯಾವುದಕ್ಕೂ ಒಮ್ಮೆ ಏರೋಪ್ಲೇನ್ ಮೋಡ್‌ನಲ್ಲಿಟ್ಟು ನೋಡು!**

- **ಶಂಕರ, ಬೆಂಗಳೂರು**
ಭಟ್ರೇ, ಯಾರೂ ನಿಮ್ಮನ್ನು ನೋಡ್ತಾ ಇಲ್ಲ ಅನ್ನುವಂತೆ ಡ್ಯಾನ್ಸ್ ಮಾಡಬೇಕಂತೆ?
– **ನಿಜ.. ಎಲ್ಲರೂ ಅವರವರ ಮೊಬೈಲ್ ಫೋನ್ ಚೆಕ್ ಮಾಡ್ತಾ ಇರ್ತಾರೆ!**

- **ಚಿನ್ಮಯ್ ಸುರೇಶ, ಕತ್ತರಿಗುಪ್ಪೆ**
ಭಟ್ರೇ, ನಿಮ್ಮ ದೇಹಕ್ಕೆ ಬೇಕಾಗುವಂತೆ ಮನಸ್ಸಿಗೂ ವ್ಯಾಯಾಮ ಬೇಕು ಅಂತಾರಲ್ಲ?
– **ಅದಕ್ಕಾಗಿ ಪ್ರತಿ ದಿನ ಜಾಗಿಂಗ್ ಬಗ್ಗೆ ಯೋಚಿಸಬೇಕು!**

- **ಸುಂದರ ಕಾಳಯ್ಯ, ಬೆಂಗಳೂರು**
ಭಟ್ರೇ, ಬುದ್ಧಿವಂತರೂ ಸೋಲುವುದು ಯಾವಾಗ?
– **ಮೂರ್ಖನಿಗೆ ನೀನು ಮೂರ್ಖ ಇದ್ದೀಯಾ ಎಂದು ಸಾಬೀತುಪಡಿಸಲು ಆಗದಿದ್ದಾಗ!**

- **ಭಾಗ್ಯ ರಾವ್, (ಇಮೇಲ್ ಮೂಲಕ)**
ಭಟ್ರೇ, ಕೆಲವರು ಸಣ್ಣ ಕೆಲಸ ಮಾಡಿದರೂ ಸುಸ್ತು ಅಂತಾರಲ್ಲ?
– **ಇನ್ನು ಕೆಲವರು ಸುಮ್ಮನಿದ್ದರೂ ಸುಸ್ತಾಯಿತು ಅಂತಾರೆ!**

- **ಕೇಶವ ಕುಲಕರ್ಣಿ, ಧಾರವಾಡ**
ಭಟ್ರೇ, ನಾವು ಮೂರ್ಖರಾಗಿದ್ದು ಖಾತ್ರಿಯಾದಾಗ ಏನು ಮಾಡಬೇಕು?
– **ನಮಗಿಂತ ಹೆಚ್ಚು ಮೂರ್ಖರು ಇದ್ದಾರಾ ಎಂದು ಸುತ್ತಲೂ ನೋಡಬೇಕು!**

- **ಜಗನ್ನಾಥ ಹವಾಲ್ದಾರ, ಹುಬ್ಬಳ್ಳಿ**
ಭಟ್ರೇ, ನೀವು ಟೈಟಾನಿಕ್ ಸಿನಿಮಾದಲ್ಲಿ ಏಕೆ ನಟಿಸಲಿಲ್ಲ?
– **ಎಲ್ಲರನ್ನೂ ಬದುಕಿಸುತ್ತಿದ್ದೆ ಅಂತ ನನ್ನನ್ನು ತೆಗೆದುಕೊಳ್ಳಲಿಲ್ಲ!**

ನಮ್ಮ ವಿವಿಗಳನ್ನು ಮುಚ್ಚುವ ಸ್ಥಿತಿ ಬರಬಹುದೇ?

ಉದ್ಯೋಗ ಮಾರುಕಟ್ಟೆಯಲ್ಲಿ ಶಿಕ್ಷಣ ಎಂದರೆ ಜ್ಞಾನಕ್ಕಿಂತಲೂ ಗಳಿಕೆಯ ಮಾರ್ಗವಾಗಿದೆ. ಮಾನವಿಕ ವಿಷಯಗಳೆಂದರೆ ಶೈಕ್ಷಣಿಕವಾಗಿ ದುರ್ಬಲ ವಿದ್ಯಾರ್ಥಿಗಳು ಅಥವಾ ಯಾವುದಕ್ಕೂ ಬೇಡವಾದವರು ಆಯ್ಕೆ ಮಾಡಿಕೊಳ್ಳುವ ವಿಭಾಗವೆಂಬ ತಪ್ಪು ಕಲ್ಪನೆ ಇದೆ. ಸಮಾಜಕ್ಕೆ ದಾರಿದೀಪ ತೋರಿದ ಡಾ. ರಾಧಾಕೃಷ್ಣನ್, ಕೈಲಾಸಂ, ಕುವೆಂಪು ಮೊದಲಾದ ನಮ್ಮ ಹಿರಿಯರು ಇದೇ ವಿಭಾಗದಲ್ಲಿ ಅರಳಿದವರು. ಜ್ಞಾನ ಶಾಖೆಗಳೆಲ್ಲವೂ ವಿಜ್ಞಾನದ ಕುಂಡಗಳಲ್ಲಿಯೇ ಅರಳಲು ಸಾಧ್ಯವಿಲ್ಲ.

ಲೋಕಮತ
ಲೋಕೇಶ್ ಕಾಯರ್ಗ
vveditoped@gmail.com
kaayarga@gmail.com

ಅಮೆರಿಕದ ಹೊಸ ವೀಸಾ ನೀತಿ ಮತ್ತು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಎಡಬಿಡಂಗಿ ನೀತಿಗಳಿಂದ ಅಮೆರಿಕದಲ್ಲಿ ಉನ್ನತ ಶಿಕ್ಷಣಕ್ಕೆ ತೆರಳುವ ಭಾರತೀಯ ವಿದ್ಯಾರ್ಥಿಗಳ ಸಂಖ್ಯೆ ಈ ಬಾರಿ ಗಣನೀಯವಾಗಿ ಕಡಿತಗೊಂಡಿದೆ. ವಾರ್ಷಿಕ ಸುಮಾರು 3 ಲಕ್ಷ ಭಾರತೀಯ ವಿದ್ಯಾರ್ಥಿಗಳು ಅಮೆರಿಕದಲ್ಲಿ ಉನ್ನತ ವ್ಯಾಸಂಗ ನಡೆಸಲು ಮುಂದಾಗುತ್ತಿದ್ದರು. ಈ ಬಾರಿ ಶೇ. 80ರಷ್ಟು ವಿದ್ಯಾರ್ಥಿಗಳು ಅಮೆರಿಕ ಬಿಟ್ಟು ಬೇರೆ ದೇಶಗಳಲ್ಲಿ ಉನ್ನತ ಅಧ್ಯಯನ ಕೈಗೊಳ್ಳಲು ಮುಂದಾಗಿದ್ದಾರೆ ಎಂಬ ವರದಿಗಳಿವೆ. ವಿಷಯ ಇದಲ್ಲ. ಅಮೆರಿಕದಲ್ಲಿ ಓದುವ ನಮ್ಮ ವಿದ್ಯಾರ್ಥಿಗಳ ಹೆಬ್ಬಯಕೆಯ ನಡುವೆ ನಮ್ಮ ವಿವಿ ಕ್ಯಾಂಪಸ್‌ಗಳು ಬಿಕೋ ಎನ್ನುತ್ತಿವೆ. ರಜತ ಮಹೋತ್ಸವ, ಸುವರ್ಣ ಮಹೋತ್ಸವ, ಶತಮಾನೋತ್ಸವ ಕಂಡ ರಾಜ್ಯದ ವಿವಿಗಳ ಕ್ಯಾಂಪಸ್‌ಗೆ ನೀವು ಒಮ್ಮೆ ಹೋಗಿ ಬಂದರೆ ಸಾಕು. ಇಲ್ಲಿ ಜೀವಂತಿಕೆ, ಲವಲವಿಕೆಯ ಯಾವ ಕುರುಹುಗಳೂ ಕಾಣುತ್ತಿಲ್ಲ.

ಕರ್ನಾಟಕದಲ್ಲಿ ಸದ್ಯದ ಮಟ್ಟಿಗೆ ವಿವಿಗಳಲ್ಲಿ ಸೀಟು ಪಡೆಯುವುದಕ್ಕಿಂತ ಕುಲಪತಿ ಹುದ್ದೆಗೆ , ಸಿಂಡಿಕೇಟ್, ಸೆನೆಟ್ ಸ್ಥಾನಕ್ಕೆ ಹೆಚ್ಚು ಪೈಪೋಟಿ ಇದೆ. ಎರಡು ಮೂರು ದಶಕಗಳ ಹಿಂದೆ ಇದೇ ವಿವಿಗಳಲ್ಲಿ ಸ್ನಾತಕೋತ್ತರ ಪದವಿಗೆ ಸೀಟು ಪಡೆಯಲು ವಿದ್ಯಾರ್ಥಿಗಳು ಮುಗಿ ಬೀಳುತ್ತಿದ್ದರು. ಇಲ್ಲಿ ಸೀಟು ಸಿಕ್ಕಿದೆ ಎಂದರೆ ಅದು ಹೆಮ್ಮೆ, ಪ್ರತಿಷ್ಠೆಯ ವಿಷಯವಾಗಿರುತ್ತಿತ್ತು. ಈಗ ಇದೇ ವಿವಿಗಳಲ್ಲಿ ಎಂ.ಎ ಓದುವವರಿಗಿಂತ ಎಮ್ಮೆಗಳ ಸಂಖ್ಯೆಯೇ ಹೆಚ್ಚು ಕಾಣಿಸುತ್ತಿದೆ. ಅಧಿಕ ಮಾಸದಲ್ಲಿ ದುರ್ಭಿಕ್ಷ ಎಂಬಂತೆ ಕೆಲವು ವಿವಿಗಳು ದೈನಂದಿನ ಆಡಳಿತ ನಡೆಸಲೂ ದುಡ್ಡಿಲ್ಲದೆ ಪರದಾಡುತ್ತಿವೆ. ಕೆಲವು ವಿವಿಗಳು ಬೇಡಿಕೆ ಕಡಿಮೆ ಇರುವ ಕೋರ್ಸ್‌ಗಳನ್ನು ಮುಚ್ಚಲು ಮುಂದಾಗಿವೆ. ಇನ್ನೊಂದೆಡೆ ವಿದ್ಯಾರ್ಥಿಗಳ ಪ್ರವೇಶ ಶುಲ್ಕ, ಪರೀಕ್ಷಾ ಶುಲ್ಕ ಹೆಚ್ಚಳದ ಮೂಲಕ ಆರ್ಥಿಕ ಸಂಪನ್ಮೂಲ ಕ್ರೋಢೀಕರಿಸಲು ಹೆಣಗಾಡುತ್ತಿವೆ.

ಹಾಗೆಂದು ಉನ್ನತ ಅಧ್ಯಯನಕ್ಕೆ ಮುಂದಾಗುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿಲ್ಲ. ಮೊದಲು ಮೈಸೂರು, ಮಂಗಳೂರು, ಧಾರವಾಡ, ಕಲಬುರ್ಗಿ ಮುಂತಾದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿರುವ ವಿವಿಗಳಲ್ಲಿ ಪ್ರವೇಶ ಪಡೆಯಲು ಇಚ್ಛಿಸುತ್ತಿದ್ದವರು ಈಗ ‘ಪ್ರತಿಷ್ಠಿತ’ ಎನಿಸಿಕೊಂಡ ಖಾಸಗಿ ವಿವಿಗಳನ್ನು ಸೇರಲು ತುದಿಗಾಲಲ್ಲಿ ನಿಂತಿದ್ದಾರೆ. ಇದಕ್ಕಾಗಿ ಲಕ್ಷಗಟ್ಟಲೆ ಫೀಸು ತೆರಲು ಸಿದ್ಧರಾಗಿದ್ದಾರೆ. ಕಡಿಮೆ ಫೀಸಿನ ಸರಕಾರಿ ಅಧೀನದ ವಿವಿಗಳತ್ತ ಇವರ ಆಕರ್ಷಣೆ ಕಡಿಮೆಯಾಗಿದೆ. ಇದೇ ಪ್ರವೃತ್ತಿ ಮುಂದುವರಿದರೆ ನಮ್ಮ ಕೆಲವು ವಿವಿಗಳನ್ನು ಮುಚ್ಚಬೇಕಾದ ಅನಿವಾರ್ಯತೆ ಬರಬಹುದು. ಈ ವಿವಿಗಳ ನೂರಾರು ಎಕರೆ ಕ್ಯಾಂಪಸ್ ಮೇಲೆ ರಿಯಲ್ ಎಸ್ಟೇಟ್ ಕಣ್ಣು ಬಿದ್ದರೂ ಅಚ್ಚರಿ ಇಲ್ಲ.

ಇದೇಕೇ ಹೀಗೆ ಎಂದು ಯೋಚಿಸಿದರೆ ಕಾರಣಗಳು ನೂರೆಂಟು. ನಮ್ಮ ರಾಜ್ಯದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದ ಪರಿಸ್ಥಿತಿ ಹದಗೆಟ್ಟಂತೆಯೇ ಉನ್ನತ ಶಿಕ್ಷಣವೂ ದಾರಿ ತಪ್ಪಿದೆ. ಶಿಕ್ಷಕರಿಗೆ, ಉಪನ್ಯಾಸಕರಿಗೆ ಸರಕಾರದ ಬೊಕ್ಕಸದಿಂದ ಸಂಬಳ ಕೊಡಲು ಸಿದ್ಧವಿಲ್ಲದ ಸರಕಾರ ನೂರಾರು ಖಾಸಗಿ ಶಾಲೆಗಳಿಗೆ, ವಿವಿಗಳಿಗೆ ಅನುಮತಿ ನೀಡಿದೆ. ಈಗ ಇದೇ ಶಾಲೆಗಳು, ವಿವಿಗಳು ಸರಕಾರ ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳಿಗೆ ಸಡ್ಡು ಹೊಡೆದು ನಿಂತಿವೆ. ಸರಕಾರಿ ಶಾಲೆಗಳು ಮುಚ್ಚುವ ಸುದ್ದಿಗಳ ಜತೆ ಇನ್ನು ಸರಕಾರಿ ಕಾಲೇಜು, ವಿವಿಗಳನ್ನು ಮುಚ್ಚುವ ಸುದ್ದಿಗಳು ಬರುವ ದಿನಗಳು ದೂರವಿದ್ದಂತಿಲ್ಲ.

ಖಾಸಗಿಯವರಿಗೆ ಶಿಕ್ಷಣವೂ ಒಂದು ಲಾಭ ಗಳಿಕೆಯ ದಂಧೆ. ವಿದ್ಯಾರ್ಥಿಗಳನ್ನು ಸೆಳೆಯಲು ಏನೆಲ್ಲಾ ಕಸರತ್ತುಗಳನ್ನು ಮಾಡಬೇಕೋ ಅವೆಲ್ಲವನ್ನೂ ಇವರು ಮಾಡುತ್ತಾರೆ. ಆಕರ್ಷಕ ಜಾಹೀರಾತುಗಳು, ಉದ್ಯೋಗಾಧಾರಿತ ಕೋರ್ಸ್‌ಗಳು, ಕ್ಯಾಂಪಸ್ ಉದ್ಯೋಗದ ಆಮಿಷಗಳು, ಯುಜಿಸಿ, ಎಐಸಿಟಿಇಯ ಶ್ರೇಣಿಗಳನ್ನು ಮುಂದಿಟ್ಟು ವಿದ್ಯಾರ್ಥಿಗಳನ್ನು ಬರಮಾಡಿಕೊಳ್ಳುತ್ತವೆ. ಖಾಸಗಿ ವಿವಿಗಳ ಸೀಮಿತ ಜಾಗದ ಕ್ಯಾಂಪಸ್ ನೋಡಿದರೆ ಸರಕಾರಿ ವಿವಿಗಳ ಕ್ಯಾಂಪಸ್ ದೊಡ್ಡದಿದೆ. ಅದ್ದೂರಿ ಅಲ್ಲದಿದ್ದರೂ ಹೊರಗಿನ ವಾತಾವರಣವೂ ಚೆನ್ನಾಗಿರುತ್ತದೆ. ಆದರೆ ಗತಕಾಲದ ಪಠ್ಯಕ್ರಮ, ಡಿಪಾರ್ಟ್‌ಮೆಂಟ್ ರಾಜಕೀಯ, ಜಾತಿ ರಾಜಕೀಯದ ನಡುವೆ ಕಲಿಕೆಗಿಂತಲೂ ಕಲಿಕೇತರ ವಿಷಯಗಳ ಮೇಲೆ ಆಸಕ್ತ ಬೋಧಕ ವರ್ಗ ಈ ವಿದ್ಯಾರ್ಥಿಗಳನ್ನು ಇಲ್ಲಿಗೆ ಬರದಂತೆ ತಡೆಯುತ್ತಿವೆ.

ಸರಕಾರಿ ವಿವಿಗಳನ್ನು ಅನುಸರಿಸಿ ಖಾಸಗಿ ವಿವಿಗಳು ಆರಂಭವಾದರೆ, ಈಗ ಪರಿಸ್ಥಿತಿ ಉಲ್ಟಾ. ಸರಕಾರಿ ವಿವಿಗಳನ್ನು ಉಳಿಸಲು ಖಾಸಗಿಯವರಂತೆ ಉದ್ಯೋಗಾಧಾರಿತ ಕೋರ್ಸ್‌ಗಳನ್ನು ಆರಂಭಿಸುವಂತೆ, ನಷ್ಟಕ್ಕೆ ಕಾರಣವಾಗುವ ಕೋರ್ಸ್‌ಗಳನ್ನು ಮುಚ್ಚುವಂತೆ ಸರಕಾರ ಈ ವಿವಿಗಳ ಮೇಲೆ ಒತ್ತಡ ಹೇರುತ್ತಿದೆ. ಇನ್ನು ಮುಂದೆ ವಿವಿಗಳೆಂದರೆ ನಿಮಗೆ ಬೇಕಾದ ವಿಷಯಗಳಲ್ಲಿ ಜ್ಞಾನಾರ್ಜನೆಗೆ ಅವಕಾಶ ನೀಡುವ ಕೇಂದ್ರಗಳಾಗಿ ಉಳಿಯುವುದಿಲ್ಲ. ವೃತ್ತಿಪರ ಕೋರ್ಸ್‌ಗಳನ್ನು ನಡೆಸುವ ಕಾಲೇಜು, ವಿವಿಗಳಂತೆ ಸಾಂಪ್ರದಾಯಿಕ ವಿವಿಗಳು ಬದಲಾಗುತ್ತಿವೆ. ಕಲೆ, ಭಾಷೆ, ಸಾಹಿತ್ಯ, ಇತಿಹಾಸದ ಸಂಶೋಧನೆಗಳಿಗೆ ಆದ್ಯತೆ ನೀಡುವ ಮಾನವಿಕ ಕೋರ್ಸ್‌ಗಳು ನಿಧಾನವಾಗಿ ಮರೆಗೆ ಸರಿಯುತ್ತಿವೆ.

ಹಿರಿಯ ಸಾಹಿತಿ ಎಸ್.ಎಲ್. ಭೈರಪ್ಪ ಅವರು ಮೈಸೂರು ವಿವಿಯಲ್ಲಿ ತತ್ವಶಾಸ್ತ್ರದ ವಿದ್ಯಾರ್ಥಿಯಾಗಿದ್ದವರು. ಈಗ ತತ್ವಶಾಸ್ತ್ರ ರಾಜ್ಯದ ಕೆಲವೇ ವಿವಿಗಳಲ್ಲಿ ಲಭ್ಯವಿರುವ, ಕೆಲವೇ ವಿದ್ಯಾರ್ಥಿಗಳಿರುವ ಕೋರ್ಸ್. ಬೇಡಿಕೆ ಇಲ್ಲ ಎನ್ನುವುದಕ್ಕಿಂತಲೂ ವಿದ್ಯಾರ್ಥಿಗಳ ಕೊರತೆ ನೆಪದಲ್ಲಿ ಸರಕಾರಿ ವಿವಿಗಳು ಹಲವು ಕೋರ್ಸ್‌ಗಳನ್ನು ನಿಲ್ಲಿಸಿವೆ. ದಶಕಗಳ ಹಿಂದೆ ಮಂಗಳೂರು ವಿವಿ ಹೊಸ ಕೋರ್ಸ್‌ಗಳನ್ನು ಆರಂಭಿಸುವ ಮೂಲಕ ರಾಜ್ಯದ ಇತರ ವಿವಿಗಳಿಗಿಂತ ಒಂದು ಹೆಜ್ಜೆ ಇತ್ತು. ಮೂರು ದಶಕಗಳ ಹಿಂದೆಯೇ ಈ ವಿವಿಯಲ್ಲಿ ಟಿಸಿಎಸ್ ಸಹಭಾಗಿತ್ವದಲ್ಲಿ ರಾಜ್ಯದ ಮೊಟ್ಟ ಮೊದಲ ಕಂಪ್ಯೂಟರ್ ಸೈನ್ಸ್ ಕೋರ್ಸ್ ಈ ವಿವಿಯಲ್ಲಿ ಆರಂಭವಾಗಿತ್ತು. ಆದರೆ ಈಗ ನಿಗದಿತ ಪ್ರಮಾಣದ ವಿದ್ಯಾರ್ಥಿಗಳಿಲ್ಲ ಎಂಬ ಕಾರಣಕ್ಕೆ ಒಂದೊಂದೇ ವಿಭಾಗಗಳಿಗೆ ಬೀಗ ಜಡಿಯಲಾಗುತ್ತಿದೆ.

ಮಂಗಳಗಂಗೋತ್ರಿ ಕ್ಯಾಂಪಸ್‌ನಲ್ಲಿ ಪರಿಸರ ವಿಜ್ಞಾನ, ಮೆಟಿರಿಯಲ್ ಸೈನ್ಸ್, ಜಿಯೋ ಇನ್ಫಾರ್ಮೆಟಿಕ್ಸ್ , ಎಲೆಕ್ಟ್ರಾನಿಕ್ಸ್ , ಸಂಖ್ಯಾಶಾಸ್ತ್ರ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ, ಪ್ರವಾಸೋದ್ಯಮ ಮೊದಲಾದ ವಿಭಾಗಗಳು ಈಗ ಇತಿಹಾಸದ ಪುಟ ಸೇರಲು ಸಿದ್ಧವಾಗಿವೆ. ಜತೆಗೆ ಮಂಗಳೂರು ವಿವಿ ಕಾಲೇಜಿನಲ್ಲಿದ್ದ ತುಳು, ಕೊಂಕಣಿ ಕೋರ್ಸ್‌ಗಳು, ಹಿಂದಿ, ಇಂಗ್ಲಿಷ್ ಮೇಜರ್ ಭಾಷಾ ಕೋರ್ಸ್‌ಗಳನ್ನು ಸ್ಥಗಿತಗೊಳಿಸಲಾಗಿದೆ. ಬೆಂಗಳೂರು ಉತ್ತರ ವಿವಿ ಯಲ್ಲೂ ಇದೇ ಪರಿಸ್ಥಿತಿ. ಪತ್ರಿಕೋದ್ಯಮ ಪ್ರಾಧ್ಯಾಪಕರಾಗಿ ಹೆಸರು ಮಾಡಿದ ನಿರಂಜನ ವಾನಳ್ಳಿ ಅವರು ಕುಲಪತಿಯಾಗಿರುವ ಈ ವಿವಿಯಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಇಂಗ್ಲಿಷ್ ಭಾಷಾ ವಿಭಾಗ ಸೇರಿದಂತೆ ಹಲವು ವಿಭಾಗಗಳನ್ನು ಮುಚ್ಚಲಾಗಿದೆ.

ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಕೆಲವು ಕೋರ್ಸ್‌ಗಳು ತಾಂತ್ರಿಕ ವಿವಿಯಲ್ಲಿ ಲಭ್ಯವಿದೆ ಎನ್ನುವ ಕಾರಣಕ್ಕೆ ವಿದ್ಯಾರ್ಥಿಗಳು ಆ ಕಡೆ ಆಸಕ್ತರಾಗಿದ್ದಾರೆ. ಆದರೆ ಮಾನವಿಕ ಕೋರ್ಸ್‌ಗಳ ಅಧ್ಯಯನಕ್ಕೆ ಸಾಂಪ್ರದಾಯಿಕ ವಿವಿಗಳಿಗಿಂತ ಪ್ರಶಸ್ತ ಸ್ಥಳ ಮತ್ತೊಂದಿಲ್ಲ. ಇಲ್ಲಿ ವಿದ್ಯಾರ್ಥಿಗಳು ಬಂದಿಲ್ಲ ಅಂದರೆ ಅವರನ್ನು ಆಕರ್ಷಿಸಲು ಈ ವಿವಿಗಳು ವಿಫಲವಾಗಿವೆ ಎಂದರ್ಥ. ಕಲಿಕೆ, ಅಧ್ಯಯನಕ್ಕಿಂತಲೂ ಜಾತಿ ರಾಜಕೀಯದ ಕೇಂದ್ರಗಳಾದ ವಿವಿಗಳಿಂದ ವಿದ್ಯಾರ್ಥಿಗಳು ದೂರ ಸರಿದಿರುವುದು ಸುಳ್ಳಲ್ಲ. ಸರಕಾರಿ ವಿವಿಗಳ ಈ ದೌರ್ಬಲ್ಯವೇ ಖಾಸಗಿ ವಿವಿಗಳ ಪಾಲಿಗೆ ವರದಾನವಾಗಿದೆ. ಜನಸಾಮಾನ್ಯರಿಗೂ ಸಿಗುವಂತಿದ್ದ ಉನ್ನತ ಶಿಕ್ಷಣ ಈಗ ವೃತ್ತಿಪರ ಶಿಕ್ಷಣದಂತೆ ದುಬಾರಿಯಾಗಿದೆ. ರಾಜ್ಯದಲ್ಲಿ ಪದವಿ ಪೂರ್ವ ಹಂತದಲ್ಲೇ ಕಲಾವಿಭಾಗವನ್ನು ನಿರ್ಲಕ್ಷಿಸಲಾಗುತ್ತದೆ. ಬೇರೆಲ್ಲೂ ಸೀಟು ಸಿಗದವರು ಆರ್ಟ್ಸ್ ಸೇರುತ್ತಾರೆ ಎಂಬ ವಾತಾವರಣ ಸೃಷ್ಟಿ ಮಾಡಲಾಗಿದೆ. ಪದವಿ ಹಂತದಲ್ಲೂ ಕಲಾ ವಿಭಾಗ ನಿರ್ಲಕ್ಷಿತ ವಿಭಾಗ. ಆದರೆ ಉತ್ತರದ ರಾಜ್ಯಗಳಲ್ಲಿ ಈ ಕೋರ್ಸ್‌ಗೆ ಈಗಲೂ ಬಲು ಬೇಡಿಕೆ ಇದೆ. ದಿಲ್ಲಿ ಸ್ಕೂಲ್ ಇಕಾನಾಮಿಕ್ಸ್ ಸೇರಿದಂತೆ ದಿಲ್ಲಿಯ ಹಲವು ಕಾಲೇಜುಗಳಿಗೆ ಸೇರಲು ದೇಶವ್ಯಾಪಿ ಸ್ಪರ್ಧೆ ಇದೆ. ನಮ್ಮ ರಾಜ್ಯದ ಹಲವು ಪ್ರತಿಭಾವಂತ ವಿದ್ಯಾರ್ಥಿಗಳು ಇಂತಹ ಪ್ರತಿಷ್ಠಿತ ಕಾಲೇಜುಗಳಲ್ಲಿ ಪ್ರವೇಶ ಪರೀಕ್ಷೆ ಬರೆದು ಅಲ್ಲಿ ಸೇರುತ್ತಿದ್ದಾರೆ.

ಎಂಜಿನಿಯರಿಂಗ್ ಮತ್ತು ಮೆಡಿಕಲ್ ಶಿಕ್ಷಣವೊಂದನ್ನೇ ಗುರಿಯಾಗಿಸಿಕೊಂಡಿರುವ ನಮ್ಮ ಸರಕಾರ ಮತ್ತು ಪಾಲಕರು ಬೇರೆಡೆಗೆ ಗಮನಹರಿಸಲು ಸಿದ್ಧರಿಲ್ಲ. ಅದರಲ್ಲೂ ಇತ್ತೀಚೆಗೆ ಎಂಜಿನಿಯರಿಂಗ್ ಶಿಕ್ಷಣ ಎಂದರೆ ಕಂಪ್ಯೂಟರ್ ಶಿಕ್ಷಣ ಮಾತ್ರ ಎಂದಾಗಿದೆ. ನೂರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿರುವ ನಮ್ಮ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಹಲವು ಕೋರ್ಸ್‌ಗಳು ಈಗಾಗಲೇ ತೆರೆಮರೆಗೆ ಸರಿದಿವೆ. ಎಲೆಕ್ಟ್ರಾನಿಕ್ಸ್ ಮತ್ತು ಇನ್‌ಸ್ಟ್ರುಮೆಂಟೇಶನ್ ಇಂಜಿನಿಯರಿಂಗ್, ಮ್ಯಾನುಫ್ಯಾಕ್ಚರಿಂಗ್ ಇಂಜಿನಿಯರಿಂಗ್, ಇಂಡಸ್ಟ್ರಿಯಲ್ ಇಂಜಿನಿಯರಿಂಗ್, ಟೆಕ್ಸ್‌ಟೈಲ್ ಇಂಜಿನಿಯರಿಂಗ್, ಪಾಲಿಮರ್ ಇಂಜಿನಿಯರಿಂಗ್, ಟೆಲಿ ಕಮ್ಯೂನಿಕೇಷನ್ ಇಂಜಿನಿಯರಿಂಗ್ ಮೊದಲಾದ ಹಲವು ಕೋರ್ಸ್‌ಗಳಿಗೆ ಬಹುತೇಕ ಕಾಲೇಜುಗಳಿಗೆ ಬೀಗ ಜಡಿಯಲಾಗಿದೆ.

ಕೆಲವು ವರ್ಷಗಳ ಹಿಂದೆ ಬಲು ಬೇಡಿಕೆಯ ಕೋರ್ಸ್‌ಗಳಾಗಿದ್ದ ಸಿವಿಲ್, ಮೆಕ್ಯಾನಿಕಲ್, ಏರೋನಾಟಿಕಲ್ ಮೊದಲಾದ ಕೋರ್ಸ್‌ಗಳಲ್ಲೂ ಇತ್ತೀಚೆಗೆ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿದೆ. ಇವುಗಳ ಜಾಗದಲ್ಲಿ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿಯೇ ಹಲವು ಶಾಖೆಗಳಾಗಿ ಕವಲೊಡೆದ ಎಐಎಂಎಲ್, ಡಾಟಾ ಸೈನ್ಸ್, ಸೈಬರ್ ಸೆಕ್ಯೂರಿಟಿ ಮುಂತಾದ ಕೋರ್ಸ್‌ಗಳನ್ನು ಆರಂಭಿಸಲಾಗಿದೆ. ಸಾವಿರಾರು ವಿದ್ಯಾರ್ಥಿಗಳಿರುವ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಅರ್ಧಕ್ಕಿಂತ ಹೆಚ್ಚು ಮಂದಿ ಇದೊಂದೇ ಶಾಖೆಯಲ್ಲಿದ್ದಾರೆ.

ಎಐ ತಂತ್ರಜ್ಞಾನದ ಪ್ರಭಾವ ಈಗಾಗಲೇ ಎಲ್ಲ ಕ್ಷೇತ್ರಗಳ ಮೇಲೆ ಪ್ರಭಾವ ಬೀರಿದೆ. ಟೆಕ್ ದೈತ್ಯ ಕಂಪನಿ ಟಿಸಿಎಸ್ ಸುಮಾರು 12 ಸಾವಿರ ಹಿರಿಯ ಉದ್ಯೋಗಿಗಳನ್ನು ಮನೆಗೆ ಕಳುಹಿಸಲು ಮುಂದಾಗಿದೆ. ಶಿಕ್ಷಣದ ಈ ಏಕಮುಖಿ ಪ್ರವಾಹ ನಮ್ಮ ದೇಶದ ಬೆಳವಣಿಗೆಗೆ ಅಡ್ಡಿಯಾದರೆ ಅಚ್ಚರಿಯೇನೂ ಇಲ್ಲ. ಶಿಕ್ಷಣ ವ್ಯಕ್ತಿಯ ಸಮಗ್ರ ಬೆಳವಣಿಗೆಗೆ ಪೂರಕವಾಗಿರಬೇಕು. ಹಾಗೆಯೇ ಶಿಕ್ಷಣ ವ್ಯವಸ್ಥೆ ದೇಶದ ಸರ್ವತೋಮುಖ ಏಳಿಗೆಗೆ ಸಹಕಾರಿಯಾಗಿರಬೇಕು. ಈ ನಿಟ್ಟಿನಲ್ಲಿ ನಮ್ಮ ವಿವಿ ಕ್ಯಾಂಪಸ್‌ಗಳಿಗೆ ಮತ್ತೆ ಜೀವ ತುಂಬಬೇಕಾಗಿದೆ.

ಅಭಿಮತ

ಬಿಂಡಿಗನವಿಲೆ ಭಗವಾನ್

ಭಾಷೆಯ ಕಲಿಕೆ ‘ಓಕೆ’ ವ್ಯಾಕರಣದ ಬಂಧ ‘ಯಾಕೆ?’

ಮಗುವು ವ್ಯಾಕರಣದ ಹಂಗಿಲ್ಲದೆ ತಾಯ್ನುಡಿಯನ್ನು ಕಲಿಯುತ್ತದೆ. ಇದು ಮಗುವಿನ ಬೆಳವಣಿಗೆಯ ಅದ್ಭುತಗಳಲ್ಲೊಂದು. ಮಗುವು ಮಾತು ಕಲಿಯುವ ಹಂತದಲ್ಲಿ ‘‘ನೋಡು ಮರೀ, ಇದು ಕರ್ತೃಪದ, ಇದೇ ಕ್ರಿಯಾಪದ, ಇದು ಕರ್ಮಪದ...’’ ಎಂದು ಹಿರಿಯರೇನೂ ವಿವರಿಸುವುದಿಲ್ಲ! ಉಣಿಸುವ ಮೊದಲೇ ತಟ್ಟೆ, ಬಟ್ಟಲನ್ನು ಪರಿಚಯಿಸಿದರೆ ಎಂಥ ವಿಪರ್ಯಾಸ? ಮುಂದೆ ಮಗುವಿಗೆ ಆ ಪರಿಕರಗಳ ತಿಳಿವಳಿಕೆ ಆಗಿಯೇ ತೀರುವುದು. ಮಗುವು ತಾನು ಆಲಿಸಿದ ಒಂದು ಪದವನ್ನು ಪುನರುಚ್ಚರಿಸುತ್ತದೆ. ನಂತರ ಎರಡು ಅಥವಾ ಮೂರು ಪದಗಳ ಸಣ್ಣ ಪುಟ್ಟ ವಾಕ್ಯಗಳನ್ನು ಸೃಷ್ಟಿಸಿಕೊಳ್ಳುತ್ತದೆ. ತದನಂತರ ಸಂಕೀರ್ಣವಾದ ವಾಕ್ಯಗಳನ್ನು ರಚಿಸುತ್ತದೆ. ಗಮನಿಸಿ, ಇವು ವ್ಯಾಕರಣರಹಿತ ವಾಕ್ಯಗಳು. ಮಗುವು ಕಾಲಕ್ರಮೇಣ ಸರಿಯಾದ ವಾಕ್ಯಗಳೊಂದಿಗೆ ಮಾತಾಡುವ ಸಾಮರ್ಥ್ಯವನ್ನು ಗಳಿಸುತ್ತದೆ. ‘ವ್ಯಾಕರಣವನ್ನು ಕಲಿಯದೆ, ಭಾಷೆಯನ್ನು ಕಲಿಯಲಾಗದು’ ಎನ್ನುವ ಅನಿವಾರ್ಯತೆಯನ್ನು ಮಕ್ಕಳಲ್ಲಿ ಬಿತ್ತುವುದು ಸರಿಯಲ್ಲ.

ಭಾಷೆಗಳನ್ನು ಕಲಿಯುವ ನಿಟ್ಟಿನಲ್ಲಿ, ಜಗತ್ತಿನಾದ್ಯಂತದ ಶಿಕ್ಷಣಕ್ರಮಗಳಲ್ಲಿ ವ್ಯಾಕರಣಕ್ಕೇ ಅನಗತ್ಯ ಒತ್ತು ನೀಡಲಾಗುತ್ತದೆ. ‘ವ್ಯಾಕರಣವೇ ಭಾಷೆಗೆ ವಾಗ್ಬಲ, ಅಡಿಪಾಯ’ ಎಂಬ ನಿಲುವು ಮಕ್ಕಳ ಸಹಜ ಕಲಿಕೆಗೆ ತಡೆಯೊಡ್ಡುತ್ತದೆ. ವ್ಯಾಕರಣ ಕಲಿತೂ ಹಲವು ಸಂದರ್ಭಗಳಲ್ಲಿ ಮಕ್ಕಳು ಆಯಾ ಭಾಷೆಯಲ್ಲಿ ನಿರರ್ಗಳವಾಗಿ ಮಾತಾಡಲು ವಿಫಲವಾಗುವುದಿದೆ. ‘ವ್ಯಾಕರಣ ಗೊತ್ತಾದರೆ ಮಾತ್ರವೇ ಭಾಷೆ’ ಎಂಬ ಭಯ, ಕೀಳರಿಮೆಯೆ ಇದಕ್ಕೆ ಕಾರಣ. ಉದಾಹರಣೆಗೆ ಕನ್ನಡದ ಸಂದರ್ಭವನ್ನೇ ತೆಗೆದುಕೊಳ್ಳೋಣ. 2–3 ವರ್ಷ ವಯಸ್ಸಿನ ಮಗುವು, ಹೆತ್ತವರು ಹೆಮ್ಮೆಪಡುವಂತೆ ಅಚ್ಚುಕಟ್ಟಾಗಿ ಮಾತಾಡುತ್ತದೆ; ಅದೇನೂ ವ್ಯಾಕರಣ, ನಿಘಂಟು ಹಿಡಿದಿರುವುದಿಲ್ಲ! ವ್ಯಾಕರಣದ ಗೊಡವೆಯಿರದ ಮಾತದು. ಮಾತು ಕಲಿತ ಮೇಲೆಯೆ ಮಗು ಶಾಲೆಗೆ. ತರಗತಿಯಲ್ಲಿ ಕೂತ ನಂತರವಷ್ಟೇ ಮಗುವಿಗೆ ‘ವ್ಯಾಕರಣ ಎನ್ನುವುದಿದೆ’ ಅಂತ ಗೊತ್ತಾಗುವುದು. ಹಾಗೆ ನೋಡಿದರೆ, ಮನುಷ್ಯರ ಪರಸ್ಪರ ಸಂವಹನ ಪ್ರಾರಂಭವಾದ್ದು ಮಾತಿನಿಂದಲೇ. ಸರಿಸುಮಾರು ಕ್ರಿ.ಪೂ. 3500ರ ನಂತರವಷ್ಟೇ ಅದು ಲಿಖಿತ ರೂಪಗಳನ್ನು ಕಾಣಲಾರಂಭಿಸಿದ್ದು.

ಒಂದು ಭಾಷೆಯನ್ನು ಆಸಕ್ತಿಯಿಂದ ಆಲಿಸುವುದೇ ಅದನ್ನು ಕಲಿಯುವುದಕ್ಕೆ ಇರುವ ರಾಜಮಾರ್ಗ. ಹೆಚ್ಚೆಚ್ಚು ಕೇಳಿದಂತೆ, ಆಡಲು ಯತ್ನಿಸಿದಂತೆ ಆ ಭಾಷೆಯಲ್ಲಿ ನಿರರ್ಗಳತೆ ಪ್ರಾಪ್ತವಾಗುವುದು. ನಾವು ಯಾವುದನ್ನು ವ್ಯಾಕರಣದ ನಿಯಮಗಳೆನ್ನುತ್ತೇವೋ, ಅವು ಆಂತರ್ಯದಲ್ಲಿ ಸ್ವೀಕೃತವಾಗಿರುತ್ತವೆ. ಕಲಿಯುವ ಅಪೇಕ್ಷೆಯಿದ್ದರೂ ನಮ್ಮ ಪಾಲಿಗೆ ಅಸಾಧ್ಯವೆನ್ನಿಸುವ ಕೆಲ ವಿದೇಶಿ ಭಾಷೆಗಳೆಷ್ಟೋ? ಅದಕ್ಕೆ ಕಾರಣ ನಮಗೆ ನಾವೇ ವಿಧಿಸಿಕೊಳ್ಳುವ ‘ವ್ಯಾಕರಣ ಬಂಧನ’. ‘ಸಂಭಾಷಣೆಗಾಗಿ ಸಂಸ್ಕೃತ’ ಅಭಿಯಾನದಲ್ಲಿ ತೊಡಗಿಸಿಕೊಂಡಿರುವ ‘ಸಂಸ್ಕೃತ ಭಾರತಿ’ ಎಂಬ ಭಾರತ ಮೂಲದ ಅಂತಾರಾಷ್ಟ್ರೀಯ ಸಂಸ್ಥೆಯಲ್ಲಿ ಗುರುಗಳು ನೇರವಾಗಿ ಸಂಸ್ಕೃತದ ಮೂಲಕವೇ ಸಂಸ್ಕೃತ ಮಾತಾಡುವುದನ್ನು ಹೇಳಿಕೊಡುತ್ತಾರೆ. ವಾಕ್ಯದ ವಿಭಜನೆಯಾಗಲೀ, ವಚನ, ಲಿಂಗ, ಸಮಾಸ, ಪ್ರತ್ಯಯ ಇತ್ಯಾದಿ ಶಬ್ದಗಳೇ ಆಗಲಿ ತರಬೇತಿ ತರಗತಿಯಲ್ಲಿ ಕೇಳವು. ಅಮೆರಿಕದಲ್ಲಿ ಏರ್ಪಡಿಸಿದ್ದ ಸಂಭಾಷಣಾ ಶಿಬಿರವೊಂದರಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಪ್ರಾಧ್ಯಾಪಕರು ನೀಡಿದ ಆಭಯ ಹೀಗಿತ್ತು– ‘‘ಭಾಷೆಗೆ ಬೇಕಾದ್ದು ಭಕ್ತಿಯೇ ಹೊರತು, ವಿಭಕ್ತಿ ಅಲ್ಲ!’’ ಭಾಷೆ ಎಂಬುದು ಒಂದು ಸಾಮಾಜಿಕ ಪರಿಕರ. ಮಕ್ಕಳು ಸಾಮಾಜಿಕ ಒಡನಾಟ ಮತ್ತು ಸಂವಹನೆಯಿಂದ ಭಾಷೆಯನ್ನು ಕಲಿಯುತ್ತಾರೆ. ಸಂಭಾಷಣೆ, ಪ್ರಶ್ನೋತ್ತರ, ಆಟೋಟ ಮುಂತಾದವು ಅವರ ಅಭಿವ್ಯಕ್ತಿ ಕೌಶಲವನ್ನು ವರ್ಧಿಸುತ್ತವೆ. ಈಗಾಗಲೇ ಗೊತ್ತಿರುವ ಭಾಷೆಯನ್ನೇ ತಳಹದಿಯಾಗಿಸಿಕೊಂಡು ಮಕ್ಕಳು ಇನ್ನೊಂದು ಮತ್ತೊಂದು ಭಾಷೆಯನ್ನು ಕಲಿಯಲು ಯತ್ನಿಸುತ್ತಾರೆ. ವ್ಯಾಕರಣವನ್ನು ಶಾಲೆಗಳಲ್ಲಿ ಬೋಧಿಸಬೇಕಿಲ್ಲ, ಅದು ಸ್ವಯಂ ಅರಿವಿಗೆ ಬಂದಿರುತ್ತದೆ. ‘ನಾಳೆ ಬಂದೆ’ ಎಂದೋ, ‘ನಿನ್ನೆ ಪತ್ರ ಬರಲಿದೆ’ ಅಥವಾ ‘ಅವನು ಬಂದಳು’ ಎಂದೋ ವಾಕ್ಯದಲ್ಲಿ ಬಂದರೆ ಯಾವುದೇ ವಿದ್ಯಾರ್ಥಿಯು ಆ ‘ಎಡವಟ್ಟನ್ನು’ ಗುರುತಿಸಬಲ್ಲ. ಭಾಷಾ ಕೌಶಲಗಳಿಗೆ ವ್ಯಾಕರಣವು ಪೂರಕವೆನ್ನುವುದರಲ್ಲಿ ಎರಡು ಮಾತಿಲ್ಲ. ನಿಷ್ಠುರ ಮಾತೆಂದರೆ, ವಿದ್ಯಾಲಯದಲ್ಲಿ ವ್ಯಾಕರಣದ ಅಧ್ಯಯನಕ್ಕೆ ಅವಕಾಶವಿಲ್ಲದಿದ್ದರೆ ಅದು ದೊಡ್ಡ ಕೊರತೆಯೇನಲ್ಲ.

(ಲೇಖಕರು ಹಿರಿಯ ಸಾಹಿತಿ)

ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಮೂಲಸೌಕರ್ಯ ಕ್ಷೇತ್ರದ ಪಾತ್ರ ಮಹತ್ವದ್ದು

ಕೇಂದ್ರ ಸರಕಾರದ ದೂರದೃಷ್ಟಿ ಹಾಗೂ ಕೇಂದ್ರ ಹೆದ್ದಾರಿ ಮತ್ತು ಭೂಸಾರಿಗೆ ಸಚಿವ ನಿತಿನ್ ಗಡ್ಕರಿಯವರ ದಕ್ಷತೆ ಮತ್ತು ಬದ್ಧತೆಯ ಫಲವಾಗಿ ರಾಷ್ಟ್ರೀಯ ಹೆದ್ದಾರಿ ಯೋಜನೆಗಳು ಶರವೇಗದಲ್ಲಿ ನಡೆಯುತ್ತಿವೆ. ಈ ನಿಟ್ಟಿನಲ್ಲಿ ಗಡ್ಕರಿಯವರು ತಾವು ತೋರಿರುವ ದಕ್ಷತೆ ಮತ್ತು ಸಾಮರ್ಥ್ಯದಿಂದಾಗಿ ಕೇಂದ್ರ ಸಂಪುಟದಲ್ಲಿ ಕಳೆದ 11 ವರ್ಷಗಳಿಂದ ಒಂದೇ ಖಾತೆಯನ್ನು ಹೊಂದಿರುವ ಏಕೈಕ ಸಚಿವರೆನಿಸಿಕೊಂಡಿದ್ದಾರೆ ಮತ್ತು ಇವರ ಕಾರ್ಯವೈಖರಿಯನ್ನು ಎಲ್ಲಾ ನಾಯಕರು ಹಾಗೂ ಜನರು ಮುಕ್ತ ಕಂಠದಿಂದ ಪ್ರಶಂಸಿಸುತ್ತಾರೆ.



ಚಿಮ್ಮುಹಲಗೆ
ಚೇರ್ಕಾಡಿ ಸಚ್ಚಿದಾನಂದ ಶೆಟ್ಟಿ
vveditoped@gmail.com

ಕೋವಿಡ್ ಸಾಂಕ್ರಾಮಿಕದ ಬಳಿಕ ಬದಲಾದ ಕೇಂದ್ರ ಸರಕಾರದ ಆರ್ಥಿಕ ಧೋರಣೆಗಳು, ಪ್ರಧಾನಿಯವರ ದೂರದೃಷ್ಟಿ ಯೋಜನೆಗಳು, ಮೂಲಸೌಕರ್ಯ ಮತ್ತು ಬಂಡವಾಳ ವೆಚ್ಚಕ್ಕೆ ನೀಡಿದ ಆದ್ಯತೆ, ಅನಗತ್ಯ ವೆಚ್ಚಗಳಿಗೆ ಹಾಕಲಾದ ಕಡಿವಾಣ ಮುಂತಾದವುಗಳಿಂದಾಗಿ ದೇಶದ ಆರ್ಥಿಕತೆ ನಿರೀಕ್ಷೆಗೂ ಮೀರಿ ಬೆಳವಣಿಗೆ ಸಾಧಿಸುತ್ತಿದೆ. ಆರ್ಥಿಕ ಸುಧಾರಣೆಯ ಕ್ರಮಗಳು ಭಾರತದ ಆರ್ಥಿಕತೆ ಮತ್ತು ಹಣದುಬ್ಬರದ ಮೇಲೆ ಸಕಾರಾತ್ಮಕ ಪರಿಣಾಮ ಬೀರಿವೆ. ಹೆಚ್ಚಿನ ರಾಷ್ಟ್ರಗಳು ಹಣದುಬ್ಬರ, ಆರ್ಥಿಕತೆಯ ಮಂದಗತಿಯನ್ನು ಎದುರಿಸುತ್ತಿವೆ. ಆದರೆ ಭಾರತದ ಆರ್ಥಿಕತೆ ನಿರಂತರವಾಗಿ ಬೆಳವಣಿಗೆ ಕಾಣುತ್ತಿದೆ. ಅನಗತ್ಯ ವೆಚ್ಚಗಳಿಗೆ ಕಡಿವಾಣ ಹಾಕಲಾಗಿದೆ. ಆ ಮೂಲಕ ವಿತ್ತೀಯ ಕೊರತೆ ಮತ್ತು ಸಾರ್ವಜನಿಕ ಸಾಲದ ಹೊರೆಯನ್ನು ತಗ್ಗಿಸಲಾಗುತ್ತಿದೆ ಎಂದು ಅಮೆರಿಕದ ಹಣಕಾಸು ಸೇವಾ ಸಂಸ್ಥೆ ಮೊರ್ಗಾನ್ ಸ್ಟಾನ್ಲಿ ತನ್ನ ವರದಿಯಲ್ಲಿ ಮೆಚ್ಚುಗೆ ವ್ಯಕ್ತಪಡಿಸಿದೆ. ಅಲ್ಲದೆ ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಲಾಗಿದ್ದು ಅದರ ಸಕಾರಾತ್ಮಕ ಪರಿಣಾಮಗಳು ಆರ್ಥಿಕಾಭಿವೃದ್ಧಿಯಲ್ಲಿ ಗೋಚರವಾಗುತ್ತಿದೆಯೆಂದೂ ಸದರಿ ಸಂಸ್ಥೆ ವರದಿ ಮಾಡಿದೆ. ಕೋವಿಡ್‌ಗೆ ಮೊದಲು ಅಂದರೆ 2020ನೇ ಹಣಕಾಸು ವರ್ಷದಲ್ಲಿ ಕೇಂದ್ರದ ಬಂಡವಾಳ ವೆಚ್ಚದ ಪ್ರಮಾಣ ಜಿಡಿಪಿಯ ಶೇ. 1.6ರಷ್ಟಿದೆ. ಇದು 2025 ರಲ್ಲಿ ಶೇ. 3.2ಕ್ಕೆ ಏರಿಕೆಯಾಗಿದೆ.

ಬಂಡವಾಳ ವೆಚ್ಚವೆಂದರೆ ಸಾರಿಗೆ, ಶಿಕ್ಷಣ, ಆರೋಗ್ಯ, ವಿದ್ಯುತ್, ಇಂಧನ ಮೊದಲಾದ ವಲಯಗಳ ಮೂಲಸೌಕರ್ಯ ಅಭಿವೃದ್ಧಿಗೆ ಸರಕಾರ ಮಾಡುವ ವೆಚ್ಚವಾಗಿದೆ. ಮೂಲಸೌಕರ್ಯ ಕ್ಷೇತ್ರದಲ್ಲಿನ ಸುಧಾರಣೆಗಳು ಜನಜೀವನ ಸುಧಾರಿಸುವಲ್ಲಿ ಹಾಗೂ ಸಂಕಷ್ಟಗಳನ್ನು ನಿವಾರಿಸಲು ಸಹಕಾರಿಯಾಗುತ್ತವೆ. ಭಾರತ ಈಗ ವರ್ಷಕ್ಕೆ 11 ಲಕ್ಷ ಕೋಟಿ ರುಪಾಯಿಯಷ್ಟು ಮೊತ್ತವನ್ನು ಮೂಲಸೌಕರ್ಯ ಕ್ಷೇತ್ರಕ್ಕಾಗಿ ವಿನಿಯೋಗಿಸುತ್ತಿದೆ. ಹಾಗಾಗಿ ಗ್ರಾಮೀಣ ರಸ್ತೆ, ಹೆದ್ದಾರಿ, ರೈಲ್ವೆ, ವಿಮಾನ ನಿಲ್ದಾಣಗಳ ಜಾಲ ವೇಗವಾಗಿ ವಿಸ್ತರಣೆಯಾಗುತ್ತಿದೆ.

ಕೇಂದ್ರ ಸರಕಾರದ ದೂರದೃಷ್ಟಿ ಹಾಗೂ ಕೇಂದ್ರ ಹೆದ್ದಾರಿ ಮತ್ತು ಭೂಸಾರಿಗೆ ಸಚಿವ ನಿತಿನ್ ಗಡ್ಕರಿಯವರ ದಕ್ಷತೆ ಮತ್ತು ಬದ್ಧತೆಯ ಫಲವಾಗಿ ರಾಷ್ಟ್ರೀಯ ಹೆದ್ದಾರಿ ಯೋಜನೆಗಳು ಶರವೇಗದಲ್ಲಿ ನಡೆಯುತ್ತಿವೆ. ಈ ನಿಟ್ಟಿನಲ್ಲಿ ಗಡ್ಕರಿಯವರು ತಾವು ತೋರಿರುವ ದಕ್ಷತೆ ಮತ್ತು ಸಾಮರ್ಥ್ಯದಿಂದಾಗಿ ಕೇಂದ್ರ ಸಂಪುಟದಲ್ಲಿ ಕಳೆದ 11 ವರ್ಷಗಳಿಂದ ಒಂದೇ ಖಾತೆಯನ್ನು ಹೊಂದಿರುವ ಏಕೈಕ ಸಚಿವರೆನಿಸಿಕೊಂಡಿದ್ದಾರೆ ಮತ್ತು ಇವರ ಕಾರ್ಯವೈಖರಿಯನ್ನು ಎಲ್ಲಾ ನಾಯಕರು ಹಾಗೂ ಜನರು ಮುಕ್ತ ಕಂಠದಿಂದ ಪ್ರಶಂಸಿಸುತ್ತಾರೆ. ಗುಣಮಟ್ಟದ ಕಾಮಗಾರಿಯು ನಡೆಯುತ್ತಿರುವುದರಿಂದ ರಸ್ತೆಗಳ ಚಹರೆ ಬದಲಾಗುತ್ತಿದೆ. ನಗರಗಳ ನಡುವಿನ ಅಂತರ ಕಡಿಮೆಯಾಗಿ ಅಪಾರ ಸಮಯ ಹಾಗೂ ಇಂಧನ ಉಳಿತಾಯವಾಗುತ್ತಿದೆ.

‘‘ಅಮೆರಿಕವು ಶ್ರೀಮಂತ ದೇಶವಾಗಿರುವುದರಿಂದ ಇಲ್ಲಿ ಉತ್ತಮ ರಸ್ತೆಗಳಿವೆ ಎಂದೇನಲ್ಲ, ಬದಲಿಗೆ ಉತ್ತಮ ರಸ್ತೆಗಳಿರುವುದರಿಂದಲೇ ಅಮೆರಿಕ ಶ್ರೀಮಂತ ದೇಶವಾಗಿದೆ’’ ಎಂಬ ಮಾತನ್ನು ಅಮೆರಿಕದ ಅಂದಿನ ಅಧ್ಯಕ್ಷ ಜಾನ್ ಎಫ್. ಕೆನಡಿಯವರು ಹೇಳಿದ್ದರು. ಈ ಉಪಮೆಯನ್ನು ದೆಹಲಿಯ ಟ್ರಾನ್ಸ್‌ಪೋರ್ಟ್ ಭವನದಲ್ಲಿರುವ ರಸ್ತೆ ಮತ್ತು ಹೆದ್ದಾರಿ ಸಚಿವಾಲಯದ ಕಚೇರಿಯಲ್ಲಿ ಹಾಕಲಾಗಿದೆ. ಕೇಂದ್ರ ಸರಕಾರವು ದೃಢ ಸಂಕಲ್ಪದೊಂದಿಗೆ ಅಮೆರಿಕದ ರಸ್ತೆಗಳ ಗುಣಮಟ್ಟ, ವೇಗ, ಪಾರದರ್ಶಕತೆ ಮತ್ತು ಪರಿಸರ ಸ್ನೇಹಿ ನೀತಿ ಇತ್ಯಾದಿ ವಿಷಯಗಳ ಬಗ್ಗೆ ಸಮತೋಲನ ಕಾಯ್ದುಕೊಳ್ಳುವ ಮೂಲಕ ಭಾರತದ ರಾಷ್ಟ್ರೀಯ ಹೆದ್ದಾರಿ ಜಾಲವು ವಿಶ್ವದಲ್ಲಿಯೇ ಮನ್ನಣೆ ಪಡೆಯಲು ಶ್ರಮಿಸುತ್ತಿದೆ.

2018ರಲ್ಲಿ ಮಹತ್ವಪೂರ್ಣ ‘ಭಾರತಮಾಲಾ ಪರಿಯೋಜನೆ’ಯನ್ನು ಕೈಗೆತ್ತಿಕೊಳ್ಳಲಾಯಿತು. ಈ ಯೋಜನೆಯ ಮೂಲಕ 550 ಜಿಲ್ಲೆಗಳಿಗೆ ರಾಷ್ಟ್ರೀಯ ಹೆದ್ದಾರಿ ಸಂಪರ್ಕ ದೊರೆಯಲಿದೆ. ಇದರಲ್ಲಿ ಆರ್ಥಿಕ ಕಾರಿಡಾರ್, ಕೈಗಾರಿಕಾ ಕಾರಿಡಾರ್ ಮತ್ತು ಲಾಜಿಸ್ಟಿಕ್ ಸಂಪರ್ಕ ಲಭ್ಯವಿರುವುದು. 2026ಕ್ಕೆ ಇದು ಮುಗಿಯುವ ಸಂಭವವಿದೆ. ಇದರಲ್ಲಿ 65,000 ಕಿ.ಮೀ. ರಸ್ತೆ ನಿರ್ಮಿಸುವ ಗುರಿಯಿದೆ. ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದ ಈ ಕೆಲಸವು ಆರ್ಥಿಕ ಚಟುವಟಿಕೆಗಳನ್ನು ಹೆಚ್ಚಿಸಿರುವುದಲ್ಲದೆ ಅನೇಕ ಉದ್ಯೋಗಾವಕಾಶಗಳನ್ನು ಸೃಷ್ಟಿಸಿದೆ. 10 ವರ್ಷಗಳಲ್ಲಿ ರಾಷ್ಟ್ರೀಯ ಹೆದ್ದಾರಿ ಜಾಲವನ್ನು ಶೇ. 60ರಷ್ಟು ವಿಸ್ತರಿಸಲಾಗಿದೆ. 91000 ಕಿ.ಮೀ.ವರೆಗೆ ಅದು ಹೆಚ್ಚಾಗಿದೆ. ‘ಐಐಎಂ ಬೆಂಗಳೂರು’ ನಡೆಸಿದ ಅಧ್ಯಯನದ ವರದಿಯ ಪ್ರಕಾರ, ರಾಷ್ಟ್ರೀಯ ಹೆದ್ದಾರಿ ನಿರ್ಮಾಣಕ್ಕೆ ವೆಚ್ಚ ಮಾಡಿದ ಒಂದು ರುಪಾಯಿಯು ಭಾರತದ ನಿವ್ವಳ ದೇಶೀಯ ಉತ್ಪನ್ನ (ಜಿಡಿಪಿ)ದಲ್ಲಿ 3.21 ರು. ಹೆಚ್ಚಳಕ್ಕೆ ಕಾರಣವಾಗಿದೆ. ಇದರ ಪರಿಣಾಮವಾಗಿ ದೇಶೀಯ ಉತ್ಪಾದನೆ ಶೇ. 9ರಷ್ಟು ಮತ್ತು ಕಾರು ಮಾರಾಟ ಶೇ. 10.4ರಷ್ಟು ಬೆಳೆದಿದೆ.

ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ಮೂಲಸೌಕರ್ಯ ಬೆಳವಣಿಗೆಯನ್ನು ಕೇಂದ್ರ ಬಿಂದುವನ್ನಾಗಿರಿಸಿಕೊಂಡು ಬಂದಿದೆ. ಕಳೆದ ಒಂದು ದಶಕದಲ್ಲಿ ದೇಶದ ಆರ್ಥಿಕಾಭಿವೃದ್ಧಿಯನ್ನು ಇದು ವೇಗಗೊಳಿಸಿದ್ದು ಮಾತ್ರವಲ್ಲದೆ ಅದಕ್ಕೆ ಒಂದು ಹೊಸ ಆಯಾಮವನ್ನು ನೀಡಿದೆ. ಪೂರ್ಣಗೊಂಡ ಮತ್ತು ನಿರ್ಮಾಣ ಹಂತದಲ್ಲಿರುವ ಹೆದ್ದಾರಿಗಳ ನಿರ್ಮಾಣವು ದೇಶದ ಬೆಳವಣಿಗೆಯ ಪಥವನ್ನೇ ಬದಲಾಯಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ. ಉತ್ತಮ ಹೆದ್ದಾರಿಗಳು, ಜಲಮಾರ್ಗಗಳು ಮತ್ತು ರೈಲು ಮಾರ್ಗಗಳು, ಸರಕು ಸಾಗಾಟದ (ಲಾಜಿಸ್ಟಿಕ್) ವೆಚ್ಚವನ್ನು ಕಡಿಮೆ ಮಾಡಿ ಆರ್ಥಿಕತೆಗೆ ಉತ್ತೇಜನ ನೀಡಿವೆ. ವಿಶ್ವದರ್ಜೆಯ ಮೂಲಸೌಕರ್ಯವನ್ನು ನಿರ್ಮಿಸುವ ಮತ್ತು 2047ರ ವೇಳೆಗೆ ನಮ್ಮ ರಾಷ್ಟ್ರೀಯ ಹೆದ್ದಾರಿ ಜಾಲವನ್ನು ಅಮೆರಿಕದ ಹೆದ್ದಾರಿ ಜಾಲಕ್ಕಿಂತಲೂ ಶ್ರೇಷ್ಠವಾಗಿಸುವ ದೃಷ್ಟಿಕೋನವನ್ನು ಕೇಂದ್ರ ಸರಕಾರ ಹೊಂದಿದೆ. ಆ ಮೂಲಕ ಭಾರತವನ್ನು ಆರ್ಥಿಕ ಮಹಾಶಕ್ತಿಯನ್ನಾಗಿ ಮಾಡುವುದು ಕೇಂದ್ರ ಸರಕಾರದ ಗುರಿಯಾಗಿದೆ.

ಕಳೆದ ಒಂದು ದಶಕದಲ್ಲಿ ನಿರ್ಮಿಸಲಾದ ರಸ್ತೆಗಳು ಸರಕು ಸಾಗಾಟದ ವೆಚ್ಚವನ್ನು ಶೇ. 16ರಿಂದ ಶೇ. 10ಕ್ಕೆ ಇಳಿಸಿವೆ. ಪ್ರಸಕ್ತ ಕೇಂದ್ರ ಸರಕಾರದ ಅಧಿಕಾರಾವಧಿಯು ದೇಶದಲ್ಲಿ ಹೆದ್ದಾರಿ ನಿರ್ಮಾಣದಲ್ಲಿ ಕ್ರಾಂತಿಯನ್ನೇ ಸೃಷ್ಟಿಸಿದೆ. ರಸ್ತೆಗಳ ನಿರ್ಮಾಣದಿಂದ ಆರ್ಥಿಕ ಬೆಳವಣಿಗೆಗೆ ಅಪಾರ ಕೊಡುಗೆ ಸಿಗುತ್ತದೆ, ಲಕ್ಷಾಂತರ ಜನರಿಗೆ ಕೆಲಸ ದೊರೆಯುತ್ತದೆ. ಸ್ಟೀಲ್, ಸಿಮೆಂಟ್ ಇನ್ನಿತರ ಪೂರಕ ವಸ್ತುಗಳಿಗೆ ದೊಡ್ಡ ಪ್ರಮಾಣದಲ್ಲಿ ಬೇಡಿಕೆ ಸೃಷ್ಟಿಯಾಗುತ್ತದೆ. ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ದೇಶದಾದ್ಯಂತ 25 ಹೊಸ ‘ಗ್ರೀನ್‌ಫೀಲ್ಡ್ ಎಕ್ಸ್‌ಪ್ರೆಸ್ ವೇ’ಗಳನ್ನು ನಿರ್ಮಿಸುತ್ತಿದೆ. ಇದಲ್ಲದೆ ಬಂದರುಗಳನ್ನು ಸಂಪರ್ಕಿಸಲು ಮತ್ತು ಧಾರ್ಮಿಕ ಪ್ರವಾಸೋದ್ಯಮವನ್ನು ಉತ್ತೇಜಿಸಲು 3000 ಕಿ.ಮೀ.ಗಳಿಗೂ ಹೆಚ್ಚು ಉದ್ದದ ಹೆದ್ದಾರಿಗಳ ನಿರ್ಮಾಣವಾಗುತ್ತಿದೆ. ಇದರಿಂದಾಗಿ ಧಾರ್ಮಿಕ ಸ್ಥಳಗಳಿಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆಯೂ ಕಳೆದ ಹತ್ತು ವರ್ಷಗಳಲ್ಲಿ ಮೂರು ಪಟ್ಟು ಹೆಚ್ಚಿದೆ.

ಭಾರತ ವಿಶ್ವದ ನಾಲ್ಕನೆಯ ಅತಿ ದೊಡ್ಡ ಆರ್ಥಿಕತೆಯಾಗುವತ್ತ ಮತ್ತು 5 ಟ್ರಿಲಿಯನ್ ಡಾಲರ್ ಆರ್ಥಿಕತೆಯತ್ತ ದಾಪುಗಾಲಿಡುತ್ತಿರುವ ಈ ಸಂದರ್ಭದಲ್ಲಿ ಮೂಲಸೌಕರ್ಯ ಅಭಿವೃದ್ಧಿಯ ಪಾತ್ರವು ಮಹತ್ತರದ್ದಾಗಿದೆ. ರೈಲ್ವೆ ವಲಯದ ವಿಚಾರದಲ್ಲಿ ಹೇಳುವುದಾದರೆ, ದಶಕದ ಮೊದಲು ಯೋಜನೆಗಳನ್ನು ಬಹುತೇಕವಾಗಿ ವಾರ್ಷಿಕವಾಗಿ ಸಂಗ್ರಹವಾಗುವ ಆದಾಯದ ಪಾಲಿನಲ್ಲಿ ಕೈಗೊಳ್ಳಲಾಗುತ್ತಿತ್ತು. ಒಂದೊಂದು ಯೋಜನೆ ಪೂರ್ಣಗೊಳ್ಳುವುದಕ್ಕೂ ದಶಕಗಳೇ ಹಿಡಿಯುತ್ತಿತ್ತು. ಸಂಪನ್ಮೂಲ ಕೊರತೆ ವಿಳಂಬವಾಗಿ ಯೋಜನಾ ವೆಚ್ಚ ಎರಡರಿಂದ ಮೂರು ಪಟ್ಟು ಹೆಚ್ಚಾಗುತ್ತಿತ್ತು. ಪ್ರಸಕ್ತ ಸನ್ನಿವೇಶದಲ್ಲಿ ರೈಲ್ವೆ ಇಲಾಖೆಯ ಮಾನಸಿಕತೆ ಬದಲಾಗಿದೆ. ರೈಲ್ವೆಯಲ್ಲಿ ಹೂಡುವ ಬಂಡವಾಳವು ಅಭಿವೃದ್ಧಿಗೆ ಎಂಜಿನ್ ಎಂಬುದನ್ನು ಮನಗಂಡಿರುವ ಕಾರಣ ದೊಡ್ಡ ಮೊತ್ತದ ಬಂಡವಾಳ ಹೂಡಿಕೆಗೆ ಒತ್ತಾಸೆ ಸಿಕ್ಕಿದೆ.

ಆರ್ಥಿಕತೆಯ ಮೇಲಿನ ಸಕಾರಾತ್ಮಕ ಪರಿಣಾಮಗಳು: ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಸಾರ್ವಜನಿಕ ವೆಚ್ಚದ ಹೆಚ್ಚಳ, ಹಣದುಬ್ಬರ ನಿಯಂತ್ರಣ, ಗ್ರಾಹಕ ಸ್ನೇಹಿ ಬ್ಯಾಂಕ್ ನೀತಿ, ಹಣದ ದ್ರವ್ಯಶೀಲತೆಯನ್ನು ಹೆಚ್ಚಿಸುವ ಉಪಕ್ರಮಗಳಿಂದಾಗಿ ಜೀವನ ಮಟ್ಟದಲ್ಲಿ ಸುಧಾರಣೆಯಾಗಿದೆ. ಅನುಭೋಗದ ಗುಣಮಟ್ಟದ ಸುಧಾರಣೆಯಲ್ಲಿ ಬೆಲೆ ಇಳಿಕೆಗೆ ಅದು ಹೆಚ್ಚು ಬಲ ನೀಡಿದೆ. ಹಿಂದಿನ ನಾಲ್ಕು ವರ್ಷಗಳಲ್ಲಿ ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಹಣದುಬ್ಬರ ಪ್ರಮಾಣ ಶೇ. 7.7ರಷ್ಟಿದ್ದರೂ 2016ರಿಂದೀಚೆಗೆ ಸರಾಸರಿ ಸಿಪಿಐ ಶೇ. 4.9ರಷ್ಟಿದೆ. ಇದೀಗ ಈ ಚಿಲ್ಲರೆ ಹಣದುಬ್ಬರವು ಕಳೆದ ಆರು ವರ್ಷಗಳ ಕನಿಷ್ಠ ಮಟ್ಟವಾದ ಶೇ. 2.1ಕ್ಕೆ ಇಳಿಕೆಯಾಗಿದೆ. ಇದು ಪ್ರತ್ಯಕ್ಷ ಮತ್ತು ಪರೋಕ್ಷ ಬಂಡವಾಳ ವೆಚ್ಚದ ಪರಿಣಾಮವನ್ನು ತೋರಿಸುತ್ತದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸಿಪಿಐ ಚಿಲ್ಲರೆ ಹಣದುಬ್ಬರವು ಸರಾಸರಿ ಶೇ. 4ರಷ್ಟು ಇರುವ ನಿರೀಕ್ಷೆಯಿದೆಯೆಂದು ‘ಕ್ರಿಸಿಲ್’ ಸಂಶೋಧನಾ ವರದಿ ತಿಳಿಸಿದೆ.

ಭಾರತೀಯ ಆರ್ಥಿಕತೆಯಲ್ಲಿ ಹೆಚ್ಚುತ್ತಿರುವ ತೆರಿಗೆ ಸಂಗ್ರಹವು ಮಹತ್ತರ ಪಾತ್ರ ವಹಿಸುತ್ತಿದೆ. ಜಿಎಸ್‌ಟಿ ವ್ಯವಸ್ಥೆ ಜಾರಿಗೆ ಬಂದು ಎಂಟು ವರ್ಷವಾಗಿದೆ. ಜಿಎಸ್‌ಟಿಯಲ್ಲಿ ಮಹತ್ವದ ಸುಧಾರಣೆಯಾಗಿದ್ದು ಇದರಿಂದ ದೇಶದ ಆರ್ಥಿಕತೆಗೆ ಹೊಸ ರೂಪ ಸಿಕ್ಕಿದೆ. ದೇಶದ ಅಭಿವೃದ್ಧಿಗೆ ಮತ್ತು ಆರ್ಥಿಕ ಏಳಿಗೆಗೆ ಜಿಎಸ್‌ಟಿ ಸಮರ್ಥ ಎಂಜಿನ್ ಆಗಿ ಕಾರ್ಯ ನಿರ್ವಹಿಸುತ್ತಿದೆ. 2020ರ ಹಣಕಾಸು ವರ್ಷದಲ್ಲಿ ತೆರಿಗೆ ಸಂಗ್ರಹವು ಜಿಡಿಪಿಯ ಶೇ. 9.9ರಷ್ಟಿತ್ತು. ಅದು 2025ರಲ್ಲಿ ಶೇ. 11.5ಕ್ಕೇರಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಒಟ್ಟು ತೆರಿಗೆ ಆದಾಯವು ಜಿಡಿಪಿಯ ಶೇ. 12ಕ್ಕೆ ಏರಿಕೆಯಾಗಲಿದೆ ಎಂದು ಬಜೆಟ್‌ನಲ್ಲೇ ಪ್ರಸ್ತಾಪಿಸಲಾಗಿದೆ. ಜಿಎಸ್‌ಟಿ ಸಂಗ್ರಹವು 2024–25ರ ಹಣಕಾಸು ವರ್ಷದಲ್ಲಿ 22.08 ಲಕ್ಷ ಕೋಟಿ ರುಪಾಯಿಗೆ ತಲುಪಿದೆ. ಕೇಂದ್ರ ಮತ್ತು ರಾಜ್ಯ ಸರಕಾರಗಳ 17 ತೆರಿಗೆಗಳು ಹಾಗೂ ಸೆಸ್‌ಗಳು ವಿಲೀನವಾಗಿ ತೆರಿಗೆ ಹೊರೆ ಕಡಿಮೆಯಾಗಿದೆ. ಜಿಎಸ್‌ಟಿಯು ನವಭಾರತದ ಕ್ರಾಂತಿಕಾರಿ ಶಾಸನ. ಈ ಹೊಸ ಉಪಕ್ರಮದಿಂದಾಗಿ ಕಳೆದ ಎಂಟು ವರ್ಷಗಳಲ್ಲಿ ತೆರಿಗೆ ಸಂಗ್ರಹ ದುಪ್ಪಟ್ಟಾಗಿದೆ.

ದೇಶದ ಡಿಜಿಟಲ್ ಕ್ರಾಂತಿಯು ದಶಕದ ಸಂಭ್ರಮವನ್ನು ಪೂರೈಸಿದೆ. ಇದು ಜನರ ಜೀವನಮಟ್ಟಕ್ಕೆ ನೀಡಿದ ಕೊಡುಗೆ ಅನನ್ಯ. ಡಿಜಿಟಲ್ ಕ್ರಾಂತಿ ಎಲ್ಲಾ ಸೇವೆಗಳನ್ನು ಅಂಗೈಗೆ ತಂದಿಳಿಸಿದೆ. ಡಿಜಿಟಲ್ ಕ್ರಾಂತಿಯಲ್ಲಿ ಮೂಲಸೌಕರ್ಯದ ಪಾಲು ಅತ್ಯಂತ ಮಹತ್ವದ್ದು. ಡಿಜಿಟಲ್ ಕ್ರಾಂತಿಗೆ ಮಹತ್ವದ ಮುನ್ನಡೆ ನೀಡಿದ್ದೇ ಈ ಕ್ಷೇತ್ರ. ಹೊಸ ಹೊಸ ಮೂಲಸೌಕರ್ಯ ನಿರ್ಮಾಣಕ್ಕೆ ಸರಕಾರ ನೀಡಿದ ಮಹತ್ವ ಇದಾಗಿದೆ. ಇಲ್ಲಿ ಮಧ್ಯವರ್ತಿಗಳಿಲ್ಲದೆಯೇ 97 ಕೋಟಿಗೂ ಹೆಚ್ಚಿನ ಅಂತರ್ಜಾಲ ಸಂಪರ್ಕ, ದೊಡ್ಡ ಮಾರುಕಟ್ಟೆ ಸೃಷ್ಟಿಯಾಗಿದೆ. ಸರಕಾರಕ್ಕೆ ಹಣ ಉಳಿತಾಯವಾಗಿದೆ. ಇದು ಯೋಜನೆಯನ್ನು ರೂಪಿಸುವಲ್ಲಿ ಸರಕಾರಕ್ಕೆ ಇರುವ ದೂರದೃಷ್ಟಿಗೆ ಒಂದು ಉದಾಹರಣೆ ಎನ್ನಲಡ್ಡಿಯಿಲ್ಲ.

ಇದಲ್ಲದೆ ಕಳೆದ ನಾಲ್ಕು ವರ್ಷಗಳಲ್ಲಿ ಸಾರ್ವಜನಿಕ ವಲಯದ ಒಂದಿಷ್ಟು ಕಂಪನಿಗಳಿಂದ ಸರಕಾರವು ಗಣನೀಯ ಲಾಭಾಂಶವನ್ನು ಸ್ವೀಕರಿಸಿದೆ. ನಿರ್ದಿಷ್ಟವಾಗಿ ಹೇಳುವುದಾದರೆ, ಕೋಲ್ ಇಂಡಿಯಾ ಮತ್ತು ಒಎನ್‌ಜಿಸಿಯಿಂದ ಅತಿ ಹೆಚ್ಚು ಲಾಭಾಂಶ ಹರಿದುಬಂದಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ನೈಜ ಜಿಡಿಪಿ ಬೆಳವಣಿಗೆ ಶೇ. 6.5ಕ್ಕಿಂತಲೂ ಜಾಸ್ತಿ ಇರಬಹುದು ಎಂದು ಕ್ರೆಡಿಟ್ ರೇಟಿಂಗ್ ಸಂಸ್ಥೆ ‘ಇಸಿಆರ್‌ಎ’ (ಇಕ್ರಾ) ಹೇಳಿದೆ. ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಎಂಪಿಸಿ ಸದಸ್ಯರೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದಲ್ಲದೆ, ‘ದೇಶದ ಆರ್ಥಿಕತೆ ಸದೃಢವಾಗಿ ಬೆಳೆಯುತ್ತಿದೆ ಮತ್ತು ಮುಂಬರುವ ವರ್ಷಗಳಲ್ಲಿ ಆರ್ಥಿಕತೆಯು ಶೇ. 7ರಿಂದ ಶೇ. 7.5ರಷ್ಟು ಬೆಳವಣಿಗೆ ಸಾಧಿಸಲಿದೆ’ ಎಂಬ ನಿಖರ ಅಭಿಮತವೂ ಅವರಿಂದ ಹೊಮ್ಮಿದೆ.

ಅಭಿವೃದ್ಧಿಯ ವಿಷಯದಲ್ಲಿ ಯಾರೂ ರಾಜಕೀಯವನ್ನು ಎಳೆದು ತರಬಾರದು. ಎಲ್ಲಾ ರಾಜಕೀಯ ಪಕ್ಷಗಳ ನಾಯಕರು ಅಭಿವೃದ್ಧಿಯನ್ನು ಸಂಭ್ರಮಿಸಬೇಕು. ಅಭಿವೃದ್ಧಿಯ ಪಥವನ್ನು ವಿಶ್ಲೇಷಿಸುವಾಗ ಭಾರತವು ಬಹುಬೇಗ ವಿಶ್ವದ ಮೂರನೆಯ ಆರ್ಥಿಕತೆಯಾಗುವುದೆಂದು ಭಾವಿಸಬಹುದು. 11 ವರ್ಷಗಳ ಹಿಂದೆ 11ನೇ ಆರ್ಥಿಕತೆಯಾಗಿದ್ದ ಭಾರತ ಈಗ ವಿಶ್ವದ ನಾಲ್ಕನೆಯ ಆರ್ಥಿಕತೆಯಾಗಿ ಹೊರಹೊಮ್ಮಿದೆ. ಆಳುಗರು ತಾವು ಹಮ್ಮಿಕೊಂಡಿರುವ ಎಲ್ಲಾ ಯೋಜನಾ ಕ್ರಮಗಳಿಗೆ ಬದ್ಧರಾದರೆ ಮುಂದಿನ ಮೂರು ವರ್ಷದೊಳಗೆ ಭಾರತವು ವಿಶ್ವದ ಮೂರನೆಯ ಆರ್ಥಿಕತೆಯ ಸ್ಥಾನ ಪಡೆಯಲಿದೆ.

(ಲೇಖಕರು ಆರ್ಥಿಕ ತಜ್ಞರು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed @ manipal media network limited Sy no7/2,plot no CA-3/1,28 (p)&29 (p),Kapnoor,2nd stage industrial area,kapnoor village, Gulbarga-585104
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 86

ಸಮಾಚಾರ ಸಣ್ಣದಲ್ಲ

ವರ್ಷಾಂತ್ಯ ಟ್ರಂಪ್, ಜಿನ್‌ಪಿಂಗ್ ಭೇಟಿ?

ವಾಷಿಂಗ್ಟನ್: ಆಮದಾಗುವ ಸರಕುಗಳ ಮೇಲಿನ ಸುಂಕವನ್ನು ಈಗಿರುವ ಪ್ರಮಾಣದಲ್ಲೇ ಉಳಿಸಲು ಅಮೆರಿಕ ಮತ್ತು ಚೀನಾ ದೇಶಗಳ ಉನ್ನತ ಅಧಿಕಾರಿಗಳು ಸ್ಟಾಕ್ ಹೋಮ್ ಭೇಟಿ ಸಂದರ್ಭ ಒಪ್ಪಿಗೆ ಸೂಚಿಸುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ. ವಿಶ್ವದ 2 ದೊಡ್ಡ ಆರ್ಥಿಕತೆಗಳ ನಡುವಿನ ಶಾಶ್ವತ ವ್ಯಾಪಾರ ಒಪ್ಪಂದ ವರ್ಷದ ಕೊನೆಯಲ್ಲಿ ಅಂತಿಮಗೊಳ್ಳುವ ಸಾಧ್ಯತೆ ಇದೆ. ಉಭಯ ದೇಶಗಳ ಅಧ್ಯಕ್ಷರ ಭೇಟಿ ಮಾಡಿ ಈ ಬಗ್ಗೆ ಅಂತಿಮ ಹಂತದ ಮಾತುಕತೆ ನಡೆಸಲಿದ್ದಾರೆ ಎನ್ನಲಾಗಿದೆ. ಚೀನಾ ಜತೆ ವ್ಯಾಪಾರ ಒಪ್ಪಂದದ ಕನಿಷ್ಠ ಸುಂಕ ಮಿತಿಗೆ ನಿರ್ಧಾರ ಕೈಗೊಳ್ಳಲಿದ್ದೇವೆ ಎಂದು ಟ್ರಂಪ್ ಸ್ಕಾಟ್ಲೆಂಡ್‌ಗೆ ತೆರಳುವ ಮುನ್ನ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ್ದರು.

ಮೀಟಿಂಗ್ ಮಧ್ಯೆಯೇ ಪುಣೆಯ ಟೆಕ್ಕಿ ಆತ್ಮಹತ್ಯೆ

ಪುಣೆ: 'ಜೀವನದಲ್ಲಿ ಎಲ್ಲೆಡೆ ವಿಫಲನಾದೆ' ಎಂದು ಹತಾಶೆಗೊಂಡಿದ್ದ ಮಹಾರಾಷ್ಟ್ರದ ಪುಣೆಯ ಐಟಿ ಕಂಪನಿ ಉದ್ಯೋಗಿ ಯುವಕನೊಬ್ಬ ಆಫೀಸ್ ಮೀಟಿಂಗ್ ಮಧ್ಯದಲ್ಲೇ ಕಟ್ಟಡದಿಂದ ಜಿಗಿದು

ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ನಾಸಿಕ್ ಮೂಲದ ವಾಕಾಡ್ ನಿವಾಸಿ ಪಿಯೂಷ್ ಕವಾಡೆ(23) ಮೃತ. ಕವಾಡೆ ಎಂಜಿನಿಯರ್ ಆಗಿ ಕಳೆದ ಒಂದೂವರೆ ವರ್ಷದ ಹಿಂದೆಯಷ್ಟೇ ಹಿಂಜಾವಾಡಿ ಹಂತ 1ರಲ್ಲಿನ ಅಟ್ಲಾಸ್ ಕಾಪ್ಕೊ ಜಿಇಸಿಐಎ ಕಂಪನಿಗೆ ಕೆಲಸಕ್ಕೆ ಸೇರಿಕೊಂಡಿದ್ದ. ಸೋಮವಾರ ಬೆಳಗ್ಗೆ 10.30ರಲ್ಲಿ ಮೀಟಿಂಗ್ ಸಮಯದಲ್ಲಿ ಮಾನಸಿಕ ಒತ್ತಡಕ್ಕೊಳಗಾದ ಕವಾಡೆ 7ನೇ ಮಹಡಿ ತಾರಸಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಸಹೋದ್ಯೋಗಿಗಳು ಮತ್ತು ಕಂಪನಿ ಆಡಳಿತ ವರ್ಗದವರು ಆಘಾತಕ್ಕೊಳಗಾಗಿದ್ದಾರೆ. ತೀವ್ರ ವಿಷಾದ ಮತ್ತು ವೈಯಕ್ತಿಕ ವೈಫಲ್ಯ ವ್ಯಕ್ತಪಡಿಸಿದ, ಜೀವನದಲ್ಲಿ ಎಲ್ಲೆಡೆ ವಿಫಲನಾಗಿದ್ದೇನೆ. ನನ್ನನ್ನು ಕ್ಷಮಿಸಿ ಎಂಬ ಕವಾಡೆ ಕೈಬರಹದ ಸೂಸೈಡ್ ನೋಟ್ ಸ್ಥಳದಲ್ಲಿ ಸಿಕ್ಕಿದೆ.

{ ಮಲ್ಲಿಕಾರ್ಜುನ ಖರ್ಗೆ } ಕಾಂಗ್ರೆಸ್ ಅಧ್ಯಕ್ಷ

ಆಪರೇಶನ್ ಸಿಂದೂರ್ ಸುದ್ದಿಗೋಷ್ಠಿಯ ಮಹಿಳಾ ಕರ್ನಲ್‌ರನ್ನು ಮಧ್ಯಪ್ರದೇಶ ಮಂತ್ರಿ ಅವಮಾನಿಸಿದರು. ಅವರೇನು ಮಂತ್ರಿಯೊ-ಕಂತ್ರಿಯೊ? ಅವರನ್ನು ಬಿಜೆಪಿಯೇಕೆ ಖಂಡಿಸಿಲ್ಲ? ಭದ್ರತಾ ಲೋಪ ಕಾರಣದಿಂದ ಪೆಹಲ್ಗಾಂ ದಾಳಿಯಾಗಿದ್ದು, ಸರಕಾರ ಹೊಣೆ ಹೊರಬೇಕು. ಪೆಹಲ್ಗಾಂ ಕುರಿತ ಪ್ರಶ್ನೆ ಎದುರಿಸಲು ಆಗದಿದ್ದರೆ ಪ್ರಧಾನಿ ಸ್ಥಾನಕ್ಕೆ ಮೋದಿ ಅರ್ಹರಲ್ಲ.

ಪಿಒಕೆ ಸಮಸ್ಯೆ ಜೀವಂತಕ್ಕೆ ನೆಹರು-ಇಂದಿರಾ ಮೂಲ: ಶಾ | ಪಹಲ್ಗಾಮ್ ಭಯೋತ್ಪಾದಕ ದಾಳಿ ಗೃಹ ಇಲಾಖೆಯ ವೈಫಲ್ಯ: ಪ್ರಿಯಾಂಕಾ

ಲೋಕಸಭೆಯಲ್ಲಿ ಶಾ-ಪ್ರಿಯಾಂಕಾ ಗುಡುಗು ಸಿಡಿಲು

ಪಾಕಿಸ್ತಾನ ಪ್ರೇರೇಪಿತ ಪಹಲ್ಗಾಮ್ ದಾಳಿ, ಅದಕ್ಕೆ ಪ್ರತಿಯಾಗಿ ಭಾರತ ಪಾಕ್ ಮತ್ತು ಪಾಕ್ ಆಕ್ರಮಿತ ಕಾಶ್ಮೀರದ ಮೇಲೆ ನಡೆಸಿದ ಆಪರೇಷನ್ ಸಿಂದೂರ ಸೇನಾ ಕಾರ್ಯಾಚರಣೆ ಕುರಿತು ಸೋಮವಾರದಿಂದ ಚರ್ಚೆ ನಡೆಸುತ್ತಿರುವ ಲೋಕಸಭೆಯಲ್ಲಿ ಮಂಗಳವಾರ ಗುಡುಗು-ಸಿಡಿಲುಗಳ ಆರ್ಭಟದಷ್ಟೇ ತೀವ್ರವಾಗಿ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಭಾರೀ ಜಟಾಪಟಿಯೇ ನಡೆಯಿತು. ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ವಾದ್ರಾ ನಡುವೆ ಗಂಟೆಗಳ ಕಾಲ ರಣರೋಚಕ ವಾಕ್ ಸಮರವೇ ಏರ್ಪಟ್ಟಿತು. ಬಹುತೇಕ ಭರ್ತಿಯಾಗಿದ್ದ ಸದನ, ಆಡಳಿತ ಪಕ್ಷ ಮತ್ತು ಪ್ರತಿಪಕ್ಷಗಳ ಇಬ್ಬರೂ ಹುರಿಯಾಳುಗಳ ನಡುವಿನ ವಾಕ್ ಸಮರವನ್ನು ಕಣ್ಣೆವೆ ಇಕ್ಕದೇ, ಕಿವಿಗಳನ್ನು ತೆರೆದಿಟ್ಟು ಆಲಿಸಿತು. ಸದನದಲ್ಲಿ ಮೊದಲಿಗೇ ವಾಗ್ದಾಳಿ ಆರಂಭಿಸಿದ ಗೃಹ ಸಚಿವ ಅಮಿತ್ ಶಾ, ಇತಿಹಾಸದ ಲೋಪಗಳನ್ನೆಲ್ಲಾ ಎಳೆದುತಂದು ಪ್ರತಿಪಕ್ಷಗಳನ್ನು ಇನ್ನಿಲ್ಲದಂತೆ ಹಣಿದರು. ಅದಕ್ಕೆ ಪ್ರತಿಯಾಗಿ ಮಾತನಾಡಿದ ಪ್ರಿಯಾಂಕಾ, ಇತಿಹಾಸವನ್ನೇಲ್ಲಾ ಈಗೇಕೆ ಕೆದಕುತ್ತಿದ್ದೀರಾ? ಮೊದಲ ಪಹಲ್ಗಾಮ್ ದಾಳಿಗೆ ನಿಮ್ಮ ಇಲಾಖೆಯ ವೈಫಲ್ಯವಾಗಿರುವುದಕ್ಕೆ ಹೊಣೆ ಹೊತ್ತುಕೊಳ್ಳಿ ಎಂದು ತಿರುಗೇಟು ನೀಡಿದರು.

ನೆಹರು ಪ್ರಮಾದದಿಂದಲೇ ಪಿಒಕೆ ಸೃಷ್ಟಿ

ದೆಹಲಿ: ಪಾಕಿಸ್ತಾನ ಆಕ್ರಮಿತ ಕಾಶ್ಮೀರ(ಪಿಒಕೆ) ಇಂದು ಅಸ್ತಿತ್ವದಲ್ಲಿ ಇರುವುದಕ್ಕೆ 1948ರಲ್ಲಿ ಪ್ರಧಾನಿಯಾಗಿದ್ದ ಕಾಂಗ್ರೆಸ್ ನಾಯಕ ಜವಾಹರಲಾಲ್ ನೆಹರು ಅವರೇ ನೇರ ಕಾರಣ. ಅವರು ಅಂದು ಮಾಡಿದ ಪ್ರಮಾದದಿಂದಾಗಿಯೇ ಇಂದು ಭಾರತ 'ಪಿಒಕೆ' ವಿಚಾರದಕ್ಕು ಕಷ್ಟ ಅನುಭವಿಸುವಂತಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಲೋಕಸಭಾ ಕಲಾಪದಲ್ಲಿ ಮಂಗಳವಾರ ಕಾಂಗ್ರೆಸ್ ಪಕ್ಷದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

- **ಲೋಕಸಭೆಯಲ್ಲಿ ಗೃಹ ಸಚಿವ ಅಮಿತ್ ಶಾ ವಾಗ್ದಾಳಿ**
- **1971ರಲ್ಲಿ ಪಿಒಕೆ ಮರಳಿ ಪಡೆಯದೇ ಇಂದಿರಾ ಲೋಪ**

ಪಾಕಿಸ್ತಾನದ ವಿರುದ್ಧ ಭಾರತ ಸರಕಾರ ಕೈಗೊಂಡ 'ಆಪರೇಷನ್ ಸಿಂದೂರ' ಸೇನಾ ಕಾರ್ಯಾಚರಣೆ ಕುರಿತು ಪ್ರತಿಪಕ್ಷಗಳ ಟೀಕೆಗೆ ಉತ್ತರವಾಗಿ ಎನ್‌ಡಿಎ ಸರಕಾರದ ಪರವಾಗಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಲೋಕಸಭೆಯಲ್ಲಿ ಸೋಮವಾರ ಚರ್ಚೆ ಆರಂಭಿಸಿದ್ದು, ಆ ಚರ್ಚೆಯನ್ನು ಗೃಹ ಸಚಿವ ಅಮಿತ್ ಶಾ ಮಂಗಳವಾರ ಮುಂದುವರಿಸಿದರು. ಕಾಂಗ್ರೆಸ್ ಪಕ್ಷದ 6 ದಶಕಗಳ ಕಾಲದಲ್ಲಿನ ಲೋಪಗಳನ್ನು ಒಂದೊಂದಾಗಿ ಸದನದಲ್ಲಿ ಎತ್ತಿ ತೋರುತ್ತಾ, ಕಾಂಗ್ರೆಸ್ ಮತ್ತು ಪ್ರತಿಪಕ್ಷಗಳ ಪ್ರಶ್ನೆಗಳಿಗೆ, ಆರೋಪಗಳಿಗೆ ತಿರುಗೇಟು ನೀಡುತ್ತಾ ಹೋದರು.

1948ರಲ್ಲಿ ಪಾಕ್ ಆಕ್ರಮಿಸಿಕೊಂಡಿದ್ದ ಜಮ್ಮು-ಕಾಶ್ಮೀರದ ಭಾಗವನ್ನು ವಾಪಾಸ್ ಪಡೆಯುವುದರಲ್ಲಿ ಭಾರತೀಯ ಸಶಸ್ತ್ರ ಪಡೆಗಳು ನಿರ್ಣಾಯಕ ಹಂತದಲ್ಲಿದ್ದಾಗಲೇ ಆಗಿನ ಪ್ರಧಾನಿ ನೆಹರು, ಸೇನೆಯ ಸಲಹೆಯನ್ನೂ ಆಲಿಸದೇ ಏಕಪಕ್ಷೀಯವಾಗಿ ಕದನ ವಿರಾಮ ಘೋಷಿಸಿ ದೊಡ್ಡ ಪ್ರಮಾದ ಮಾಡಿದರು ಎಂದು ಅಮಿತ್ ಶಾ ಟೀಕಿಸಿದರು. ಪಹಲ್ಗಾಮ್ ದಾಳಿ ಹಿನ್ನೆಲೆಯಲ್ಲಿ ಪಾಕಿಸ್ತಾನದ ಜತೆಗೇಕೆ ಯುದ್ಧ ಮಾಡಲಿಲ್ಲ? ಆಪರೇಷನ್ ಸಿಂದೂರವನ್ನು 4 ದಿನಕ್ಕೇ ಕೊನೆಗೊಳಿಸಿ ಕದನವಿರಾಮ ಘೋಷಿಸಲು ಕಾರಣವೇನು? ಎಂದು ಕಾಂಗ್ರೆಸ್ ನಾಯಕರು ನಮ್ಮನ್ನು ಸೋಮವಾರ ಪ್ರಶ್ನೆ ಮಾಡಿದ್ದರು. ಆದರೆ, ಅವರು ಇತಿಹಾಸವನ್ನೇ ಮರೆತಿದ್ದಾರೆ. ಪಹಲ್ಗಾಮ್ ದಾಳಿಯಂತಹ ಹಲವಾರು ಭಯೋತ್ಪಾದಕ ದಾಳಿಗಳಿಗೆ ಕಾರಣವಾಗಿರುವುದು ಪಾಕ್ ಆಕ್ರಮಿತ ಕಾಶ್ಮೀರ. ಅದರ ಸೃಷ್ಟಿಕರ್ತರು ಕಾಂಗ್ರೆಸ್ ನಾಯಕ ಪಂಡಿತ್ ಜವಹರಲಾಲ್ ನೆಹರು ಎಂಬುದು ಇಡೀ ದೇಶಕ್ಕೆ ಗೊತ್ತಿರುವ ಸಂಗತಿ ಎಂದು ಶಾ ಹರಿಹಾಯ್ದರು.

ಪಾಕಿಸ್ತಾನ ಆಕ್ರಮಿತ ಕಾಶ್ಮೀರ (ಪಿಒಕೆ) ಅಸ್ತಿತ್ವಕ್ಕೆ ಬರಲು ಮಾಜಿ ಪ್ರಧಾನಿ ಜವಾಹರಲಾಲ್ ನೆಹರೂ ಅವರೇ ನೇರ ಹೊಣೆಗಾರರು. ಇಂದು ಪಿಒಕೆ ಅಸ್ತಿತ್ವದಲ್ಲಿದ್ದರೆ ಅದಕ್ಕೆ ನೇರ ಕಾರಣ ಜವಾಹರಲಾಲ್ ನೆಹರು ಅವರು ಏಕಪಕ್ಷೀಯವಾಗಿ ಘೋಷಿಸಿದ ಕದನ ವಿರಾಮ. ಅವರ ತಪ್ಪಿನ ಫಲವನ್ನು ಇಂದು ಭಾರತ ಅನುಭವಿಸುತ್ತಿದೆ ಎಂದು ಶಾ ಗುಡುಗಿದರು.

ಶೇ.80 ನೀರು ಬಿಟ್ಟುಕೊಟ್ಟ ನೆಹರು

ಭಾರತ ಸಿಂಧೂ ನೀರಿನ ಮೇಲೆ ಹೆಚ್ಚು ಪ್ರಾಬಲ್ಯ ಹೊಂದಿತ್ತು. ಆದರೆ 1960ರಲ್ಲಿ ಸಿಂಧೂ ನದಿಯ ನೀರು ಹಂಚಿಕೆ ಒಪ್ಪಂದವಾದಾಗಲೂ ಅಂದಿನ ಪ್ರಧಾನಿ ನೆಹರು ಮತ್ತೆ ತಪ್ಪು ಮಾಡಿದರು. ಸಿಂಧೂ ನದಿಯ ಒಟ್ಟು ನೀರಿನಲ್ಲಿ ಶೇ.80ರಷ್ಟು ಭಾಗವನ್ನು ಪಾಕಿಸ್ತಾನಕ್ಕೇ ನೀಡುವುದಾಗಿ ಒಪ್ಪಂದ ಮಾಡಿಕೊಂಡರು. ಅಂದು ಉಪ ಪ್ರಧಾನಿಯಾಗಿದ್ದ, ಗೃಹ ಸಚಿವ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ನೆಹರು ಅವರ ಈ ಕ್ರಮವನ್ನು ವಿರೋಧಿಸಿದರು. ಆದರೆ, ನೆಹರು ಪಟೇಲರ ಮಾತು ಕೇಳದೇ ತಪ್ಪು ನಿರ್ಧಾರ ಕೈಗೊಂಡರು. ಭಾರತಕ್ಕೆ ದೊಡ್ಡ ಪ್ರಮಾಣದ ನೀರು ನಷ್ಟವಾಯಿತು ಎಂದು ಗೃಹ ಸಚಿವ ಅಮಿತ್ ಶಾ ದೇಶದ ಪ್ರಥಮ ಪ್ರಧಾನಿಯ ಲೋಪಗಳನ್ನು ತೆರೆದಿಟ್ಟರು.

1971ರಲ್ಲೂ ವಾಪಸ್ ಪಡೆಯಲಿಲ್ಲ

1971ರಲ್ಲಿ ಬಾಂಗ್ಲಾದೇಶ ವಿಮೋಚನಾ ಯುದ್ಧದಲ್ಲಿ ಭಾರತದ ವಿಜಯದ ನಂತರ ಅಂದಿನ ಕಾಂಗ್ರೆಸ್ ಸರಕಾರ ಮತ್ತೊಂದು ಮಹತ್ವದ ಅವಕಾಶವನ್ನು ಕಳೆದುಕೊಂಡಿತು. ಪಾಕ್ ಸೈನ್ಯದ ಶೇ.42ರಷ್ಟು, ಅಂದರೆ 93 ಸಾವಿರ ಯೋಧರು ಯುದ್ಧ ಕೈದಿಗಳಾಗಿ ನಮ್ಮ ಬಳಿ ಇದ್ದರು. ಅವರ ಬಿಡುಗಡೆಗೆ ಬದಲಾಗಿ ಪಿಒಕೆ ವಾಪಸ್ ಕೊಡುವಂತೆ ಕೇಳಬಹುದಿತ್ತು. ಆದರೆ, ಅಂದಿನ ಸರಕಾರಕ್ಕೆ ಅದು ಹೊಳೆಯಲೇ ಇಲ್ಲ. ಆಗ ಶಿಮ್ಲಾ ಒಪ್ಪಂದ ಮಾಡಿಕೊಂಡ ಪ್ರಧಾನಿ ಇಂದಿರಾ ಗಾಂಧಿ ಅವರು ಒಪ್ಪಂದಕ್ಕೆ ಬದಲಿಯಾಗಿ ಪಾಕ್ ಆಕ್ರಮಿತ ಕಾಶ್ಮೀರವನ್ನು ವಾಪಸ್ ಪಡೆಯಬಹುದಿತ್ತು. ಆದರೆ, ಅವರು 'ಪಿಒಕೆ'ಯನ್ನೇ ಮರೆತರು. ಆಗ ಪಿಒಕೆ ಮರುವಶ ಮಾಡಿಕೊಂಡಿದ್ದರೆ ಈಗ ನಾವು ಅಲ್ಲಿನ ಶಿಬಿರಗಳ ಮೇಲೆ ದಾಳಿ ಮಾಡಬೇಕಾಗಿ ಬರುತ್ತಲೇ ಇರಲಿಲ್ಲ ಎಂದು ಅಮಿತ್ ಶಾ, ಇತಿಹಾಸದಲ್ಲಿನ ಕಾಂಗ್ರೆಸ್ ಪ್ರಮಾದಗಳನ್ನು ನೆನಪಿಸಿದರು.

11 ವರ್ಷದಿಂದ ನೀವೇನು ಮಾಡಿದಿರಿ?

ದೆಹಲಿ: ಮುಂಗಾರು ಅಧಿವೇಶನದ ಲೋಕಸಭೆ ಕಲಾಪದಲ್ಲಿ ಕಾಂಗ್ರೆಸ್ ನಾಯಕಿ, ನೂತನ ಸಂಸದೆ ಪ್ರಿಯಾಂಕಾ ಗಾಂಧಿ ಅವರು ಮಂಗಳವಾರ ನಡೆಸಿದ ಆಕ್ರಮಣಕಾರಿ ಭಾಷಣ ದೇಶದ ಗಮನ ಸೆಳೆದಿದೆ. ಆ ಸಂದರ್ಭದ ವಿಡಿಯೊ ತುಣುಕುಗಳು ಜಾಲತಾಣದಲ್ಲಿ ವೈರಲ್ ಆಗಿದ್ದು, ನೆಟ್ಟಿಗರಿಂದ ಭಾರೀ ಮೆಚ್ಚುಗೆಗೂ ಪಾತ್ರವಾಗಿವೆ.

- **ಇತಿಹಾಸ ಕೆದಕಬೇಡಿ, ನಿಮ್ಮ ಹೊಣೆಗಾರಿಕೆ ಮೊದಲು ಅರಿಯಿರಿ**
- **ಲೋಕಸಭೆಯಲ್ಲಿ ಅಮಿತ್ ಶಾಗೆ ಪ್ರಿಯಾಂಕಾ ಗಾಂಧಿ ತರಾಟೆ**

ಗೃಹ ಸಚಿವ ಅಮಿತ್ ಶಾ ಅವರು ದೇಶದ ಮೊದಲ ಪ್ರಧಾನಿಯಾಗಿದ್ದ ತಮ್ಮ ಮುತ್ತಾತ ಜವಹರಲಾಲ್ ನೆಹರು, ಅಜ್ಜಿ ಇಂದಿರಾ ಗಾಂಧಿ ಅವರನ್ನು ಗುರಿಯಾಗಿಸಿ ದಾಳಿ ಮಾಡಿದ್ದಕ್ಕೆ ಸಿಟ್ಟಿಗೆದ್ದಿದ್ದ ಪ್ರಿಯಾಂಕಾ ವಾದ್ರಾ ಅವರು ಶಾ ವಿರುದ್ಧ ರೋಷಾವೇಶದಿಂದ ವಾಗ್ದಾಳಿ ನಡೆಸಿದರು. ನೀವು ಇತಿಹಾಸದ ಬಗ್ಗೆ ಮಾತನಾಡುತ್ತೀರಿ, ನಾನು ವರ್ತಮಾನದ ಬಗ್ಗೆ ಮಾತನಾಡುತ್ತೇನೆ. ನೀವು ಯಾವಾಗಲೂ ಎಲ್ಲದಕ್ಕೂ ಒಂದು ನೆಪವನ್ನು ಹುಡುಕುತ್ತೀರಿ. ನೀವು ಇಡೀ ಗಾಂಧಿ-ನೆಹರು ಕುಟುಂಬದ ತಪ್ಪನ್ನು ಪಟ್ಟಿ ಮಾಡುತ್ತೀರಿ. ಹಾಗಾದರೆ, ನೀವು 11 ವರ್ಷಗಳಿಂದ ಅಧಿಕಾರದಲ್ಲಿದ್ದೀರಿ. ನೀವು ಏನು ಮಾಡಿದಿರಿ? 60-70 ವರ್ಷಗಳ ಹಿಂದಿನ ಇತಿಹಾಸ ಕೆದುಕಿದಿರಲ್ಲಾ, ಕಳೆದ 11 ವರ್ಷಗಳಿಂದ ನೀವೇನು ಮಾಡಿರುವಿರಿ? ನಿಮ್ಮ ಸರಕಾರದಿಂದ ಅದೆಷ್ಟು ತಪ್ಪುಗಳಾಗಿವೆ ಗೊತ್ತಿದೆಯೇ? ಎಂದು ಖಾರವಾಗಿ ಪ್ರಶ್ನೆ ಮಾಡಿದರು. 'ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಗೆ ಕೇಂದ್ರ ಗೃಹ ಇಲಾಖೆಯಡಿ ಬರುವ ಗುಪ್ತಚರ ಮತ್ತು ಭದ್ರತಾ ವೈಫಲ್ಯವೇ ಕಾರಣ' ಎಂದು ನೇರವಾಗಿ ಗೃಹ ಸಚಿವ ಅಮಿತ್ ಶಾ ಅವರನ್ನೇ ಗುರಿಯಾಗಿಸಿ ಪ್ರಿಯಾಂಕಾ ಗಾಂಧಿ ಟೀಕಾಸ್ತ್ರ ಪ್ರಯೋಗಿಸಿದರು.

ಸತ್ತವರು ಭಾರತೀಯರು: ಪಹಲ್ಗಾಮ್ ದಾಳಿಗೆ ಬಲಿಯಾದವರಿಗೆ ಧರ್ಮದ ಬಣ್ಣ ನೀಡುವ ಕ್ರಮವನ್ನು ಟೀಕಿಸಿದ ಪ್ರಿಯಾಂಕಾ, ಮಡಿದವರು ಭಾರತೀಯರು ಎಂದು ನುಡಿದರು.

ಅಪ್ಪನನ್ನು ಕಳೆದುಕೊಂಡೆ: ಸಚಿವ ಶಾ, ನನ್ನ ತಾಯಿಯ ಕಣ್ಣೀರಿನ ಬಗ್ಗೆ ಮಾತನಾಡಿದರು. ಭಯೋತ್ಪಾದಕರು ನನ್ನ ತಂದೆ ರಾಜೀವ್ ಗಾಂಧಿಯನ್ನು ಕೊಂದಾಗ ನನ್ನ ತಾಯಿ ಕಣ್ಣಲ್ಲಿ ನೀರಿತ್ತು. ಇಂದು, ನಾನು ಪಹಲ್ಗಾಮ್‌ನಲ್ಲಿ ಮೃತಪಟ್ಟ ಆ 26 ಜನರ ಬಗ್ಗೆ ಮಾತನಾ ಡುವಾಗ ಅವರ ಕುಟುಂಬದ ನೋವು ನನಗೆ ಅರ್ಥವಾಗುತ್ತದೆ. ಏಕೆಂದರೆ, ನನ್ನ ಅಪ್ಪ ಕೂಡ ಉಗ್ರರ ದಾಳಿಗೆ ಬಲಿಯಾದವರು. ಆ ನೋವು ಏನೆಂಬುದು ನನ್ನ ಕುಟುಂಬಕ್ಕೆ ಚೆನ್ನಾಗಿ ಗೊತ್ತಿದೆ ಎಂದು ಪ್ರಿಯಾಂಕಾ ಕ್ಷಣ ಭಾವುಕರಾದರು.

ನಂಬಿದ ಪ್ರವಾಸಿಗರ ಜೀವ ಕಳೆದಿರಿ

ದೇಶದ ಜನತೆ ನಿಮ್ಮ ಸರಕಾರವನ್ನು ನಂಬಿ ಕಾಶ್ಮೀರಕ್ಕೆ ಪ್ರವಾಸಕ್ಕೆ ಹೋದರೆ, 26 ಜನರ ಸಾವಿಗೆ ಕಾರಣರಾದಿರಿ. ಜನರು ನಿಮ್ಮ ಮೇಲಿಟ್ಟದ್ದ ನಂಬಿಕೆಯನ್ನೇ ನೀವು ಉಳಿಸಿಕೊಳ್ಳಲಿಲ್ಲ ಎಂದು ಪ್ರಿಯಾಂಕಾ ಕುಟುಕಿದರು.

ಆಪರೇಷನ್ ಸಿಂದೂರ್ ಸೇನಾ ಕಾರ್ಯಾಚರಣೆ ನಡೆಸಿದ ಭಾರತೀಯ ಸಶಸ್ತ್ರ ಪಡೆಗಳ ಶೌರ್ಯ ಶ್ಲಾಘನೀಯ. ಪಹಲ್ಗಾಮ್ ದಾಳಿಗೆ ಕಾರಣರಾದ ಉಗ್ರರನ್ನು ಕೊಂದಿರುವ ಭಾರತೀಯ ಸೇನೆಯ ಸಾಹಸ ಮೆಚ್ಚಲೇಬೇಕಾದ ಸಂಗತಿ ಎಂದು ಪ್ರಶಂಸೆ ವ್ಯಕ್ತಪಡಿಸಿದ ಪ್ರಿಯಾಂಕಾ, ಆದರೆ ಕಾಶ್ಮೀರದ ಬಗ್ಗೆ ಕೇಂದ್ರ ಸರಕಾರದ ನಿರ್ಲಕ್ಷ್ಯವನ್ನು ಒಪ್ಪಲು ಸಾಧ್ಯವೇ ಇಲ್ಲ ಎಂದರು. ಇಂಥ ಘೋರ ಭಯೋತ್ಪಾದಕ ದಾಳಿ ನಡೆಯಲಿದೆ ಮತ್ತು ಪಾಕಿಸ್ತಾನದಲ್ಲಿ ಅದರ ಸಂಚು ರೂಪುಗೊಳ್ಳುತ್ತಿದೆ ಎಂಬುದು ಸರಕಾರದ ಸಂಸ್ಥೆಗಳಿಗೇಕೆ ತಿಳಿಯಲಿಲ್ಲ? ಎಂದು ಪ್ರಶ್ನಿಸಿದ ಕಾಂಗ್ರೆಸ್ ನಾಯಕಿ, ಅಮಿತ್ ಶಾ ನೇತೃತ್ವದ ಗುಪ್ತಚರ ಇಲಾಖೆಯ ವೈಫಲ್ಯವನ್ನು ಎತ್ತಿ ತೋರಿದರು.

ಹೊಣೆ ಹೊತ್ತು ರಾಜೀನಾಮೆ

ಈ ಹಿಂದೆ ಡಾ. ಮನಮೋಹನ್ ಸಿಂಗ್ ಅವರ ಸರಕಾರದ ಅವಧಿಯಲ್ಲಿ 26/11 ಮುಂಬೈ ದಾಳಿ ನಡೆದಾಗ ಎಲ್ಲಾ ಭಯೋತ್ಪಾದಕರನ್ನೂ ಅದೇ ದಾಳಿ ಸಮಯದಲ್ಲೇ ಕೊಲ್ಲಲಾಯಿತು. ಒಬ್ಬ ಉಗ್ರನನ್ನು ಸೆರೆ ಹಿಡಿದು ನಂತರ ಗಲ್ಲಿಗೇರಿಸಲಾಯಿತು. ಆಗಿನ ದಾಳಿಯ ಬಳಿಕ ನೈತಿಕ ಹೊಣೆ ಹೊತ್ತು ಮಹಾರಾಷ್ಟ್ರ ಮುಖ್ಯಮಂತ್ರಿ ಮತ್ತು ಗೃಹ ಸಚಿವರು ರಾಜೀನಾಮೆ ನೀಡಿದರು. ಏಕೆಂದರೆ ನಾವು ನಮ್ಮ ಜನರಿಗೆ ಮತ್ತು ನಮ್ಮ ಭೂಮಿಗೆ ಜವಾಬ್ದಾರರಾಗಿದ್ದೇವೆ ಎಂಬುದೇ ಅದಕ್ಕೆ ಕಾರಣ. ಆದರೆ, ಪಹಲ್ಗಾಮ್ ದಾಳಿಗೆ ತಮ್ಮ ಭದ್ರತಾ ವೈಫಲ್ಯ ಕಾರಣ ಎಂದು ಕೇಂದ್ರ ಸರಕಾರ, ಗೃಹ ಸಚಿವರು ಒಪ್ಪಿಕೊಳ್ಳಲೇ ಇಲ್ಲ ಎಂದು ಪ್ರಿಯಾಂಕಾ ಟೀಕಿಸಿದರು.

ನ್ಯೂಯಾರ್ಕ್ ಶೂಟೌಟ್

ವಾಷಿಂಗ್ಟನ್: ನ್ಯೂಯಾರ್ಕ್ ಮಹಾನಗರದ ಸೆಂಟ್ರಲ್ ಮ್ಯಾನ್‌ಹಟನ್ ಗಗನಚುಂಬಿ ಕಟ್ಟಡದಲ್ಲಿ ಸ್ಥಳೀಯ ಕಾಲಮಾನ ಸೋಮವಾರ ಸಂಜೆ 6.30ರಲ್ಲಿ ದುಷ್ಕರ್ಮಿಯೊಬ್ಬ ನಿಂದ ಗುಂಡಿನ ದಾಳಿ ನಡೆದಿದ್ದು, ಪೊಲೀಸ್ ಅಧಿಕಾರಿ ಸೇರಿ ದಂತೆ ನಾಲ್ವರು ಬಲಿಯಾಗಿದ್ದಾರೆ. ಕಡೆಗೆ ದಾಳಿಕೋರನೂ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ದಾಳಿಕೋರನನ್ನು ನೆವಾಡಾದ ಶೇನ್ ಟಮುರಾ (27) ಎಂದು ಗುರುತಿಸಲಾಗಿದೆ. ಗುಂಡಿನ ದಾಳಿ ಬಗ್ಗೆ ಮಾಹಿತಿ ಬರುತ್ತಿದ್ದಂತೆಯೇ ಪೊಲೀಸರು ದೌಡಾಯಿಸಿದ್ದಾರೆ. ಅಷ್ಟರಲ್ಲಾಗಲೇ ದಾಳಿಕೋರನೂ ತನಗೂ ಗುಂಡು ಹಾರಿಸಿಕೊಂಡಿದ್ದ ಎಂದು ವರದಿಯಾಗಿದೆ.

ತೇಜಸ್ವಿ -ಸುಪ್ರಿಯಾ ಸುಳೆ ವಾಕ್ಸಮರ!

ದೆಹಲಿ: ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಮತ್ತು ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷದ (ಎನ್‌ಸಿಪಿ-ಶರದ್ ಬಣ) ಸಂಸದೆ ಸುಪ್ರಿಯಾ ಸುಳೆ ಮಧ್ಯೆ ಮಾತಿನ ಜಟಾಪಟಿಗೆ ಮುಂಗಾರು ಅಧಿವೇಶನದಲ್ಲಿ ಲೋಕಸಭೆ ಸದನ ಸಾಕ್ಷಿಯಾಯಿತು.

ಆಪರೇಷನ್ ಸಿಂದೂರ ಚರ್ಚೆ ನಡೆದಿದ್ದ ಸಂದರ್ಭ ಮಾತನಾಡಿದ ತೇಜಸ್ವಿ ಸೂರ್ಯ, ಭಾರತದ ಮೊದಲ ಪ್ರಧಾನಿ ಜವಹರಲಾಲ್ ನೆಹರು ಅವರು ತಮ್ಮ ಆಡಳಿತಾವಧಿಯಲ್ಲಿ ಎಂದೂ ಭಾರತದ ಸೇನಾಪಡೆಗಳಿಗೆ ಪ್ರೋತ್ಸಾಹದಾಯಕವಾಗಿ ನಡೆದುಕೊಳ್ಳಲೇ ಇಲ್ಲ. ಭಾರತೀಯ ಸಶಸ್ತ್ರ ಪಡೆಗಳ ಆತ್ಮಸ್ಥೈರ್ಯ ಕುಸಿಯವಂತೆ ಮಾಡುವುದೇ ಅವರ ನಡೆಯಾಗಿರುತ್ತಿತ್ತು ಎಂದು ಹೇಳಿದರು.

ಒಂದು ಸಂದರ್ಭದಲ್ಲಂತೂ ನೆಹರು ಅವರು, 'ಭಾರತ ಶಾಂತಿಪ್ರಿಯ ದೇಶ. ಭಾರತ ಎಂದಿಗೂ ಯುದ್ಧಕ್ಕೆ ಪ್ರೋತ್ಸಾಹ ನೀಡುವುದಿಲ್ಲ. ಹಾಗಾಗಿಯೇ ಭಾರತಕ್ಕೆ ಸೇನಾಪಡೆಗಳ ಅಗತ್ಯವೇ ಇಲ್ಲ' ಎಂದಿದ್ದರು ಎಂದು ಹಳೆಯ ವಿಚಾರಗಳನ್ನು ತೇಜಸ್ವಿ ಸೂರ್ಯ ಸದನದ ಗಮನಕ್ಕೆ ತಂದರು.

ಸಂಸದೆ ತಿರುಗೇಟು: ಆದರೆ, ಸಂಸದ ತೇಜಸ್ವಿ ಸೂರ್ಯ ಅವರ ಹೇಳಿಕೆಗಳನ್ನು ಖಂಡಿಸಿದ ಎನ್‌ಸಿಪಿ ಸಂಸದೆ ಸುಪ್ರಿಯಾ ಸುಳೆ, ಮೊದಲು ಇತಿಹಾಸದ ಪುಟಗಳನ್ನು ತೆರೆದು ಓದುವುದನ್ನು ಅಭ್ಯಾಸ ಮಾಡಿಕೊಳ್ಳಿರಿ ಎಂದು ಮಾತಿನಲ್ಲೇ ತಿವಿದರು. ತೇಜಸ್ವಿ ಹೇಳಿಕೆಗಳಿಗೆ ಆಕ್ಷೇಪ ವ್ಯಕ್ತಪಡಿಸಿದರು. ನೆಹರು ಅವರ ಸರಕಾರ ಸಕ್ಷಮವಾದ ಸೇನಾಪಡೆಗಳನ್ನು ಕಟ್ಟಿ ಬೆಳೆಸಿದ್ದರಿಂದಲೇ ನಾವು-ನೀವು ಮತ್ತು ದೇಶ ಸುರಕ್ಷಿತವಾಗಿ ಇರಲು ಸಾಧ್ಯವಾಗಿದೆ ಎಂದು ಮಾತಿನಲ್ಲೆ ಮೊಟಕಿದರು. ಆದರೆ, ಸುಪ್ರಿಯಾ ಅವರ ಮಾತುಗಳಿಗೆ ಪ್ರತಿಯಾಗಿ ಮಾತನಾಡಿದ ತೇಜಸ್ವಿ ಸೂರ್ಯ, ನನ್ನ ಮಾತುಗಳು ಸರಿಯಾಗಿಯೇ ಇವೆ, ಸತ್ಯವನ್ನೇ ಹೇಳಿರುವೆ. ನಾನು ನನ್ನ ಮಾತುಗಳಿಗೆ ಬದ್ಧನಾಗಿರುವೆ ಎಂದು ಸಷ್ಟಪಡಿಸಿದರು.

ಸೇನೆಗೆ ಪಹಲ್ಗಾಮ್ ಸಂತ್ರಸ್ತೆ ಕೃತಜ್ಞತೆ

ನಮ್ಮ ಕಣ್ಣೀರಿಗೆ ನ್ಯಾಯ ಸಿಕ್ಕಿದೆ

ದೆಹಲಿ: ಪಹಲ್ಗಾಮ್ ದಾಳಿಕೋರರಲ್ಲೊಬ್ಬನಾದ ಸುಲೇಮಾನ್ ಶಾ ಭಾರತದ ಭದ್ರತಾ ಪಡೆಗಳ ಗುಂಡಿನಿಂದ ಹತನಾದ ಸುದ್ದಿ ಕೇಳಿದ ಬಳಿಕ ಪಹಲ್ಗಾಮ್ ಸಂತ್ರಸ್ತ ಕುಟುಂಬದ ಆರತಿ ಆರ್.ಮೆನನ್, 'ಪಹಲ್ಗಾಮ್ ದಾಳಿಯಲ್ಲಿ ಬದುಕುಳಿದವರಲ್ಲಿ ನಾವು ಈ ದಿನಕ್ಕಾಗಿಯೇ ಕಾಯುತ್ತಿದ್ದೆವು. ಕಡೆಗೂ ನಮಗೆ ನ್ಯಾಯ ದೊರಕಿತು, ನಮ್ಮ ಕಣ್ಣೀರು ವ್ಯರ್ಥವಾಗಲಿಲ್ಲ' ಎಂದು ಹೇಳಿದ್ದಾರೆ.

ಪಹಲ್ಗಾಮ್‌ನಲ್ಲಿ ಏ.22ರಂದು ಭಯೋತ್ಪಾದಕ ದಾಳಿ ನಡೆಸಿದ್ದ ಮೂವರು ಭಯೋತ್ಪಾದಕರನ್ನು ಜಂಟಿ ಭದ್ರತಾ ಪಡೆಗಳು 'ಆಪರೇಷನ್ ಮಹಾದೇವ್' ಸೇನಾ ಕಾರ್ಯಾಚರಣೆ ನಡೆಸಿ ಕೊಂದು ಹಾಕಿರುವುದಕ್ಕೆ ಪಹ ಲ್ಗಾಮ್ ಸಂತ್ರಸ್ತ ಕುಟುಂಬಗಳು ಸಂತಸ ವ್ಯಕ್ತಪಡಿಸಿವೆ. ಭದ್ರತಾ ಪಡೆಗಳಿಗೆ ಕೃತಜ್ಞತೆ ಸಲ್ಲಿಸಿವೆ. ಪಹಲ್ಗಾಮ್ ಉಗ್ರರ ಗುಂಡಿನ ದಾಳಿಗೆ ಬಲಿಯಾದ 26 ಜನರಲ್ಲಿ ಕೇರಳದ ಕೊಚ್ಚಿ ನಿವಾಸಿ ಎನ್. ರಾಮಚಂದ್ರನ್ ಕೂಡಾ ಒಬ್ಬರು. ಅವರ ಪುತ್ರಿ ಆರತಿ ಆರ್.ಮೆನನ್ ಸುದ್ದಿಸಂಸ್ಥೆಗೆ ಸೋಮವಾರ ನೀಡಿದ ಸಂದರ್ಶನದಲ್ಲಿ, ಭದ್ರತಾ ಪಡೆಗಳ ಆಪರೇಷನ್ ಮಹಾದೇವ್ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿ, ಯೋಧರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ. 'ಭಾರತೀಯ ಸೇನೆ ಬಗ್ಗೆ ತುಂಬಾ ಹೆಮ್ಮೆ ಇದೆ. ಪ್ರಧಾನಿ ಮೋದಿ, ರಕ್ಷಣಾ ಸಚಿವರ ಬದ್ಧತೆಗೆ ಧನ್ಯವಾದ' ಎಂದರು. ಪಹಲ್ಗಾಮ್ ದಾಳಿ ಪ್ರಕರಣದ ತನಿಖಾಧಿಕಾರಿಗಳ ವೃತ್ತಿಪರತೆ ಮತ್ತು ಸೂಕ್ಷ್ಮತೆಯನ್ನೂ ಶ್ಲಾಘಿಸಿದರು.

ಹಿಮಾಚಲ ಪ್ರದೇಶದ ಮಂಡಿ ಪಟ್ಟಣದಲ್ಲಿ ಸೋಮವಾರ ರಾತ್ರಿ ಮೇಘಸ್ಫೋಟವಾಗಿ ಧಾರಾಕಾರ ಮಳೆ ಸುರಿದಿದ್ದರಿಂದ ದಿಢೀರ್ ಪ್ರವಾಹವುಂಟಾಗಿ ಚಂಡೀಗಢ-ಮನಾಲಿ ರಾ.ಹೆದ್ದಾರಿ-4 ಮತ್ತು 9ರಲ್ಲಿ ರಸ್ತೆಗಳು ಕೊಚ್ಚಿ ಹೋಗಿವೆ. ಪ್ರವಾಹಕ್ಕೆ ಮೂವರು ಬಲಿಯಾಗಿದ್ದಾರೆ. ಹಲವೆಡೆ ಭೂಕುಸಿತವಾಗಿದ್ದು, 20ಕ್ಕೂ ಹೆಚ್ಚು ವಾಹನಗಳು ಮಣ್ಣಿನಡಿ ಮುಚ್ಚಿಹೋಗಿವೆ. ನೂರಾರು ಮನೆಗಳು ಜಲಾವೃತಗೊಂಡಿವೆ.

ನರ್ಸ್ ನಿಮಿಷಾ ಪ್ರಿಯ ಗಲ್ಲು ರದ್ದುಗೊಂಡಲ?

ದೆಹಲಿ: ಸ್ಥಳೀಯ ವ್ಯಕ್ತಿಯ ಕೊಲೆ ಪ್ರಕರಣದಲ್ಲಿ ಯೆಮನ್ ದೇಶದ ಸೆರೆಮನೆಯಲ್ಲಿರುವ ಕೇರಳದ ಪಾಲಕ್ಕಾಡ್ ಜಿಲ್ಲೆಯ ನರ್ಸ್ ನಿಮಿಷಾ ಪ್ರಿಯಾ(37) ಗಲ್ಲು ಶಿಕ್ಷೆಯಿಂದ ಮುಕ್ತಿಗೊಂಡಿದ್ದಾರೆ. ಅವರಿಗೆ ವಿಧಿಸಲಾಗಿದ್ದ ಮರಣದಂಡನೆ ಶಿಕ್ಷೆಯನ್ನು ಶಾಶ್ವತವಾಗಿ ರದ್ದುಪಡಿಸಲಾಗಿದೆ ಎಂದು ಭಾರತೀಯ ಗ್ರ್ಯಾಂಡ್ ಮುಫ್ತಿ, ಕಾಂತಪುರಂ ಎಪಿ ಅಬುಬಕ್ಕರ್ ಮುಸ್ಲಿಯಾರ್ ಅವರ ಕಚೇರಿ ದೃಢಪಡಿಸಿದೆ.

ಜು.16ರಂದು ನಿಮಿಷಾ ಪ್ರಿಯಾಗೆ ಗಲ್ಲು ಶಿಕ್ಷೆಗೆ ದಿನ ನಿಗದಿಯಾಗಿತ್ತು. ಆದರೆ, ಭಾರತ ಸರಕಾರದ ಮನವಿ ಹಾಗೂ ಧರ್ಮಗುರುಗಳ ಮಧ್ಯಸ್ಥಿಕೆ ಬಳಿಕ ಗಲ್ಲು ಶಿಕ್ಷೆ ರದ್ದಾಗಿದೆ. ಯೆಮೆನ್ ರಾಜಧಾನಿ ಸನಾದಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಗಲ್ಲು ಶಿಕ್ಷೆ ರದ್ದು ನಿರ್ಧಾರ ತೆಗೆದುಕೊ ಳ್ಳಲಾಗಿದೆ. ಆದರೆ ಯೆಮನ್ ಸರಕಾರದಿಂದ ಮುದ್ರಿತ ಪ್ರಕಟಣೆ ಹೊರಬಂದಿಲ್ಲ ಎಂದು ಗ್ರ್ಯಾಂಡ್ ಮುಫ್ತಿ ಕಚೇರಿ ಹೇಳಿದೆ.

ಆದರೆ, ಕೇಂದ್ರ ಸರಕಾರ, ನರ್ಸ್ ನಿಮಿಷಾ ಪ್ರಿಯಾ ಗಲ್ಲು ಶಿಕ್ಷೆ ಪೂರ್ಣ ರದ್ದಾಗಿರುವ ಬಗ್ಗೆ ಗ್ರ್ಯಾಂಡ್ ಮುಫ್ತಿ ಕಚೇರಿ ನೀಡಿರುವ ಹೇಳಿಕೆಯನ್ನು ನಿರಾಕರಿಸಿದೆ. 'ಶಿಕ್ಷೆ ಪೂರ್ಣ ರದ್ದಾಗಿರುವ ಬಗ್ಗೆ ಯೆಮನ್ ಸರಕಾರದಿಂದ ಅಧಿಕೃತ ಹೇಳಿಕೆಯಾಗಲಿ, ಲಿಖಿತ ಆದೇಶವಾಗಲಿ ಬಂದಿಲ್ಲ. ನಿಮಿಷಾ ಪ್ರಕರಣ ಕುರಿತು ಕೆಲ ವ್ಯಕ್ತಿಗಳು ಹಂಚಿಕೊಳ್ಳುತ್ತಿರುವ ಮಾಹಿತಿ ತಪ್ಪಾಗಿದೆ' ಎಂದು ಭಾರತದ ವಿದೇಶಾಂಗ ಸಚಿವಾಲಯದ ಮೂಲಗಳು ತಿಳಿಸಿರುವುದಾಗಿ ವರದಿಯಾಗಿದೆ.

ಬಸ್‌ಗೆ ಟ್ರಕ್ ಡಿಕ್ಕಿ: 18 ಕನ್ವಾರಿಯ ಬಲಿ

ಜಾರ್ಖಂಡ್: ಜಾರ್ಖಂಡ್ ರಾಜ್ಯದ ದಿಯೋಘರ್‌ನಲ್ಲಿ ಮಂಗಳವಾರ ಮುಂಜಾನೆ 4.30ರಲ್ಲಿ ಗ್ಯಾಸ್ ಸಿಲಿಂಡರ್ ಸಾಗಣೆ ಟ್ರಕ್ ಮತ್ತು ಕನ್ವಾರಿಯಾ ಯಾತ್ರಿಗಳಿದ್ದ ಬಸ್ ನಡುವೆ ಡಿಕ್ಕಿಯಾಗಿದ್ದು, 18 ಯಾತ್ರಿಕರು ಜೀವ ಕಳೆದು ಕೊಂಡರು. 20ಕ್ಕೂ ಹೆಚ್ಚು ಭಕ್ತರು ಗಂಭೀರವಾಗಿ ಗಾಯಗೊಂಡಿದ್ದು, ಸಾವಿನ ಸಂಖ್ಯೆಯ ಹೆಚ್ಚುವ ಸಾಧ್ಯತೆ ಇದೆ ಎನ್ನಲಾಗಿದೆ. ಮೋಹನ್‌ಪುರ ಪೊಲೀಸ್ ಠಾಣಾ ವ್ಯಾಪ್ತಿಯ ಜಮುನಿಯಾ ಅರಣ್ಯದ ಬಳಿ ಕನ್ವಾರಿಯಾ ಯಾತ್ರಿಕರಿದ್ದ ಬಸ್ ಮತ್ತು ಟ್ರಕ್ ನಡುವೆ ಡಿಕ್ಕಿಯಾಗಿದೆ. ಮೃತಪಟ್ಟ 18 ಜನರ ಗುರುತು ತಕ್ಷಣಕ್ಕೆ ಪತ್ತೆಯಾಗಿಲ್ಲ. 23 ಗಾಯಾಳುಗಳನ್ನು ಆಸ್ಪತ್ರೆಗೆ ಸೇರಿಸಲಾಗಿದೆ ಎಂದು ಸಂಚಾರ ವಿಭಾಗದ ಉಪ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ್ ಪ್ರಸಾದ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ. ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.

ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ-1 /ವಿ.ವಿ.ಲೆ.ಶಿ/ ಟೆಂಡರು /2025-26/660 ದಿನಾಂಕ 28-07-2025

ಅಲ್ಪಾವಧಿ ಟೆಂಡರು ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ 2024-25 ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಅನುದಾನ, 2024-25 ನೇ ಸಾಲಿನ ಮುಖ್ಯ ಮಂತ್ರಿಗಳ ವಿಶೇಷ ಅನುದಾನ ಮತ್ತು 2024-25 ನೇ ಸಾಲಿನ ರಾಜ್ಯವಲಯದ ಯೋಜನೆಯಡಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶೌಚಾಲಯ ನಿರ್ಮಾಣ ಒಟ್ಟು 04 ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ (ಕೆ.ಪಿ.ಪಿ.ಪಿ. ಪೋರ್ಟಲ್) ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಅಹ್ವಾನಿಸಿದೆ. ಸದರಿ ಕಾಮಗಾರಿಗಳಲ್ಲಿ ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ 00, ಪರಿಶಿಷ್ಟ ಪಂಗಡ ಗುತ್ತಿಗೆದಾರರಿಗೆ 00 ಕೆಟಗರಿ II A 00 ಮತ್ತು ಕೆಟಗರಿ I 01 ಕಾಮಗಾರಿಗಳನ್ನು ಕಾಯ್ದಿರಿಸಲಾಗಿದೆ.

ಕಾಮಗಾರಿಗಳ ಇಂಡೆಂಟ್ ಸಂಖ್ಯೆ- 1.RDPR/2025-26/BD/WORK_INDENT16878/Call-2. 2.RDPR/2025-26/BD/WORK_INDENT16394 /Call-2. 3.RDPR/2025-26/BD/WORK_INDENT16443/Call-2. 4.RDPR/2025-26/BD/WORK_INDENT16916/CALL-2

ಟೆಂಡರ್ ನಮೂನೆಗಳನ್ನು https://kppp.karnataka.gov.in ಅಂತರ್ಜಾಲದಲ್ಲಿ ದಿನಾಂಕ 28-07-2025 ರಿಂದ ದಿನಾಂಕ 04-08-2025 ರಂದು ಸಂಜೆ 4.30 ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗಧಿತ ಇ.ಎಂ.ಡಿ. ಯೊಂದಿಗೆ ದಿನಾಂಕ: 04-08-2025 ರ 16.30 ಗಂಟೆಯವರಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಆನ್ ಲೈನ್‌ನಲ್ಲಿ ದಿನಾಂಕ: 05-08-2025 ರಂದು 17.30 ಗಂಟೆಗೆ ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು (https://kppp.karnataka.gov.in) ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392-266173.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/309/ಕೆಎಸ್‌ಎಂಸಿಎ/2025-26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕಲಬುರಗಿ

ಸಂಖ್ಯೆ: ಕಾನಿಅ/ಪಂರಾಇಂ/ವಿಕ/ತಾಶಾ/ಟೆಂಡರ/2025-26/1965 ದಿನಾಂಕ : 25/07/2025

ಇ-ಪ್ರೊಕ್ಯೂರಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ ದ್ವಿ-ಲಕೋಟೆ ಪದ್ಧತಿಯಲ್ಲಿ

1) ಕಾಮಗಾರಿಗಳ ಇಂಡೆಂಟ್ ಸಂಖ್ಯೆ 1. Providing and supplying of green and soft boards, sports materials to various Govt. Schools in Chincholi Taluka Indent No.7967, 2. Providing and supplying of projector, screen and interactive panel, printer with Xerox machine to various Govt. Schools in Chincholi Taluka Indent No.3696, 3. Providing and supplying of learning equipments, CCTV, libraries equipments to various Govt. Schools in Chincholi Taluka Indent No. 3543, 2) ಲೆಕ್ಕ ಶೀರ್ಷಿಕೆ: 2023-24 & 2024-25 ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, 3) ಟೆಂಡರಿಗಿಟ್ಟ ಅಂದಾಜು ಮೊತ್ತ: ಇಂಡೆಂಟ್ ಸಂಖ್ಯೆ 7967 ರೂ. 9293240, ಇಂಡೆಂಟ್ ಸಂಖ್ಯೆ 3696 ರೂ. 7978978, ಇಂಡೆಂಟ್ ಸಂಖ್ಯೆ 3543 ರೂ. 9799844, 4) ಗುತ್ತಿಗೆದಾರರ ಅರ್ಹತೆ: ಅಧೀಕೃತ ಮಾರಾಟಗಾರರು / ತಯಾರಕರು / ಸರಬರಾಜುದಾರರು 5) ಟೆಂಡರ ಫಾರಂ ಪಡೆಯುವ ದಿನಾಂಕ: 25-07-2025 ರಿಂದ 11-08-2025 ಸಾಯಂಕಾಲ 4:00 ಗಂಟೆವರೆಗೆ 6) ಟೆಂಡರ ಅರ್ಜಿ ಬೆಲೆ : ಇ-ಪ್ರೊಕ್ಯೂರಮೆಂಟ್ ನಿಯಮಾನುಸಾರ, 7) ಇ.ಎಂ.ಡಿ.: ಇಂಡೆಂಟ್ ಸಂಖ್ಯೆ 7967 ರೂ. 186000, ಇಂಡೆಂಟ್ ಸಂಖ್ಯೆ 3696 ರೂ. 160000, ಇಂಡೆಂಟ್ ಸಂಖ್ಯೆ 3543 ರೂ. 196000, 8) ಟೆಂಡರ ಸಲ್ಲಿಸುವ ದಿನಾಂಕ: 25-07-2025 ರಿಂದ 11-08-2025 ಸಾಯಂಕಾಲ 4:00 ಗಂಟೆವರೆಗೆ, 9) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 12-08-2025 ಸಾಯಂಕಾಲ 4:00 ಗಂಟೆ ನಂತರ, 10) ಆರ್ಥಿಕ ಬಿಡ್ ತೆರೆಯುವ ದಿನಾಂಕ: 13-08-2025 ಬೆಳಿಗ್ಗೆ 11:00 ಗಂಟೆ ನಂತರ, 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕರ್ನಾಟಕ ಗ್ರಾಮೀಣ ಬ್ಯಾಂಕ ಎದುರಿಗೆ ಕುಸನೂರ ರಸ್ತೆ ರಾಜಾಪೂರ ಕಲಬುರಗಿ, 12) ಅಂತರಜಾಲ ತಾಣದ ವಿಳಾಸ: www.kppp.karnataka.gov.in

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/337/ಕೆ.ಎಸ್.ಎಂ.ಸಿ.&ಎ/2025-26

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ,
ಕಲಬುರಗಿ ವಲಯ, ಕಲಬುರಗಿ.
ಮುಖ್ಯ ಅಭಿಯಂತರವರ ಕಛೇರಿ ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ, "ಜಲಭವನ", ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ-585105, ದೂ: 08472-220817, E-mail ID : kwbceklb14@gmail.com

ಕ್ರ.ಸಂ.ಕಜಮ/ಮುಅ.ಕ/ತಾಂತ್ರಿಕ/ಹೆಚ್.ಪಿ.ಟಿ-ನೀ.ಸ/2025-26/464 ದಿನಾಂಕ : 28-07-2025

-: ಟೆಂಡರ್ ಆಹ್ವಾನಿಸುವ ಸೂಚನೆ :-

1) ಕಾಮಗಾರಿ ವಿವರ: "ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ರ ಯೋಜನೆಯಡಿ ಹೊಸಪೇಟೆ ನಗರದ ಎಂ.ಪಿ. ಪ್ರಕಾಶ ನಗರ ಕಾಲೋನಿಯಲ್ಲಿ 10.00 ಲಕ್ಷ ಲೀಟರ್ ಸಾಮರ್ಥ್ಯದ 15 ಮೀ ಎತ್ತರದ ಮೇಲ್ಮಟ್ಟ ಜಲಸಂಗ್ರಹಗಾರ ನಿರ್ಮಾಣದ ಕಾಮಗಾರಿ (ಲಮ್ ಸಮ್) (ವೇರಿಯೇಷನ್ ಇರುವುದಿಲ್ಲ)" (ವರ್ಕ ಇಂಡೆಂಟ್ ಸಂಖ್ಯೆ : ಕೆಯುಡಬ್ಲ್ಯೂಎಸ್.ಡಿ.ಬಿ /2025-26/ಸಿ.ಟಿ/ ವರ್ಕ_ಇಂಡೆಂಟ್364), 2) ಕಾಮಗಾರಿ ಅಂದಾಜು ಮೊತ್ತ: ರೂ. 204.58 ಲಕ್ಷಗಳು (ಜಿ.ಎಸ್.ಟಿ ಹೊರತುಪಡಿಸಿ), 3) ಗುತ್ತಿಗೆದಾರರ ಅರ್ಹತೆ ವಿವರ : ಗುತ್ತಿಗೆದಾರರ ಅರ್ಹತೆಯಂತೆ, 4) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ : ರೂ. 3,07,000/-, 5) ಕಾಮಗಾರಿಯ ಅವಧಿ: 12 ತಿಂಗಳು (ಮಳೆಗಾಲ ಸೇರಿ), 6) ಇ- ಪ್ರಕ್ಯೂರಮೆಂಟ್ ಪೋರ್ಟಲನಲ್ಲಿ ಬಿಡ್ ದಾಖಲೆಗಳನ್ನು ಡೌನ್ ಲೋಡ್ ಮಾಡುವ ದಿನಾಂಕ: 31-07-2025 ಸಮಯ : 17:10 ಗಂಟೆಯ ನಂತರ, 7) ಪೂರ್ವ ಟೆಂಡರ್ ಸಭೆ ದಿನಾಂಕ: 14-08-2025 ಸಮಯ 11:30 ಗಂಟೆಯವರೆಗೆ, 8) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 01-09-2025 ಸಮಯ 17:15 ಗಂಟೆಯವರೆಗೆ, 9) ಟೆಂಡರ್ ತೆರೆಯುವ ದಿನಾಂಕ: 03-09-2025 ಸಮಯ 11:05 ಗಂಟೆಯ ನಂತರ, 10) ಹೆಚ್ಚಿನ ವಿವರಗಳಿಗೆ: ಮುಖ್ಯ ಅಭಿಯಂತರವರ ಕಛೇರಿ, ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ, "ಜಲಭವನ", ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ-585105 ದೂ: 08472-220817, E-mail ID : kwbceklb14@gmail.com, 11) ಅಂತರಜಾಲ ತಾಣದ ವಿಳಾಸ: www.kppp.karnataka.gov.in.

ಸಹಿ/- ಮುಖ್ಯ ಅಭಿಯಂತರರು
ಕನನೀಸ ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ವಲಯ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/341/ಕೆ.ಎಸ್.ಎಂ.ಸಿ.&ಎ/2025-26

ಸಮಾಚಾರ ಸಣ್ಣದಲ್ಲಿ

ಆ.6ಕ್ಕೆ :ಕಾಮಗಾರಿಗೆ ಸಿಎಂ ಶಂಕುಸ್ಥಾಪನೆ



ರಾಯಚೂರು: ಅಂದಾಜು 938 ಕೋಟಿ ರು ವೆಚ್ಚದಲ್ಲಿ ಹಟ್ಟಿ ಚಿನ್ನದ ಗಣಿ ಸಿಬ್ಬಂದಿ ಹಾಗೂ ಕಾರ್ಮಿಕರ ಹೊಸ ವಸತಿ ಸಮುಚ್ಚಯ ನಿರ್ಮಾಣ ಸೇರಿದಂತೆ ನಾನಾ ಅಭಿವೃದ್ಧಿ ಕಾರ್ಯಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಗಸ್ಟ್ 6 ರಂದು ಹಟ್ಟಿ ಚಿನ್ನದ ಗಣಿ ಪ್ರದೇಶದಲ್ಲಿ ಶಂಕು ಸ್ಥಾಪನೆಯನ್ನು ನೆರವೇರಿಸಲಿದ್ದಾರೆ ಎಂದು ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಜೆ.ಟಿ. ಪಾಟೀಲ ಅವರು ಹೇಳಿದರು. ಲಿಂಗಸೂರ ತಾಲೂಕಿನ ಹಟ್ಟಿಯ ಚಿನ್ನದ ಗಣಿ ಕಂಪನಿಯ ಸಭಾಂಗಣದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಹಟ್ಟಿಯಲ್ಲಿ ಗಣಿ ಸಿಬ್ಬಂದಿ ಹಾಗೂ ಕಾರ್ಮಿಕರ ಹೊಸ ವಸತಿ ಸಮುಚ್ಚಯ ನಿರ್ಮಾಣಕ್ಕೆ ಕರ್ನಾಟಕ ಸರಕಾರದ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ಸಿಕ್ಕಿದೆ. ಅಂದಾಜು 938 ಕೋಟಿ ರುಪಾಯಿ ವೆಚ್ಚದಲ್ಲಿ ವಸತಿ ಗೃಹಗಳು, ಶಾಲೆ, ಆಸ್ಪತ್ರೆ, ಕ್ರೀಡಾ ಸಂಕೀರ್ಣ ಸೇರಿದಂತೆ ಅನೇಕ ಅಭಿವೃದ್ಧಿ ಕಾರ್ಯಗಳು ಆಗಲಿವೆ. ಟೂ ಬಿಎಚ್ ಕೆಯ 16 ಕ್ವಾರ್ಟರ್‌ಗಳ 1 ಬ್ಲಾಕ್ ನಿರ್ಮಾಣವಾಗಲಿದೆ. ಸುದ್ದಿಗೋಷ್ಠಿಯಲ್ಲಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕಿ ಆರ್ ಶಿಲ್ಪಾ, ಮುಖಂಡ ವೇಣುಗೋಪಾಲಗೌಡ ಪಾಟೀಲ ಜಾಲಹಳ್ಳಿ ಇದ್ದರು.

ಜನರ ಸಮಸ್ಯೆಗಳಿಗೆ ಸ್ಪಂದಿಸಿ: ಜಿಪಂ ಸಿಇಒ

ರಾಯಚೂರು: ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತಿ ಮಟ್ಟದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಜನರಿಗೆ ಉತ್ತಮ ರೀತಿಯಲ್ಲಿ ಸ್ಪಂದಿಸಿ ಕೆಲಸ ಮಾಡುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕೆಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ್ ಕಾಂದೂ ಅವರು ಹೇಳಿದರು. ನಗರದ ಜಿಲ್ಲಾ ಪಂಚಾಯಿತಿ ಕಚೇರಿಯ ಜಲ ನಿರ್ಮಲ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಸರಕಾರದ ಆದೇಶದಂತೆ ಗ್ರಾಮ ಪಂಚಾಯತಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರೇಡ್-1, ಗ್ರೇಡ್-2, ಕಾರ್ಯದರ್ಶಿಗಳು ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರುಗಳಿಗೆ ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಪ್ರಕ್ರಿಯೆಯಲ್ಲಿ ವರ್ಗಾವಣೆಗೊಂಡ ಸಿಬ್ಬಂದಿಗಳಿಗೆ ಆದೇಶ ಪತ್ರ ವಿತರಿಸಿ ಮಾತನಾಡಿದರು. ಪಂಚಾಯಿತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೇಡ್-1, ಗ್ರೇಡ್-2, ಕಾರ್ಯದರ್ಶಿಗಳು ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಉತ್ತಮವಾಗಿ ಕಾರ್ಯನಿರ್ವಹಿಸಬೇಕು. ಸಾರ್ವಜನಿಕರು ಸರಕಾರದ ಯೋಜನೆಗಳಿಗೆ ಸೇರಿದಂತೆ ಇನ್ನಿತರ ಯಾವುದೇ ಕೆಲಸಗಳಿಗೆ ಆಗಮಿಸುವರೊಂದಿಗೆ ಒಳ್ಳೆಯ ರೀತಿಯಲ್ಲಿ ನಡೆದುಕೊಂಡು ಅವರ ಸಮಸ್ಯೆಗಳಿಗೆ ತಕ್ಷಣವೇ ಸ್ಪಂದಿಸುವ ರೀತಿಯಲ್ಲಿ ಕೆಲಸ ಮಾಡಬೇಕೆಂದು ಸಲಹೆ ನೀಡಿದರು. ಈ ವರ್ಗಾವಣೆಯಲ್ಲಿ ಗ್ರೇಡ್-1, ಗ್ರಾಮ ಪಂಚಾಯತ ಕಾರ್ಯದರ್ಶಿಗಳು 7, ಗ್ರೇಡ್-2, ಗ್ರಾಮ ಪಂಚಾಯತ ಕಾರ್ಯದರ್ಶಿಗಳು 9, ದ್ವಿತೀಯ ದರ್ಜೆ ಲೆಕ್ಕ ಸಹಾಯಕರು 6ರವರಿಗೆ ಆದೇಶ ಪ್ರತಿ ನೀಡಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ ಹಾಲಸಿದ್ದಪ್ಪ ಪೂಜಾರಿ ಹಾಗೂ ಜಿಲ್ಲಾ ಪಂಚಾಯತ ವಿವಿಧ ವಿಭಾಗದ ಮುಖ್ಯಸ್ಥರು ಸಭೆಯಲ್ಲಿ ಇದ್ದರು.

1 ಕೋಟಿ ರು ವೆಚ್ಚದ ಗ್ರಂಥಾಲಯ ಉದ್ಘಾಟನೆ

ಲಿಂಗಸೂಗೂರು: ಸರಕಾರ ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ಕೋಟಿ ಕೋಟಿ ಹಣ ಖರ್ಚು ಮಾಡುತ್ತಿದೆ. ಕೆ. ಕೆ ಆರ್ ಡಿ ಬಿ ವತಿಯಿಂದ ಶೇ. 20 ಅನುದಾನವನ್ನು ಶಾಲೆ, ಕಾಲೇಜುಗಳ ಅಭಿವೃದ್ಧಿಗೆ ಮಿಸಲಿಟ್ಟಿದೆ. ದುಶ್ಚಟಗಳಿಗೆ ಮಕ್ಕಳು ಬಲಿಯಾಗದೆ, ಉತ್ತಮ ಶಿಕ್ಷಣ ಪಡೆದು ತಂದೆ ತಾಯಿಗೆ ಕೀರ್ತಿ ತರುವಂತಗಬೇಕು ಎಂದು ಶಾಸಕ ಮಾನಪ್ಪ ವಜ್ಜಲ್ ಹೇಳಿದರು. ಪಟ್ಟಣದ ಸರಕಾರಿ ಪಾಲಿಟೆಕ್ನಿಕ್ ಕಾಲೇಜು ಆವರಣದಲ್ಲಿ ಕೆ ಕೆ ಆರ್ ಡಿ ಬಿ ಅನುದಾನದಲ್ಲಿ 1 ಕೋಟಿ ರುಪಾಯಿ ವೆಚ್ಚದಲ್ಲಿ ನಿರ್ಮಾಣ ಮಾಡಿದ ಗ್ರಂಥಾಲಯ ಉದ್ಘಾಟಿಸಿ ಮಾತನಾಡಿದ ಅವರು, ನಾನು ಶಾಸಕನಾದಾಗಿನಿಂದಲೂ ಪಾಲಿಟೆಕ್ನಿಕ್ ಕಾಲೇಜಿನ ಅಭಿವೃದ್ಧಿಗೆ ಅನುದಾನವನ್ನು ನೀಡುತ್ತಾ ಬಂದಿದ್ದೇನೆ. ಶಿಕ್ಷಣದ ವಿಷಯದಲ್ಲಿ ಸದಾ ನನ್ನ ಸಹಕಾರ ಇದ್ದು, ಮುಂದೆಯೂ ಕೂಡ ಕಾಲೇಜ್ ಅಭಿವೃದ್ಧಿಗೆ ಅನುದಾನ ನೀಡುವ ಕೆಲಸ ಮಾಡುತ್ತೇನೆ ಎಂದು ಹೇಳಿದರು. ವಿಧಾನ ಪರಿಷತ್ ಸದಸ್ಯ ಶರಣಗೌಡ ಬಯ್ಯಾಪುರ ಅವರು ಮಾತನಾಡಿ, ಅಮರೇಗೌಡ ಬಯ್ಯಾಪುರು ಅವರ ದೂರ ದೃಷ್ಟಿಯಿಂದ ತಾಲೂಕಿನ ಜನ ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮುಂದೆ ಬರಲಿ ಎಂಬ ಉದ್ದೇಶದಿಂದ 2008 ರಲ್ಲಿ ಈ ಕಾಲೇಜನ್ನು ಸ್ಥಾಪನೆ ಮಾಡಿದ್ದಾರೆ. ಪಾಮಯ್ಯ ಮುರಾರಿ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಭೂಪನಗೌಡ ಕರಡಕಲ್, ವೀರನಗೌಡ ಲೆಕ್ಕಿಹಾಳ್, ನಾಗಭೂಷಣ್, ಶಶಿಧರ್ ಪಾಟೀಲ್, ಗಿರೀಮಲ್ಲನಗೌಡ, ಎಇಇ ಹನುಮಂತಪ್ಪ, ಸೇರಿದಂತೆ ಕಾಲೇಜ್ ಪ್ರಾಂಶುಪಾಲರು, ಸಿಬ್ಬಂದಿಗಳು ಇದ್ದರು.

{ಆರ್.ಅಶೋಕ್} ವಿಪಕ್ಷ ನಾಯಕ

ಸಮಾಜಕ್ಕೆ ಒಳ್ಳೆಯ ಕೆಲಸ ಮಾಡಬೇಕೆಂಬ ಕನಸು ರಾಜಕಾರಣಿಗಳಿಗೂ ಇರಬೇಕು. ಪ್ರತಿ ಚುನಾವಣೆಗೆ ಮಂಡ್ಯದ ಜನ ನ್ಯಾಯದ ತಕ್ಕಡಿ ಸಮರ್ಪಕವಾಗಿ ತೂಗಿಸುತ್ತಾರೆ. ಇಲ್ಲಿನ ಜನಕ್ಕೆ ಗೆದ್ದವರನ್ನು ಬೀಳಿಸುವುದು ಗೊತ್ತು, ಸೋತವರನ್ನು ಕೈ ಹಿಡಿದು ಮೇಲಕ್ಕೆತ್ತುವುದು ಸಹ ಗೊತ್ತು. ಕೆಂಗಲ್ ಹನುಮಂತಯ್ಯ ವಿಧಾನಸೌಧ ಕಟ್ಟಿದರೆ, ಎಸ್.ಎಂ.ಕೃಷ್ಣ ಬೆಂಗಳೂರನ್ನ ಐಟಿ ಸಿಟಿ ಮಾಡಿ ಕೋಟಿಗಟ್ಟಲೇ ಆದಾಯ ಬರುವಂತೆ ಮಾಡಿದರು.

ಆಗಸ್ಟ್ 6 ರಂದು ಶಂಕುಸ್ಥಾಪನೆ | ಶಾಸಕ ಜೆ.ಟಿ.ಪಾಟೀಲ ಅಧಿಕಾರಿಗಳಿಗೆ ಸೂಚನೆ

ಸಿಎಂ ಕಾರ್ಯಕ್ರಮ ಅಚ್ಚುಕಟ್ಟಾಗಿ ನಡೆಯಲಿ

ರಾಯಚೂರು: ಹಟ್ಟಿ ಚಿನ್ನದ ಗಣಿ ಸಿಬ್ಬಂದಿ ಹಾಗೂ ಕಾರ್ಮಿಕರ ಹೊಸ ವಸತಿ ಸಮುಚ್ಚಯ ನಿರ್ಮಾಣದ ಶಂಕು ಸ್ಥಾಪನೆಗೆ ಆಗಸ್ಟ್ 6 ರಂದು ಆಗಮಿಸಲಿರುವ ಮಾನ್ಯ ಮುಖ್ಯಮಂತ್ರಿಗಳ ಕಾರ್ಯಕ್ರಮಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಜೆ.ಟಿ. ಪಾಟೀಲ ಅವರು ಹೇಳಿದರು.

ಲಿಂಗಸೂರ ತಾಲೂಕಿನ ಹಟ್ಟಿ ಚಿನ್ನದ ಗಣಿ ಕಂಪನಿಯ ಸಭಾಂಗಣದಲ್ಲಿ ಹಟ್ಟಿ ಚಿನ್ನದ ಗಣಿ ಸಿಬ್ಬಂದಿ ಹಾಗೂ ಕಾರ್ಮಿಕರ ಹೊಸ ವಸತಿ ಸಮುಚ್ಚಯ ನಿರ್ಮಾಣದ ಶಂಕು ಸ್ಥಾಪನೆ ಕಾರ್ಯಕ್ರಮದ ಬಗ್ಗೆ ಪೂರ್ವಭಾವಿ ಸಿದ್ಧತಾ ಸಭೆ ನಡೆಸಿ ಅವರು ಮಾತನಾಡಿದರು.

ಕಾರ್ಯಕ್ರಮಕ್ಕೆ ಆಗಮಿಸುವ ಎಲ್ಲ ಜನ ಪ್ರತಿನಿಧಿಗಳು, ಗಣ್ಯರು ಮತ್ತು ಸಾರ್ವಜನಿಕರಿಗೆ ಆಸನ, ಊಟ, ಉಪಹಾರ, ಸಾರಿಗೆ ಸೇರಿದಂತೆ ಎಲ್ಲಾ ರೀತಿಯ ಸೌಕರ್ಯಕ್ಕೆ ಅಚ್ಚುಕಟ್ಟಾದ ವ್ಯವಸ್ಥೆ ಆಗಬೇಕು. ಕಾರ್ಯಕ್ರಮಕ್ಕೆ ಆಗಮಿಸಲಿರುವ ಅಂದಾಜು 15,000 ಜನರಿಗೆ ತೊಂದರೆಯಾಗದ ರೀತಿಯಲ್ಲಿ ಊಟದ ಸಿದ್ಧತೆ ಮತ್ತು ಕಾರ್ಯಕ್ರಮಕ್ಕೆ ಬಂದು ಹೋಗಲು ಸಾರಿಗೆ ವ್ಯವಸ್ಥೆಯಾಗಬೇಕು. ಕಾರ್ಯಕ್ರಮದ ಬಗ್ಗೆ ಸರಿಯಾದ ರೀತಿಯಲ್ಲಿ ಜಿಲ್ಲಾಡಳಿತ ಮತ್ತು ಜಿಲ್ಲಾ ಪೊಲೀಸ್ ಇಲಾಖೆಯಿಂದ ಮೇಲುಸ್ತುವಾರಿಯಾಗಬೇಕು ಎಂದು ತಿಳಿಸಿದರು.

ಹಟ್ಟಿ ಚಿನ್ನದ ಗಣಿ ಕಂಪನಿಯ ಸಭಾಂಗಣದಲ್ಲಿ ಹಟ್ಟಿ ಚಿನ್ನದ ಗಣಿ ಸಿಬ್ಬಂದಿ ಹಾಗೂ ಕಾರ್ಮಿಕರ ಹೊಸ ವಸತಿ ಸಮುಚ್ಚಯ ನಿರ್ಮಾಣದ ಶಂಕು ಸ್ಥಾಪನೆ ಕಾರ್ಯಕ್ರಮದ ಬಗ್ಗೆ ಪೂರ್ವಭಾವಿ ಸಿದ್ಧತಾ ಸಭೆ ನಡೆಯಿತು.

ವ್ಯವಸ್ಥೆಗಳು
- 15,000 ಜನರಿಗೆ ಊಟದ ವ್ಯವಸ್ಥೆ
- ಸಾರಿಗೆ ವ್ಯವಸ್ಥೆ
- ಬ್ಯಾರಿಕೇಡ್ ಅಳವಡಿಕೆ
- ಕುಡಿಯುವ ನೀರಿನ ವ್ಯವಸ್ಥೆ

ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಒಳಗೊಂಡು ಕೂಡಲೇ ಸಮಿತಿಗಳನ್ನು ರಚಿಸಿ ಕಾರ್ಯ ಹಂಚಿಕೆ ಮಾಡಬೇಕು. ಹೆಚ್ಚಿನ ಸಂಖ್ಯೆಯಲ್ಲಿ ಸೇರುವ ಜನತೆಗೆ ಅನುಕೂಲವಾಗುವಂತೆ ಕುಡಿಯುವ ನೀರು ಮತ್ತು ಸರಿಯಾದ ಸಾರಿಗೆ ವ್ಯವಸ್ಥೆ ಮಾಡಬೇಕು.
- ಮಾನಪ್ಪ ಡಿ ವಜ್ಜಲ್, ಶಾಸಕ

ಮುಖ್ಯಮಂತ್ರಿ ಅವರಿಗೆ ಅಹವಾಲು ಸಲ್ಲಿಸಲು ಬರುವ ಅರ್ಜಿದಾರರು, ಸಾರ್ವಜನಿಕರು ಮತ್ತು ರೈತ ಕಾರ್ಮಿಕ ಮತ್ತು ಇನ್ನಿತರ ಮುಖಂಡರಿಗೆ ಅನುಕೂಲವಾಗುವಂತೆ ಅರ್ಜಿ ಸಲ್ಲಿಕೆ ಸ್ಥಳದಲ್ಲಿ ಬ್ಯಾರಿಕೇಡ್ ಅಳವಡಿಕೆ ಮಾಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ವೇದಿಕೆಯಲ್ಲಿ ಸ್ವಾಗತ, ಆಸನದಲ್ಲಿ ಶಿಷ್ಟಾಚಾರ ಪಾಲನೆ, ಸನ್ಮಾನ, ಸ್ಮರಣಿಕೆ ವಿತರಣೆ ಸೇರಿದಂತೆ ಇನ್ನಿತರ ಎಲ್ಲಾ ಕಾರ್ಯಕ್ರಮಗಳು ಅಚ್ಚುಕಟ್ಟಾಗಿ ನಡೆಯಬೇಕು. ಗಣ್ಯರಿಗೆ ಮತ್ತು ಸಾರ್ವಜನಿಕರಿಗೆ ಊಟ, ಉಪಹಾರ ಮತ್ತು ಕುಡಿಯುವ ನೀರು ಪೂರೈಕೆಯಲ್ಲಿ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

ಮಾನ್ಯ ಮುಖ್ಯಮಂತ್ರಿ ಅವರ ಕಾರ್ಯಕ್ರಮವು ಯಾವುದೇ ರೀತಿಯಲ್ಲಿ ಶಿಷ್ಟಾಚಾರ ಉಲ್ಲಂಘನೆಯಾಗದಂತೆ ನಡೆಯಲು ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ ಅಧಿಕಾರಿಗಳು ಎಲ್ಲಾ ರೀತಿಯ ಅಗತ್ಯ ಕ್ರಮವಹಿಸಬೇಕು. ಇದಕ್ಕೆ ಸಹಾಯಬೇಕಿದ್ದರೆ ಸಮಿತಿಗಳಿಗೆ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಮತ್ತು ಸಿಬ್ಬಂದಿಯನ್ನು ಒದಗಿಸಲಾಗುವುದು.
- ನಿತೀಶ್ ಕೆ, ಜಿಲ್ಲಾಧಿಕಾರಿ

ಸಭೆಯಲ್ಲಿ ವಿಧಾನ ಪರಿಷತ್ ಸದಸ್ಯ ಶರಣಗೌಡ ಬಯ್ಯಾಪುರ, ಮಾಜಿ ಶಾಸಕ ಡಿ ಎಸ್ ಹೂಲಗೇರಿ, ಕಂಪನಿಯ ಎಂ.ಡಿ. ಆರ್ ಶಿಲ್ಪಾ , ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪುಟ್ಟಮಾದಯ್ಯ, ಸಹಾಯಕ ಆಯುಕ್ತ ಬಸವಣ್ಣೆಪ್ಪ ಕಲಶೆಟ್ಟಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

ವಸತಿ ಶಾಲೆ ಕಾಂಪೌಂಡ್‌ಗೆ ಗೇಟ್ ಬೇಕು

ಸಿಂಧನೂರು: ತಾಲೂಕಿನ ರಾಗಲಪರ್ವಿ ಗ್ರಾಮದಲ್ಲಿರುವ ಕರ್ನಾಟಕ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ನಿಲಯಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿ ಬಸವಲಿಂಗಪ್ಪ ಹುಡೇದ್ ಮಂಗಳವಾರ ಭೇಟಿ ನೀಡಿ ವಿದ್ಯಾರ್ಥಿನಿಯರೊಂದಿಗೆ ಚರ್ಚೆ ನಡೆಸಿ ವಿವಿಧ ಸಮಸ್ಯೆಗಳನ್ನು ಆಲಿಸಿದರು.

ಈ ವೇಳೆ ಕರ್ನಾಟಕ ರಕ್ಷಣಾ ವೇದಿಕೆ (ಸ್ವಾಭಿಮಾನ ಬಣ) ತಾಲೂಕು ಘಟಕದ ಅಧ್ಯಕ್ಷ ಮಂಜುನಾಥ ಗಾಣಗೇರಾ ಅವರು ಶಾಲೆಯ ಕಾಂಪೌಂಡ್‌ಗೆ ಗೇಟ್ ಅಳವಡಿಸದ ಕಾರಣ ಸಂಜೆಯಾಗುತ್ತಿದ್ದಂತೆ ಕುಡುಕರ ಹಾವಳಿ ಹೆಚ್ಚಾಗಿದ್ದು, ವಿದ್ಯಾರ್ಥಿನಿಯರಲ್ಲಿ ಆತಂಕ ಹೆಚ್ಚಾಗಿದೆ.ಹೀಗಾಗಿ ತಕ್ಷಣವೇ ತಡೆಗೋಡೆ ಮತ್ತು ಕಾಂಪೌಂಡ್‌ಗೆ ಗೇಟ್ ಅಳವಡಿಸಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿಯ ಗಮನ ಸೆಳೆದರು.

ವಿದ್ಯಾರ್ಥಿನಿಯರಿಗೆ ಗುಣಮಟ್ಟದ ಶಿಕ್ಷಣ ನೀಡುವ ಜತೆಗೆ ವಸತಿ ನಿಲಯದಲ್ಲಿ ಅಗತ್ಯ ಸೌಕರ್ಯಗಳನ್ನು ಕಲ್ಪಿಸಬೇಕು. ಮೆನು ಪ್ರಕಾರ ಉಪಾಹಾರ, ಊಟ ನೀಡಬೇಕು. ಶುದ್ಧ ಕುಡಿಯುವ ನೀರು ಪೂರೈಸಬೇಕು ಎಂದು ಬಿಇಒ ಬಸವಲಿಂಗಪ್ಪ ಅವರು ಮುಖ್ಯಶಿಕ್ಷಕಿ ಸುವರ್ಣಗೆ ಸೂಚಿಸಿದರು. ಎಸ್‌ಡಿಎಂಸಿ ಅಧ್ಯಕ್ಷ ಹುಸೇನಪ್ಪ ದಾರಿಮನಿ, ವೇದಿಕೆಯ ಪ್ರಧಾನ ಕಾರ್ಯದರ್ಶಿ ಅಯ್ಯಪ್ಪ ಮೇಟಿ, ರುದ್ರಗೌಡ, ಮುಖಂಡ ಪರಶುರಾಮ್ ಗೀತಾಕ್ಯಾಂಪ್ ಇದ್ದರು.

ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ನಿಲಯಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿ ಬಸವಲಿಂಗಪ್ಪ ಹುಡೇದ್ ಭೇಟಿ ನೀಡಿ ವಿದ್ಯಾರ್ಥಿನಿಯರೊಂದಿಗೆ ಚರ್ಚೆ ನಡೆಸಿದರು.

ಈ ಕುರಿತು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳ ಗಮನಕ್ಕೆ ತಂದು ಆದಷ್ಟು ಶೀಘ್ರ ಕೆಲಸ ಮಾಡಿಸಲಾಗುವುದು.
-ಬಸವಲಿಂಗಪ್ಪ ಹುಡೇದ್, ಕ್ಷೇತ್ರ ಶಿಕ್ಷಣಾಧಿಕಾರಿ

ದುಬಾರಿ ದರಕ್ಕೆ ಗೊಬ್ಬರ, ಅಂಗಡಿಗೆ ಮುತ್ತಿಗೆ

ಮುದಗಲ್: ಪಟ್ಟಣದ ಬಾಲಾಜಿ ಕೃಷಿ ಕೇಂದ್ರದಲ್ಲಿ ಹೆಚ್ಚಿನ ದರದಲ್ಲಿ ರಸಗೊಬ್ಬರ ಮಾರಾಟ ಎಂದು ಆರೋಪಿಸಿ ರೈತರು ಅಂಗಡಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ಮಾಡಿದರು.

ರೈತರು ರಸಗೊಬ್ಬರ ಖರೀದಿಗೆ ಮುಂದಾದಾಗ ರೈತರಿಗೆ ಹೆಚ್ಚಿನ ದರದಲ್ಲಿ ಮಾರಾಟ ಮಾಡುತ್ತಿರುವ ಕಂಡು ಬಿಗ್ ಶಾಕ್ ಆದರೂ, ಸರಕಾರ ನಿಗದಿ ಪಡಿಸಿದಗಿಂತ ಹೆಚ್ಚಿನ ಬೆಲೆಗೆ ಅಂಗಡಿ ಮಾಲೀಕರು ಗೊಬ್ಬರ ಮಾರಾಟ ಮಾಡುತ್ತಿರುವ ಕಂಡು ರೈತರು ಅಂಗಡಿಯ ಮಾಲೀಕನಿಗೆ ತರಾಟೆಗೆ ತೆಗೆದುಕೊಂಡರು. ಕೆಲ ಸಮಯ ಅಂಗಡಿಯಲ್ಲಿ ಗೊಂದಲದ ವಾತಾವರಣ ನಿರ್ಮಾಣವಾಯಿತು.

ರಸಗೊಬ್ಬರ ಖರೀದಿಸಿದ ರೈತರಿಗೆ ಯಾವುದೇ ಬಿಲ್ ನೀಡದೆ ದೋಖಾ ಮಾಡುತ್ತಿದ್ದಾರೆ ಎಂದು ರೈತರು ಗಂಭೀರ ಆರೋಪಿಸಿದರು. ಡಿಎಪಿ ರಸ ಗೊಬ್ಬರದ ಬೆಲೆ 1350 ರುಪಾಯಿ ಬೆಲೆ ಸರಕಾರ ನಿಗದಿಪಡಿಸಿದೆ. ಆದರೆ ಅಂಗಡಿ ಮಾಲೀಕರು 1600 ರುಪಾಯಿ ಹಾಗೂ ಯೂರಿಯಾ ರಸಗೊಬ್ಬರ ಬೆಲೆ 266 ಸರಕಾರ ನಿಗದಿ ಪಡಿಸಿದ್ದರೆ, 350-400 ರುಪಾಯಿಗಳವರಗೆ ಹೆಚ್ಚಿಗೆ ಮಾರಾಟ ಮಾಡುತ್ತಿದ್ದಾರೆ. ಈ ಅಂಗಡಿ ಮಾಲೀಕರ ವಿರುದ್ಧ ಸೂಕ್ತ ಕ್ರಮಕ್ಕೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಘಟನೆ ಪದಾಧಿಕಾರಿಗಳು ಒತ್ತಾಯಿಸಿದರು.

ಪಟ್ಟಣದ ಬಾಲಾಜಿ ಕೃಷಿ ಕೇಂದ್ರದಲ್ಲಿ ಹೆಚ್ಚಿನ ದರದಲ್ಲಿ ರಸಗೊಬ್ಬರ ಮಾರಾಟ ಎಂದು ಆರೋಪಿಸಿ ರೈತರು ಅಂಗಡಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಯಿತು.

ಹೆಚ್ಚಿನ ದರದಲ್ಲಿ ರಸಗೊಬ್ಬರ ಮಾರಾಟ ಮಾಡುತ್ತಿರುವ ಕುರಿತು ಸಂಪೂರ್ಣ ಮಾಹಿತಿ ಪಡೆದುಕೊಂಡು ಮೇಲಾಧಿಕಾರಿಗಳಿಗೆ ಮಾಹಿತಿ ಕಳಿಸಲಾಗುವುದು.
-ಮಾಂತಯ್ಯ ಹಿರೇಮಠ, ಕೃಷಿ ಅಧಿಕಾರಿ, ಮುದಗಲ್

ಹೆಚ್ಚಿನ ದರದಲ್ಲಿ ರಸಗೊಬ್ಬರ ಮಾರಾಟ ಮಾಡುತ್ತಿರುವ ಅಂಗಡಿ ಮಾಲೀಕರ ವಿರುದ್ಧ ಕೃಷಿ ಇಲಾಖೆ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು.
-ಶಿವಪುತ್ರಗೌಡ ಪಾಟೀಲ್, ಜಿಲ್ಲಾಧ್ಯಕ್ಷರು

ಘಟನೆ ಸ್ಥಳಕ್ಕೆ ಮುದಗಲ್ ಕೃಷಿ ಅಧಿಕಾರಿ ಮಾಂತಯ್ಯ ಹಿರೇಮಠ ಹಾಗೂ ಸ್ಥಳೀಯ ಪೊಲೀಸ್ ಠಾಣೆಯ ಸಿಬ್ಬಂದಿ ಅಮರೇಶ ಎಚ್, ಕೆ, ಹಾಗೂ ಅನಿಲಕುಮಾರ ಭೇಟಿ ಪರಿಶೀಲನೆ ಮಾಡಿದರು.

ರಸಗೊಬ್ಬರ ಪೂರೈಕೆಯಲ್ಲಿ ವ್ಯತ್ಯಯ | ಸಚಿವ ಶಿವರಾಜ ತಂಗಡಗಿ ಸೂಚನೆ

ಸೊಸೈಟಿಯಿಂದ ಮಾರಾಟಕ್ಕೆ ಆದ್ಯತೆ

ಕೊಪ್ಪಳ: ಜಿಲ್ಲಾದ್ಯಂತ ಸಹಕಾರಿ ಸಂಘಗಳ ಮೂಲಕ ರಸ ಗೊಬ್ಬರ ಮಾರಾಟಕ್ಕೆ ಆದ್ಯತೆ ನೀಡಬೇಕು. ರಸ ಗೊಬ್ಬರ ತಯಾರಿಕೆ ಕಂಪನಿಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ರಸ ಗೊಬ್ಬರ ಹಂಚಿಕೆ ಮಾಡುವಂತಿಲ್ಲ, ಕಡ್ಡಾಯವಾಗಿ ಸರಕಾರದ ಮಾರ್ಗಸೂಚಿ ಪಾಲಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಕೃಷಿ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯಲ್ಲಿ ರಸಗೊಬ್ಬರ ಪೂರೈಕೆಯಲ್ಲಿ ಉಂಟಾದ ವ್ಯತ್ಯದ ಬಗ್ಗೆ ಕೃಷಿ ಇಲಾಖೆ ಅಧಿಕಾರಿಗಳ ಸಭೆ ನಡೆಸಿ ಮಂಗಳವಾರ ಮಾತನಾಡಿದರು.

ಕೇವಲ ಖಾಸಗಿ ಅಂಗಡಿಗಳ ಮೂಲಕ ರಸ ಗೊಬ್ಬರ ಮಾರಾಟ ಮಾಡಲು, ಅಲೋಕೇಷನ್ ಮಾಡಿದರೆ ರೈತರಿಗೆ ಸಮಸ್ಯೆ ಉಂಟಾಗಲಿದೆ. ಈ ಬಗ್ಗೆ ರೈತರಿಂದ ಸಾಕಷ್ಟು ದೂರು ಬಂದಿವೆ. ಇದರಿಂದಲೇ ರೈತರು ಗೊಬ್ಬರಕ್ಕಾಗಿ ಸರತಿಯಲ್ಲಿ ನಿಲ್ಲುವಂತಾಗಿದೆ. ಕೊಪ್ಪಳ ತಾಲೂಕು ಮುದ್ದಾಬಳ್ಳಿ ಗ್ರಾಮದಲ್ಲಿಯೂ ಒಂದೇ ಅಂಗಡಿಯಲ್ಲಿ ಗೊಬ್ಬರ ಮಾರಾಟ ಮಾಡುತ್ತಿದ್ದರಿಂದ ರಾತ್ರಿ ಇಡೀ ರೈತರು ಪಾಳೆ ನಿಂತಿದ್ದಾರೆ ಎಂದು ಪ್ರತಿಕೆಯಲ್ಲಿ ವರದಿಯಾಗಿದೆ. ಕೂಡಲೇ ಜಿಲ್ಲೆಯ ಸಹಕಾರ ಸಂಘ ಮತ್ತು ರಸಗೊಬ್ಬರ ಮಾರಾಟ ಏಜೆನ್ಸಿಗಳಿಗೆ ರಸಗೊಬ್ಬರ ಸಮಾನವಾಗಿ ಹಂಚಿಕೆ ಮಾಡಲು ಕೃಷಿ ಇಲಾಖೆ ಅಧಿಕಾರಿಗಳು ತ್ವರಿತವಾಗಿ ಕ್ರಮ ಕೈಗೊಳ್ಳಬೇಕು. ರೈತರಿಗೆ ನಾವೆಲ್ಲರೂ ರಕ್ಷಣೆ ನೀಡಬೇಕು ಎಂದರು.

ಜಿಲ್ಲೆಯಲ್ಲಿ ಈ ಬಾರಿ ಅತ್ಯಂತ ಬೇಗನೇ ಮುಂಗಾರು ಮಳೆ ಆರಂಭವಾಗಿದೆ. ಭತ್ತ ನಾಟಿ ಜತೆಗೆ ಮಳೆಯಾಶ್ರಿತ ಮುಂಗಾರು ಬಿತ್ತನೆ ಬೇಗನೆ ಆರಂಭ ಆಗಿದೆ. ಕಳೆದ ಬಾರಿಗಿಂತ ಈ ಬಾರಿ ಬಿತ್ತನೆ ಪ್ರಮಾಣ ಕೂಡ ಹೆಚ್ಚಾಗಿದೆ. ಇದರಿಂದ ರಸ ಗೊಬ್ಬರದ ಬೇಡಿಕೆ ಹೆಚ್ಚಾಗಿದೆ. ಇದರಿಂದ ರೈತರ ಬೇಡಿಕೆಯಂತೆ ಯುರಿಯಾ ಪೂರೈಸಬೇಕು. ಜಿಲ್ಲೆಯಲ್ಲಿ ಮುಂದೆ ಬರಲಿರುವ ಯೂರಿಯಾ ಪ್ರಮಾಣದ ಬಗ್ಗೆಯೂ ರೈತರಿಗೆ ಮಾಹಿತಿ ನೀಡಬೇಕು. ಶಾಸಕ ಕೆ.ರಾಘವೇಂದ್ರ ಹಿಟ್ನಾಳ ಮಾತನಾಡಿ, ಜಿಲ್ಲೆಯಲ್ಲಿ ಹೆಚ್ಚಿನ ದರಕ್ಕೆ ರಸಗೊಬ್ಬರ ಮಾರಾಟ ಮಾಡುತ್ತಿರುವ ಕುರಿತು ದೂರು ಬರುತ್ತಿವೆ. ಇದರ ಕಡಿವಾಣಕ್ಕೆ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಬೇಕು. ಈ ಬಗ್ಗೆ ತಹಸೀಲ್ದಾರ್ ರು ಗೊಬ್ಬರ ಮಾರಾಟ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಳ್ಳಬೇಕು ಎಂದರು.

ಜಿಲ್ಲಾಧಿಕಾರಿ ಸುರೇಶ ಬಿ. ಇಟ್ನಾಳ, ಜಿಪಂ ಸಿಇಒ ವರ್ಣಿತ ನೇಗಿ, ಎಸ್ಪಿ ಡಾ. ರಾಮ್ ಎಲ್. ಅರಸಿದ್ದಿ, ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಉಪ ವಿಭಾಗಾಧಿಕಾರಿ ಕ್ಯಾ. ಮಹೇಶ ಮಾಲಗಿತ್ತಿ, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ರೆಡ್ಡಿ ಶ್ರೀನಿವಾಸ್, ಉಪಾಧ್ಯಕ್ಷ ಮಂಜುನಾಥ ಗೊಂಡಬಾಳ, ಉಪ ನಿರ್ದೇಶಕ ಎಲ್.ಸಿದ್ದೇಶ ಸೇರಿ ನಾನಾ ಇಲಾಖೆ ಅಧಿಕಾರಿಗಳು ಇದ್ದರು.

ಕೊಪ್ಪಳ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯಲ್ಲಿ ರಸಗೊಬ್ಬರ ಪೂರೈಕೆಯಲ್ಲಿ ಉಂಟಾದ ವ್ಯತ್ಯದ ಬಗ್ಗೆ ಜಿಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಅಧಿಕಾರಿಗಳ ಜೊತೆಗೆ ಮಂಗಳವಾರ ಸಭೆ ನಡೆಸಿದರು.

ರಸಗೊಬ್ಬರ ಪೂರೈಕೆಯಲ್ಲಿ ಯಾವುದೇ ಸಮಸ್ಯೆ ಉಂಟಾದರೆ ಆಯಾ ತಾಲೂಕು ಕೃಷಿ ಇಲಾಖೆ ಅಧಿಕಾರಿಗಳು ಹಾಗೂ ತಹಸೀಲ್ದಾರ್ ಮೇಲೆ ಕ್ರಮ ಕೈಗೊಳ್ಳಲಾಗುವುದು. ಸರಕಾರದ ನಿಗದಿತ ದರಕ್ಕಿಂತ ಹೆಚ್ಚಿನ ದರಕ್ಕೆ ರಸ ಗೊಬ್ಬರ ಮಾರಾಟ ಮಾಡುವ ಅಂಗಡಿಗಳ ವಿರುದ್ಧ ಪ್ರಕರಣ ದಾಖಲಿಸಬೇಕು. ಅಂಥ ಅಂಗಡಿಗಳ ಪರವಾನಗಿ ರದ್ದು ಮಾಡಬೇಕು.
- ಬಸವರಾಜ ಧಡೆಸುಗೂರ, ಬಿಜೆಪಿ ಜಿಲ್ಲಾಧ್ಯಕ್ಷ

ಈ ಬಾರಿ ಭತ್ತ ನಾಟಿ ಜತೆಗೆ ಮಳೆಯಾಶ್ರಿತ ಜಮೀನಿನಲ್ಲಿ ಬಿತ್ತನೆಯೂ ಬೇಗನೆ ಆಗಿದೆ. ಕಳೆದ ವರ್ಷ 2.41 ಲಕ್ಷ ಹೆಕ್ಟರ್ ಬಿತ್ತನೆಯಾಗಿದೆ. ಈ ವರ್ಷ 3.26 ಲಕ್ಷ ಹೆಕ್ಟರ್ ಬಿತ್ತನೆಯಾಗಿದೆ. ಈ ಬಾರಿ ಹೆಚ್ಚುವರಿ 85 ಸಾವಿರ ಹೆಕ್ಟರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. ಇದರಿಂದ ಬೇಡಿಕೆ ಹೆಚ್ಚಾಗಿದೆ.
-ಟಿ.ಎಸ್. ರುದ್ರೇಶಪ್ಪ, ಜಂಟಿ ನಿರ್ದೇಶಕ, ಕೃಷಿ ಇಲಾಖೆ

ರಸ ಗೊಬ್ಬರ ಮಾರಾಟಗಾರರಿಗೆ ಸಚಿವ ಶಿವರಾಜ ಎಸ್. ತಂಗಡಗಿ ಸೂಚನೆ

ಹೆಚ್ಚಿನ ಬೆಲೆಗೆ ಮಾರಿದರೆ ಪರವಾಗಿ ರದ್ದು

ಕೊಪ್ಪಳ: ಎಂಆರ್ ಪಿಗಿಂತ ಹೆಚ್ಚಿನ ದರಕ್ಕೆ ರಸಗೊಬ್ಬರ ಮಾರಾಟ ಮಾಡಬಾರದು. ಇಂಥ ಪ್ರಕರಣ ಕಂಡು ಬಂದರೆ ರಸಗೊಬ್ಬರ ಅಂಗಡಿ ಪರವಾನಗಿ ರದ್ದು ಮಾಡುವ ಜತೆಗೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯ ರಸಗೊಬ್ಬರ ಮಾರಾಟಗಾರರ ಸಭೆಯ ಅಧ್ಯಕ್ಷತೆ ವಹಿಸಿ ಮಂಗಳವಾರ ಮಾತನಾಡಿದರು.

ಮಾರಾಟಗಾರರು ಅನಧಿಕೃತವಾಗಿ ರಸಗೊಬ್ಬರ ಸ್ಟಾಕ್ ಇಟ್ಟುಕೊಳ್ಳುವಂತಿಲ್ಲ. ನಿಗದಿತ ದರಕ್ಕಿಂತ ಒಂದೇ ಒಂದು ರು. ಹೆಚ್ಚಿನ ಬೆಲೆಗೆ ಮಾರಾಟ ಮಾಡುವುದು ಕಂಡು ಬಂದರೆ ಅಂತವರ ವಿರುದ್ಧ ಮುಲಾಜಿಲ್ಲದೆ ಕ್ರಮ ಜರುಗಿಸಲಾಗುವುದು. ಈಗಾಗಲೇ ಒಂದು ನಕಲಿ ಗೊಬ್ಬರ ತಯಾರಿಕೆ ಪ್ಯಾಕ್ಟರಿ ಸೀಜ್ ಮಾಡಲಾಗಿದೆ. ರೈತರಿಗೆ ಹಾನಿಯಾದರೆ ನಾವು ಸಹಿಸಿಕೊಳ್ಳುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ಜಿಲ್ಲಾಧಿಕಾರಿ ಸುರೇಶ ಬಿ. ಇಟ್ನಾಳ, ಜಿಪಂ ಸಿಇಒ ವರ್ಣಿತ ನೇಗಿ, ಎಸ್ಪಿ ಡಾ. ರಾಮ್ ಎಲ್. ಅರಸಿದ್ದಿ, ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಕೃಷಿ ಇಲಾಖೆ ಜಂಟಿ ನಿರ್ದೇಶಕ ರುದ್ರೇಶಪ್ಪ ಟಿ.ಎಸ್., ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ರೆಡ್ಡಿ ಶ್ರೀನಿವಾಸ್, ಉಪಾಧ್ಯಕ್ಷ ಮಂಜುನಾಥ ಗೊಂಡಬಾಳ, ಕೃಷಿ ಇಲಾಖೆ ಉಪ ನಿರ್ದೇಶಕ ಎಲ್.ಸಿದ್ದೇಶ ಇದ್ದರು.

ಸೊಸೈಟಿ ಜತೆಗೆ ಎಲ್ಲ ಖಾಸಗಿ ಲೈಸನ್ಸ್ ದಾರರಿಗೆ ರಸಗೊಬ್ಬರ ಕೊಡಲು ಹೇಳಲಾಗಿದೆ. ರೈತರು ಆತಂಕ ಪಡಬೇಕಿಲ್ಲ. ರೈತರು ತಮ್ಮ ಅವಶ್ಯಕತೆ ತಕ್ಕಷ್ಟು ರಸಗೊಬ್ಬರ ತೆಗೆದುಕೊಂಡು ಹೋಗಬೇಕು. ಆತಂಕಗೊಂಡು ಮುಂದೆ ಗೊಬ್ಬರ ಸಿಗುತ್ತದೆಯೋ ಇಲ್ಲವೋ ಎಂದು ಗಾಬರಿಯಾಗಬೇಕಿಲ್ಲ.
-ಶಿವರಾಜ ತಂಗಡಗಿ, ಜಿಲ್ಲಾ ಉಸ್ತುವಾರಿ ಸಚಿವ

ಪತ್ರಿಕಾ ದಿನ ಆಚರಣೆ

ಕುಷ್ಟಗಿ: ಪಟ್ಟಣದ ಶಾಖಾಪೂರು ರಸ್ತೆಯಲ್ಲಿನ ಶ್ರೀ ಆರ್. ಪಿ. ಹೊಸವಕ್ಕಲ ಕಲ್ಯಾಣ ಮಂಟಪದಲ್ಲಿ ಇಂದು ಬೆಳಗ್ಗೆ 10.30ಕ್ಕೆ ಕಾನಿಪ ಕುಷ್ಟಗಿ ತಾಲೂಕಾ ಘಟಕದಿಂದ ಪತ್ರಿಕಾ ದಿನ ಆಚರಿಸಲಾಗುವುದು. ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರಿಗೆ ಹಾಗೂ ಪತ್ರಿಕೆ ವಿತರಿಕರಿಗೆ ಸನ್ಮಾನ ಮಾಡಲಾಗುವುದು. ಮದ್ದಾನೇಶ್ವರ ಮಠದ ಶ್ರೀಕರಿಬಸವ ಶಿವಚಾರ್ಯ ಮಹಾಸ್ವಾಮಿ, ನಿಡಶೇಶಿ ಮಠದ ಅಭಿನವ ಶ್ರೀಕರಿಬಸವ ಶಿವಾಚಾರ್ಯ ಮಹಾಸ್ವಾಮಿ ಸಾನಿಧ್ಯ ವಹಿಸಲಿದ್ದಾರೆ. ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕ ಹಾಗೂ ಶಾಸಕ ದೊಡ್ಡನಗೌಡ ಪಾಟೀಲ್ ಉದ್ಘಾಟಿಸಲಿದ್ದಾರೆ. ಮಾಜಿ ಸಚಿವ ಅಮರೇಗೌಡ ಪಾಟೀಲ್ ಡಿವಿಜಿ ಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಿದ್ದಾರೆ. ಮಾಜಿ ಶಾಸಕ ಕೆ ಶರಣಪ್ಪ ವಕೀಲರು, ಕಾಡಾ ಅಧ್ಯಕ್ಷ ಹಸನಸಾಬ ದೋಟಿಹಾಳ ಭಾಗವಹಿಸಲಿದ್ದಾರೆ ಎಂದು ತಾಲೂಕಾಧ್ಯಕ್ಷ ವೆಂಕಟೇಶ ಕುಲಕರ್ಣಿ ತಿಳಿಸಿದ್ದಾರೆ.

ಒಳ ಮೀಸಲಿಗೆ ಆಗ್ರಹ: ಬೃಹತ್ ಪ್ರತಿಭಟನೆ

ಕೊಪ್ಪಳ: ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ಆ.1ರಂದು ರಾಜ್ಯಾದ್ಯಂತ ಪ್ರತಿಭಟನೆ ನಡೆಯುವ ಹಿನ್ನೆಲೆ, ನಗರದ ಪ್ರವಾಸಿ ಮಂದಿರದಲ್ಲಿ ವಿವಿಧ ಮಾದಿಗ ಸಂಘಟನೆಗಳ ಒಕ್ಕೂಟದಿಂದ ಪೂರ್ವಭಾವಿ ಸಭೆ ಮಂಗಳವಾರ ನಡೆಯಿತು. ಕೊಪ್ಪಳದ ಜಿಲ್ಲಾಡಳಿತ ಭವನದ ಮುಂದೆ ಒಳಮೀಸಲಾತಿ ಜಾರಿಗೆ ಬೃಹತ್ ಪ್ರತಿಭಟನೆ ನಡೆಸಲು ತೀರ್ಮಾನಿಸಲಾಗಿದೆ. ಸಭೆಯಲ್ಲಿ ಕೊಪ್ಪಳ ಜಿಲ್ಲೆಯ 5 ವಿಧಾನಸಭೆ ಕ್ಷೇತ್ರದಿಂದ ಸುಮಾರು 10 ಸಾವಿರ ಮಾದಿಗ ಸಮುದಾಯ ಜನ ಸೇರುವ ನಿರೀಕ್ಷೆ ಇದೆ. ಪ್ರತಿಭಟನೆಯ ರೂಪುರೇಷೆ ಹೇಗಿರಬೇಕು ಎಂದು ಚರ್ಚಿಸಲಾಯಿತು. ಒಳ ಮೀಸಲಾತಿ ಹೋರಾಟದಲ್ಲಿ ಜಿಲ್ಲೆಯ ಎಲ್ಲ ಮಾದಿಗ ಸಮುದಾಯದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಸಭೆಯಲ್ಲಿ ಬಸವರಾಜ ದಡೇಸುಗೂರು ಕರೆ ನೀಡಿದರು. ಮರುಳಸಿದ್ದ ಗದ್ದಿಗೆಪ್ಪ ಶ್ರೀಗಳು, ಮರಳುಸಿದ್ದೇಶ್ವರ ಶ್ರೀಗಳು, ಜಿಪಂ ಮಾಜಿ ಸದಸ್ಯ ಈರಪ್ಪ ಕೊಡುಗುಂಟೆ, ಗವಿಸಿದ್ದಪ್ಪ ಕಂದಾರಿ, ಗಣೇಶ ಹೊರತಟ್ನಾಳ, ಮಂಜುನಾಥ ಮುಸಲಾಪುರ, ಪರಶುರಾಮಪ್ಪ ಆನೆಗುಂದಿ, ಹನುಮೇಶ ಕಡೆಮನಿ, ಚನ್ನಬಸಪ್ಪ ಹೊಳೆಯಪ್ಪನವರ್, ದ್ಯಾಮಣ್ಣ ಚಾಮಲಾಪುರ, ಮಲ್ಲು ಪೂಜಾರ, ಯಲ್ಲಪ್ಪ ಮುದ್ಲಾಪುರ, ಗಾಳೆಪ್ಪ ಹಿಟ್ನಾಳ, ನಿಂಗಪ್ಪ ಮೈನಲ್ಲಿ, ಜುಂಜಪ್ಪ ಮೆಲ್ಲಿಕೇರಿ, ಮಹಾಲಕ್ಷ್ಮಿ ಕಂದಾರಿ, ಹನುಮಂತ ಮ್ಯಾಗಳಮನಿ, ಪರಶುರಾಮ ಕೀಡದಾಳ, ಹನುಮಂತಪ್ಪ ಡಗ್ಗಿ , ರಾಮಣ್ಣ ಚೌಡಕಿ ಇದ್ದರು.

ಹುತ್ತಕ್ಕೆ ಹಾಲು ಎರೆಯುವ ಬದಲಿಗೆ ಶಾಲಾ ಮಕ್ಕಳಿಗೆ ಹಾಲು ಕುಡಿಸಿ

ಸಂಭ್ರಮದ ಬಸವ ಪಂಚಮಿ ಆಚರಣೆ

ಶಾಲಾ ಮಕ್ಕಳಿಗೆ ಹಾಲು ಕುಡಿಸುವ ಮೂಲಕ ಬಸವ ಪಂಚಮಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ತಾವರಗೇರಾ: ಹೋಬಳಿ ವ್ಯಾಪ್ತಿಯ ನವಲಹಳ್ಳಿ ಮತ್ತು ಕಿಲ್ಲಾರಹಟ್ಟಿ ಗ್ರಾಮದಲ್ಲಿ ಮಾನವ ಬಂಧುತ್ವ ವೇದಿಕೆಯಿಂದ ಬಸವ ಪಂಚಮಿ ಆಚರಿಸಲಾಯಿತು. ತಾಲೂಕು ಸಂಚಾಲಕ ಬೆಟ್ಟಪ್ಪ ಜಿ.ಯತ್ನಟ್ಟಿ ಕಾರ್ಯಕ್ರಮ ಉದ್ಘಾಟಿಸಿದರು.

ತಾವರಗೇರ ಪಟ್ಟಣ ಸೇರಿ ಹೊಬಳಿ ವ್ಯಾಪ್ತಿಯ ನವಲಹಳ್ಳಿ, ಕಿಲ್ಲಾರಹಟ್ಟಿ ಗ್ರಾಮದಲ್ಲಿ ಹಾಲು ಹುತ್ತಕ್ಕೆ ಎರೆಯುವ ಬದಲಿಗೆ ಶಾಲಾ ಮಕ್ಕಳಿಗೆ ಹಾಲು ಕುಡಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ನಂತರ ಮಾತನಾಡಿ, ಕಳೆದ 12ನೇ ಶತಮಾನದಲ್ಲೇ ವಿಶ್ವಗುರು ಬಸವಣ್ಣನವರು ಮೌಢ್ಯತೆ ಆಚರಿಸುವುದು ಸರಿಯಲ್ಲ ಎಂದು ತಮ್ಮ ವಚನಗಳ ಮೂಲಕ ತಿಳಿಸಿದ್ದಾರೆ. ಆದರೆ, ಇನ್ನು ಕೂಡ ಜನರು ಮೂಢನಂಬಿಕೆ, ಮೌಢ್ಯತೆಯಲ್ಲಿಯೇ ಮುಳುಗಿದ್ದಾರೆ. ಇದನ್ನು ಬದಲಾವಣೆ ಮಾಡಲು ನಾಗರ ಪಂಚಮಿಯನ್ನು ಬಸವ ಪಂಚಮಿಯಾಗಿ ಆಚರಿಸುತ್ತಿದ್ದೇವೆ ಎಂದು ಹೇಳಿದರು. ಕಿಲ್ಲಾರಹಟ್ಟಿ ಗ್ರಾಪಂ ಅಧ್ಯಕ್ಷ ಶರಣೇಗೌಡ ಪಾಟೀಲ್, ಗ್ರಾಪಂ ಸದಸ್ಯ ಬಾಲರಾಜ ಯಾದವ, ರವಿನಾಯಕ, ಮಹಿಳಾ ಬಂದುತ್ವ ವೇದಿಕೆಯ ಜಿಲ್ಲಾ ಸಂಚಾಲಕ ಮೋನಾಕ್ಷೀ, ವಿಧ್ಯಾರ್ಥಿ ಘಕಟದ ಜಿಲ್ಲಾ ಸಂಚಾಲಕಿ ಗೌರಮ್ಮ, ಮಾನವ ಬಂದುತ್ವ ವೇದಿಕೆ ಸದಸ್ಯರಾದ ಶ್ರೀದೇವಿ, ಬಸಲಿಂಗಮ್ಮ, ರುದ್ರಮ್ಮ ಇದ್ದರು.

ಸಿಎಂ ಅಧಿಕಾರ ಹಂಚಿಕೆ ಹೈಕಮಾಂಡ್‌ಗೆ ಬಿಟ್ಟದ್ದು

ಮುದಗಲ್: ಚುನಾವಣ ಆಯೊಗದಿಂದ ನಡೆಸುವ ಮತಯಂತ್ರ (ಇವಿಎಂ) ಗಳ ಕಾರ್ಯದ ಬಗ್ಗೆ ರಾಷ್ಟ್ರಾದ್ಯಂತ ನಡೆಯುತ್ತಿರುವ ಚರ್ಚೆ ಸರಿಯಾಗಿದೆ. ಮತ್ತು ಇವಿಎಂ ಗಳ ಬಗ್ಗೆನೂ ನನಗೆ ಅನುಮಾನ ಇದೆ ಎಂದು ಮಾಜಿ ಸಚಿವ ಹಾಗೂ ಕೊಪ್ಪಳ ಜಿಲ್ಲಾ ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷ ಅಮರೇಗೌಡ ಪಾಟೀಲ್ ಬಯ್ಯಾಪುರು ಹೇಳಿದರು. ಪಟ್ಟಣ ಸಮೀಪದ ಕನ್ನಾಪೂರಹಟ್ಟಿಯಲ್ಲಿನ ಶ್ರೀಸಂಗಮೇಶ್ವರ ಜಾತ್ರಾಮ ಹೋತ್ಸವದಲ್ಲಿ ಭಾಗಿಯಾಗಿ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಇವಿಎಂ ಲೋಪ ದೋಷದ ಬಗ್ಗೆ ಇಗಾಗಲೆ ಸಾಕಷ್ಟು ನಿದರ್ಶನಗಳು ಇವೆ. ಅಲ್ಲದೆ ಚುನಾವಣಾ ಆಯೋಗದ ಇವಿಎಂ ಗಳು ಒಂದು ಪಕ್ಷವನ್ನು ಗೆಲ್ಲಿಸುವುದಕ್ಕೆ ಸಹಾಯ ಮಾಡುತ್ತಿವೆ. ಆದರೆ ಕೆಲವು ಕಡೆ ಅವು ವಿಫಲ ಕೂಡ ಆಗಿವೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಅಲ್ಲದೆ ಸಧ್ಯ ಕರ್ನಾಟಕದಲ್ಲಿ ಸಿಎಂ ಸ್ಥಾನದ ಅಧಿಕಾರ ಹಂಚಿಕೆ ಮಾಡಲಾಗುತ್ತಿದೆ ಎಂಬುದು ನಿರಾದಾರವಾದ ಮಾತು. ಕಳೆದ ಚುನಾವಣೆಯಲ್ಲಿ ಕೆಲ ಕ್ಷೇತ್ರಗಳ ಬಗ್ಗೆ ಪಕ್ಷದ ವರಿಷ್ಟರು ಮಾಹಿತಿ ಕೇಳಿದಾಗ ಆ ಬಗ್ಗೆ ಮಾಹಿತಿ ನೀಡಿದ್ದೆ. ಇದು ಟಿಕೆಟ್ ಪಡೆದುಕೊಂಡವರಿಗೂ ಗೊತ್ತಿದೆ ಎಂದರು. ಈ ಸಂದರ್ಭದಲ್ಲಿ ಪುರಸಭೆ ಸದಸ್ಯ ಶ್ರೀಕಾಂತಗೌಡ ಪಾಟೀಲ್, ಹೈಮದ್ ಬೇಕರಿ, ಚೆನ್ನರೆಡ್ಡಿ ಬಿರಾದಾರ ಸೇರಿದಂತೆ ಇನ್ನಿತರರು ಇದ್ದರು.

ಸಮುದ್ರ ಪಾಚಿಗೆ ಅಪ್ಪಚ್ಚಿಯಾದ ಆಸ್ಟ್ರೇಲಿಯಾ

ಸಮುದ್ರದಲ್ಲಿ ಪಾಚಿ ಬೆಳೆಯುವುದು ಸಾಮಾನ್ಯ. ಆದರೆ ಸಮುದ್ರ ಪೂರ್ತಿ ಪಾಚಿ ಆವರಿಸಿದರೆ? ಹೌದು ಈಗ ದಕ್ಷಿಣ ಆಸ್ಟ್ರೇಲಿಯಾದ ಕರಾವಳಿ ತೀರಗಳಲ್ಲಿ ಆಲ್ಗಲ್ ಬ್ಲೂಮ್ (ಸಮುದ್ರ ಪಾಚಿ) ಆವರಿಸಿದ್ದು, ನೈಸರ್ಗಿಕ ವಿಪತ್ತಾಗಿ ಪರಿವರ್ತನೆ ಯಾಗಿದೆ. ಸಮುದ್ರದ ದಂಡೆಯಲ್ಲಿ ಎಲ್ಲಿ ನೋಡಿದರಲ್ಲಿ ಪಾಚಿಗಳೇ ಕಾಣುತ್ತಿವೆ. ಪ್ರತಿವರ್ಷವು ಈ ಪಾಚಿಗಳ ಪ್ರಮಾಣ ಹೆಚ್ಚಾಗುತ್ತಿವೆ. ಇದರಿಂದಾಗಿ ಪರಿಸರದ ಮೇಲೆ ಗಂಭೀರ ಪರಿಣಾಮ ಬೀರುತ್ತಿದ್ದು, ಜಲಚರ ಜೀವಿಗಳಿಗೆ ಅಪಾಯ ಉಂಟು ಮಾಡುತ್ತಿದೆ. ಅದಲ್ಲದೆ ಮಾನವನ ಉದ್ಯಮದ ಮೇಲೆಯೂ ಪರಿಣಾಮ ಬೀರುತ್ತಿದೆ. ತಂತ್ರಜ್ಞರಿಗೆ ಈ ಪಾಚಿಯ ಬೆಳವಣಿಗೆಯನ್ನು ತಡೆಯುವುದೇ ಹೇಗೆ ಎಂಬುದೇ ತಿಳಿಯುತ್ತಿಲ್ಲ. ಪ್ರತಿವರ್ಷ ಕೋಟಿಗಟ್ಟಲೇ ಹಣವನ್ನು ಖರ್ಚು ಮಾಡಿ ಈ ಸಮುದ್ರವನ್ನು ಸ್ವಚ್ಛ ಮಾಡಲು ಮುಂದಾಗುತ್ತಿದ್ದಾರೆ. ಹಾಗಾದರೆ ಏನಿದು ಆಲ್ಗಲ್ ಬ್ಲೂಮ್? ಇದರ ಹಿಂದಿನ ಕಾರಣವೇನು? ಇದೆಲ್ಲದರ ಕುರಿತು ಸಂಪೂರ್ಣ ಮಾಹಿತಿ ಇಲ್ಲಿದೆ.

ಏನಿದು ಆಲ್ಗಲ್ ಬ್ಲೂಮ್?

ಸಾಮಾನ್ಯವಾಗಿ ಹೇಳುವುದಾದರೆ ಆಲ್ಗಲ್ ಬ್ಲೂಮ್ ಎಂದರೆ ಪಾಚಿ ಎಂದರ್ಥ. ನಿಂತ ನೀರು ಅಥವಾ ಸದಾ ಹರಿಯುತ್ತಿರುವ ನೀರಿನ ತಳಭಾಗದಲ್ಲಿ ಬೆಳೆಯುವ ಒಂದು ರೀತಿಯ ಸಸ್ಯ ಜಾತಿಯನ್ನು ಪಾಚಿ ಎಂದು ಕರೆಯಲಾಗುತ್ತದೆ. ಸಮುದ್ರ, ನದಿ ಹಾಗೂ ಕೆರೆಗಳಲ್ಲಿ ಇದು ಬೆಳೆಯುತ್ತದೆ. ಇದನ್ನು ಮೈಕ್ರೋ ಆಲ್ಗಿಗಳು ಎಂತಲೂ ಕರೆಯಲಾಗುತ್ತದೆ. ಇದು ನೀರಿನಲ್ಲಿ ತ್ವರಿತವಾಗಿ ವೃದ್ಧಿಯಾಗುವ ಒಂದು ಪ್ರಕ್ರಿಯೆ ಯಾಗಿದೆ. ಈ ಪ್ರಕ್ರಿಯೆ ಹೆಚ್ಚಾದಾಗ ಇದು ನೀರಿನ ಮೇಲೆಯೂ ತೇಲುತ್ತದೆ. ಇದರಿಂದ ನೀರಿಗೆ ಹಸಿರು, ಕೆಂಪು ಅಥವಾ ನೀಲಿ ಬಣ್ಣ ಬರುತ್ತದೆ. ಇದರಿಂದ ಪರಿಸರಕ್ಕೆ ಹಾಗೂ ಜಲಚರ ಜೀವಿಗಳಿಗೆ ಸಮಸ್ಯೆ ಉಂಟಾಗುತ್ತದೆ.

ಇದರ ಲಕ್ಷಣಗಳೇನು?

ನೀರಿನಲ್ಲಿ ಹಸಿರು ಪಾಚಿ ಬೆಳೆದಿದೆ ಎಂದು ಗೊತ್ತಾಗಬೇಕಾದರೆ ನೀರು ಅಥವಾ ನೀರಿನಲ್ಲಿ ಹಸಿರು ಬಣ್ಣ ಕಾಣಿಸುತ್ತದೆ. ಜತೆಗೆ ನೀರಿನಲ್ಲಿ ಆಮ್ಲಜನಕದ ಪ್ರಮಾಣ ಕಡಿಮೆಯಾಗಿ, ಜಲಚರ ಜೀವಿಗಳ ನಾಶಕ್ಕೆ ಕಾರಣವಾಗುತ್ತದೆ. ಅದಲ್ಲದೆ ನೀರಿನಲ್ಲಿ ವಿಷದ ಪ್ರಮಾಣ ಬಿಡುಗಡೆ ಮಾಡುತ್ತದೆ. ಬಳಿಕ ನೀರಿನಿಂದ ದುರ್ವಾಸನೆ ಉಂಟಾಗುತ್ತದೆ.

ಇದಕ್ಕೆ ಕಾರಣಗಳೇನು?

ನೀರಿಗೆ ನೈಟ್ರೋಜನ್, ಪಾಸ್ಪರಸ್ ಹಾಗೂ ಕೃಷಿ ರಾಸಾಯನಿಕಗಳು ಸೇರಿದಾಗ ಈ ಪಾಚಿ ಉಂಟಾಗುತ್ತದೆ. ಜತೆಗೆ ತಾಪಮಾನದ ಏರಿಕೆಯಿಂದಾಗಿ ಪಾಚಿ ಬೆಳವಣಿಗೆ ವೃದ್ಧಿಯಾಗುತ್ತದೆ. ನೀರಿನ ಚಲನೆ ಇಲ್ಲದಿದ್ದರೆ ಪಾಚಿ ವೇಗವಾಗಿ ಬೆಳೆಯುತ್ತದೆ. ಇನ್ನು ನೀರಿಗೆ ಬೆಳಕು ಹೆಚ್ಚು ಹರಿದು ಬಂದರೆ ಪಾಚಿ ಫೋಟೋಸಿಂಥೆಸಿಸ್ (ದ್ಯುತಿ ಸಂಶ್ಲೇಷಣೆ) ಮೂಲಕ ವೇಗವಾಗಿ ಹರಡುತ್ತದೆ. ಇದೀಗ ದಕ್ಷಿಣ ಆಸ್ಟ್ರೇಲಿಯಾದ ಕರಾವಳಿಯಲ್ಲಿ ಪಾಚಿ ಬೆಳೆದುಕೊಂಡಿದ್ದು, ವಿಶಾಲವಾದ ಸಮುದ್ರ ಪ್ರದೇಶವನ್ನು ವಿಷಕಾರಿಯನ್ನಾಗಿ ಮಾಡಿದೆ. ಅಲ್ಲದೆ ಸಾವಿರಾರು ಜಲಚರ ಜೀವಿಗಳನ್ನು ನಾಶಗೊಳಿಸಿದ್ದು, ಸ್ಥಳೀಯ ಕೈಗಾರಿಕಾ ಪ್ರದೇಶಗಳಿಗೂ ಹಾನಿಯಾಗಿದೆ. ಇದೀಗ ಆಸ್ಟ್ರೇಲಿಯಾದ ಕೂರೊಂಗ್‌ನಿಂದ ಯಾರ್ಕ್ ದ್ವೀಪದವರೆಗೂ ವಿಸ್ತರಿಸಿದೆ. 400ಕ್ಕೂ ಹೆಚ್ಚು ಜಲಚರ ಜೀವಿಗಳನ್ನು ನಾಶಪಡಿಸಿದ್ದು, ಮೀನುಗಳು, ಚಿಪ್ಪು ಮೀನು ಹಾಗೂ ಇತರ ಜೀವಿಗಳ ಮಾರಣಹೋಮವಾಗಿದೆ.

ಪಾಚಿ ಬೆಳವಣಿಗೆಗೆ ಕಾರಣವೇನು?

ತಜ್ಞರ ಮಾಹಿತಿ ಪ್ರಕಾರ, ಹವಾಮಾನ ಬದಲಾವಣೆ ಯಿಂದಾಗಿ ಈ ಬಿಕ್ಕಟ್ಟು ಉಂಟಾಗಿದೆ. ಜತೆಗೆ ಸಮುದ್ರದಲ್ಲಿ ಉಷ್ಣತೆಯ ಏರಿಕೆ, ಕೃಷಿ ಮತ್ತು ನಗರದಿಂದ ಹರಿದುಬರುವ ರಾಸಾಯನಿಕ ಅಂಶಗಳು, ದೀರ್ಘಕಾಲದ ಬರಪರಿಸ್ಥಿತಿ ಹಾಗೂ ನಿಂತಲ್ಲೇ ನೀರು ನಿಲ್ಲುವುದರಿಂದ ಪಾಚಿ ಬೆಳವಣಿಗೆಗೆ ಕಾರಣವಾಗಿದೆ ಎಂದಿದ್ದಾರೆ. ಈಗಾಗಲೇ ಪಾಚಿಯು 4,500 ಚದರ ಕಿಲೋ ಮಿಟರ್‌ಗಳಿಗೂ ಹೆಚ್ಚು ಹಬ್ಬಿಕೊಂಡು, ನೀರನ್ನು ವಿಷಪೂರಿತಗೊಳಿಸಿದೆ. ಇದರಿಂದಾಗಿ ದಕ್ಷಿಣ ಆಸ್ಟ್ರೇಲಿ ಯಾದಲ್ಲಿ ಮೀನುಗಾರಿಕಾ ಉದ್ಯಮ ನಶಿಸಿ ಹೋಗಿದೆ. ಅಲ್ಲದೆ ಕಡಲ ತೀರಗಳಿಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆಯೂ ಕಡಿಮೆಯಾಗಿದೆ.

ಜಲಚರಗಳ ಮಾರಣಹೋಮ

ಈ ಪಾಚಿಯಿಂದಾಗಿ ದಕ್ಷಿಣ ಆಸ್ಟ್ರೇಲಿಯಾದ ನೈಸರ್ಗಿಕ ಸೌಂದರ್ಯ ಹಾಳಾಗಿದ್ದು, ಜನರ ಮನಸ್ಸಿಗೆ ನೋವನ್ನುಂಟು ಮಾಡಿದೆ. ಅಲ್ಲದೆ ಕೆಲವು ಕರಾವಳಿ ತೀರಗಳಲ್ಲಿ ಮೀನುಗಳು, ಡಾಲ್ಫಿನ್‌ಗಳ ಮಾರಣಹೋಮವೇ ನಡೆದಿದೆ. ತಜ್ಞರ ಮಾಹಿತಿ ಪ್ರಕಾರ, ಇದೊಂದು ಆರಿಸಲಾಗದ ಬೆಂಕಿಯಾಗಿದ್ದು, ಇದಕ್ಕೆ ಯಾವುದೇ ರೀತಿಯ ಪರಿಹಾರವಿಲ್ಲ. ಯಾವುದೇ ಮಾರ್ಗದಿಂದಲೂ ಪಾಚಿಯ ಬೆಳವಣಿಗೆಯನ್ನು ತಡೆಯಲು ಮನುಷ್ಯರಿಗೆ ಸಾಧ್ಯವಿಲ್ಲ. ಇದು ಹವಾಮಾನವನ್ನು ಅವಲಂಬಿಸಿರುತ್ತದೆ ಎಂದಿದ್ದಾರೆ.

ರಾಜ್ಯದ ಕೆರೆಗಳಲ್ಲೂ ಆಲ್ಗಲ್ ಬ್ಲೂಮ್

ಆಲ್ಗಲ್ ಬ್ಲೂಮ್ ಎಂದು ಕರೆಯಲಾಗುವ ಸಮುದ್ರ ಪಾಚಿಯು ರಾಜ್ಯದ ಹಲವು ಕೆರೆಗಳಲ್ಲೂ ಆವರಿಸಿದ್ದು, ಅಲ್ಲಿನ ಜಲಚರಗಳನ್ನು ಬಲಿ ತೆಗೆದುಕೊಳ್ಳುತ್ತಿವೆ. ಇತ್ತೀಚೆಗೆ ಮೈಸೂರು ಜಿಲ್ಲೆಯ ಕುಕ್ಕರಹಳ್ಳಿ ಕೆರೆಯಲ್ಲಿ ನೂರಕ್ಕೂ ಹೆಚ್ಚು ಮೀನುಗಳು ಮೃತಪಟ್ಟಿದ್ದು, ಇದೇ ಕಾರಣದಿಂದಾಗಿ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಪಡುವಾರಹಳ್ಳಿ ಬಡಾವಣೆಯಿಂದ ಹುಣಸೂರು ರಸ್ತೆ ಮತ್ತು ಕೆರೆ ಏರಿ ನಡುವಿನ ಪ್ರದೇಶಕ್ಕೆ ನಿತ್ಯವೂ ಹತ್ತು ಲಕ್ಷ ಲೀಟರ್ ಕೊಳಚೆ ನೀರು ಸೇರುತ್ತದೆ. ಕಳೆದ 20 ವರ್ಷದಿಂದ ಇಲ್ಲಿಗೆ ನೀರು ಹರಿಯುತ್ತಿದೆ. ಸದ್ಯ ಮಳೆಗಾಲವಾದ್ದರಿಂದ ಒಳಚರಂಡಿ ನೀರಿನೊಂದಿಗೆ ಮತ್ತಷ್ಟು ಕೊಳಚೆ ನೀರು ಸೇರಿ ಕೆರೆಯ ಈ ಪ್ರದೇಶವನ್ನು ಸೇರಿದೆ. ಹೀಗೆ ಸಂಗ್ರಹವಾದ ನೀರು ಈ ಒಳಚರಂಡಿ ನೀರಿಗೆ ಅಡ್ಡಲಾಗಿ ಇರುವ ಏರಿ(ಟ್ಯಾಂಕ್ ಬಂಡ್) ಕೆಳ ಭಾಗದಲ್ಲಿ ಇರುವ ಡ್ರೈನೇಜ್ ಮೂಲಕ ಕೆರೆ ನೀರನ್ನು ಸೇರಿದೆ. ಪರಿಣಾಮವಾಗಿ ಈ ಕೊಳಚೆ ನೀರಿನ ಪ್ರದೇಶ ಮತ್ತು ನೂರು ಮೀಟರ್ ವ್ಯಾಪ್ತಿಯ ಕೆರೆ ನೀರಿನಲ್ಲಿ ಆಮ್ಲಜನಕ ಪ್ರಮಾಣ ಕಡಿಮೆಯಾಗಿದೆ. ಹೀಗಾಗಿ ನೂರಕ್ಕೂ ಹೆಚ್ಚು ಮೀನುಗಳು ಮೃತಪಟ್ಟಿದ್ದವು. ಕಳೆದ ನವೆಂಬರ್‌ನಲ್ಲೂ ಇದೇ ಸನ್ನಿವೇಶ ನಿರ್ಮಾಣವಾಗಿ ಸಾವಿರಾರು ಮೀನುಗಳು ಮೃತಪಟ್ಟಿದ್ದವು. ಇದಲ್ಲದೆ ಹಲವು ಬಾರಿ ಕೆರೆಯ ಪರಿಸರದಲ್ಲಿ ಉಂಟಾದ ಅಸಮತೋಲನದಿಂದ ಮೀನುಗಳು ಸತ್ತ ಘಟನೆಗಳು ನಡೆದಿವೆ.

2 ಕೋಟಿ ಅನುದಾನ

ಈ ಸಮಸ್ಯೆಯನ್ನು ಅರಿತು ಈಗಾಗಲೇ ಪಡುವಾರಹಳ್ಳಿಯ ಒಳಚರಂಡಿಯ ನೀರು ಕೆರೆಗೆ ಪ್ರವೇಶಿಸದೆ ಬೇರೆಡೆಗೆ ಹರಿಸುವಂತೆ ಮಾಡಲು ರಾಜ್ಯ ಸರಕಾರ 2 ಕೋಟಿ ಅನುದಾನದಲ್ಲಿ ಕಾಮಗಾರಿ ಕೈಗೊಳ್ಳಲಾಗಿದೆ. ಕಾಮಗಾರಿ ಅಂತಿಮ ಹಂತದಲ್ಲಿದ್ದು, ಮುಂದಿನ ಒಂದೂವರೆ ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ. ನಂತರ ಈ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆಯಬಹುದು.

ಕೊಳಚೆ ನೀರು ಪಾಚಿ ಬೆಳೆಯಲು ಸಿದ್ಧ ಔಷಧ

ಮಳೆ ನೀರಿನೊಂದಿಗೆ ಪ್ರಾಣಿಗಳ ಮಲ, ಮೂತ್ರ, ಕೊಳಚೆ ನೀರು ಸೇರಿ ಸಮುದ್ರ ಅಥವಾ ಕೆರೆಯ ಒಡಲು ಸೇರಿದಲ್ಲಿ ಲವಣಾಂಶಗಳು ಹೆಚ್ಚಾಗುತ್ತವೆ. ಇವು ಪಾಚಿ ಬೆಳೆಯಲು ಸಿದ್ಧ ಔಷಧವಾಗಿದೆ. ಅಂತೆಯೆ ಸಮುದ್ರ ಅಥವಾ ಕೆರೆ ನೀರಿನ ಮೇಲೆ ಹಸಿರು ಪಾಚಿ ಬೆಳೆಯುತ್ತದೆ. ಇದರಿಂದ ಸೂರ್ಯನ ಬೆಳಕನ್ನು ಮೇಲಿನ ಪಾಚಿ ಬಳಕೆ ಮಾಡಿ ಕೊಂಡು ಬೆಳೆಯುತ್ತ ಕೆಳ ಭಾಗದಲ್ಲಿರುವ ಸಸ್ಯಗಳಿಗೆ ಬೆಳಕು ದೊರೆಯದಂತೆ ಮಾಡುತ್ತವೆ. ಇದ ರಿಂದ ಆಮ್ಲಜನಕ ಉತ್ಪತ್ತಿ ಕಾರ್ಯ ಕುಂಠಿತವಾಗುತ್ತದೆ. ಎರಡು ದಿನ ನಿರಂತರವಾಗಿ ಸೂರ್ಯನ ಬೆಳಕು ದೊರೆ ಯದಿದ್ದರೆ, ಪರಿಸ್ಥಿತಿ ಇನ್ನಷ್ಟು ಕ್ಲಿಷ್ಟವಾಗಿ ಆಮ್ಲಜನಕ ಪ್ರಮಾಣ ತೀರಾ ಕಡಿಮೆಯಾಗಿ ಜಲಚರಗಳು ಸಾಯುತ್ತವೆ.

ಸುಧಾರಣಾ ಕ್ರಮಗಳೇನು?

- ಸಮುದ್ರ ಅಥವಾ ಕೆರೆಗೆ ಕೊಳಚೆ ನೀರು ಸೇರದಂತೆ ತಡೆಯಬೇಕು
- ನೀರಿನ ಮೇಲ್ಮೈನಲ್ಲಿರುವ ಪಾಚಿಯನ್ನು ತೆರವುಗೊಳಿಸಿ ಸೂರ್ಯನ ಬಿಸಿಲು ತಳ ಭಾಗಕ್ಕೆ ತಲುಪುವಂತೆ ಮಾಡಬೇಕು.
- ಕೆರೆಯ ನೀರನ್ನು ಹೊರಕ್ಕೆ ಹರಿಸಿ ಹೊಸ ನೀರು ಒಳ ಸೇರುವಂತೆ ಮಾಡಿ ಕೆರೆಯ ಪುನಶ್ಚೇತನವಾಗುವಂತೆ ಮಾಡಬೇಕು.
- ತಂತ್ರಜ್ಞಾನ ಬಳಕೆ ಮಾಡಿ ನೀರಿನಲ್ಲಿರುವ ನೈಟ್ರೇಟ್ ಮತ್ತು ಫಾಸ್ಫೇಟ್‌ನಂತಹ ಲವಣಾಂಶಗಳನ್ನು ಕಡಿಮೆ ಮಾಡಬೇಕು.

ನಿಂತ ನೀರಿನಲ್ಲಿ ಸಾಮಾನ್ಯ

ನಿಂತ ನೀರಿನಲ್ಲಿ ಆಲ್ಗಮ್ ಬ್ಲೂಮ್ ಹರಡುವುದು ಸಾಮಾನ್ಯ. ಸ್ವಾಭಾವಿಕ ಕೆರೆಗಳಲ್ಲಿ ಸಂಗ್ರಹವಾದ ನೀರು ಹೊರಕ್ಕೆ ಹರಿಯುತ್ತದೆ. ಬೇಸಿಗೆಯಲ್ಲಿ ಕೆರೆ ಅಂಗಳ ಒಣಗುತ್ತದೆ. ಇದರಿಂದ ಪಾಚಿ, ಸಸ್ಯಗಳು ಸತ್ತು ಅವುಗಳ ಬೀಜಗಳು ಮಾತ್ರ ಉಳಿದಿರುತ್ತವೆ. ಮತ್ತೆ ನೀರು ಬಂದ ಕೂಡಲೆ ಅವು ಬೆಳೆಯುತ್ತವೆ. ಹಾಗಾಗಿ ಕೆರೆ ಪುನಶ್ಚೇತನಗೊಳ್ಳುತ್ತದೆ. ಆದರೆ ಕುಕ್ಕರಹಳ್ಳಿ ಕೆರೆಯಲ್ಲಿ ನಿಂತ ಸ್ಥಿತಿಯಲ್ಲಿದೆ. ಇದರಿಂದಾಗಿ ಆಗಾಗ ಈ ರೀತಿ ಜಲಚರಗಳು ಆಮ್ಲಜನಕದ ಕೊರತೆಯಿಂದ ಸಾಯುತ್ತವೆ.

ಪರಿಹಾರಕ್ಕಾಗಿ ₹79.5 ಕೋಟಿ

ಮೇ ತಿಂಗಳಲ್ಲಿ ಜನಪ್ರಿಯ ಪ್ರವಾಸೋದ್ಯಮ ತಾಣವಾದ ಕಾಂಗರೂ ದ್ವೀಪದಲ್ಲಿ ಪಾಚಿ ಬೆಳೆ ಯಲು ಆರಂಭಿಸಿದೆ ಎಂದು ಸರಕಾರ ತಿಳಿಸಿತ್ತು. ಅದಾದ ಬಳಿಕ ಮೇ ತಿಂಗಳ ಅಂತ್ಯದಲ್ಲಿ ಉಂಟಾದ ಹವಾಮಾನ ಬದಲಾವಣೆಯಿಂದಾಗಿ ಕಾಂಗರೂ ದ್ವೀಪದಿಂದ ಕೂರಾಂಗ್ ದ್ವೀಪಕ್ಕೆ ಪಸರಿಸಿತು. ಸದ್ಯ ಈ ಸಂಬಂಧ ದಕ್ಷಿಣ ಆಸ್ಟ್ರೇಲಿ ಯಾದ ಪ್ರಧಾನಿ ಪೀಟರ್ ಮಲಿನೌಸ್ಕಾಸ್ ಅವರು ಪಾಚಿಯನ್ನು ನೈಸರ್ಗಿಕ ವಿಕೋಪ ವೆಂದು ಘೋಷಿಸಿದ್ದಾರೆ. ಆಸ್ಟ್ರೇಲಿಯಾ ಸರಕಾರವು ಇದರ ಪರಿಹಾರಕ್ಕಾಗಿ 79.5 ಕೋಟಿ ರು. ಬಿಡುಗಡೆ ಮಾಡಿದೆ. ಈ ಮೂಲಕ ಶುಚಿಗೊಳಿಸುವಿಕೆ, ಸಂಶೋಧನೆ ನಡೆದಿದೆ.

▸▸ ಕಾಮಗಾರಿ ಮುಗಿದಿದ್ದರೂ ನಗರಸಭೆ ಮೀನಮೇಷ ▸▸ ನಗರದಂಚಿನ ರುದ್ರಭೂಮಿ ಅವ್ಯವಸ್ಥೆಯ ತಾಣಗಳು

ಉದ್ಘಾಟನೆಗಾಗಿ ಕಾದಿದೆ ನೂತನ ಅನಿಲ ಚಿತಾಗಾರ

ಜಿಲ್ಲಾ ನೋಟ

ಮುನಿರಾಜು ಎಂ ಅರಿಕೆರೆ

ಚಿಕ್ಕಬಳ್ಳಾಪುರ: ಸುಮಾರು 2 ಕೋಟಿ ರು. ವೆಚ್ಚದಲ್ಲಿ ಆಧುನಿಕ ವಾಗಿ ನಿರ್ಮಾಣಗೊಂಡಿರುವ ಅನಿಲ ಚಿತಾಗಾರ ಕೂಡ ರಾಜಕಾರಣಕ್ಕೆ ಬಲಿಯಾಗಿ ಲೋಕಾರ್ಪಣೆ ಭಾಗ್ಯದಿಂದ ವಂಚಿತವಾಗಿದೆ. ಪರಿಣಾಮವಾಗಿ ಇದಕ್ಕೆ ಅಳವಡಿಸಿರುವ ಆಯುಧಗಳು ಉದ್ಘಾ ಟನೆಗೆ ಮೊದಲೇ ತುಕ್ಕು ಹಿಡಿಯುವ ಹಾದಿಯ ಲ್ಲಿದ್ದರೆ, ಕಟ್ಟಡಕ್ಕೆ ಬಳಿದ ಬಣ್ಣವೂ ಅಳಿಸಿಹೋಗಿದೆ. ನಗರಾಡಳಿತವಾಗಲಿ, ಜಿಲ್ಲಾಡಳಿತವಾಗಲಿ, ಇದನ್ನು ತಮ್ಮ ಸುಪರ್ದಿಗೆ ಪಡೆದು ಜನಸೇವೆಗೆ ಅರ್ಪಿಸುವದನ್ನು ಮರೆತಂತಿದೆ. ಇದು ನಗರವಾಸಿ ಗಳ ತೀವ್ರ ಅಸಹನೆಗೆ ಕಾರಣವಾಗಿದೆ. ಹೌದು. ರಾಜ್ಯದಲ್ಲಿ ಶಿವಮೊಗ್ಗ ಜಿಲ್ಲೆಯನ್ನು ಹೊರತು ಪಡಿಸಿದರೆ ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರದಲ್ಲಿ ಮಾತ್ರ ಅನಿಲ ಚಿತಾಗಾರವನ್ನು ಆಧುನಿಕವಾಗಿ ನಿರ್ಮಿಸಲಾಗಿದೆ. ಎರಡು ಕೋಟಿ ವೆಚ್ಚದ ಕಟ್ಟಡ ಕಾಮಗಾರಿ ಪೂರ್ಣಗೊಂಡು 2 ವರ್ಷಗಳೇ ಕಳೆದರೂ ನಗರಸಭೆ ತನ್ನ ಸ್ವಾಧೀನಕ್ಕೆ ಪಡೆಯಲು ಮೀನಮೇಷ ಎಣಿಸುತ್ತಿದೆ.

> ಅನಿಲ ಚಿತಾಗಾರ ಕಟ್ಟಡ ಕಾಮಗಾರಿ ಪೂರ್ಣಗೊಂಡು 2 ವರ್ಷಗಳು ಕಳೆದರೂ ನಗರಸಭೆ ತನ್ನ ಸುಪರ್ದಿಗೆ ಪಡೆಯಲು ಮುಂದಾಗಿಲ್ಲ. ನಾನು ನಗರಸಭೆ ಅಧ್ಯಕ್ಷ ಆಗಿದ್ದ ವೇಳೆ ಈಶ ಸಂಸ್ಥೆಯು ಚಿತಾಗಾರವನ್ನು ತಮ್ಮ ಸುಪರ್ದಿಗೆ ನೀಡಿದರೆ ಅದರ ನಿರ್ವಹಣೆ ಜೊತೆಗೆ ಉಚಿತವಾಗಿ ಶವಸಂಸ್ಕಾರ ನಡೆಸುವುದಾಗಿ ತಿಳಿಸಿತ್ತು. ನಂತರ ಬಂದವರು ಅದನ್ನು ಕಾರ್ಯರೂಪಕ್ಕೆ ತಂದಿಲ್ಲ.
>
> **-ಆನಂದ್‌ರೆಡ್ಡಿ ಬಾಬು,** ನಗರಸಭೆ ಮಾಜಿ ಅಧ್ಯಕ್ಷರು, ಚಿಕ್ಕಬಳ್ಳಾಪುರ

> ನಗರದ ಹೊರವಲಯದಲ್ಲಿ ನಿರ್ಮಾಣ ವಾಗಿರುವ ಅನಿಲ ಚಿತಾಗಾರ ನಗರಸಭೆ ಸುಪರ್ದಿಗೆ ಪಡೆದು ಲೋಕಾರ್ಪಣೆ ಮಾಡಲು ಈಗಾಗಲೆ ಕ್ರಮವಹಿಸಲಾಗಿದೆ. ಶೀಘ್ರವೇ ಇದನ್ನು ಉದ್ಘಾಟಿಸಿ ಜನರಿಗೆ ಅನುಕೂಲ ಮಾಡಿಕೊಡಲು ಪ್ರಾಮಾಣಿಕವಾಗಿ ಪ್ರಯತ್ನಿಸಲಾಗುವುದು.
>
> **-ಎ.ಗಜೇಂದ್ರ,** ಅಧ್ಯಕ್ಷರು, ನಗರಸಭೆ

ಉಳಿದ ಕೆಲಸಗಳಿಗಾಗಿ 1.ಕೋಟಿ 4 ಲಕ್ಷ ಹಣ ಬೇಕು...

ಸಿಎಂ ವಿಶೇಷ ನಿಧಿ ಯೋಜನೆ ಅಡಿಯಲ್ಲಿ 2 ವರ್ಷದ ಹಿಂದೆಯೇ ಜಿಲ್ಲಾ ಕೇಂದ್ರದಲ್ಲಿ ಅನಿಲ ಚಿತಾಗಾರ ನಿರ್ಮಾಣ ಕಾರ್ಯ ನಡೆಸಿದೆ. 2 ವರ್ಷಗಳ ಹಿಂದೆಯೇ ಸಿಮೆಂಟ್ ಕಾಮಗಾರಿ ಮುಗಿಸಿ ಒಳಗೆ ಯಂತ್ರಗಳನ್ನು ಅಳವಡಿಸುವ ಕೆಲಸ ಪೂರ್ಣಗೊಂಡಿದೆ. ಆದರೆ ಇದಕ್ಕೆ ಬೇಕಾದ ನೀರು, ವಿದ್ಯುತ್, ಪೈಪ್‌ಲೈನ್, ಪಂಪು, ಮೋಟಾರು, ಬೋರ್‌ವೆಲ್, ಕಾಂಪೌಂಡ್, ಪಾರ್ಕಿಂಗ್ ಟೈಲ್ಸ್, ಭೂಮಿ ಸಮತಟ್ಟು ಕಾಮಗಾರಿ ಆಗಿಲ್ಲ. ಅನುದಾನ ಕೊರತೆಯಿಂದ ನಿಂತಿದೆ. ಈವರೆಗೆ ಕಾಮಗಾರಿ ಸಂಬಂಧ 1.ಕೋಟಿ 45ಲಕ್ಷ ಅನುದಾನ ಬಿಡುಗಡೆ ಆಗಿದ್ದು, ಉಳಿದ ಕೆಲಸಗಳಿಗಾಗಿ 1.ಕೋಟಿ 4 ಲಕ್ಷ ಅನುದಾನ ಬೇಕಾಗಿದೆ. ಈ ಬಗ್ಗೆ ಸರಕಾರಕ್ಕೆ ಪತ್ರ ಬರೆಯಲಾಗಿದೆ. ಅನುದಾನ ಬಂದ ಕೂಡಲೇ ಇದನ್ನೆಲ್ಲಾ ಮುಗಿಸಿ ಜನಬಳಕೆಗೆ ಮುಕ್ತ ಮಾಡಲಾಗುವುದು ಎಂದು ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ತಿಳಿಸಿದ್ದಾರೆ.

ಲೋಕಾರ್ಪಣೆ ಭಾಗ್ಯ ಕಾಣದೆ ಅನಾಥವಾಗಿ ನಿಂತ ಅನಿಲ ಚಿತಾಗಾರದ ಚಿತ್ರ.

ಉದ್ಘಾಟನೆ ಭಾಗ್ಯವಿಲ್ಲ

ನಗರದ ಹೊರವಲಯದ ಜೈನ್ ಆಸ್ಪತ್ರೆ ಸಮೀಪ,ಜಿಲ್ಲಾ ನಿರ್ಮಿತಿ ಕೇಂದ್ರ ಕಚೇರಿ ಬಳಿಯ ಸ್ಮಶಾನದಲ್ಲಿ ನಿರ್ಮಿಸಿರುವ ಅನಿಲ ಚಿತಾಗಾರದ ಕಾಮಗಾರಿ 2022ರ ಡಿಸೆಂಬರ್‌ನಲ್ಲಿಯೇ ಪೂರ್ಣವಾಗಿದೆ. ಆದರೆ ಇಂದಿಗೂ ಈ ಚಿತಾಗಾರ ಉದ್ಘಾಟನೆ ಭಾಗ್ಯ ಕಂಡಿಲ್ಲ. ಇದರಿಂದ ಶವಗಳಿಗೆ ಅಂತ್ಯಸಂಸ್ಕಾರ ಮಾಡಬೇಕಾದ ಸ್ಥಳ ಅಕ್ರಮ ಚಟುವಟಿಕೆಗಳ ತಾಣವಾಗಿ ಮಾರ್ಪಟ್ಟಿದೆ.

ಯಂತ್ರಗಳ ಜೋಡಣೆ

2020ರ ಜೂನ್‌ನಲ್ಲಿ ಅಂದಿನ ಜಿಲ್ಲಾ ಉಸ್ತುವಾರಿ ಸಚಿವ ಡಾ.ಕೆ.ಸುಧಾಕರ್ ಈ ಅನಿಲ ಚಿತಾಗಾರ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದ್ದರು. 2 ವರ್ಷಗಳ ನಂತರ ಕಾಮಗಾರಿ ಪೂರ್ಣವಾಯಿತು. ಕಳೆದ ಡಿಸೆಂಬರ್‌ನಲ್ಲಿ ಚಿತಾಗಾರಕ್ಕೆ ಯಂತ್ರೋಪಕರಣ ಅಳವಡಿಸಿ, 120 ಅಡಿ ಎತ್ತರದ ಚಿಮಣಿ ಸೇರಿ ಚಿತಾಗಾರಕ್ಕೆ ಅಗತ್ಯವಾಗಿ ಬೇಕಾದ ಯಂತ್ರಗಳನ್ನು ಜೋಡಿಸಲಾಗಿದೆ. ಅನಿಲ ಚಿತಾಗಾರ ನಿರ್ವಹಣೆಗೆ ತಾಂತ್ರಿಕ ನೇಮಕ ಹೊರತುಪಡಿಸಿ ಎಲ್ಲವೂ ಪೂರ್ಣಗೊಂಡಿದ್ದರೂ ಕಟ್ಟಡ ಮಾತ್ರ ಬಳಕೆಯಿಲ್ಲದೇ ಹಾಳು ಬಿದ್ದಿದೆ.

ದೂರವಾಗದ ಗ್ರಹಣ

ನಗರದಲ್ಲಿ ಇಲ್ಲಿಯವರೆಗೂ ಅನಿಲ ಚಿತಾಗಾರ ಇರದ ಕಾರಣ ಆಯಾ ಸಮುದಾಯದವರು ತಮ್ಮ ತಮ್ಮ ಸ್ಮಶಾನಗಳಲ್ಲಿ ಮೃತರ ಅಂತ್ರಕ್ರಿಯೆ ವಿಧಿ ವಿಧಾನಗಳನ್ನು ನೆರವೇರಿಸುತ್ತಿದ್ದಾರೆ.

ನಗರ ಬೆಳೆದಂತೆ ಜನಸಂಖ್ಯೆ ವಿಪರೀತ ಹೆಚ್ಚಾಗಿದ್ದು ಸ್ಮಶಾನಗಳಲ್ಲಿ ಜಾಗದ ಕೊರತೆ ಎದುರಾಗಿದೆ. ಮೇಲಾಗಿ ಶವವನ್ನು ಸುಡುವ ಸಂದರ್ಭ ಎದು ರಾದಾಗ ಉರುವಲು ಕಟ್ಟಿಗೆಯನ್ನು ಹೊಂಚು ವುದು ಸವಾಲಾಗಿದೆ. ಇಂತಹ ಸಂದರ್ಭದಲ್ಲಿ ನಿರ್ಮಾಣವಾಗಿರುವ ಅನಿಲ ಚಿತಾಗಾರ ಈ ಎಲ್ಲ ಸಮಸ್ಯೆ ನಿವಾರಿಸಲಿದೆ ಎಂದೇ ಜನ ಭಾವಿಸಿದ್ದರು.ಆದರೆ ಜನರ ನಿರೀಕ್ಷೆ ಹುಸಿಯಾಗಿದೆ.

ಸ್ಮಶಾನಗಳ ಒತ್ತಡ ತಗ್ಗಲಿ

ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರ ಸರಿ ಸುಮಾರು 4 ಕಿ.ಮೀ.ವಿಸ್ತಾರವನ್ನು ಹೊಂದಿದ್ದು ನಗರದ ನಕ್ಕಲಕುಂಟೆ, ಮಂಚನಬಲೆ ರಸ್ತೆ, ಮೈಲಪ್ಪನಹಳ್ಳಿ ರಸ್ತೆ, ಹಳೇ ಆರ್‌ಟಿಒ ಕಚೇರಿ ಬಳಿ, ಪ್ರಶಾಂತ ನಗರದ ದರ್ಗಾಬಳಿ ಹೀಗೆ ನಾನಾ ಕಡೆಗಳಲ್ಲಿ ರುದ್ರಭೂಮಿ ವ್ಯವಸ್ಥೆ ಮಾಡಿಕೊಂಡಿದ್ದಾರೆ.ಈ ಪೈಕಿ ಮಂಚನಬಲೆ ರಸ್ತೆ ಸ್ಮಶಾನವಂತೂ ಕಸದ ಕೂಪ ಎನ್ನುವಂತಿದೆ. ಉಳಿದ ಕಡೆಯೂ ಹೇಳಿಕೊಳ್ಳುವಂತಹ ವ್ಯವಸ್ಥೆಗಳು ಇಲ್ಲ. ಸ್ಥಳೀಯ ಆಡಳಿತಗಳು ಸ್ಮಶಾನಗಳಿಗೆ ಬೇಕಾದ ಮೂಲ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ಹಿಂದೆ ಬಿದ್ದಿವೆ. ಆದಷ್ಟು ಬೇಗ ಸಿದ್ಧವಾಗಿರುವ ಚಿತಾಗಾರದ ಉದ್ಘಾಟನೆಗೆ ನಗರಸಭೆ, ಜಿಲ್ಲಾಡಳಿತ ಮತ್ತು ಜನಪ್ರತಿನಿಧಿಗಳು ಮನಸು ಮಾಡಬೇಕು ಅಷ್ಟೆ.

ಹಳೆ ಗೋರಿಯಲ್ಲೇ ಸಮಾಧಿ

ಸತ್ತವರಿಗೆ ಗೌರವಯುತ ಅಂತ್ಯಕ್ರಿಯೆ ನಡೆಸುವುದು ಹಿಂದೂ ಧರ್ಮದ ಪದ್ಧತಿ. ಆದರೆ ನಗರದ ಬಹುತೇಕ ಸ್ಮಶಾನಗಳಲ್ಲಿ ಜಾಗದ ಕೊರತೆ ಕಾರಣ ಹಳೆಯ ಗೋರಿಯನ್ನು ಅಗೆದು ಅದರಲ್ಲಿಯೇ ಹೊಸ ಶವ ಹೂಳುವ ಪರಿಸ್ಥಿತಿಯಿದೆ. ಒಂದೇ ಸಮಾಧಿಗೆ ಹಲವರು ಪೂಜೆ ಮಾಡುವ ಗೊಂದಲವಿದೆ.

ಭರವಸೆ ಈಡೇರಿಲ್ಲ

ಎಲ್ಲ ಸಮುದಾಯಗಳಿಗೂ ನೆರವಾಗುವ ರೀತಿಯಲ್ಲಿ ನಗರಕ್ಕೆ ಸಮೀಪ ಜಾಗ ಗುರುತಿಸಿ ಅದನ್ನು ಸ್ಮಶಾನಕ್ಕಾಗಿ ಮೀಸಲಿಡಬೇಕೆಂದು ನಗರವಾಸಿಗಳು ಜಿಲ್ಲಾಧಿಕಾರಿ ಹಾಗೂ ನಗರಸಭೆಗೆ ಮನವಿ ಮಾಡಿದ್ದಾರೆ. ಆದರೆ ಇದುವರೆಗೆ ಸಮಸ್ಯೆ ಇತ್ಯರ್ಥಪಡಿಸಲು ಯಾರೂ ಮುತುವರ್ಜಿ ವಹಿಸಿಲ್ಲ. ಈ ನಡುವೆ ನಗರ ನಿವಾಸಿಗಳು ಶಾಸಕ ಪ್ರದೀಪ್ ಈಶ್ವರ್ ಅವರ ಗಮನ ಸೆಳೆದಿದ್ದಾರೆ. ಆದರೂ ಈ ಭರವಸೆ ಇನ್ನೂ ಈಡೇರಿಲ್ಲ.

▸▸ ಏರ್‌ಬಸ್ ಜತೆ ಟಾಟಾ ಅಡ್ವಾನ್ಸ್ ಸಿಸ್ಟಮ್ಸ್ ಒಪ್ಪಂದ ▸▸ ಎ 125 ಹೆಲಿಕಾಪ್ಟರ್ ಅಂತಿಮ ಜೋಡಣಾ ಘಟಕ

ವೇಮಗಲ್‌ಗೆ ಹೆಲಿಕಾಪ್ಟರ್ ಉದ್ಯಮ, ಅವಕಾಶದ ಸಂಭ್ರಮ

ಜಿಲ್ಲಾ ನೋಟ

ಕೆ.ಎಸ್.ಮಂಜುನಾಥರಾವ್

ಕೋಲಾರ: ಜಿಲ್ಲೆಯಲ್ಲಿ ಐಫೋನ್ ತಯಾರಿಕಾ ಘಟಕವನ್ನು ಯಶಸ್ವಿಯಾಗಿ ಮುನ್ನಡೆಸುತ್ತಿರುವ ಟಾಟಾ ಅಡ್ವಾನ್ಸ್ ಸಿಸ್ಟಮ್ಸ್ ಕಂಪನಿಯು ಹೆಲಿಕಾಪ್ಟರ್ ಜೋಡಣಾ ಘಟಕವನ್ನು ವೇಮಗಲ್‌ನಲ್ಲಿ ಆರಂಭಿಸಲು ಮುಂದಾಗಿದೆ. ಹೌದು, ವೇಮಗಲ್ ಕೈಗಾರಿಕಾ ಪ್ರದೇಶದ ವೇಮಗಲ್-ಕುರುಗಲ್ ಮಧ್ಯಭಾಗದಲ್ಲಿರುವ ಟಾಟಾ ಅಡ್ವಾನ್ಸ್ ಸಿಸ್ಟಮ್ ಕಂಪನಿಯು ಹೆಲಿಕಾಪ್ಟರ್ ಜೋಡಣೆ ಕಾರ್ಖಾನೆಯನ್ನು ಸ್ಥಾಪಿಸುವ ಸಂಬಂಧ ಯುರೋಪ್‌ನ ಅತಿ ದೊಡ್ಡ ವೈಮಾನಿಕ ಸಂಸ್ಥೆ ಏರ್‌ಬಸ್ ನೊಂದಿಗೆ ಒಪ್ಪಂದ ಮಾಡಿಕೊಂಡಿದೆ.

ಪ್ರಥಮ ಖಾಸಗಿ ಘಟಕ

ದೇಶದ ಮೊಟ್ಟ ಮೊದಲ ಖಾಸಗಿ ಹೆಲಿಕಾಪ್ಟರ್ ತಯಾರಿಕಾ ಘಟಕ ಎನ್ನುವ ಹೆಗ್ಗಳಿಕೆಗೆ ಇದು ಪಾತ್ರವಾಗಲಿದೆ. ಸದ್ಯಕ್ಕೆ ಘಟಕವನ್ನು ಪ್ರಾರಂಭಿಸಲು ತಯಾರಿಗಳು ನಡೆಯುತ್ತಿದ್ದು, ಶೀಘ್ರವೇ ಹೆಲಿಕಾಪ್ಟರ್ ಜೋಡಣೆ ಘಟಕ ಆರಂಭವಾಗಲಿದೆ. ದೇಶದ ಅತ್ಯಂತ ಪ್ರತಿಷ್ಠಿತ ಯೋಜನೆ ಎನ್ನಲಾಗುತ್ತಿರುವ ಹೆಲಿಕಾಪ್ಟರ್ ತಯಾರಿಕಾ ಘಟಕಕ್ಕೆ ವೇಮಗಲ್‌ನಲ್ಲಿರುವ ಟಾಟಾ ಕೈಗಾರಿಕಾ ಪ್ರದೇಶವನ್ನೇ ಆಯ್ಕೆ ಮಾಡಿಕೊಳ್ಳಲು ಕಾರಣಗಳಿವೆ.

> ಕೋಲಾರ ಜಿಲ್ಲೆಯಲ್ಲಿ ಟಾಟಾ ಅಡ್ವಾನ್ಸ್ ಸಿಸ್ಟಮ್ಸ್ ಈಗಾಗಲೇ ಯಶಸ್ವಿಯಾಗಿ ಐಫೋನ್ ತಯಾರಿಕಾ ಘಟಕವನ್ನು ಮುನ್ನಡೆಸುತ್ತಾ ಸಾವಿರಾರು ಮಂದಿಗೆ ಉದ್ಯೋಗ ಕಲ್ಪಿಸಿದೆ. ವೇಮಗಲ್ ಕೈಗಾರಿಕಾ ಪ್ರದೇಶದಲ್ಲಿ ಹೆಲಿಕಾಪ್ಟರ್ ತಯಾರಿಕಾ ಘಟಕವನ್ನು ಆರಂಭಿಸಲು ಸಿದ್ಧತೆ ನಡೆಯುತ್ತಿದ್ದು, ಕೋಲಾರ ಜಿಲ್ಲೆಯಲ್ಲಿ ಕೈಗಾರಿಕಾಭಿವೃದ್ಧಿ ಹಾಗೂ ಉದ್ಯೋಗವಕಾಶ ಸೃಷ್ಟಿಯಾಗಲು ಕಾರಣವಾಗಲಿದೆ.
>
> **-ರವಿಚಂದ್ರ,** ಜಂಟಿ ನಿರ್ದೇಶಕರು, ಡಿಐಸಿ, ಕೋಲಾರ

> ಶಾಸಕ ಕೊತ್ತೂರು ಮಂಜುನಾಥ್ ಮತ್ತು ಎಂಎಲ್‌ಸಿ ಅನಿಲ್ ಕುಮಾರ್ ಅವರ ಶ್ರಮದಿಂದಾಗಿ ವೇಮಗಲ್ ಭಾಗಕ್ಕೆ ಹತ್ತಾರು ಹೊಸ ಉದ್ಯಮಿಗಳು ಆಗಮಿಸುತ್ತಿದ್ದು ಹೆಲಿಕಾಪ್ಟರ್ ಘಟಕ ಬೇರೆ ರಾಜ್ಯಕ್ಕೆ ಹೋಗುವ ಸಂಭವ ಇತ್ತು. ಆಗ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಅವರ ಜತೆ ಚರ್ಚೆ ಮಾಡಿ ವೇಮಗಲ್‌ಗೆ ತರುವಲ್ಲಿ ಯಶಸ್ವಿ ಆಗಿದ್ದಾರೆ. ಹೀಗಾಗಿ ಕೋಲಾರ ಜಿಲ್ಲೆಯಲ್ಲಿ ನೂರಾರು ಮಂದಿಗೆ ಉದ್ಯೋಗ ಸಿಗಲಿದೆ.
>
> **- ಚಂಜಿಮಲೆ ರಮೇಶ್,** ಕೋಮುಲ್ ನಿರ್ದೇಶಕರು, ಕೋಲಾರ

ಏರ್‌ಬಸ್‌ನ ನಾಲ್ಕನೇ ಘಟಕ

ಈಗ ಟಾಟಾ ಸಂಸ್ಥೆಯೊಂದಿಗೆ ಆರಂಭಿಸುತ್ತಿರುವ ವೇಮಗಲ್ ಘಟಕ ಏರ್‌ಬಸ್‌ನ ನಾಲ್ಕನೇ ಘಟಕವಾಗಲಿದೆ. ನೂತನವಾಗಿ ಆರಂಭವಾಗಲಿರುವ ವೇಮಗಲ್ ಘಟಕದಲ್ಲಿ ಎ 125 ಹೆಲಿಕಾಪ್ಟರ್‌ಗಳ ಅಂತಿಮ ಜೋಡಣಾ ವಿಭಾಗವನ್ನು ಕಾರ್ಯಾರಂಭ ಮಾಡಲಿದೆ. ಘಟಕ ಆರಂಭದ ವರ್ಷಗಳಲ್ಲಿ ವಾರ್ಷಿಕ 10 ಹೆಲಿಕಾಪ್ಟರ್ ಜೋಡಣೆ ಮಾಡುವ ಗುರಿ ಹೊಂದಲಾಗಿದ್ದು, ಮುಂದಿನ ವರ್ಷಗಳಲ್ಲಿ ಜಾಗತಿಕ ಬೇಡಿಕೆಯನ್ನು ಅನುಸರಿಸಿ 500 ಲಘು ಹೆಲಿಕಾಪ್ಟರ್‌ಗಳ ಜೋಡಣೆ ಕಾರ್ಯ ನಡೆಯುವ ಸಾಧ್ಯತೆ ಇದೆ.

ಏಷ್ಯಾ ರಾಷ್ಟ್ರಗಳಲ್ಲಿ ಬೇಡಿಕೆ

ಏರ್‌ಬಸ್ ಹೆಲಿಕಾಪ್ಟರ್‌ಗಳಿಗೆ ಈಗಾಗಲೇ ಭಾರತ ಹಾಗೂ ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿ ಬೇಡಿಕೆ ಇದೆ. ವಿಸ್ಟ್ರಾನ್ ಕೋಲಾರ ಜಿಲ್ಲೆಯಿಂದ ಹೊರ ಹೋದ ನಂತರ ಐಫೋನ್ ತಯಾರಿಕಾ ಘಟಕವನ್ನು ಮುನ್ನಡೆಸುತ್ತಾ ಸಾವಿರಾರು ಮಂದಿ ಯುವಕ ಯುವತಿಯರಿಗೆ ಉದ್ಯೋಗ ನೀಡಿರುವ ಟಾಟಾ ಅಡ್ವಾನ್ಸ್ ಸಿಸ್ಟಮ್ ಇದೀಗ ಹೆಲಿಕಾಪ್ಟರ್ ಜೋಡಣೆ ಘಟಕ ಆರಂಭಿಸಲು ಯುರೋಪ್‌ನ ಏರ್‌ಬಸ್ ನೊಂದಿಗೆ ಒಪ್ಪಂದ ಮಾಡಿಕೊಂಡಿದೆ. ವೇಮಗಲ್ ಕೈಗಾರಿಕಾ ಪ್ರದೇಶದಲ್ಲಿಯೇ ಈ ಘಟಕವನ್ನು ಆರಂಭಿಸಲು ಸಿದ್ದತೆ ಮಾಡಿಕೊಂಡಿದೆ. ಇದರಿಂದ ಮತ್ತಷ್ಟು ಉದ್ಯೋಗವಕಾಶಗಳು ಜಿಲ್ಲೆಯಲ್ಲಿ ಸೃಷ್ಟಿಯಾಗಲಿವೆ.

ಉದ್ಯೋಗ ಅವಕಾಶದ ಬಾಗಿಲು

ಕರ್ನಾಟಕದಲ್ಲಿ ಅದರಲ್ಲೂ ಬೆಂಗಳೂರಿನಲ್ಲಿ ವೈಮಾನಿಕತೆಗೆ ಸಂಬಂಧಪಟ್ಟ ಅನೇಕ ಸಂಸ್ಥೆಗಳಿವೆ. ಇದಕ್ಕೇ ಕೇವಲ 50 ಕಿ.ಮೀ ದೂರದಲ್ಲಿರುವ ವೇಮಗಲ್ ಕೈಗಾರಿಕಾ ಪ್ರದೇಶದಲ್ಲಿ ಹೆಲಿಕಾಪ್ಟರ್ ಜೋಡಣೆ ಉದ್ಯಮ ಸ್ಥಾಪಿಸುವುದು ಈ ಭಾಗದ ಜನತೆಗೆ ಉದ್ಯೋಗ ಅವಕಾಶದ ಬಾಗಿಲು ತೆರೆಯಲಿದೆ. ಇದೇ ಉದ್ದೇಶದಿಂದ ಟಾಟಾ ಅಡ್ವಾನ್ಸ್ ಸಿಸ್ಟಮ್ಸ್ ಕಂಪನಿ ಇಲ್ಲೊಂದು ಬೃಹತ್ ಉದ್ಯಮ ತೆರೆಯುವ ನಿರ್ಧಾರಕ್ಕೆ ಬಂದಿದೆ.

ಅನ್ಯ ರಾಜ್ಯಗಳಿಗೆ ನಿರಾಸೆ

ಇದರಿಂದ ಇದೇ ಯೋಜನೆಯ ಮೇಲೆ ಕಣ್ಣಿಟ್ಟಿದ್ದ ಆಂಧ್ರಪ್ರದೇಶ, ಉತ್ತರ ಪ್ರದೇಶ ಮತ್ತು ಗುಜರಾತ್ ರಾಜ್ಯಗಳಿಗೆ ನಿರಾಸೆಯಾಗಿದೆ. ಯುರೋಪ್‌ನ ಏರ್‌ಬಸ್ ಸಂಸ್ಥೆಯು ಈಗಾಗಲೇ ಫ್ರಾನ್ಸ್, ಅಮೇರಿಕಾ ಮತ್ತು ಬ್ರೆಜಿಲ್‌ನಲ್ಲಿ ಇಂಥದ್ದೇ ಹೆಲಿಕಾಪ್ಟರ್ ಜೋಡಣೆ ಘಟಕವನ್ನು ಹೊಂದಿದೆ.

ಆಹಾರ ಸಂಸ್ಕರಣ ಘಟಕ ಆರಂಭ ಮಾಡಿ

ಕೋಲಾರ-ಚಿಕ್ಕಬಳ್ಳಾಪುರ ಮುಖ್ಯರಸ್ತೆಯಲ್ಲಿ ವೇಮಗಲ್ ಕೈಗಾರಿಕಾ ಪ್ರದೇಶವಿದ್ದು ನರಸಾಪುರ ಹಾಗೂ ಜಕ್ಕಸಂದ್ರ ಇಂಡಸ್ಟ್ರಿಯಲ್ ಏರಿಯಾಗೆ 10 ಕಿಮೀ ಅಂತರದಲ್ಲಿದೆ. 666 ಎಕರೆ ವೇಮಗಲ್ ಕೈಗಾರಿಕಾ ಪ್ರಾಂಗಣ ಆಟೋಮೊಬೈಲ್ ಇಂಡಸ್ಟ್ರಿಗೆ ಹೆಸರುವಾಸಿಯಾಗಿದೆ. ಅರ್ಥ್‌ಮೂವಿಂಗ್ ಮತ್ತು ಆಟೋಮೊಬೈಲ್ ಬಿಡಿಭಾಗಗಳ ರಫ್ತಿನಲ್ಲಿ ಮುಂಚೂಣಿಯಲ್ಲಿದೆ. ಸುಸಜ್ಜಿತ ರಸ್ತೆಗಳು, ಬ್ಯಾಂಕ್, ಆಸ್ಪತ್ರೆ ಹೀಗೆ ಮೂಲ ಸೌಲಭ್ಯಗಳೊಂದಿಗೆ ಉದ್ಯಮಸ್ನೇಹಿಯಾಗಿದ್ದು ಇದೀಗ ಉದ್ಯಮಿಗಳಾಗ ಬಯಸುವವರು ಕೋಲಾರ ಜಿಲ್ಲೆಯಲ್ಲಿ ವಿಪುಲವಾಗಿ ಬೆಳೆಯುವ ಟೊಮೇಟೊ, ಮಾವು, ಗೇರುಬೀಜ ಬಳಸಿಕೊಂಡು ಆಹಾರ ಸಂಸ್ಕರಣ ಘಟಕ ಆರಂಭ ಮಾಡಿದರೆ ಒಂದು ಲಾಭದಾಯಕ ಉದ್ಯಮವಾಗಿ ಬೆಳೆಸಬಹುದು ಎಂದು ಡಿಐಸಿ ಜಂಟಿ ನಿರ್ದೇಶಕ ರವಿಚಂದ್ರ ಹೇಳುತ್ತಾರೆ.

ವಿಶ್ವವಾಣಿ
@vishwavaninews
ಬೆಂಗಳೂರು
30-07-2025
ಬುಧವಾರ

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ರವಿಹಾರ

ಸ್ವಸಂಕಲ್ಪದ ಶಕ್ತಿ

ಮನಸ್ಸಿನ ಶಕ್ತಿಯೇ ಅಂತದ್ದು. ಒಮ್ಮೆ ದೃಢ ನಿರ್ಧಾರ ತಳೆದರೆ ಅದನ್ನು ಅಲುಗಾಡಿಸಲು ಬಾಹ್ಯದ ಯಾವ ಶಕ್ತಿಯಿಂದಲೂ ಸಾಧ್ಯವಿಲ್ಲ, ತಾನೇ ಮನಸಾರೆ ಒಪ್ಪಿ, ಒಂದಿಷ್ಟು ದಿನ ಉಪವಾಸ ಮಾಡಬೇಕು ಎಂದು ಒಮ್ಮೆ ನಿರ್ಧರಿಸಿ, ಉಪವಾಸವನ್ನು ವ್ರತ ಎಂದು ಪರಿಗಣಿಸಿ ಪ್ರಾರಂಭಿಸಿದರೆ, ಆ ದಿನವಿಡೀ ಹಸಿವಿನ ಸುಳಿವೇ ಇರಲಾರದು. ಏನನ್ನೂ ತಿನ್ನದಿರಲು ಮನಸ್ಸು ಆದೇಶಿಸಿ ಬಿಟ್ಟರೆ ಪೂರ್ಣ ಜೀರ್ಣಾಂಗ ವ್ಯವಸ್ಥೆ ವಿಶ್ರಾಂತಿ ಸ್ಥಿತಿಗೆ ತೆರಳಿ ಬಿಡುತ್ತದೆ. ಆದರೆ ಇದು ಪಥ್ಯವಾಗಿ ಬೇರೆಯವರಿಂದ ಆದೇಶಿಸಲ್ಪಟ್ಟರೆ, ಆಗ ಅದನ್ನು ಶರೀರ ಪಾಲಿಸುವುದು ಕಷ್ಟಸಾಧ್ಯ. ಬೇಡವೆಂದ ಆಹಾರದೆಡೆಗೆ ಮನಸ್ಸು ಹೊರಳಿ, ಜೀರ್ಣಾಂಗ ವ್ಯವಸ್ಥೆ ಇನ್ನಷ್ಟು ಕ್ರಿಯಾಶೀಲವಾಗಿ, ಹಸಿವು ಹೆಚ್ಚಿ ಬೇಡವೆಂದ ಆಹಾರವನ್ನೇ ತಿನ್ನಬೇಕೆಂಬ ಬಯಕೆ ತೀವ್ರವಾಗುತ್ತಾ ಹೋಗುತ್ತದೆ.

ಸ್ವ ಸಂಕಲ್ಪದಿಂದ ಮಾಡುತ್ತಿರುವ ಉಪವಾಸವನ್ನು ಕೈ ಬಿಟ್ಟು, ಪಕ್ಕದಲ್ಲಿ ಆಕರ್ಷಕವಾಗಿ ಕಾಣುತ್ತಿರುವ ಖಾದ್ಯವನ್ನು ತಿಂದರೆ ಯಾವುದೇ ಆರೋಗ್ಯ ಸಮಸ್ಯೆ ಆಗಲಾರದು ಎಂದು ತಿಳಿದಿದ್ದರೂ, ಮನಸ್ಸು ತಿನ್ನಲು ಪ್ರೇರೇಪಿಸುವುದಿಲ್ಲ. ಬೇರೆಯವರಿಂದ ಹೇರಲ್ಪಟ್ಟ ನಿಯಮದ ಪ್ರಕಾರ ಪಥ್ಯಾಹಾರವನ್ನು ಅನುಸರಿಸಬೇಕಿದ್ದಲ್ಲಿ, ಕಟ್ಟು ನಿಟ್ಟಿನಿಂದ ಪಾಲಿಸುವುದು ಕಷ್ಟ. ಇಲ್ಲಿ ಆಹಾರದ ಕಟ್ಟಳೆಯನ್ನು ಮುರಿಯುವುದರಿಂದ ಆರೋಗ್ಯ ಸಮಸ್ಯೆ ಆಗಬಹುದು ಎಂದು ತಿಳಿದಿದ್ದರೂ ಹೆಚ್ಚು ಯೋಚಿಸದೆ ಮನಸ್ಸು ತಿನ್ನಲು ಪ್ರೇರೇಪಿಸಿಬಿಡುತ್ತದೆ. ಸ್ವತಂತ್ರ ನಿರ್ಧಾರಗಳಿಗಿರುವ ಶಕ್ತಿ ಬೇರೆಯವರ ಆದೇಶಗಳಿಗಿರುವುದಿಲ್ಲ. ಅಳಿವು - ಉಳಿವಿನ ಪ್ರಶ್ನೆ ಬಂದಾಗ ಮಾತ್ರ ಮನಸ್ಸು ಬೇರೆಯವರ ಮಾತುಗಳನ್ನು ಪಾಲಿಸುತ್ತದೆ. ತೀವ್ರ ಅನಾರೋಗ್ಯದ ಸಂದರ್ಭದಲ್ಲಿ ವೈದ್ಯರು ಕೊಟ್ಟಂತಹ ಔಷಧಗಳನ್ನು ಹೆಚ್ಚಿಗೆ ಯೋಚಿಸದೆ ಸೇವಿಸುವಂತಹ ಕೆಲಸಕ್ಕೆ ಮನಸ್ಸು ಸಹಕರಿಸುತ್ತದೆ. ಸ್ವ ಇಚ್ಛೆಯ ನಿರ್ಧಾರಗಳೇ ಇರಬಹುದು, ಹೊರಗಿನಿಂದ ಬಂದ ಆದೇಶಗಳೇ ಇರಬಹುದು, ಆತ್ಮಶಕ್ತಿ ಅವಶ್ಯ, ಅಗತ್ಯ, ಅನಿವಾರ್ಯ ಅನ್ನಿಸಿದ ಸಂದರ್ಭಗಳಲ್ಲಿ, ಮನಸ್ಸು, ಸಂಕಲ್ಪ ಶಕ್ತಿ ಇಂದ್ರಿಯಗಳನ್ನು ನಿಗ್ರಹಿಸಿಬಿಡುತ್ತದೆ. ಇಲ್ಲೆಲ್ಲಾ ಮನಸ್ಸಿನ ವಿಶ್ವಾಸದ ನಡೆಯನ್ನು ಗಮನಿಸಬಹುದು. ಸರ್ವ ಮಾನ್ಯ ನಡೆ ಇದ್ದಾಗ ಆ ನಡೆಯನ್ನೇ ನುಡಿಯುವುದು ಸುಲಭ. ಎಲ್ಲರೂ ಮೆಚ್ಚುವ ನುಡಿಗಳನ್ನು ನುಡಿಯುವುದು ಇನ್ನೂ ಸುಲಭ. ಆ ನುಡಿಗಳಂತೆಯೇ ನಡೆಯಲು ಮಾತ್ರ ಸಂಕಲ್ಪ ಶಕ್ತಿ ಬೇಕು. ಸ್ವ ಸಂಕಲ್ಪ ಶಕ್ತಿ ದೃಢವಾದಾಗ ನುಡಿದಂತೆ ನಡೆಯುವುದು ಸುಲಭ. ಸ್ವ ಸಂಕಲ್ಪ ಶಕ್ತಿಯನ್ನು ಸದಾ ಜಾಗೃತವಾಗಿಟ್ಟುಕೊಂಡರೆ ಅದ್ಭುತಗಳು ಸೃಷ್ಟಿಯಾಗುತ್ತವೆ.

• ಮಾಯಾ ಬಾಲಚಂದ್ರ

ಹನಿ ಮಳೆ

ಬೆಳಕಿನ ವೇಗ

ಶಬ್ದದ ವೇಗ ಬೆಳಕಿನಂತ
ತುಂಬಾ ಕಡಿಮೆ
ಅದು ವಿಜ್ಞಾನ
ಅಡುಗೆ ಮನೆಯಿಂದ ಬರುವ
ಅವಳ ಶಬ್ದಕ್ಕೆ ವಿಪರೀತ ವೇಗ
ಇದು ಸಾಮಾನ್ಯ ಜ್ಞಾನ

• ಮಹಾಂತೇಶ ಮಾಗನೂರ

ಕನ್ನಡ ಪ್ರೇಕ್ಷಕನ ಶಕ್ತಿ!

• ಲಕ್ಷ್ಮೀಕಾಂತ್ ಎಲ್. ವಿ. ತುಮಕೂರು

ಪ್ರೇಕ್ಷಕರ ಮೆಚ್ಚುಗೆ ಗಳಿಸಲು ಏನು ಮಾಡಬೇಕು? ಸದಭಿರುಚಿಯೇ ಮುಖ್ಯ ಎನಿಸಬೇಕು. ಇದಕ್ಕೆ ಇತ್ತೀಚಿನ ಉದಾಹರಣೆ ಎಂದರೆ ಸು ಫ್ರಂ ಸೋ ಚಲನಚಿತ್ರ.

ಒಂದು ಕಾಲದಲ್ಲಿ ಕಲಾತ್ಮಕ ಹಾಗೂ ವಾಣಿಜ್ಯ ಎರಡೂ ಪ್ರಕಾರಗಳಲ್ಲಿ ಸೈ ಎನಿಸಿಕೊಂಡಿದ್ದ ಕನ್ನಡ ಸಿನಿಮಾ, ಒಂದು ಹಂತದಲ್ಲಿ ಮಂಕು ಕವಿದ ವಾತಾವರಣವನ್ನು ಎದುರಿಸಿತ್ತು. ಆದರೆ, ಇತ್ತೀಚಿನ ವರ್ಷಗಳಲ್ಲಿ ಕನ್ನಡ ಪ್ರೇಕ್ಷಕನ ಬದಲಾದ ಮನಸ್ಥಿತಿ ಮತ್ತು ತಂತ್ರಜ್ಞಾನದ ಪ್ರಗತಿಯು ಚಿತ್ರರಂಗಕ್ಕೆ ಹೊಸ ಆಯಾಮವನ್ನು ನೀಡಿದೆ. ಕನ್ನಡ ಪ್ರೇಕ್ಷಕನ ಶಕ್ತಿ ಇಂದು ಕೇವಲ ಚಿತ್ರಮಂದಿರಗಳಲ್ಲದೆ, ಒಟಿಟಿ ವೇದಿಕೆಗಳಲ್ಲೂ ತನ್ನ ಛಾಪು ಮೂಡಿಸುತ್ತಿದ್ದು, ಇದು ಚಿತ್ರರಂಗದ ಭವಿಷ್ಯಕ್ಕೆ ಹೊಸ ದಿಕ್ಸೂಚಿಯಾಗಿದೆ.

ದೇಶಾದ್ಯಂತ ಮತ್ತು ವಿದೇಶಗಳಲ್ಲೂ ಯಶಸ್ಸು ಕಂಡಿದ್ದು, ಕನ್ನಡ ಸಿನಿಮಾದ ವ್ಯಾಪ್ತಿಯನ್ನು ವಿಸ್ತರಿಸಿದೆ.

ಗುಣಮಟ್ಟಕ್ಕೆ ಪ್ರೋತ್ಸಾಹ

ಅಲ್ಲದೆ ಇತ್ತೀಚಿನ ಎಕ್ಕ, 'ಸು ಫ್ರಂ ಸೋ' ಸಿನಿಮಾಗಳ ಯಶಸ್ಸಿಗೆ ಮುಖ್ಯ ಕಾರಣ ಪ್ರೇಕ್ಷಕನ ಬೆಂಬಲ ಮತ್ತು ಅವನು ಗುಣಮಟ್ಟಕ್ಕೆ ನೀಡಿದ ಮನ್ನಣೆ. ಪ್ರೇಕ್ಷಕನು ಕೇವಲ ನಟರ ಸ್ಟಾರ್‌ಡಮ್‌ಗೆ ಜೋತು ಬೀಳದೆ, ಸಿನಿಮಾದ ಒಟ್ಟಾರೆ ಗುಣಮಟ್ಟಕ್ಕೆ ಆದ್ಯತೆ ನೀಡಿದ್ದಾನೆ ಎಂಬುದಕ್ಕೆ ಇದು ಸ್ಪಷ್ಟ ನಿದರ್ಶನ.

ಚಿತ್ರರಂಗದ ಭವಿಷ್ಯವನ್ನು ರೂಪಿಸುವಲ್ಲಿ ಒಟಿಟಿ ವೇದಿಕೆಗಳು ನಿರ್ಣಾಯಕ ಪಾತ್ರ ವಹಿಸುತ್ತಿವೆ. ಒಂದು ಕಾಲದಲ್ಲಿ ಚಿತ್ರಮಂದಿರಗಳಲ್ಲಿ ಬಿಡುಗಡೆಯಾದ ಬಳಿಕ ಟಿವಿ ಪ್ರಸಾರಕ್ಕಾಗಿ ಕಾಯಬೇಕಿದ್ದ ಪ್ರೇಕ್ಷಕ, ಈಗ ಸಿನಿಮಾಗಳು ಮತ್ತು ವೆಬ್ ಸರಣಿಗಳನ್ನು ತನ್ನಿಷ್ಟದ ಸಮಯದಲ್ಲಿ, ತನ್ನಿಷ್ಟದ ಸಾಧನದಲ್ಲಿ ವೀಕ್ಷಿಸುವ ಸ್ವಾತಂತ್ರ್ಯವನ್ನು ಪಡೆದಿದ್ದಾನೆ. ಸಣ್ಣ ಬಜೆಟ್‌ನ, ವಿಭಿನ್ನ

ಕಳೆದ ದಶಕದಲ್ಲಿ ಕನ್ನಡ ಚಿತ್ರರಂಗದಲ್ಲಿ ಮಹತ್ತರ ಬದಲಾವಣೆಗಳಾಗಿವೆ. ಪ್ರೇಕ್ಷಕರು, ಇಂದು ಜಾಗತಿಕ ಮಟ್ಟದ ವಿಷಯಗಳಿಗೆ ತೆರೆದುಕೊಂಡಿದ್ದಾರೆ. ಸ್ಮಾರ್ಟ್‌ಫೋನ್‌ಗಳು, ಇಂಟರ್ನೆಟ್ ಮತ್ತು ಒಟಿಟಿ ವೇದಿಕೆಗಳ ಪ್ರವೇಶದಿಂದಾಗಿ ವಿಶ್ವದ ಎಲ್ಲಾ ಭಾಷೆಯ ಚಲನಚಿತ್ರಗಳು, ವೆಬ್ ಸರಣಿಗಳು ಮನೆಮನೆಗೂ ತಲುಪಿವೆ. ಇದರಿಂದ ಕನ್ನಡ ಪ್ರೇಕ್ಷಕನ ಅಭಿರುಚಿ ವಿಶಾಲವಾಗಿದೆ. ಈಗ ಪ್ರೇಕ್ಷಕ ಮನರಂಜನೆಯ ಜತೆ, ಉತ್ತಮ ಕಥೆ, ಗುಣಮಟ್ಟದ ನಿರ್ಮಾಣ, ತಾಂತ್ರಿಕವಾಗಿ ಸುಧಾರಿತ ದೃಶ್ಯಗಳು ಮತ್ತು ವಿಶಿಷ್ಟ ಅನುಭವವನ್ನು ನಿರೀಕ್ಷಿಸುತ್ತಾನೆ.

ಈ ಬದಲಾವಣೆಯು ಕನ್ನಡ ಚಿತ್ರೋದ್ಯಮಕ್ಕೆ ಹೊಸ ಸವಾಲುಗಳನ್ನು ಮತ್ತು ಅವಕಾಶಗಳನ್ನು ಒದಗಿಸಿದೆ. ಪ್ರೇಕ್ಷಕರನ್ನು ಚಿತ್ರಮಂದಿರಗಳಿಗೆ ಸೆಳೆಯಲು, ಚಿತ್ರತಂಡಗಳು ಕೇವಲ ಪ್ರಚಾರಕ್ಕೆ ಒತ್ತು ನೀಡಿದರೆ ಸಾಲದು. ಕಂಟೆಂಟ್ ಆಧಾರಿತ ಸಿನಿಮಾಗಳು, ವಿಭಿನ್ನ ನಿರೂಪಣೆ ಮತ್ತು ಪ್ರಯೋಗಾತ್ಮಕ ವಿಧಾನಗಳು ಪ್ರೇಕ್ಷಕನನ್ನು ಆಕರ್ಷಿಸುತ್ತಿವೆ. ಕೆಜಿಎಫ್ ಚಾಪ್ಟರ್-1 ಮತ್ತು 2, ಕಾಂತಾರ, ವಿಕ್ರಾಂತ್ ರೋಣನಂತಹ ಸಿನಿಮಾಗಳು ಕೇವಲ ಕರ್ನಾಟಕದಲ್ಲಿ ಮಾತ್ರವಲ್ಲದೆ,

ಕಥಾಹಂದರ ಹೊಂದಿರುವ ಕೆಲವು ಸಿನಿಮಾಗಳು ಒಟಿಟಿ ವೇದಿಕೆಗಳಲ್ಲಿ ಉತ್ತಮ ಪ್ರತಿಕ್ರಿಯೆ ಪಡೆಯುತ್ತಿವೆ.

ಕನ್ನಡ ಪ್ರೇಕ್ಷಕನ ಬೆಂಬಲ ಮತ್ತು ಬದಲಾದ ಅಭಿರುಚಿ ಚಿತ್ರರಂಗಕ್ಕೆ ಹೊಸ ಭರವಸೆ ಮೂಡಿಸಿದ್ದರೂ, ಇನ್ನೂ ಕೆಲವು ಸವಾಲುಗಳು ಇವೆ. ಪ್ರೇಕ್ಷಕನ ನಿರೀಕ್ಷೆಗಳು ಹೆಚ್ಚಿದಂತೆ, ಕಂಟೆಂಟ್ ಗುಣಮಟ್ಟವನ್ನು ಕಾಪಾಡಿಕೊಳ್ಳುವುದು ಅತಿ ಮುಖ್ಯ. ಪೈರಸಿ ಎಂಬುದು ಇಂದಿಗೂ ಒಂದು ದೊಡ್ಡ ಸವಾಲಾಗಿದ್ದು, ಇದರಿಂದ ಚಿತ್ರೋದ್ಯಮಕ್ಕೆ ನಷ್ಟವಾಗುತ್ತಿದೆ. ಇದನ್ನು ತಡೆಯುವುದು ಅಗತ್ಯ ಎನಿಸಿದೆ.

ಭವಿಷ್ಯದ ದಿಕ್ಸೂಚಿ

ಭವಿಷ್ಯದಲ್ಲಿ ಕನ್ನಡ ಚಿತ್ರರಂಗವು ಇನ್ನಷ್ಟು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳುವ ಅವಕಾಶವಿದೆ. ಉತ್ತಮ ಗುಣಮಟ್ಟದ ಕಥೆಗಳು, ತಾಂತ್ರಿಕ ಪ್ರಗತಿ ಮತ್ತು ಸೃಜನಾತ್ಮಕ ನಿರ್ದೇಶನದಿಂದ ಕನ್ನಡ ಸಿನಿಮಾಗಳು ವಿಶ್ವದಾದ್ಯಂತ ವೀಕ್ಷಕರನ್ನು ತಲುಪಬಲ್ಲವು. ಪ್ರೇಕ್ಷಕರ ಬೇಡಿಕೆಗೆ ಅನುಗುಣವಾಗಿ, ನಿರ್ದೇಶಕರು ಮತ್ತು ನಿರ್ಮಾಪಕರು ವಿಭಿನ್ನ ಪ್ರಕಾರಗಳನ್ನು ಅನ್ವೇಷಿಸಬೇಕು ಸೈ-ಫೈ, ಫ್ಯಾಂಟಸಿ, ಕ್ರೀಡೆ, ಬಯೋಪಿಕ್ ಹೀಗೆ ಹೊಸ

ಹೊಸ ಕ್ಷೇತ್ರಗಳಲ್ಲಿ ಪ್ರಯೋಗಗಳನ್ನು ಮಾಡಬೇಕು. ಸಾಮಾಜಿಕ ಜಾಲತಾಣಗಳು ಪ್ರೇಕ್ಷಕ ಮತ್ತು ಚಿತ್ರತಂಡದ ನಡುವಿನ ಸಂವಾದಕ್ಕೆ ಒಂದು ವೇದಿಕೆಯಾಗಿ ಮಾರ್ಪಟ್ಟಿವೆ. ಪ್ರೇಕ್ಷಕರ ಅಭಿಪ್ರಾಯಗಳನ್ನು ಆಲಿಸುವುದು ಮತ್ತು ಅವುಗಳಿಗೆ ಸ್ಪಂದಿಸುವುದು ಚಿತ್ರೋದ್ಯಮದ ಭವಿಷ್ಯಕ್ಕೆ ಅನಿವಾರ್ಯ.

ಕನ್ನಡ ಪ್ರೇಕ್ಷಕನು ಸಿನಿಮಾದ ಭವಿಷ್ಯವನ್ನು ನಿರ್ಧರಿಸುವ ಶಕ್ತಿಯನ್ನು ಹೊಂದಿದ್ದಾನೆ. ಆತ ಗುಣಮಟ್ಟಕ್ಕೆ, ಸೃಜನಶೀಲತೆಗೆ ಬೆಲೆ ನೀಡುತ್ತಾನೆ. ಈ ಶಕ್ತಿಯನ್ನು ಸರಿಯಾಗಿ ಗುರುತಿಸಿ, ಅದಕ್ಕೆ ಸ್ಪಂದಿಸುವ ಮೂಲಕ ಕನ್ನಡ ಚಿತ್ರರಂಗ ಇನ್ನಷ್ಟು ಉಜ್ವಲ ಭವಿಷ್ಯವನ್ನು ನಿರ್ಮಿಸಿಕೊಳ್ಳಬಹುದು. ಪ್ರೇಕ್ಷಕನ ನಾಡಿಮಿಡಿತ ಅರಿತು ಸಿನಿಮಾ ಮಾಡಿದರೆ ಕನ್ನಡ ಚಿತ್ರರಂಗ ಇನ್ನಷ್ಟು ಬೆಳೆಯಬಹುದು.

ಸು ಫ್ರಂ ಸೋ

ಗುಣಮಟ್ಟದ ಮತ್ತು ವಿಭಿನ್ನ ರೀತಿಯ ಚಲನಚಿತ್ರಗಳಿಗೆ ಪ್ರೇಕ್ಷಕರು ಅಪಾರ ಬೆಂಬಲ ವ್ಯಕ್ತಪಡಿಸುತ್ತಾರೆ ಎಂಬುದಕ್ಕೆ ಹೊಸ ಉದಾಹರಣೆ ಎಂದರೆ, ಕನ್ನಡ ಚಲನಚಿತ್ರ 'ಸು ಫ್ರಂ ಸೋ'. ಅಬ್ಬರದ ಪ್ರಚಾರದ ಬೆಂಬಲವಿಲ್ಲದೇ ಬಿಡುಗಡೆಗೊಂಡ ಈ ಚಲನಚಿತ್ರವು, ಬಾಯಿಂದ ಬಾಯಿಗೆ ಪ್ರಚಾರ ಪಡೆದು, ಈಗ ಎಲ್ಲಾ ಕಡೆ ಭರ್ಜರಿ ಪ್ರದರ್ಶನ ನೀಡುತ್ತಿದೆ. ಪ್ರೇಕ್ಷಕರ ಒತ್ತಡದಿಂದಾಗಿ, ಬೆಳಗಿನ 6 ಗಂಟೆಗೂ ಈ ಸಿನಿಮಾ ಪ್ರದರ್ಶನಗೊಂಡಿದೆ! ಸದಭಿರುಚಿಯ ಹಾಸ್ಯವು ಪ್ರೇಕ್ಷಕರನ್ನು ನಕ್ಕುನಗಿಸಿದರೆ, ಚಿತ್ರ ನೀಡುವ ಸಂದೇಶವನ್ನು ಪ್ರೇಕ್ಷಕ ಮೆಚ್ಚಿದಂತಿದೆ! ಸು ಫ್ರಂ ಸೋ, ಕನ್ನಡ ಚಿತ್ರರಂಗದಲ್ಲಿ ಒಂದು ಹೊಸ ದಾಖಲೆ ಬರೆಯುತ್ತಿದೆ!

ಹಾಸ್ಯ ಸ್ಫೋಟ!

• ಗೊರೂರು ಶಿವೇಶ್

ಕನ್ನಡ ಚಿತ್ರರಂಗದಲ್ಲಿ ಹೊಸ ದಾಖಲೆಯನ್ನು ಬರೆಯಲು ಹೊರಟಿರುವ ಚಿತ್ರವೊಂದರ ಕಿರು ವಿಶ್ಲೇಷಣೆ. ನಮ್ಮ ರಾಜ್ಯದಲ್ಲಿ ಅಲ್ಲಲ್ಲಿ ಮುಚ್ಚುತ್ತಿರುವ ಥಿಯೇಟರ್‌ಗಳಿಗೆ ಆಶಾದಾಯಕವಾಗಿ ಈ ಚಿತ್ರ ಮೂಡಿ ಬಂದಿದೆ ಎನ್ನಬಹುದು!

ಇದೀಗ ಕನ್ನಡ ಚಿತ್ರರಂಗದಲ್ಲಷ್ಟೇ ಅಲ್ಲದೆ ಭಾರತೀಯ ಚಿತ್ರರಂಗದಲ್ಲಿಯೂ ಕೂಡ ಸದ್ದು ಮಾಡುತ್ತಿರುವ ಹಾಗೂ ಚಿತ್ರ ಪ್ರೇಮಿಗಳ ಆಸಕ್ತಿಗೆ ಕಾರಣವಾಗಿರುವ 'ಸು ಫ್ರಮ್ ಸೋ' ದೊಡ್ಡ ಮಟ್ಟದ ಯಶಸ್ಸನ್ನು ಸಾಧಿಸುವ ಸೂಚನೆ ನೀಡಿದೆ. ಆ ಚಿತ್ರದಲ್ಲಿ, ರಾಜ್ ಬಿ ಶೆಟ್ಟಿ ರವರ ಕೊಡುಗೆಯೂ ಇದೆ! ಸ್ವತಃ ಕಥೆಗಾರ ನಿರ್ದೇಶಕ ನಟರಾಗಿರುವವರು ಮತ್ತೊಬ್ಬ ನಿರ್ದೇಶಕ, ಕಥೆಗಾರರನ್ನು ಪ್ರೋತ್ಸಾಹಿಸಿದ್ದಲ್ಲದೆ ಚಿತ್ರದಲ್ಲಿ ಹೀರೋಯಿ ಸಂಗೆ ಹೊರತಾದ ಪಾತ್ರ ನಿರ್ವಹಿಸಿರುವುದು ಅವರ ಸಿನಿಮಾ ಪ್ರೀತಿಗೆ ಸಾಕ್ಷಿಯಾಗಿದೆ.

ಚಿತ್ರದ ಕಥೆ ನಡೆಯುವುದು ಮರುಳೂರು ಎಂಬ ಗ್ರಾಮದಲ್ಲಿ. ಮರುಳು ಎಂಬ ಪದಕ್ಕೆ ಹುಚ್ಚು, ದೆವ್ವ, ದಡ್ಡತನ ಅಥವಾ ತಿಳಿಗೇಡಿ ಹಾಗೂ ಪ್ರೀತಿ ಮೋಹ ಎಂಬ ಅರ್ಥ ಇದೆ. ಪ್ರೀತಿಯ ಮೋಹಕ್ಕೆ ಬಿದ್ದ ಯುವಕನೊಬ್ಬನ ತಿಳಿಗೇಡಿ ಹುಚ್ಚು ಕೆಲಸವೊಂದು ಊರಿನವರಿಗೆ ಭಯದ ದೆವ್ವ ಹಿಡಿಸುವುದು ಸಿನಿಮಾದ ಒನ್‌ಲೈನ್ ಸ್ಟೋರಿ ಎನ್ನಬಹುದು.

ಮಣ್ಣಿನ ಕಥೆ, ಮದ್ಯ, ಮದ(ಅಹಂ) ಮತ್ಸರ, ಮಹಿಳೆ ಎದುರಿಸುತ್ತಿರುವ ಸಮಸ್ಯೆಗಳ ಸುತ್ತ ಕಥೆ ಸುತ್ತುತ್ತದೆ. ಮೊದಲ ಅರ್ಧಗಂಟೆ ಅಂತೂ ಕುಡುಕರ ಪರಿಚಯಕ್ಕೆ ಮೀಸಲಾಗಿದೆ. ಜೊತೆಗೆ ಹಾಡು ಇದೆ. ಮದುವೆಯಾಗಲಿ, ತಿಥಿಯಾಗಲಿ ಕಾಣಸಿಗುವ ಬಾವ, ಅಂಗಡಿಯ ಮುಂದೆ ಕುಳಿತು ಕಾಮೆಂಟ್ ಒಗೆಯುವ ಮುದುಕ, ದಣಿಯನ್ನು ಉಬ್ಬಿಸುವ ಆತ ಹೇಳಿದ್ದಕ್ಕೆ ಎಸ್ ಎನ್ನುವ ಎಸ್ ಮ್ಯಾನ್ ಈ ಚಿತ್ರದಲ್ಲೂ ಇದ್ದಾರೆ.

ಹಾಸ್ಯವನ್ನು ಸ್ಫೋಟಿಸುತ್ತವೆ. ಮತ್ತೊಂದು ಹಾಸ್ಯ ಚಿತ್ರವಾಗಿ ಮುಕ್ತಾಯವಾಗುವ ಸಿನಿಮಾಕ್ಕೆ ಅಂತ್ಯದಲ್ಲಿ ಸಿಗುವ ತಿರುವು ಸಾಮಾಜಿಕ ಸಂದೇಶವು, ಚಿತ್ರದ ಯಶಸ್ಸಿನ ಮೂಲ. ಸಂಭಾಷಣೆಯ ಜೊತೆಗೆ ಸನ್ನಿವೇಶಗಳು ಕೂಡ ಹಾಸ್ಯವನ್ನು ಸೃಷ್ಟಿಸುವ ರೀತಿ ಮುದು ನೀಡುತ್ತದೆ. ಜೆ ಪಿ ತೂಮಿನಾಡ್ ಭರವಸೆಯ ನಿರ್ದೇಶಕರಾಗುವ ಸಾಧ್ಯತೆಗಳನ್ನು ಚಿತ್ರದಲ್ಲಿ ತೋರಿಸಿದ್ದಾರೆ.

ಇನ್ನು ಉಳಿದಂತೆ ತುಳುರಂಗಭೂಮಿಯಲ್ಲಿ ಹೆಸರು ಮಾಡಿರುವ ಹಲವರು, ಇಲ್ಲಿ ಪ್ರಧಾನ ಪಾತ್ರವನ್ನು ನಿರ್ವಹಿಸಿದ್ದಾರೆ. ಇಲ್ಲಿ ಯಾರೂ ಮುಖ್ಯರಲ್ಲ ಯಾರು ಮುಖ್ಯರಲ್ಲ. ಕೆಲವೇ ಸೀನುಗಳಲ್ಲಿ ಕಾಣಿಸುವ ಭಾವ ಪಾತ್ರ (ಪ್ರವೇಶಿಸಿದೊಡನೆ ಅವರಿಗಾಗಿ ಪ್ರತ್ಯೇಕ ಬಿಜಿಎಂ ಇದೆ) ಕೂಡಾ ನೋಡುವುದರಲ್ಲಿ ಛಾಪು ಮೂಡಿ ಸುತ್ತದೆ. ರವಿ ಅಣ್ಣನಾಗಿ ಶನೀಲ್ ಗೌತಮ್, ಅಶೋಕ ಪಾತ್ರದಲ್ಲಿ ಜೆ.ಪಿ. ತುಮಿನಾಡ್ ಬಾನು ಪಾತ್ರದಲ್ಲಿ ಸಂಧ್ಯಾ ಅರಕೆರೆ, ಚಂದ್ರನಾಗಿ ಪ್ರಕಾಶ್ ತುಮಿನಾಡ್, ಸತೀಶ ಪಾತ್ರದಲ್ಲಿ ದೀಪಕ್ ರೈ ಪಣಾಜೆ, ಯಧು ಪಾತ್ರದಲ್ಲಿ ಮೈಮ್ ರಾಮದಾಸ್, ಸ್ವಾಮಿ ಪಾತ್ರದಲ್ಲಿ ರಾಜ್ ಬಿ. ಶೆಟ್ಟಿ, ಭಾವ ಪಾತ್ರದಲ್ಲಿ ಪುಷ್ಪರಾಜ್ ಗಮನ ಸೆಳೆಯುತ್ತಾರೆ ಈ ಚಿತ್ರದ ಹಾಡುಗಳನ್ನು



ಬಿಗಿಯಾದ ಕಥೆ

ನಿಜಕ್ಕೂ ಪ್ರೇಕ್ಷಕರನ್ನು ಹಿಡಿದಿಡುವುದು ಬಿಗಿಯಾದ ಚಿತ್ರಕಥೆ. ಮುಂದಾಗುವ ಘಟನೆಗಳನ್ನು ಯೋಚಿಸಲು ಅವಕಾಶ ನೀಡದಂತೆ ಸಾಗುವ ಚಿತ್ರಕಥೆ ಎಲ್ಲರ ನಿರೀಕ್ಷೆಯನ್ನು ಮೀರಿ ಬದಲಾಗುತ್ತಿರುತ್ತದೆ. ಹೀಗಾಗಿ ಪ್ರತಿ ಸನ್ನಿವೇಶಗಳು

ಯುವಸಂಗೀತಗಾರ ಸುಮೇಧ್ ಕೆ. ಸಂಯೋಜಿಸಿದ್ದರೆ, ಹಿನ್ನೆಲೆ ಸಂಗೀತ ವನ್ನು ಸಂದೀಪ್ ತುಳಸಿದಾಸ್ ಸಂಯೋಜಿಸಿದ್ದಾರೆ.

ನಮ್ಮ ರಾಜ್ಯ ದಲ್ಲಿ ಅಲ್ಲಲ್ಲಿ ಮುಚ್ಚುತ್ತಿರುವ ಥಿಯೇಟರ್‌ಗಳಿಗೆ ಆಶಾದಾಯಕ ವಾಗಿ ಈ ಚಿತ್ರ ಮೂಡಿ ಬಂದಿದೆ ಎನ್ನಬಹುದು!

ಸಿಂಗಪುರದಲ್ಲಿ ವಚನಾಂಜಲಿ

• ಗೋಪಿನಾಥ ರಾವ್ ಬಾಪಟ್

ಸಿಂಗಪುರದಲ್ಲಿರುವ ಕನ್ನಡ ಸಂಘವು, 'ವಚನಾಂಜಲಿ' ಕಾರ್ಯಕ್ರಮವನ್ನು ಇತ್ತೀಚೆಗೆ ನಡೆಸಿಕೊಟ್ಟಿತು. ಹಲವು ವಚನಗಳನ್ನು ಸುಶ್ರಾವ್ಯವಾಗಿ ಹಾಡಿದವರು ಪ್ರತಿಮಾ, ರಾಜೇಶ್ವರಿ ಮತ್ತು ಕವಿತಾ ಸಾದರ ಅವರು. ಇದೇ ಸಂದರ್ಭದಲ್ಲಿ, ಬರಹಗಾರ, ಕೇಂದ್ರ ಸಾಹಿತ್ಯ ಅಕೆಡೆಮಿ ಪುರಸ್ಕೃತರಾದ ಬಸವರಾಜ ಸಾದರ ಅವರಿಗೆ 'ಸಿಂಗಾರ ಸಾಹಿತ್ಯ ರತ್ನ' ಪ್ರಶಸ್ತಿಯನ್ನಿತ್ತು ಗೌರವಿಸಲಾಯಿತು. ಕನ್ನಡ ಸಂಘದ ಸದಸ್ಯರು ಬಸವಣ್ಣನವರ ಬಗ್ಗೆ ಕಿರು ನಾಟಕವೊಂದನ್ನು ಪಸ್ತುತಪಡಿಸುವುದರೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಎಲ್ಲರೂ ಒಂದು ರೀತಿಯಲ್ಲಿ ಬಂಧಿಗಳೇ!

**ಒಂದು ಕಣ್ಣಳುವಂದು ಮತ್ತೊಂದ ತಳ್ಕೈಸಿ
ಅಂದ ಚೆಂದಗಳ ಜನವರಸುವುದು ಬಾಳೊಳ್
ಬಂಧುಮೋಹವೊ ಯಶವೊ ವೈರವೋ
ವೈಭವವೊ
ಬಂಧಿಪುದು ಜಗಕವರ - ಮಂಕುತಿಮ್ಮ॥**



ರವೀ ಚಿಕ್ಕನಾಯಕನಹಳ್ಳಿ

ಈ ಜಗದ ಮಾನವ ಸಂಬಂಧಗಳ ಬಗ್ಗೆ ಇಲ್ಲಿ ಪ್ರಸ್ತಾಪಿಸಲಾಗಿದೆ. ಒಬ್ಬರು ಅಳುವಾಗ ಮತ್ತೊಬ್ಬರು ಅಳುವ ವ್ಯಕ್ತಿಯನ್ನು ಅಂದ ಚೆಂದವಾಗಿ ಸಂತೋಷವಾಗಿರಲು ಹೇಳುತ್ತಾ ಸಂತೈಸುತ್ತಾರೆ. ಇದಕ್ಕೆ ಕಾರಣ ಬಂಧು ಮೋಹವೋ, ಪ್ರೀತಿಯೋ, ಪ್ರೇಮವೋ, ಬಂಧವೋ, ವೈರವೋ, ವೈಭವವೋ ಹೀಗೆ ಯಾವುದೋ ಒಂದು ಕಾರಣಕ್ಕೆ ಸಂತೈಸಿ ಸಮಾಧಾನಿಸುತ್ತಾರೆ. ಇದೆಲ್ಲಕ್ಕೂ ಕಾರಣ ಎಂದರೆ ಈ ಜಗದಲ್ಲಿ ಎಲ್ಲರೂ ಒಂದಲ್ಲ ಒಂದು ಕಾರಣಕ್ಕೆ ಬಂಧಿಗಳೇ ಆಗಿದ್ದಾರೆ.

ಮನುಷ್ಯ ಸಂಬಂಧಗಳೇ ಹೀಗೆ. ಯಾರಾದರೂ ಒಬ್ಬ ವ್ಯಕ್ತಿಯು ಯಾವುದೋ ಒಂದು ಆಘಾತ, ಘಾಸಿಯಿಂದ ದುಃಖಿತನಾದರೆ ಆತನನ್ನು ಹಲವಾರು ಜನರು ಬಂದು ತಬ್ಬಿಕೊಂಡು ಸಾಂತ್ವಾನ ಹೇಳುತ್ತಾ ದುಃಖಿತನಿಗೆ ಸಮಾಧಾನ ಪಡಿಸುತ್ತಾರೆ. ಆತನಿಗೆ ಧೈರ್ಯ ಹೇಳುತ್ತಾ, ಆತ್ಮಸ್ಥೈರ್ಯ ತುಂಬುತ್ತಾ ಅಂದ ಚೆಂದದ ಮಾತು ಗಳಿಂದ ಆತನಿಗೆ ಮತ್ತ್ಯಾವುದೋ ಶಕ್ತಿಯನ್ನು ತುಂಬುತ್ತಲೇ ಇರುತ್ತಾರೆ. ಇದಕ್ಕೆ ಕಾರಣವಾದರೂ ಮನುಷ್ಯನಿಂದ ಮನುಷ್ಯನಲ್ಲಿರುವ ಬಂಧನಗಳೇ ಕಾರಣ. ಒಬ್ಬ ವ್ಯಕ್ತಿ ಈ ಜಗತ್ತಿಗೆ ಮಗುವಾಗಿ ಕಾಲಿರಿಸಿದಾಗ ಆತನ ತಾಯಿ, ತಂದೆ ಹಾಗೂ ಆ ಮನೆಯವರ ಬಂಧ, ನಂತರದೆ ನೆರೆ ಹೊರೆಯವರ ಬಂಧ, ನಂತರದೆ ಸ್ನೇಹಿತರ ಆಪ್ತತೆಯ ಬಂಧ, ನಂತರ ತನ್ನ ಗ್ರಾಮದ, ಊರಿನ ಬಂಧ, ನಂತರ ತನ್ನ ಜಿಲ್ಲೆ, ರಾಜ್ಯ, ರಾಷ್ಟ್ರದ ಅಭಿಮಾನದ ಬಂಧಗಳಲ್ಲಿ ಬಂಧಿ ಯಾಗುತ್ತಾ ಬೆಳೆಯುತ್ತಾನೆ. ಇಂತಹ ಬಂಧನ ಗಳು ಇಲ್ಲದ ವ್ಯಕ್ತಿಯು ಈ ಜಗತ್ತಿನಲ್ಲಿ ಇಲ್ಲವೇ ಇಲ್ಲ ಎಂದು ಹೇಳಬಹುದು.

ಈ ಬಂಧನಗಳೇ ಒಬ್ಬ ವ್ಯಕ್ತಿ ದುಃಖಿತನಾದಾಗ ಸಾಂತ್ವಾನ ಹೇಳುವುದು. ಇಂಥಹ ಬಂಧನಗಳೇ ವ್ಯಕ್ತಿ ವ್ಯಕ್ತಿಗಳ ನಡುವೆ ವೈರತ್ವವನ್ನು ತರುವುದು. ಹೀಗೆ ಬಾಳುವೆ ಮಾಡುವ ಮನುಷ್ಯನಿಗೆ ಈ ಬಂಧನಗಳ ಪೂರಣದಿಂದಲೇ ಮನುಷ್ಯನು ಸಂಘ ಜೀವಿ ಎಂದೆನಿಸಿ ಕೊಂಡಿರುವುದು. ಇದಕ್ಕೆ ಕಾರಣ ಬಂಧು ಮೋಹವೋ, ಪ್ರೀತಿಯೋ, ಪ್ರೇಮವೋ, ಬಂಧವೋ, ವೈರವೋ, ವೈಭ ವವೋ ಹೀಗೆ ಯಾವುದೋ ಒಂದು ಕಾರಣಕ್ಕೆ ಮನುಷ್ಯನು ಈ ಸಂಬಂಧಗಳ ಜೊತೆಗೆ ಬೆಸೆದು ಕೊಂಡಿರುವುದು. ನಮಗೆ ಬೇಕಾಗಿಯೊ, ಬೇಡ ವಾಗಿಯೋ, ಒಳ್ಳೆಯದಕ್ಕೋ ಕೆಟ್ಟದಕ್ಕೊ, ಅರಿತೋ ಅರಿವಿಲ್ಲದೆಯೋ, ಇಷ್ಟಪಟ್ಟೋ ಅಥವಾ ಇಷ್ಟವಿಲ್ಲದೆಯೋ, ಸುಖವಾಗಿಯೋ ಅಥವಾ ಕಷ್ಟವಾಗಿಯೋ ನಾವು ಹೊಸ ಹೊಸ ಸಂಬಂಧಗಳನ್ನು ಅರಸುತ್ತೇವೆ ಮತ್ತು ಕಟ್ಟಿ ಕೊಳ್ಳುತ್ತೇವೆ. ಮೊದಮೊದಲು ಸುಂದರವಾಗಿರುವ ಸಂಬಂಧಗಳು ಕಾಲಾಂತರದಲ್ಲಿ ಕೆಟ್ಟು ಹೋಗುತ್ತವೆ. ಹಾಗೆ ಕೆಡಲು ಕಾರಣ ನಮ್ಮಲ್ಲಿರುವ 'ಸ್ವಾರ್ಥ' ಭಾವನೆ. ಏನಾದರಾಗಲಿ, ಈ ಜಗತ್ತಿನೊಂದಿಗೆ ನಮಗೆ ಸೂಕ್ಷ್ಮವಾದಂತಹ ವೈಯಕ್ತಿಕ, ಭಾವನಾತ್ಮಕ ಅಥವಾ ಸಾಮಾಜಿಕ ಸಂಬಂಧಗಳು ಇದ್ದೇ ಇರುತ್ತವೆ. ಜಗತ್ತಿ ನೊಂದಿಗಿನ ನಮ್ಮ ಈ ಸಂಬಂಧಗಳೇ ನಮ್ಮನ್ನು ಈ ಜಗತ್ತಿನೊಂದಿಗೆ ನಂಟನ್ನು ಉಂಟುಮಾಡಿ ಒಂದು ವ್ಯಾಮೋಹವನ್ನು ನಮ್ಮ ಮನಸ್ಸುಗಳಲ್ಲಿ ಹುಟ್ಟಿಸುತ್ತದೆ, ಇದಕ್ಕೆಲ್ಲ ಕಾರಣ ನಾವು ಈ ಸಂಬಂಧಗಳೆಂಬ ಅಂಟಿನ ನೆಂಟಿನ ಗಂಟಿನಲ್ಲಿ ಬಂಧಿಯಾಗಿದ್ದೇವೆ ಎಂಬುವುದೇ ಈ ಪದ್ಯದ ಅರ್ಥವಾಗಿದೆ.

ಮನುಷ್ಯನೆಂಬುವನು ಸಂಘಜೀವಿ. ಈತನು ಅನವರತ ಹೊಸತನದೊಂದಿಗೆ ಹೊಸ ಸಂಬಂಧ ಗಳನ್ನು ಅರಸುತ್ತಲೇ ಇರುತ್ತಾನೆ. ಹಳೆಯದನ್ನು ಉಳಿಸಿಕೊಂಡೋ ಅಥವಾ ಮರೆತೊ ಆತನು ಹೊಸ ಅನ್ವೇಷಿತ ಸಂಬಂಧಗಳೊಂದಿಗೆ ಜೀವಿಸಲು ಇಷ್ಟಪಡುತ್ತಾನೆ. ಇದು ಈತನ ಮೂಲ ಗುಣವೂ ಹೌದು. ಈ ಸಂಬಂಧಗಳು ಬಂಧು ಮೋಹವೋ, ಪ್ರೀತಿಯೋ, ಪ್ರೇಮವೋ, ಬಂಧವೋ, ವೈರವೋ, ವೈಭವವೋ ಹೀಗೆ ಯಾವುದೋ ಒಂದು ಕಾರಣಕ್ಕೆ ಬೆಳೆಯುತ್ತವೆ ಎಂಬುದೂ ಸಹ ಸತ್ಯವೇ ಹೌದು. ಹಾಗಾಗಿ ಮನುಷ್ಯ ಹುಟ್ಟಿನಿಂದ ಲಾಗಾಯ್ತು ಸಾಯುವ ವರೆಗೂ ಸಂಬಂಧಗಳ ಬಂಧನದಲ್ಲಿ ಬಂಧಿಯೇ ಆಗಿರುತ್ತಾನೆ ಎಂಬುದು ಈ ಪದ್ಯದ ಮೂಲಾರ್ಥವಾಗಿದೆ.

ದಾನ ಮಾಡಿದ ಅಕ್ಕಿಯ ಕಾಳು ಬಂಗಾರವಾದಾಗ

ಅಂದು ಹಬ್ಬದ ದಿನವಾಗಿತ್ತು. 'ಇಂದು ಊರಲ್ಲಿ ಭಾರಿ ಭಿಕ್ಷೆ ಸಿಗಬಹುದು' ಎಂದು ಆ ಊರಿನ ಭಿಕ್ಷುಕನಿಗೆ ಸಂತೋಷವಾಗಿತ್ತು. ಅವನು ತನ್ನ ಜೋಳಿಗೆಯಲ್ಲಿ ಒಂದು ಮುಷ್ಟಿಯಷ್ಟು ಅಕ್ಕಿಯನ್ನು ಹಾಕಿಕೊಂಡು ಹೊರಟಿದ್ದನು. ಊರಲ್ಲಿ ಇನ್ನು ಯಾರೂ ಎಚ್ಚರಗೊಂಡಿರಲಿಲ್ಲ. ಯಾರಾದರೂ ತನ್ನ ಜೋಳಿಗೆ ಯನ್ನು ನೋಡಿದರೆ ಯಾರೋ ಒಬ್ಬರು ಆಗಲೇ ಇವನಿಗೆ ಭಿಕ್ಷೆಯಲ್ಲಿ ಅಕ್ಕಿ ನೀಡಿದ್ದಾರೆ ಎಂದು ಅದನ್ನೇ ನೀಡಲಿ ಎಂದು ಅವನ ಯೋಚನೆ. ಓಡಾಡುವ ದಾರಿಗಳೆಲ್ಲ ನಿರ್ಜನವಾಗಿದ್ದವು. ಈಗೀಗ ಜನ ಎಚ್ಚರವಾಗಿ ಅಲ್ಲೊಬ್ಬ ಇನ್ನೊಬ್ಬರಂತೆ ಓಡಾಡತೊಡಗಿದ್ದರು. ಮುಖ್ಯ ಬೀದಿಯಿಂದ ಮನೆಗಳಿರುವ ಓಣಿಯಲ್ಲಿ ಪ್ರವೇಶಿಸಿದ ಭಿಕ್ಷುಕನು ಎದುರಿಗೆ ಮಹಾರಾಜನ ರಥ ಬರುವುದು ಕಾಣುತ್ತಾನೆ. ಇನ್ನು ಮಹಾರಾಜನಿಂದ ಒಳ್ಳೆಯ ಭಿಕ್ಷೆ ಸಿಗಬಹುದು ಎಂದುಕೊಳ್ಳುವಾಗಲೇ ರಾಜನ ರಥವು ಅವನ ಮುಂದೆ ಬಂದು ನಿಲ್ಲುತ್ತದೆ.

ಆಗ ಅವನು 'ಧನ್ಯನಾದೆ ನಾನು..! ಜೀವನದಲ್ಲಿ ಇದುವರೆಗೂ ಯಾವ ರಾಜನಿಂದಲೂ ಭಿಕ್ಷೆಯನ್ನು ಬೇಡಿರಲಿಲ್ಲ. ಕಾರಣ, ದ್ವಾರಪಾಲಕರು ಹೊರಗಿನಿಂದಲೇ ಹಿಂದಿರುಗಿಸುತ್ತಿದ್ದರು. ಈಗ ನೋಡಿದರೆ ಸ್ವಯಂ ರಾಜನೇ ನನ್ನ ಎದುರು ಬಂದು ನಿಂತಿದ್ದಾನೆ ಇದು ನನ್ನ ಭಾಗ್ಯ' ಎಂದುಕೊಳ್ಳುತ್ತಿರುವಾಗಲೇ ಆ ಮಹಾರಾಜನು ಇವನ ಮುಂದೆ ಬಂದು 'ಇಂದು ದೇಶದ ಮೇಲೆ ಬಹಳ ದೊಡ್ಡ ಸಂಕಟ ಬಂದಿದೆ. ಒಬ್ಬ ಜ್ಯೋತಿಷ್ಯನು ಹೇಳಿದ ಪ್ರಕಾರ, ಈ ಸಂಕಟದಿಂದ ಪಾರಾಗಲು ನಾನು ನನ್ನ ಎಲ್ಲವನ್ನೂ ತ್ಯಾಗ ಮಾಡಿ ಒಬ್ಬ ಯಾಚಕನ ಹಾಗೆ ಭಿಕ್ಷೆಯನ್ನು ಬೇಡಿ ತಂದ ಮೇಲೆ ಈ ಸಂಕಟದ ಪರಿಹಾರ ತಿಳಿಯುವುದು. ನೀನು ಈ ಹಾದಿಯಲ್ಲಿ ಸಿಕ್ಕ ಮೊದಲನೇ ವ್ಯಕ್ತಿ, ಹೀಗಾಗಿ ಇಂದು ನಾನು ನಿನ್ನ ಬಳಿ ಭಿಕ್ಷೆ ಬೇಡುತ್ತೇನೆ. ನೀನು ಭಿಕ್ಷೆ ನೀಡಿದರೆ ದೇಶದ ಮೇಲೆ ಬಂದು ಒದಗಿದ

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV
Special
ಯೂಟ್ಯೂಬ್
ಚಾನೆಲ್‌ನಲ್ಲಿ

ಸಂಕಟ ದೂರಾಗಬಹುದು. ಇಂದು ನೀನು ನನಗೆ ಭಿಕ್ಷೆಯಲ್ಲಿ ಏನಾದರೂ ಕೊಡು' ಎಂದನು. ಭಿಕ್ಷುಕನು ಜೀವನಪೂರ್ತಿ ತಾನು ಬೇಡಿ ತಿನ್ನುವುದರಲ್ಲೇ ಕಳೆದಿದ್ದನು. ಯಾವತ್ತೂ ಏನೂ ಕೊಡಲು ಅವನ ಕೈ ಮುಂದಾಗಿದ್ದೇ ಇಲ್ಲ, 'ಹೇ ದೇವರೇ, ಇದೆಂತಹ ಸಮಯ ಬಂತು.!' ಎಂದು ಯೋಚಿಸತೊಡಗಿದ. 'ಒಬ್ಬ ರಾಜನೇ, ಭಿಕ್ಷೆ ಯಾಚಿಸುತ್ತಿದ್ದಾನೆ ನಾನು ಅದನ್ನು ನಿರಾಕರಿಸಲಾರೆ.

ಬಹಳ ಕಷ್ಟದಿಂದ ಒಂದು ಹಿಡಿ ಅಕ್ಕಿಯಲ್ಲಿ ಒಂದು ಅಕ್ಕಿಯ ಕಾಳನ್ನು ತೆಗೆದು ಅವನು ರಾಜನ ಕೈಗೆ ಹಾಕುತ್ತಾನೆ. ರಾಜನು ಸಂತೋಷದಿಂದ ಅದೇ ಅಕ್ಕಿಯ ಒಂದು ಕಾಳನ್ನು ತೆಗೆದುಕೊಂಡು ಮುಂದೆ ಭಿಕ್ಷೆಗಾಗಿ ಹೊರಟು ಹೋದ. ರಾಜನು ಭಿಕ್ಷೆಗೆ ಬರುತ್ತಿರುವುದು ನೋಡಿ ನಾ ಮುಂದು ತಾ ಮುಂದು ಎಂದು ಜನರೆಲ್ಲ ಭಿಕ್ಷೆ ಹಾಕಲು ಬಂದರು. ಆದರೆ ಇಲ್ಲಿ ಭಿಕ್ಷುಕನಿಗೆ ತನ್ನ ಹಿಡಿಯ ಅಕ್ಕಿಯಲ್ಲಿನ ಒಂದು ಅಕ್ಕಿ ಕಾಳು ಹೋಯಿತಲ್ಲ ಎಂಬ ನೋವು ಕಾಡತೊಡಗಿತು.

ಹಾಗೂ ಹೀಗೂ ಮಾಡಿ ಮನೆಗೆ ಬಂದಾಗ ಭಿಕ್ಷುಕನ ಪತ್ನಿ ಅವನ ಜೋಳಿಗೆಯನ್ನು ಸುರಿದು ನೋಡಿದಾಗ ಆಕೆಗೆ ಒಂದೇ ಒಂದು ಬಂಗಾರದ ಅಕ್ಕಿ ಕಾಳು ಕಾಣಿಸಿತು. ಭಿಕ್ಷುಕನ ಹೆಂಡತಿಯು ಈ ವಿಷಯವನ್ನು ಅವನಿಗೆ ತಿಳಿಸಿದಾಗ ಅವನ ಎದೆ ಹೊಡೆದುಕೊಂಡು ಅಳತೊಡಗಿದ. ಅವನ ಹೆಂಡತಿ ಅಳುವಿನ ಕಾರಣವನ್ನು ಕೇಳಿದಾಗ ಬೆಳಗ್ಗೆ ನಡೆದಿರುವ ಸಂಗತಿಯನ್ನು ಅವಳಿಗೆ ತಿಳಿಸಿದ. ಆಗ ಅವನ ಪತ್ನಿ ಹೇಳಿದಳು 'ದಾನ ಮಾಡಿದ್ದು ಬಂಗಾರವಾಗಿ ಬಂದಿದೆ' ಈ ವಿಷಯ ತಿಳಿದು ಇನ್ನು ಮೇಲೆ ಕಷ್ಟಪಟ್ಟು ದುಡಿದು ದಾನ ಮಾಡೋಣ ಎಂದಳು.

ಹಿರಿಯರು ಒಂದು ಮಾತು ಹೇಳುತ್ತಾರೆ, ಕೊಟ್ಟಿದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆ ಎಂದು. ಜೀವನಪೂರ್ತಿ ನಾವು ಕಷ್ಟಪಟ್ಟು ದುಡಿದ ಹಣವನ್ನು ಬ್ಯಾಂಕು ಲಾಕರ್‌ಗಳಲ್ಲಿ ಬಚ್ಚಿಟ್ಟು ಯಾರಿಗೋ ಬಿಟ್ಟು ಹೊರಟು ಬಿಡುತ್ತೇವೆ. ಆದರೆ ಕಷ್ಟ ಎಂದು ಬಂದವರಿಗೆ ಸಹಾಯ ಮಾಡಿ ಗಳಿಸಿದ ಪುಣ್ಯ ನಮ್ಮ ಪಾಲಿಗೆ ಉಳಿಯುತ್ತದೆ.

ಪದಬಂಧ

■	1	■	2			■	■	3
4				■	■	5		
■		■	6	7			■	■
8			■		■	9		10
	■	■	11			■	■	
12		13	■		■	14	15	
■	■	16			17	■		■
18			■	■	19			
	■	■	20			■		■

• ಸಿ.ರವಿಶಂಕರ ಶಾಸ್ತ್ರಿ, ದಂಬೆ

ಎಡದಿಂದ ಬಲಕ್ಕೆ

2. ಬಟ್ಟೆ ಒಗೆದು ಶುಚಿ ಮಾಡಿ ಕೊಡುವವನಿಗೆ ಬಿಡುವು! (3)
4. ತಿಳಿಯದೆ, ಒಮ್ಮಿಂದೊಮ್ಮೆಲೆ ನಡೆದ ಎಂದರ್ಥ (4)
5. ಇದೇನೋ ಒಂಥರಾ ಹುರುಪು (3)
6. ದುಂಬಿಯು ಹೂವಿನಿಂದ ಸಂಗ್ರಹಿಸುವ ಸಿಹಿ (4)
8. ಸೂರ್ಯನ ಸಾರಥಿ (3)
9. ಗ್ರೀಸ್ ದೇಶದಿಂದ ಬಂದವನಿಗೆ ಹೀಗೆನ್ನೋಣವೇ (3)
11. ವಿಪತ್ತು, ದುಃಖ (3)
12. ಸೂರ್ಯನೊಂದಿಗೆ ಬಂದಿರುವ ಗುಬ್ಬಚ್ಚಿ (3)
14. ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸುವವನು (3)
16. ನಮ್ಮ ಸುತ್ತಮುತ್ತಲಿನ ಪ್ರದೇಶ (4)
18. ಧನ, ಕನಕವೇ ಮೊದಲಾದ ಐಶ್ವರ್ಯ (3)
19. ಸತ್ತ ನಂತರದ ದೇಹ (4)
20. ವಸ್ತುಗಳನ್ನು ಮಾರಾಟಕ್ಕಿಟ್ಟ ಸ್ಥಳ (3)

ಮೇಲಿಂದ ಕೆಳಕ್ಕೆ

1. ಕಾರು ತರಲೇನು ಅಡ್ಡಿ, ಆಕ್ಷೇಪ (4)
2. ಮೊಸಳೆ ತಲೆಕೆಳಗಾದಾರೆ! (3)
3. ಅತಿಯಾದ ಪ್ರೀತಿ, ಭ್ರಾಂತಿ (2)
5. ಉತ್ಪತ್ತಿ, ಹುಟ್ಟುವಿಕೆ (3)
7. ಚಿನ್ನದಂತಹ ದಾಸರಿವರು (5)
8. ಮನದಲ್ಲಿರುವ ಹಿಂಜರಿಕೆ (3)
10. ಭಯ ಅಥವಾ ಚಳಿಯಿಂದ ಉಂಟಾದ ಕಂಪನ (3)
13. ದೊಡ್ಡದಾದ ತೊಂದರೆ (3)
15. ದೊಡ್ಡ ಪಕ್ಷಿಯೊಂದಿಗೆ ಬಂದಿರುವ ಹತೋಟಿ (4)
17. ಭಲ್ಲೂಕ ಅಸ್ತವ್ಯಸ್ತವಾಗಿ ಬಂದಿದೆ (3)
18. ಎರಡಕ್ಷರದ ಮುಷ್ಕರ (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ
2. ರಜಕ 4. ಆಕಸ್ಮಿಕ 5. ಉತ್ಸಾಹ
6. ಮಕರಂದ 8. ಅರುಣ 9. ಯವನ
11. ಸಂಕಟ 12. ಕುರವಿ 14. ವಾಹಕ
16. ಪರಿಸರ 18. ಸಂಪತ್ತು
19. ಕಳೇಬರ 20. ಅಂಗಡಿ.

ಮೇಲಿಂದ ಕೆಳಕ್ಕೆ
1. ತಕರಾರು 2. ರಕಮ 3. ಮೋಹ
5. ಉದಯ 7. ಕನಕದಾಸ
8. ಅಳುಕು 10. ನಡುಕ 13. ವಿಪತ್ತು
15. ಹದ್ದುಬಸ್ತು 17. ರಕಡಿ
18. ಸಂಪು.

ಸಮಾಚಾರ ಸಣ್ಣದಲ್ಲ

ಐಸಿಸಿ ರ‍್ಯಾಂಕಿಂಗ್: ಮಂದಾನಗೆ ಅಗ್ರಸ್ಥಾನ ನಷ್ಟ

ದುಬೈ: ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಬಿಡುಗಡೆ ಮಾಡಿರುವ ಮಹಿಳಾ ಏಕದಿನ ಕ್ರಿಕೆಟ್ ನೂತನ ರ‍್ಯಾಂಕಿಂಗ್ ಪಟ್ಟಿಯಲ್ಲಿ ಭಾರತದ ತಾರೆ ಸ್ಮೃತಿ ಮಂದಾನಗೆ ಅಗ್ರಸ್ಥಾನ ನಷ್ಟವಾಗಿದೆ. ಸ್ಮೃತಿ ಮಂದಾನ

ಅವರನ್ನು ಹಿಂದಿಕ್ಕಿರುವ ಇಂಗ್ಲೆಂಡ್‌ನ ನಾಯಕಿ ನ್ಯಾಟ್ ಸ್ಕಿವರ್ ಬ್ರಂಟ್ ಅಗ್ರಸ್ಥಾನಕ್ಕೇರಿ ದ್ದಾರೆ. ಬ್ರಂಟ್ 731 ಹಾಗೂ ಮಂದಾನ 728 ರೇಟಿಂಗ್ ಅಂಕಗ ಳನ್ನು ಹೊಂದಿ ದ್ದಾರೆ. 32 ವರ್ಷದ ಬ್ರಂಟ್ 2023ರ ಬಳಿಕ ಈಗ ಮತ್ತೆ ಅಗ್ರಸ್ಥಾನ ವಶಪಡಿಸಿ ಕೊಂಡಿದ್ದಾರೆ. ಭಾರತ ವಿರುದ್ಧ ನಡೆದ ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ ಗಮನಾರ್ಹ ಪ್ರದರ್ಶನ ನೀಡಿದ್ದ ಬ್ರಂಟ್, ಒಟ್ಟು 160 ರನ್ ಗಳಿಸಿದ್ದರು. ಇಂಗ್ಲೆಂಡ್ ವಿರುದ್ಧದ ಏಕದಿನ ಸರಣಿಯಲ್ಲಿ ಭಾರತ 2-1ರ ಅಂತರದ ಗೆಲುವು ದಾಖಲಿಸಿತ್ತು. ಮಂದಾನ ಒಟ್ಟು 115 ರನ್ ಗಳಿಸಿದ್ದರು. ಮತ್ತೊಂದೆಡೆ 10 ಸ್ಥಾನಗಳ ಭರ್ಜರಿ ಬಡ್ತಿ ಪಡೆದಿರುವ ನಾಯಕಿ ಹರ್ಮನ್‌ಪ್ರೀತ್ ಕೌರ್ 11ನೇ ಸ್ಥಾನಕ್ಕೆ ತಲುಪಿದ್ದಾರೆ. ಜೇಮಿಮಾ ರಾಡ್ರಿಗಸ್ ಎರಡು ಸ್ಥಾನಗಳ ಬಡ್ತಿ ಯೊಂದಿಗೆ 13ನೇ ಸ್ಥಾನ ಪಡೆದಿದ್ದಾರೆ.

ಬಿಡಬ್ಲ್ಯುಎಫ್: ಶೆಟ್ಟಿ-ರೆಡ್ಡಿ ಜೋಡಿಗೆ ಅಗ್ರ 10ರಲ್ಲಿ ಸ್ಥಾನ

ದೆಹಲಿ: ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತ, ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಹಾಗೂ ಚಿರಾಗ್ ಶೆಟ್ಟಿ ಜೋಡಿಯು ಬಿಡಬ್ಲ್ಯುಎಫ್ ಪುರುಷರ ಡಬಲ್ಸ್ ರ‍್ಯಾಂಕಿಂಗ್‌ನಲ್ಲಿ ಅಗ್ರ 10ಕ್ಕೆ ಮರಳಿದ್ದಾರೆ. ಕಳೆದ ವಾರ ನಡೆದ ಚೀನಾ ಓಪನ್‌ನಲ್ಲಿ ಸೆಮಿಫೈನಲ್ ತಲುಪಿದ್ದ ಈ ಜೋಡಿಯು, ಮೂರು ಸ್ಥಾನಗಳಷ್ಟು ಏರಿಕೆ ಕಂಡಿದೆ. ವಿಶ್ವದ ಮಾಜಿ ನಂ.1 ಜೋಡಿಯಾ ಗಿರುವ ಸಾತ್ವಿಕ್-ಚಿರಾಗ್, ಈ ಋತುವಿನಲ್ಲಿ ಬಿಡಬ್ಲ್ಯುಎಫ್ ಟೂರ್ ಮಟ್ಟದ ನಾಲ್ಕು ಟೂರ್ನಿಗಳಲ್ಲಿ ಸೆಮಿಫೈನಲ್ ತಲುಪಿದ್ದಾರೆ. ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ಅಗ್ರಮಾನ್ಯ ಆಟಗಾರ ಲಕ್ಷ್ಯ ಸೇನ್ ಅವರು ಎರಡು ಸ್ಥಾನಗಳಷ್ಟು ಬಡ್ತಿ ಪಡೆದಿದ್ದು, 17ನೇ ಕ್ರಮಾಂಕ ದಲ್ಲಿದ್ದಾರೆ. ಎಚ್.ಎಸ್.ಪ್ರಣಯ್ ಅವರಿಗೆ 33ನೇ ಸ್ಥಾನ ದೊರೆತಿದೆ. ಮಹಿಳೆಯರ ಸಿಂಗಲ್ಸ್‌ನಲ್ಲಿ 17 ವರ್ಷದ ಉನ್ನತಿ ಹೂಡಾ ವೃತ್ತಿ ಜೀವನದ ಶ್ರೇಷ್ಠ 31ನೇ ಸ್ಥಾನಕ್ಕೆ ಜಿಗಿದಿದ್ದಾರೆ. ಉನ್ನತಿ ಅವರು, ಚೀನಾ ಓಪನ್‌ನ ಪ್ರಿ-ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಪಿ.ವಿ.ಸಿಂಧು ಅವರನ್ನು ಮಣಿಸಿ ಗಮನ ಸೆಳೆದಿದ್ದರು. ಸಿಂಧು ಅವರು 15ನೇ ಸ್ಥಾನದಲ್ಲಿಯೇ ಮುಂದುವರಿ ದಿದ್ದಾರೆ. ಮಹಿಳೆಯರ ಡಬಲ್ಸ್‌ನಲ್ಲಿ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿಯು 11ನೇ ಕ್ರಮಾಂಕದಲ್ಲಿಯೇ ಮುಂದುವರಿದಿದ್ದಾರೆ. ಅಶ್ವಿನಿ ಪೊನ್ನಪ್ಪ- ತನಿಶಾ ಕ್ರಾಸ್ಟೊ ಜೋಡಿಗೆ 45ನೇ ಸ್ಥಾನ ದೊರೆತಿದೆ.

5ನೇ ಪಂದ್ಯಕ್ಕೆ ಆಕಾಶ್‌ದೀಪ್, ಕುಲ್‌ದೀಪ್, ಪ್ರಸಿದ್ಧ್, ಜುರೆಲ್‌ಗೆ ಸ್ಥಾನ ಸಂಭವ

ಭಾರತಕ್ಕೆ ಬೌಲಿಂಗ್‌ನದ್ದೇ ಮುಖ್ಯ ಚಿಂತೆ

ಲಂಡನ್: ಮ್ಯಾಂಚೆಸ್ಟರ್‌ನಲ್ಲಿ ನಡೆದ ನಾಲ್ಕನೇ ಟೆಸ್ಟ್ ಪಂದ್ಯವನ್ನು ಡ್ರಾ ಮಾಡಿಕೊಂಡ ಟೀಮ್ ಇಂಡಿಯಾ, ಸರಣಿಯನ್ನು 2-2 ಅಂತರದಲ್ಲಿ ಸಮಬಲಗೊಳಿಸಲು ಓವಲ್‌ನಲ್ಲಿ ನಡೆಯುವ ಅಂತಿಮ ಪಂದ್ಯವನ್ನು ಗೆಲ್ಲಲೇಬೇಕಾಗಿದೆ. ಆದರೆ ಸರಣಿಯಲ್ಲಿ ಅತ್ಯುತ್ತಮ ನಿರ್ವಹಣೆ ತೋರಿದ ವಿಕೆಟ್ ಕೀಪರ್ ರಿಷಭ್ ಪಂತ್ ಗಾಯಗೊಂಡಿರುವುದು ಭಾರತಕ್ಕೆ ಚಿಂತೆಯ ವಿಷಯವಾಗಿದೆ.

ಬ್ಯಾಟಿಂಗ್ ತಂಡದಲ್ಲಿ ಬದಲಾವಣೆ: ಭಾರತದ ಅತ್ಯುತ್ತಮ ಬ್ಯಾಟ್ಸ್‌ಮನ್ ರಿಷಭ್ ಪಂತ್ ಇದೀಗ ಗಾಯಗೊಂಡಿದ್ದಾರೆ. ಪಂತ್ ಬದಲಿಗೆ ಧ್ರುವ್ ಜುರೆಲ್ ಅಥವಾ ನಾರಾಯಣ್ ಜಗದೀಶನ್ ಆಡಬೇಕಿದೆ. ಜುರೆಲ್ 2024ರ ನವೆಂಬರ್‌ನಿಂದ ಯಾವುದೇ ಟೆಸ್ಟ್ ಪಂದ್ಯವನ್ನು ಆಡಿಲ್ಲ. ನಾರಾಯಣ್ ಜಗದೀಶನ್ ಈ ವರ್ಷ ಮೊದಲ ಬಾರಿಗೆ ಟೆಸ್ಟ್ ತಂಡಕ್ಕೆ ಆಯ್ಕೆಯಾಗಿದ್ದಾರೆ. ಇದೀಗ ಯಾರೇ ಬಂದರೂ ಅವರ ಮುಂದೆ ದೊಡ್ಡ ಕೆಲಸವಿದೆ.

ಜುರೆಲ್ ತಂಡಕ್ಕೆ ಆಯ್ಕೆಯಾಗುವ ಸಾಧ್ಯತೆ ಇದೆ. ಅವರು ಈ ಹಿಂದೆ ಟೆಸ್ಟ್ ಕ್ರಿಕೆಟ್ ಆಡಿದ್ದಲ್ಲದೆ, ಕಳೆದ ವರ್ಷ ರಾಂಚಿಯಲ್ಲಿ ಅದೇ ಎದುರಾಳಿ ವಿರುದ್ಧ ನಡೆದ ಪಂದ್ಯದಲ್ಲಿ ವಿಕೆಟ್ ಕೀಪರ್ ಆಗಿಯೂ ಅತ್ಯುತ್ತಮ ಪ್ರದರ್ಶನ ನೀಡಿದ್ದರು. ಜುರೆಲ್ ಸರಣಿಗೂ ಮುನ್ನ ಭಾರತ ಎ ಪರ ಆಡಿದ್ದರು ಮತ್ತು ಅದ್ಭುತ ಪ್ರದರ್ಶನ ನೀಡಿದ್ದರು. ಪಂತ್ ಅನುಪಸ್ಥಿತಿಯಲ್ಲಿ ಅವರು ತಂಡದ ನಿರ್ವಹಣೆಯನ್ನೂ ವಹಿಸಿಕೊಂಡಿದ್ದಾರೆ.

ಜಸ್‌ಪ್ರಿತ್ ಬುಮ್ರಾ ಇಂಗ್ಲೆಂಡ್‌ನಲ್ಲಿ ಆಡಲಿರುವ ಟೆಸ್ಟ್ ಪಂದ್ಯಗಳ ಪೂರ್ವನಿರ್ಧಾರಿತ ಕೋಟಾವನ್ನು ಪೂರ್ಣಗೊಳಿಸಿದ್ದಾರೆ. ಮ್ಯಾಂಚೆಸ್ಟರ್‌ನಲ್ಲಿ ನಡೆದ ನಾಲ್ಕನೇ ಪಂದ್ಯದಲ್ಲಿ ಬುಮ್ರಾ ಅವರಿಂದ ಅಷ್ಟೇನು ಉತ್ತಮ ಪ್ರದರ್ಶನ ಮೂಡಿಬಂದಿಲ್ಲ. ರವೀಂದ್ರ ಜಡೇಜಾ ನಂತರ ಎರಡನೇ ಅತಿ ಹೆಚ್ಚು ಓವರ್ ಬೌಲಿಂಗ್ (33 ಓವರ್‌ಗಳು) ಮಾಡಿದರು. ಆದರೆ, 100ಕ್ಕೂ ಅಧಿಕ ರನ್ ಬಿಟ್ಟುಕೊಟ್ಟಿದ್ದಾರೆ..

ಲಾರ್ಡ್ಸ್ ಮತ್ತು ಓಲ್ಡ್ ಟ್ರಾಫರ್ಡ್ ನಡುವೆ 8 ದಿನಗಳ ಅಂತರವಿದ್ದರೂ, ಬುಮ್ರಾ ಉತ್ತಮ ಪ್ರದರ್ಶನ ನೀಡುವಲ್ಲಿ ಸೋತರು. ಇದೀಗ ನಾಲ್ಕನೇ ಟೆಸ್ಟ್ ಪಂದ್ಯಕ್ಕೂ ಮತ್ತು ಐದನೇ ಮತ್ತು ಅಂತಿಮ ಟೆಸ್ಟ್ ಪಂದ್ಯಕ್ಕೆ 3 ದಿನಗಳ ಅಂತರವಿದ್ದು, ಬುಮ್ರಾ ಆಡುವುದು ಅನುಮಾನವಾಗಿದೆ. ಈ ವರ್ಷ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ ಅನ್ಶುಲ್ ಕಾಂಬೋಜ್ ಕೂಡ ಉತ್ತಮ ಪ್ರದರ್ಶನ ನೀಡಿಲ್ಲ. ಮ್ಯಾಂಚೆಸ್ಟರ್‌ನಲ್ಲಿನ ಕಠಿಣ ಪ್ರವಾಸದ ನಂತರ ಅವರು ತಂಡದಲ್ಲಿ ಮುಂದುವರಿಯುವುದು ಬಹುತೇಕ ಅನುಮಾನವಾಗಿದೆ.

ಆಕಾಶ್ ದೀಪ್ ತಮ್ಮ ಫಿಟ್ನೆಸ್ ಮರಳಿ ಪಡೆದಿದ್ದಾರೆ ಎಂದು ವರದಿಯಾಗಿದೆ. ಎಡ್ಜ್‌ಬಾಸ್ಟನ್‌ನಲ್ಲಿ ಬುಮ್ರಾ ಅವರ ಬದಲಿಯಾಗಿದ್ದರು ಮತ್ತು ಓವಲ್‌ನಲ್ಲೂ ಅದೇ ಮುಂದುವರಿಯುವ ಸಾಧ್ಯತೆ ಇದೆ. ಹೀಗಾದರೆ ಶಾರ್ದೂಲ್ ಠಾಕೂರ್ ಅವರನ್ನು ಕೈಬಿಡಬೇಕಾಗುತ್ತದೆ. 11 ಓವರ್‌ಗಳಲ್ಲಿ 55 ರನ್‌ಗಳನ್ನು ಬಿಟ್ಟುಕೊಟ್ಟ ಠಾಕೂರ್ ಅವರನ್ನು ಐದನೇ ಟೆಸ್ಟ್ ಪಂದ್ಯದಿಂದ ಕೈಬಿಡುವುದು ಬಹುತೇಕ ಖಚಿತವಾಗಿದೆ.

ಕುಲದೀಪ್ ಯಾದವ್ ಅವರಿಗೆ ತಂಡದಲ್ಲಿ ಸ್ಥಾನ ನೀಡುವ ಸಾಧ್ಯತೆಯಿದೆ. ಓವಲ್ ಸ್ಪಿನ್ನರ್‌ಗಳಿಗೆ ಸರಿಹೊಂದುವ ಫ್ಲಾಟ್ ಮೇಲ್ಮೈ ಮಾತ್ರವಲ್ಲ, ಬುಮ್ರಾ ನಂತರ, ಕುಲದೀಪ್ ಭಾರತದ ಅತ್ಯುತ್ತಮ ವಿಕೆಟ್ ಟೇಕಿಂಗ್ ಆಯ್ಕೆಯಾಗಿರಬಹುದು. ಐದನೇ ಟೆಸ್ಟ್‌ಗೆ ಕನ್ನಡಿಗ ಪ್ರಸಿದ್ಧ್ ಕೃಷ್ಣ ಮರಳುತ್ತಾರೆ ಎನ್ನಲಾಗಿದೆ. ಈ ಎತ್ತರದ ವೇಗಿ ನಿರೀಕ್ಷೆಗಳನ್ನು ಪೂರೈಸಿಲ್ಲ. ಆದರೆ, ಸ್ವಿಂಗ್ ಬೌಲರ್ ಆಗಿರುವ ಅರ್ಶದೀಪ್ ಸಿಂಗ್ ಕೂಡ ಉತ್ತಮ ಆಯ್ಕೆಯಲ್ಲ. ಹೀಗಾಗಿ, ಹೊಸ ಚೆಂಡು ವೇಗದ ಬೌಲರ್‌ಗಳಿಗೆ ಸಹಾಯ ಮಾಡುವುದನ್ನು ನಿಲ್ಲಿಸಿದ ನಂತರ ಪ್ರಸಿದ್ಧ್ ಅತ್ಯುತ್ತಮ ವಿಕೆಟ್ ತೆಗೆದುಕೊಳ್ಳುವ ಆಯ್ಕೆಯಾಗಿರಬಹುದು.

ಮೊಹಮ್ಮದ್ ಸಿರಾಜ್‌ಗೆ ವಿಶ್ರಾಂತಿ ನೀಡುವುದು ಸೂಕ್ತ. ಆದರೆ ಬುಮ್ರಾ ಆಡದಿದ್ದರೆ, ಯಾರಾದರೂ ವೇಗದ ದಾಳಿಯನ್ನು ಮುನ್ನಡೆಸಬೇಕಾಗುತ್ತದೆ. ಬುಮ್ರಾ ಅನುಪಸ್ಥಿತಿಯಲ್ಲಿ ಎಡ್ಜ್‌ಬಾಸ್ಟನ್‌ನಲ್ಲಿ ಸಿರಾಜ್ ಅಸಾಧಾರಣವಾಗಿ ಆಡಿದರು ಮತ್ತು ಅವರು ಅದನ್ನೇ ಪುನರಾವರ್ತಿಸುವ ನಿರೀಕ್ಷೆಯಿದೆ.

ಭಾರತ ಪ್ಲೇಯಿಂಗ್ ಇಲೆವೆನ್

ಯಶಸ್ವಿ ಜೈಸ್ವಾಲ್, ಕೆ.ಎಲ್ ರಾಹುಲ್, ಸಾಯಿ ಸುದರ್ಶನ್, ಶುಭಮನ್ ಗಿಲ್ (ನಾಯಕ), ಧ್ರುವ್ ಜುರೆಲ್ (ವಿಕೆಟ್ ಕೀಪರ್), ರವೀಂದ್ರ ಜಡೇಜಾ, ವಾಷಿಂಗ್ಟನ್ ಸುಂದರ್, ಕುಲದೀಪ್ ಯಾದವ್, ಆಕಾಶ್ ದೀಪ್, ಮೊಹಮ್ಮದ್ ಸಿರಾಜ್, ಪ್ರಸಿದ್ಧ್ ಕೃಷ್ಣ
ವಿಶ್ರಾಂತಿ: ಅಭಿಮನ್ಯು ಈಶ್ವರನ್, ಕರುಣ್ ನಾಯರ್, ಶಾರ್ದೂಲ್ ಠಾಕೂರ್, ಜಸ್‌ಪ್ರಿತ್ ಬುಮ್ರಾ, ಅನ್ಶುಲ್ ಕಾಂಬೋಜ್, ನಾರಾಯಣ್ ಜಗದೀಶನ್ (ವಿಕೆಟ್ ಕೀಪರ್)

ಏಷ್ಯಾ ಕಪ್ ನೇರ ಪ್ರಸಾರಕ್ಕೆ ಪಾಕ್ ಪರದಾಟ

ದುಬೈ: 2025ರ ಏಷ್ಯಾ ಕಪ್ ಅಂತಿಮವಾಗಿ ಆರಂಭವಾಗಿದ್ದು, ಇತ್ತೀಚೆಗಷ್ಟೇ ಪಂದ್ಯಾವಳಿಯ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ. ಆದರೆ, ಮಾಧ್ಯಮ ಹಕ್ಕುಗಳು ಇನ್ನೂ ಮಾರಾಟವಾಗದ ಕಾರಣ ಪಾಕಿಸ್ತಾನ ಕ್ರಿಕೆಟ್ ಮಂಡಳಿಗೆ ಪಂದ್ಯದ ನೇರ ಪ್ರಸಾರವೇ ಸಮಸ್ಯೆಯಾಗಿದೆ. ಕ್ರಿಕೆಟ್ ಪಾಕಿಸ್ತಾನದ ವರದಿ ಪ್ರಕಾರ, ಭಾರತೀಯ ಪ್ರಸಾರಕರು 104 ಕೋಟಿ ರೂಪಾಯಿಗಳಿಗೆ ಬೇಡಿಕೆ ಇಟ್ಟಿದ್ದು, ಪಾಕಿಸ್ತಾನದ ಚಾನೆಲ್‌ಗಳು ಆ ಮೊತ್ತವನ್ನು ಕಡಿಮೆ ಮಾಡಲು ಮಾತುಕತೆ ನಡೆಸುತ್ತಿವೆ ಎನ್ನಲಾಗಿದೆ.

2025ರ ಏಷ್ಯಾ ಕಪ್ ಸೆಪ್ಟೆಂಬರ್ 9 ರಂದು ಆರಂಭವಾಗಲಿದ್ದು, ಎರಡೂ ತಂಡಗಳು ಫೈನಲ್ ಪ್ರವೇಶಿಸಿದರೆ, ಅವರು ಮೂರು ಬಾರಿ ಮುಖಾಮುಖಿ ಯಾಗಬೇಕಾಗುತ್ತದೆ. ಈ ಮಧ್ಯೆ, ಏಷ್ಯನ್ ಕ್ರಿಕೆಟ್ ಕೌನ್ಸಿಲ್ 2031 ರವರೆಗಿನ ಎಂಟು ವರ್ಷಗಳ ಮಾಧ್ಯಮ ಹಕ್ಕುಗಳನ್ನು ಸೋನಿ ಇಂಡಿಯಾಕ್ಕೆ 1400 ಕೋಟಿ ರೂಪಾಯಿಗೆ ಮಾರಾಟ ಮಾಡಿದೆ. ಇದರಲ್ಲಿ ಮಹಿಳಾ ಪಂದ್ಯಾವಳಿಗಳು ಮತ್ತು ಎಮರ್ಜಿಂಗ್ ಕಪ್ ಸೇರಿದಂತೆ ಒಟ್ಟು 119 ಪಂದ್ಯಗಳು ಸೇರಿವೆ.

ಆದರೆ, ಪಾಕಿಸ್ತಾನದ ಯಾವುದೇ ಚಾನೆಲ್‌ಗಳು ಇಷ್ಟೊಂದು ದೊಡ್ಡ ಮೊತ್ತವನ್ನು ಪಾವತಿಸಿ ಹಕ್ಕನ್ನು ಪಡೆಯಲು ಆಸಕ್ತಿ ಹೊಂದಿಲ್ಲ. ಆದರೆ, ಕೆಲವು ಚಾನೆಲ್‌ಗಳು ಒಕ್ಕೂಟವನ್ನು ರಚಿಸುವ ಬಗ್ಗೆ ಮಾತುಕತೆ ನಡೆಸುತ್ತಿದ್ದು, ಅವು ಒಟ್ಟಾಗಿ ಮಾಧ್ಯಮ ಹಕ್ಕುಗಳನ್ನು ಪಡೆಯಬಹುದು. ಆದಾಗ್ಯೂ, ಅದರ ಡಿಜಿಟಲ್ ಹಕ್ಕುಗಳನ್ನು ಅಂತಿಮಗೊಳಿಸಲಾಗಿದೆ ಮತ್ತು ಸೋಮವಾರ ಅದರ ಬಗ್ಗೆ ಘೋಷಣೆ ಹೊರಬೀಳುವ ನಿರೀಕ್ಷೆಯಿದೆ.

ಏಷ್ಯನ್ ಕ್ರಿಕೆಟ್ ಕೌನ್ಸಿಲ್ ಮಾಧ್ಯಮ ಹಕ್ಕುಗಳಲ್ಲಿ ಪಿಸಿಬಿ ಪಾಲು ಸುಮಾರು ಶೇ 25 ರಷ್ಟಿದ್ದು, ಅಂದರೆ 346 ರೂಪಾಯಿಯಷ್ಟಿದೆ. ಭಾರತದ ಪಾಲು ಶೇ 65 ರಷ್ಟಿದೆ. ಅಂದರೆ ಪ್ರಸಾರಕರು ಏಷ್ಯಾ ಕಪ್‌ನಿಂದ ಭಾರಿ ಲಾಭ ಗಳಿಸುತ್ತಾರೆ. ಭಾರತ ಮತ್ತು ಪಾಕಿಸ್ತಾನ ನಡುವಿನ ಮೊದಲ ಪಂದ್ಯ ಸೆಪ್ಟೆಂಬರ್ 14 ರಂದು ನಡೆಯಲಿದೆ. ನಂತರ ಎರಡೂ ತಂಡಗಳು ಸೂಪರ್ 4 ನಲ್ಲಿ ಮತ್ತು ನಂತರ ಫೈನಲ್‌ನಲ್ಲಿ ಎದುರಾಗಲು ಅವಕಾಶವಿದೆ.. ಭಾರತ ಮತ್ತು ಪಾಕಿಸ್ತಾನ ಯುಎಇ ಮತ್ತು ಒಮಾನ್ ಜೊತೆಗೆ ಒಂದೇ ಗುಂಪಿನಲ್ಲಿ ಸ್ಥಾನ ಪಡೆದರೆ, ಇನ್ನೊಂದು ಗುಂಪಿನಲ್ಲಿ ಲಂಕಾ, ಬಾಂಗ್ಲಾದೇಶ, ಅಫ್ಘಾನಿಸ್ತಾನ ಮತ್ತು ಹಾಂಗ್ ಕಾಂಗ್ ತಂಡಗಳಿರುತ್ತವೆ.

ಮಗನಿಗೆ ನಿಯಮಿತ ಅವಕಾಶಗಳನ್ನು ನೀಡದ ಬಿಸಿಸಿಐ ವಿರುದ್ಧ ಕಿಡಿ

ವಾಷಿಂಗ್ಟನ್ ಸುಂದರ್ ಪರ ತಂದೆಯ ಬ್ಯಾಟಿಂಗ್

ಮುಂಬೈ: ಭಾನುವಾರ ಕೊನೆಗೊಂಡ ಇಂಗ್ಲೆಂಡ್ ವಿರುದ್ಧದ ಆ್ಯಂಡರ್ಸನ್-ತೆಂಡೂಲ್ಕರ್ ಟ್ರೋಫಿಯ ನಾಲ್ಕನೇ ಟೆಸ್ಟ್ ಪಂದ್ಯವನ್ನು ಡ್ರಾ ಮಾಡಿಕೊಳ್ಳುವಲ್ಲಿ ಬೌಲರ್ ವಾಷಿಂಗ್ಟನ್ ಸುಂದರ್ ಪ್ರಮುಖ ಪಾತ್ರ ವಹಿಸಿದ್ದಾರೆ. ಇಂಗ್ಲೆಂಡ್ ಮೊದಲ ಇನಿಂಗ್ಸ್‌ನಲ್ಲಿ 669 ರನ್ ಗಳಿಸಿದ ನಂತರ ಭಾರತ 311 ರನ್‌ಗಳ ಬೃಹತ್ ಹಿನ್ನಡೆಯನ್ನು ಎದುರಿಸಿತು. ಆದರೆ, 5ನೇ ಕ್ರಮಾಂಕದಲ್ಲಿ ಸುಂದರ್ (101★), 6 ನೇ ಕ್ರಮಾಂಕದಲ್ಲಿ ರವೀಂದ್ರ ಜಡೇಜಾ (107★), ನಾಯಕ ಶುಭ್‌ಮನ್ ಗಿಲ್ (103) ಮತ್ತು ಕೆಎಲ್ ರಾಹುಲ್ ಅವರ 90 ರನ್‌ಗಳು ತಂಡವನ್ನು ಸೋಲಿನಿಂದ ಪಾರು ಮಾಡಿವೆ.

ಮಗನ ಅದ್ಭುತ ಪ್ರದರ್ಶನದ ನಂತರ, ವಾಷಿಂಗ್ಟನ್ ಸುಂದರ್ ಅವರ ತಂದೆ ಎಂ. ಸುಂದರ್ ಅವರು ಬಿಸಿಸಿಐ ಆಯ್ಕೆದಾರರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ತಮ್ಮ ಮಗನಿಗೆ ನಿಯಮಿತ ಅವಕಾಶಗಳನ್ನು ನೀಡದಿದ್ದಕ್ಕಾಗಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. 25 ವರ್ಷದ ಸ್ಪಿನ್ ಆಲ್ ರೌಂಡರ್ ವಾಷಿಂಗ್ಟನ್ ಸುಂದರ್ 2017 ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದು, ಅಂದಿನಿಂದ 12 ಟೆಸ್ಟ್, 23 ಏಕದಿನ ಮತ್ತು 54 ಟಿ-20 ಪಂದ್ಯಗಳನ್ನು ಆಡಿದ್ದಾರೆ.

'ವಾಷಿಂಗ್ಟನ್ ನಿರಂತರವಾಗಿ ಉತ್ತಮ ಪ್ರದರ್ಶನ ನೀಡುತ್ತಿದ್ದಾರೆ. ಆದಾಗ್ಯೂ, ಜನರು ಅವರ ಪ್ರದರ್ಶನವನ್ನು ಮರೆತುಬಿಡುತ್ತಾರೆ. ಇತರ ಆಟಗಾರರಿಗೆ ನಿಯಮಿತವಾಗಿ ಅವಕಾಶಗಳು ಸಿಗುತ್ತವೆ. ಆದರೆ, ನನ್ನ ಮಗನಿಗೆ ಮಾತ್ರ ತಂಡದಲ್ಲಿ ಸ್ಥಾನ ಸಿಗುವುದಿಲ್ಲ. ನಾಲ್ಕನೇ ಟೆಸ್ಟ್‌ನ ಎರಡನೇ ಇನಿಂಗ್ಸ್‌ನಲ್ಲಿ ಮಾಡಿದಂತೆ ವಾಷಿಂಗ್ಟನ್ ಐದನೇ ಕ್ರಮಾಂಕದಲ್ಲಿ ನಿರಂತರವಾಗಿ ಬ್ಯಾಟಿಂಗ್ ಮಾಡಬೇಕು. ಸತತ ಐದರಿಂದ ಹತ್ತು ಅವಕಾಶಗಳನ್ನು ಪಡೆಯಬೇಕು. ಆಶ್ಚರ್ಯ ಎಂದರೆ, ನನ್ನ ಮಗನನ್ನು ಇಂಗ್ಲೆಂಡ್ ವಿರುದ್ಧದ ಮೊದಲ ಟೆಸ್ಟ್‌ಗೆ ಆಯ್ಕೆ ಮಾಡಿರಲಿಲ್ಲ' ಎಂದು ಕ್ರಿಕೆಟಿಗನ ತಂದೆ ಎಂ ಸುಂದರ್ ದೂರಿದ್ದಾರೆ.

'ನನ್ನ ಮಗ ಕೇವಲ ಒಂದು ಅಥವಾ ಎರಡು ಪಂದ್ಯಗಳಲ್ಲಿ ವಿಫಲನಾಗಿದ್ದರೂ ಸಹ ಅವನನ್ನು ಕೈಬಿಡಲಾಗುತ್ತದೆ. ಇದು ನ್ಯಾಯೋಚಿತವಲ್ಲ. ವಾಷಿಂಗ್ಟನ್ 2021 ರಲ್ಲಿ ಚೆನ್ನೈನಲ್ಲಿ ಇಂಗ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಅಜೇಯ 85 ರನ್ ಮತ್ತು ಅದೇ ವರ್ಷ ಅಹಮದಾಬಾದ್‌ನಲ್ಲಿ ಅದೇ ಎದುರಾಳಿಯ ವಿರುದ್ಧ 96★ ರನ್ ಗಳಿಸಿದರು. ಆ ಎರಡು ಇನಿಂಗ್ಸ್‌ಗಳು ಶತಕಗಳ ಸನಿಹ ಕೊನೆಗೊಂಡಿದ್ದರೂ ಸಹ ಅವನನ್ನು ತಂಡದಿಂದ ಕೈಬಿಡಲಾಗುತ್ತಿತ್ತು' ಎಂದು ದೂರಿದರು.

'ಈ ರೀತಿಯ ಮನೋಭಾವವನ್ನು ಬೇರೆ ಯಾವುದೇ ಭಾರತೀಯ ಕ್ರಿಕೆಟಿಗನ ವಿಚಾರದಲ್ಲಿ ಕಾಯ್ದುಕೊಳ್ಳಲಾಗಿದೆಯೇ? ಇದೆಲ್ಲದರ ನಂತರವೂ ಆತ ತುಂಬಾ ಬಲಿಷ್ಠನಾಗಿದ್ದಾನೆ. ಅದರ ಫಲಿತಾಂಶವೇ ಜನರು ಈಗ ನೋಡುತ್ತಿರುವ ಪ್ರದರ್ಶನ' ಎಂದು ಅವರು ಹೇಳಿದರು.

2018 ರ ನಿದಹಾಸ್ ಟ್ರೋಫಿಯಲ್ಲಿ ಮಗ ವಾಷಿಂಗ್ಟನ್ ಎಂಟು ವಿಕೆಟ್‌ಗಳೊಂದಿಗೆ ಅತಿ ಹೆಚ್ಚು ವಿಕೆಟ್ ಪಡೆದಿದ್ದನ್ನು ನೆನಪಿಸಿದ ಸುಂದರ್, "ಮೊದಲ ವಿದೇಶ ಪ್ರವಾಸವಾಗಿದ್ದರೂ ಸಹ ನನ್ನ ಮಗ ತುಂಬಾ ಎಕನಾಮಿಕಲ್ ಆಗಿ ಬೌಲಿಂಗ್ ಮಾಡಿದ. ಆತನ ಗುಣಮಟ್ಟದ ಪ್ರದರ್ಶನದ ಹೊರತಾಗಿಯೂ ಬಳಿಕ ಮುಂದಿನ ಐಪಿಎಲ್ ಆವೃತ್ತಿಯಲ್ಲಿ ಆರ್‌ಸಿಬಿಯಿಂದ ಸತತ 11 ಪಂದ್ಯಗಳಿಗೆ ಆತನನ್ನು ಕೈಬಿಡಲಾಯಿತು. ಅವನ ಮನಸ್ಥಿತಿ ಏನಾಗಿತ್ತು ಎಂದು ನೀವು ಊಹಿಸಬಲ್ಲಿರಾ? ಐಪಿಎಲ್ 2022ರ ಆವೃತ್ತಿಯಲ್ಲಿ ಎಸ್‌ಆರ್‌ಹೆಚ್ ಪರ ತನ್ನ ಮೊದಲ ಪಂದ್ಯದಲ್ಲಿ ವಾಷಿಂಗ್ಟನ್ 14 ಎಸೆತಗಳಲ್ಲಿ 40 ರನ್ ಗಳಿಸಿದನು. ಮುಂದಿನ ಪಂದ್ಯದಲ್ಲಿ ಅವನನ್ನು ಆರನೇ ಸ್ಥಾನದಲ್ಲಿ ಕಳುಹಿಸಲಾಯಿತು' ಎಂದು ಅವರು ಹೇಳಿದರು.

'ಆತ ಇರುವ ಸದ್ಯದ ತಂಡ (ಗುಜರಾತ್ ಟೈಟಾನ್ಸ್) ಕೂಡ ಆತನಿಗೆ ನಿಯಮಿತ ಅವಕಾಶಗಳನ್ನು ನೀಡುತ್ತಿಲ್ಲ. ಅವನು ಐಪಿಎಲ್ 2025ನೇ ಆವೃತ್ತಿಯ ಎಲಿಮಿನೇಟರ್‌ನಲ್ಲಿ ಮುಂಬೈ ಇಂಡಿಯನ್ಸ್ (ಎಂಐ) ವಿರುದ್ಧ 24 ಎಸೆತಗಳಲ್ಲಿ 48 ರನ್ ಗಳಿಸುವ ಮೂಲಕ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಿದ್ದಾನೆ. ಆದರೆ ದೇಶೀಯ ಕ್ರಿಕೆಟ್ ನಲ್ಲಿಯೂ ಸಹ ನಿಯಮಿತವಾಗಿ ಅವಕಾಶಗಳನ್ನು ಪಡೆದಿಲ್ಲ' ಎಂದು ನೋವು ತೋಡಿಕೊಂಡರು.

ವಿ ಟಾಕೀಸ್

ಕಸ್ಟಡಿಯಲ್ಲಿ ಥ್ರಿಲ್ಲರ್ ಪಾಲ್ಗುಣಿಯಲಿ ನೈಜ ಕಥೆ

ನಿರ್ಮಾಪಕ ನಾಗೇಶ್ ಕುಮಾರ್ ಚಿತ್ರರಂಗದಲ್ಲಿ ಹೊಸ ದಾಖಲೆ ಬರೆಯಲು ರೆಡಿಯಾಗಿದ್ದಾರೆ. ಕಸ್ಟಡಿ ಹಾಗೂ ಪಾಲ್ಗುಣಿ ಎಂಬ ಎರಡು ಸಿನಿಮಾಗಳನ್ನು ನಿರ್ಮಿಸಿರುವ ನಾಗೇಶ್ ಕುಮಾರ್ ಒಂದೇ ದಿನ ಎರಡೂ ಸಿನಿಮಾಗಳನ್ನು ತೆರೆಗೆ ತರುತ್ತಿದ್ದಾರೆ. ಈಗಾಗಲೇ ಚಿತ್ರೀಕರಣ ಮುಗಿಸಿರುವ ಈ ಎರಡು ಸಿನಿಮಾಗಳು ಆಗಸ್ಟ್ 8 ರಂದೇ ರಿಲೀಸ್ ಆಗಲಿವೆ. ಜೆ. ಜೆ.ಶ್ರೀನಿವಾಸ್ ಕಸ್ಟಡಿ ಹಾಗೂ ಪಾಲ್ಗುಣಿ ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಸದ್ಯ ಈ ಸಿನಿಮಾಗಳ ಟ್ರೇಲರ್ ಬಿಡುಗಡೆಯಾಗಿದೆ. ಸಾ.ರಾ. ಗೋವಿಂದು ಹಾಗೂ ಕನ್ನಡ ಚಲನಚಿತ್ರ ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್ ಟ್ರೇಲರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು.

ಕಸ್ಟಡಿ ಸಸ್ಪೆನ್ಸ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರವಾದರೆ, ಪಾಲ್ಗುಣಿ ಮಂಡ್ಯದಲ್ಲಿ ನಡೆದ ನೈಜ ಘಟನೆಯನ್ನು ಆಧರಿಸಿದ ನಿರ್ಮಾಣವಾಗಿರುವ ಸಿನಿಮಾವಾಗಿದೆ. ಭೀಮ ಖ್ಯಾತಿಯ ಪ್ರಿಯಾ ಕಸ್ಟಡಿ ಚಿತ್ರದ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಪಾಲ್ಗುಣಿ ಸಿನಿಮಾದಲ್ಲಿ

ರೇಖಾಶ್ರೀ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ.

ನನಗೆ ನಿರ್ದೇಶಕರು ಮೊದಲು ಒಂದು ಕಥೆ ಹೇಳಿದ್ದರು. ಬಳಿಕ ಮತ್ತೊಂದು ಕಥೆ ಹೇಳಿದರು, ಅದು ಕಸ್ಟಡಿ ಸಿನಿಮಾದ ಸ್ಟೋರಿಯಾಗಿತ್ತು. ಥ್ರಿಲ್ಲರ್ ಜಾನರ್‌ನಲ್ಲಿ ಸಾಗುವ ಕಥನಾ ಮನಸಿಗೆ ಹಿಡಿಸಿತು. ಹಾಗಾಗಿ ನಟಿಸಲು ಸಮ್ಮತಿಸಿದೆ. ನಾನು ಈ ಚಿತ್ರದಲ್ಲಿಯೂ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಳ್ಳುತ್ತಿದ್ದೇನೆ, ದುರ್ಗಾ ಪರಮೇಶ್ವರಿ ನನ್ನ ಪಾತ್ರದ ಹೆಸರು ಎಂದು ಭಿಮ ಚಿತ್ರದ ಖ್ಯಾತಿಯ ನಟಿ ಪ್ರಿಯಾ ಹೇಳಿದರು.

ಪಾಲ್ಗುಣಿ ನಾನು ಅಭಿನಯಿಸುತ್ತಿರುವ ನಾಲ್ಕನೇ ಚಿತ್ರ, ಈ ಚಿತ್ರದಲ್ಲಿ ಹಳ್ಳಿ ಹುಡುಗಿಯಾಗಿ ಕಾಣಿಸಿಕೊಂಡಿದ್ದೇನೆ. ಪಾಲ್ಗುಣಿ ಪಾತ್ರದಲ್ಲಿಯೇ ಬಣ್ಣ ಹಚ್ಚಿದ್ದೇನೆ ಎಂದು ನಟಿ ರೇಖಾಶ್ರೀ ತಿಳಿಸಿದರು.

ಪದ್ಮಗಂಧಿ ಟ್ರೇಲರ್ ರಿಲೀಸ್

ಹಿರಿಯ ನಟ ಸುಚೇಂದ್ರ ಪ್ರಸಾದ್ ನಟನೆಯ ಜತೆಗೆ ನಿರ್ದೇಶಕರಾಗಿಯೂ ಗುರುತಿಸಿಕೊಂಡಿದ್ದಾರೆ. ತಾವೇ ಚಿತ್ರಕಥೆ-ಸಂಭಾಷಣೆ ಬರೆದು ಪದ್ಮಗಂಧಿ ಎಂಬ ಚಿತ್ರವನ್ನು ನಿರ್ದೇಶನ ಮಾಡಿದ್ದಾರೆ. ಈ ಚಿತ್ರದ ಟ್ರೇಲರ್ ರಿಲೀಸ್ ಆಗಿದೆ. ವಿಶೇಷ ಎಂದರೆ ಪದ್ಮಗಂಧಿಯ ಟ್ರೇಲರ್ ಕನ್ನಡ ಸೇರಿದಂತೆ, ಸಂಸ್ಕೃತ ಹಾಗೂ ಹಿಂದಿಯಲ್ಲಿಯೂ ರಿಲೀಸ್ ಆಗಿದೆ. ಪೇಜಾವರ ಮಠಾಧೀಶರಾದ ವಿಶ್ವಪ್ರಸನ್ನ ತೀರ್ಥರು ಟ್ರೇಲರ್ ಹಾಗೂ ಹಾಡುಗಳನ್ನು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಸುಚೇಂದ್ರ ಪ್ರಸಾದ್ ದೊಡ್ಡ ಸಾಹಸಕ್ಕೆ ಕೈ ಹಾಕಿದ್ದಾರೆ, ಒಳ್ಳೆಯ ಸಿನಿಮಾವನ್ನು ನಿರ್ದೇಶಿಸಿ ಅದನ್ನು ಪ್ರೇಕ್ಷಕರ ಮುಂದಿಡುತ್ತಿದ್ದಾರೆ. ಸಂಸ್ಕೃತ ಅನ್ನುವುದು ದೇಶಾಂತರಕ್ಕೂ ಸಲ್ಲುವ ಭಾಷೆ, ಹಾಗಾಗಿ ಸಂಸ್ಕೃತದಲ್ಲಿಯೂ ಸಿನಿಮಾ ಮೂಡಿಬಂದಿರುವುದು ಖುಷಿಕೊಟ್ಟಿದೆ ಎಂದು ಪೇಜಾವರ ಶ್ರೀಗಳು ಹೇಳಿದರು. ಸಿನಿಮಾವು ಆದಿಯಿಂದ ಅಂತ್ಯದವರೆಗೂ ಪದ್ಮಗಂಧಿಯ ಪರಿಮಳ ಪಸರಿಸುತ್ತದೆ. ದೈವಿಕ ಗಂಧ ಮೆತ್ತಿಕೊಂಡಿರುವ ಕಮಲದ ಹೂವಿನ ಕುರಿತ ಕಥೆ ಸಾಗುತ್ತದೆ.

ಪರಿಪೂರ್ಣ ಚಂದ್ರಶೇಖರ್, ಡಾ.ಆರ್. ಗಣೇಶ್, ಡಾ.ಗೌರಿ ಸುಬ್ರಹ್ಮಣ್ಯ, ಡಾ.ಪ್ರೇಮಾ, ಡಾ.ಹೇಮಂತ್ ಕುಮಾರ್, ಆಚಾರ್ಯ ಮೃತ್ಯುಂಜಯ ಶಾಸ್ತ್ರಿ, ಜಿಎಲ್.ಭಟ್, ಮೃತ್ಯುಂಜಯ ಶಾಸ್ತ್ರಿ, ಪ್ರಸನ್ನ ವೈದ್ಯ, ಡಾ.ದೀಪಕ್ ಪರಮಶಿವನ್, ಹೇಮಂತ ಕುಮಾರ್ ಮುಂತಾದವರು ತಾರಾಗಣದಲ್ಲಿದ್ದಾರೆ. ಮಾಜಿ ಎಂಎಲ್‌ಸಿ, ಪ್ರೊ.ಎಸ್.ಆರ್.ಲೀಲಾ ಚಿತ್ರದ ಕಥೆ ಬರೆದಿದ್ದು ನಿರ್ಮಾಣಕ್ಕೂ ಬಂಡವಾಳ ಹೂಡಿದ್ದಾರೆ. ಡಾ.ದೀಪಕ್ ಪರಮಶಿವನ್ ಸಂಗೀತ ನಿರ್ದೇಶನ, ಮನುಯಪ್ಪಾರ್, ನಾಗರಾಜ್ ಅದ್ವಾನಿ, ಗಿರಿಧರ್ ದಿವಾನ್ ಛಾಯಾಗ್ರಹಣ, ಎನ್.ನಾಗೇಶ್ ನಾರಾಯಣಪ್ಪ ಸಂಕಲನ ಈ ಚಿತ್ರಕ್ಕಿದೆ.

ಲವ್ ಮ್ಯಾಟ್ರು ಹೇಳಿದ ಅನಿತಾ

ಅನಿತಾ ಭಟ್ ಮತ್ತೆ ಪ್ರೀತಿಯಲ್ಲಿ ಬಿದ್ದಿದ್ದು, ಹೊಸ ಲವ್ ಮ್ಯಾಟ್ರು ಹೇಳಿದ್ದಾರೆ. ಅಯ್ಯೋ.. ಇದೇನಿದು ಅಂತ ಅಚ್ಚರಿಪಟ್ಟುಕೊಳ್ಳಬೇಡಿ. ಅನಿತಾ, ಲವ್ ಮ್ಯಾಟ್ರು ಶೀರ್ಷಿಕೆಯಲ್ಲಿ ಮೂಡಿಬಂದಿರುವ ಚಿತ್ರದಲ್ಲಿ ನಟಿಸಿದ್ದಾರೆ. ಈ ಹಿಂದಿನ ಸಿನಿಮಾಳಿಗಿಂತಲೂ ಇಲ್ಲಿ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ತಮ್ಮ ಚಿತ್ರದ ಕುರಿತಂತೆ ವಿ.ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

ವಿ.ಸಿನಿಮಾಸ್ : ಲವ್ ಮ್ಯಾಟ್ರುನಲ್ಲಿ ನಿಮ್ಮ ಪಾತ್ರ ?

ಅನಿತಾ ಭಟ್ : ಇಲ್ಲಿ ನನ್ನದು ಪ್ರಾಕ್ಟಿಲ್ ಹುಡುಗಿಯ ಪಾತ್ರ. ಎಲ್ಲರೂ ಪ್ರೀತಿಯೇ ಮುಖ್ಯ ಎಂದುಕೊಂಡಿರುತ್ತಾರೆ, ಆದರೆ ನನ್ನದು ಅದಕ್ಕೆ ತದ್ವಿರುದ್ಧ ಗುಣ. ನನಗೆ ಪ್ರೀತಿಗಿಂತ ಬದುಕೇ ಮುಖ್ಯವಾಗಿರುತ್ತದೆ. ಅಂದುಕೊಂಡಂತೆ ಬದುಕನ್ನು ಕಟ್ಟಿಕೊಳ್ಳಬೇಕು ಎಂಬ ಹಂಬಲ ಹೊಂದಿರುವ ನನ್ನ ಬಾಳಲ್ಲಿ ಪ್ರೀತಿ ಪ್ರವೇಶಿದಾಗ ಅದನ್ನು ಸ್ವೀಕರಿಸುತ್ತೇನೋ ಅಥವಾ ನಿರಾಕರಿಸುತ್ತೇನೋ ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು.

ವಿ.ಸಿ : ಈ ಹಿಂದಿನ ಚಿತ್ರಗಳಿಂತ ನಿಮ್ಮ ಪಾತ್ರ ವಿಭಿನ್ನ ಎನ್ನಬಹುದೆ ?

ಅನಿತಾ : ಹೌದು, ಎಲ್ಲರೂ ಪ್ರೀತಿ.. ಪ್ರೀತಿ.. ಎಂದರೆ ನಾನು ಅದಕ್ಕೂ ಹೊರತಾಗಿ ಯೋಚಿಸುವ ಮನೋ ಭಾವ ದವಳು. ಎರಡು ಕಾಲ ಘಟ್ಟದಲ್ಲಿ ಸಾಗುವ ಕಥೆಯಲ್ಲಿ ಹಲವು ಪಾತ್ರಗಳು ಸಾಗುತ್ತವೆ. ಅದರಲ್ಲಿಯೂ ನನ್ನ ಪಾತ್ರ ವಿಭಿನ್ನ ಎಂದು ಹೇಳಬಹುದು. ಹಾಗಾಗಿ ಈ ಹಿಂದೆ ನಾನು ನಟಿಸಿರುವ ಚಿತ್ರಗಳಿಂತ ಇದು ವಿಭಿನ್ನವಾಗಿದೆ. ಈ ಚಿತ್ರದಲ್ಲಿ ನನ್ನದು ಚಿಕ್ಕ ಪಾತ್ರವಾದರೂ ಕಥೆಗೆ ತಿರುವು ನೀಡುವ ಪಾತ್ರವಾಗಿದೆ.

ವಿ.ಸಿ : ನಿಮ್ಮ ಪಾತ್ರ ಎಲ್ಲರಿಗೂ ಕನೆಕ್ಟ್ ಆಗಲಿದೆಯೆ?

ಅನಿತಾ : ನನ್ನನ್ನು ನಾನು ಅರ್ಥೈಸಿಕೊಂಡು ಬದುಕುವ ಹುಡುಗಿ, ಹಾಗಾಗಿ ನನ್ನ ಪಾತ್ರ ಕೆಲವರಿಗೆ ಖಂಡಿತವಾಗಿಯೂ ಕನೆಕ್ಟ್ ಆಗಬಹುದು. ಯಾಕೆಂದರೆ ಇಂದು ಕಾಲ ಬದಲಾಗಿದೆ ಎಲ್ಲರಿಗೂ ಅವರವರ ಬದುಕೇ ಮುಖ್ಯವಾಗಿದೆ. ಹಾಗಿದ್ದ ಮೇಲೆ ನಮ್ಮ ಜೀವನವನ್ನು ನಾವು ಹೇಗೆ ಕಟ್ಟಿಕೊಳ್ಳಬೇಕು, ಅಂದುಕೊಂಡಂತೆ ಹೇಗೆ ಬದುಕು ಸಾಗಿಸಬಹುದು ಎಂಬುದನ್ನು ನನ್ನ ಪಾತ್ರದ ಮೂಲಕ ಹೇಳುವ ಪ್ರಯತ್ನ ಮಾಡಲಾಗಿದೆ.

ವಿ.ಸಿ: ನಿಮ್ಮ ಪಾತ್ರಕ್ಕೆ ಗ್ಲಾಮರ್ ಟಚ್ ಇದೆಯೆ ?

ಅನಿತಾ: ಇಲ್ಲ ಈಗ ಹೊಸತನದ ಕಥೆಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದೇನೆ. ಹಾಗಾಗಿ ಗ್ಲಾಮರ್‌ಗಿಂತ ಅಭಿನಯಕ್ಕೆ ಹೆಚ್ಚು ಪ್ರಾಮುಖ್ಯತೆ ಇರುವ ಪಾತ್ರಗಳಿಗೆ ಒತ್ತು ನೀಡುತ್ತಿದ್ದೇನೆ. ಹಾಗಾಗಿ ಇಲ್ಲಿ ಗ್ಲಾಮರ್ ಹೊರತಾಗಿ ನನ್ನನ್ನು ಹೊಸ ಅವತಾರದಲ್ಲಿ ಕಾಣಬಹುದು.

ವಿ.ಸಿ : ನಿಮ್ಮ ಮುಂದಿನ ಸಿನಿಮಾ ?

ಅನಿತಾ : ನಾನೇ ಸಿನಿಮಾವನ್ನು ನಿರ್ಮಾಣ ಮಾಡುತ್ತಿದ್ದೇನೆ. ಉಗ್ರಾಣ ಶೀರ್ಷಿಕೆಯಲ್ಲಿ ಸಿನಿಮಾ ಮೂಡಿಬರುತ್ತಿದ್ದ. ಮೂರು ಕಾಲ ಘಟ್ಟದಲ್ಲಿ ಸಾಗುವ ಕಥೆ ಚಿತ್ರದಲ್ಲಿದ್ದು ಕನ್ನಡ ಹಾಗೂ ತೆಲುಗಿನಲ್ಲಿ ನಿರ್ಮಾಣವಾಗಿದೆ. ಈ ಚಿತ್ರದಲ್ಲಿ ನಾನು ಮುಖ್ಯ ಪಾತ್ರದಲ್ಲಿ ಅಭಿನಯಿಸಿದ್ದೇನೆ. ಸದ್ಯ ಚಿತ್ರೀಕರಣ ಮುಕ್ತಾಯವಾಗಿದ್ದು ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ.

ಕಿರುತೆರೆಗೆ ಅಮೂಲ್ಯ

ನಟಿ ಅಮೂಲ್ಯಾ ವಿವಾಹದ ಬಳಿಕ ಸಿನಿಮಾ ರಂಗದಿಂದ ದೂರವೇ ಉಳಿದಿದ್ದಾರೆ. ಮುಗುಳು ನಗೆ ಚಿತ್ರದಲ್ಲಿ ಅತಿಥಿ ಪಾತ್ರದಲ್ಲಿ ನಟಿಸಿದ ಅಮೂಲ್ಯಾ ಆ ಬಳಿಕ ಯಾವ ಸಿನಿಮಾದಲ್ಲಿಯೂ ಕಾಣಿಸಿಕೊಳ್ಳಲಿಲ್ಲ. ಅಮೂಲ್ಯಾ ಮತ್ತೆ ಯಾವಾಗ ಚಿತ್ರರಂಗಕ್ಕೆ ಮರಳಲಿದ್ದಾರೆ ಎಂದು ಅವರ ಅಭಿಮಾನಿಗಳು ಕಾಯುತ್ತಿರು ವಾಗಲೇ ಅಮ್ಮು ಕಿರುತೆರೆಗೆ ಎಂಟ್ರಿ ಕೊಡಲು ರೆಡಿಯಾಗಿದ್ದಾರೆ. ಹಾಗಂತ ಅಮೂಲ್ಯಾ ಧಾರಾವಾಹಿ ಯಲ್ಲಿ ನಟಿಸುತ್ತಿಲ್ಲ, ಬದಲಾಗಿ ರಿಯಾಲಿಟಿ ಶೋ ಒಂದರಲ್ಲಿ ತ್ರಿಪುರ್ಗಾರರಾಗಿ ಪಾಲ್ಗೊಳ್ಳುತ್ತಿದ್ದಾರೆ. ಜ್ಶಿ ಕನ್ನಡ ವಾಹಿನಿಯಲ್ಲಿ ನಾವು ನಮ್ಮವರು ಎಂಬ ವಿನೂತನ ರಿಯಾಲಿಟಿ ಶೋ ಆರಂಭವಾಗುತ್ತಿದೆ. ಇದರಲ್ಲಿ ಹಿರಿಯ ನಟಿ ತಾರಾ ಅನುರಾಧಾ, ನಟ ಶರಣ್ ಕೂಡ ಪಾಲ್ಗೊಳ್ಳುತ್ತಿದ್ದು ಅವರೊಂದಿಗೆ ಅಮೂಲ್ಯಾ ಕೂಡ ಕಾರ್ಯಕ್ರಮದ ತ್ರಿಪುರ್ಗಾರರಾಗಿರಲಿದ್ದಾರೆ.

ಹೊಸತದಿಂದ ಕೂಡಿರಲಿರುವ ರಿಯಾಲಿಟಿ ಶೋ ಇದಾಗಿದ್ದು, ಸಂಬಂಧಗಳ ಸಂಕಥನವನ್ನು ಹೊತ್ತು ಬರುತ್ತಿದೆ. ಕಳೆದು ಹೋದ ಸಂಬಂಧಗಳನ್ನು ಮತ್ತೆ ಬೆಸೆಯುವ ಪ್ರಯತ್ನ ಈ ಕಾರ್ಯಕ್ರಮದ ಮೂಲಕ ಆಗುತ್ತಿದೆ. ಪ್ರೇಕ್ಷಕರಿಗೆ ಭರಪೂರ ಮನರಂಜನೆ ನೀಡಲಿದೆ. ಆಗಸ್ಟ್ 2ರಿಂದ ಈ ರಿಯಾಲಿಟಿ ಶೋ ಆರಂಭವಾಗಲಿದ್ದು, ಸದ್ಯ ಕಾರ್ಯಕ್ರಮದ ಪ್ರೊಮೋ ರಿಲೀಸ್ ಆಗಿದೆ. ಬಾಲ ನಟಿಯಾಗಿ ಚಿತ್ರರಂಗಕ್ಕೆ ಎಂಟ್ರಿಕೊಟ್ಟ ಅಮೂಲ್ಯಾ, ಗಣೇಶ್ ಅಭಿನಯದ ಚೆಲುವಿನ ಚಿತ್ತಾರ ಸಿನಿಮಾದಲ್ಲಿ ನಾಯಕಿಯಾಗಿ ನಟಿಸಿದ್ದರು, ಈ ಚಿತ್ರ ಅಮೂಲ್ಯಾ ಅವರಿಗೆ ಪ್ರಸಿದ್ಧಿ ತಂದುಕೊಟ್ಟಿತು. ಆ ಬಳಿಕ ಸಾಲು ಸಾಲು ಸಿನಿಮಾಗಳಲ್ಲಿ ನಟಿಸುವ ಅವಕಾಶ ಪಡೆದರು. ಇಂದಿಗೂ ಅಮೂಲ್ಯಾ ಅವರಿಗೆ ಚಿತ್ರರಂಗದಲ್ಲಿ ಬಲು ಬೇಡಿಕೆ ಇದೆ. ಅವರು ಯಾವಾಗ ಚಿತ್ರರಂಗಕ್ಕೆ ಮರಳುತ್ತಾರೆ ಎಂದು ಸಿನಿಪ್ರಿಯರು ಕಾಯುತ್ತಿದ್ದಾರೆ.